ಸಂವಾದ

ಅಕ್ಟೋಬರ್ 2012 ರೂ. 20

ಅಭಿವೃದ್ಧಿಯ ಆತಂಕಗಳು



DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 sysmetric dedicated leased line internet connectivity with optical fiber back bone.

ADMISSION OPEN FOR 2012-2013

Computer Lab

Chemistry Lab

Digital Library

Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH |
EUREKA FORBES LTD.

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

ಸಂವಾದ

ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 12
ಅಕ್ಟೋಬರ್ 2012

ಸಂಪಾದಕ:
ಇಂದೂಧರ ಹೊನ್ನಾಪುರ

ಉಪ ಸಂಪಾದಕ:
ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೪
- ಹೊಸ ಪುಸ್ತಕ ೦೫
- ಸಂಪಾದಕರೊಂದಿಗೆ ಸಂವಾದ:
  - ವಿಕಾಸ್ ಆರ್. ಮೌರ್ಯ ೦೬
  - ಡಾ॥ ಎಸ್.ಬಿ ಜೋಗುರ ೦೭
  - ಸನತ್‌ಕುಮಾರ್ ಬೆಳಗಲಿ ೦೮
  - ಡಾ॥ ರಾಜೇಗೌಡ ಹೊಸಹಳ್ಳಿ ೦೯
- ಅಂತರಜಾತಿ ವಿವಾಹ; ಸುಪ್ರೀಂ ಕೋರ್ಟಿನ ತೀರ್ಪು
  - ಮಂಗ್ಳೂರ ವಿಜಯ ೧೨

- ಮತ್ತೆ ಮತ್ತೆ ಗಾಂಧಿ...
  - ಪ್ರೊ॥ ವಿ.ಎಸ್. ಶ್ರೀಧರ ೧೬
- ಗಾಂಧಿ ದರ್ಶನದ ಸರಳೀಕರಣದ ಅಪಾಯಗಳು
  - ಡಿ.ಎಸ್ ನಾಗಭೂಷಣ ೨೦
- ಗಾಂಧಿ, ಹತ್ಯೆ, ಗೋಡ್ಸೆ, ಸಾವರ್ಕರ್ ಮತ್ತು ಆರೆಸ್ಸೆಸ್...
  - ಸುರೇಶ್ ಭಟ್ ಬಾಕ್ರಬೈಲು ೩೦
- ಅಂಬೇಡ್ಕರ್–ಗಾಂಧಿ ಮುಖಾಮುಖಿ
  - ಡಾ॥ ಎಚ್.ಟಿ ಪೋತೆ ೩೪
- ನೋಯುವ ಹಲ್ಲಿಗೆ ಹೊರಳುವ ನಾಲಿಗೆ–೧೧
  - ಡಾ॥ ಎಚ್.ಎಸ್ ಅನುಪಮಾ ೩೮
- ಬತ್ತದ ಬಯಲು–೯
  - ಡಾ॥ ಬಿ.ಎಂ ಪುಟ್ಟಯ್ಯ ೪೨



- ಪುಸ್ತಕ ಅವಲೋಕನ ೪೭
- ಅಭಿವೃದ್ಧಿಗಳು ಆತಂಕಗಳು
  - ಡಾ॥ ಜಗದೀಶ್ ಎನ್ ಕೊಪ್ಪ ೪೮
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/ ಎಸ್ ಮರಿಸ್ವಾಮಿ ೫೨
- ಮುಲ್ಲಾ ನಸ್ರುದ್ದೀನ್ ಕಥೆಗಳು ೫೭
- ಕವನ:
  ಸಂತೆ ೧೧

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ಯುವ ಪೀಳಿಗೆಗೆ ಹೊರಟ ಸಂದೇಶವಾದರು ಏನು?

ಪರಿಶಿಷ್ಟ ಜಾತಿ/ಪಂಗಡಗಳಿಗೆ ಉದ್ಯೋಗ, ಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಸಂವಿಧಾನ ತಿದ್ದುಪಡಿ ಮಸೂದೆಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆಯೇನೊ ಸೂಚಿಸಿದೆ. ಆದರೆ ಸಂಸತ್ತಿನಲ್ಲಿ ಮಸೂದೆಯು ಅಂಗೀಕಾರವಾಗದೆ ಇನ್ನಷ್ಟು ದಿನ ವಿಳಂಬವಾಗಿದೆ. ಇದಕ್ಕೆ ಪ್ರತಿಪಕ್ಷ ಭಾರತೀಯ ಜನತಾ ಪಕ್ಷದ ಸಂಸತ್ ಗದ್ದಲವೇ ಕಾರಣ. ಕಲ್ಲಿದ್ದಲು ಹಗರಣದಲ್ಲಿ ಸಿಲುಕಿರುವ ಪ್ರಧಾನಮಂತ್ರಿ ಮನಮೋಹನ ಸಿಂಗ್ ತಲೆದಂಡಕ್ಕೆ ಪಟ್ಟು ಹಿಡಿದ ಬಿಜೆಪಿ ಸಂಸತ್ತಿನಲ್ಲಿ ಮೊಂಡುಬಿದ್ದು ಕಲಾಪ ನಡೆಯದಂತೆ ಮಾಡಿತ್ತು. ಇದರಿಂದ ಪ್ರಧಾನಿ ರಾಜಿನಾಮೆಯನ್ನೇನು ಕೊಡಲಿಲ್ಲ. ಆದರೆ ಪರಿಶಿಷ್ಟರಿಗೆ ನ್ಯಾಯ ಒದಗಿಸುವ ಪ್ರಮುಖ ಮಸೂದೆ ಅಂಗೀಕಾರವೇ ಆಗದೆ ಹೋಯಿತು. ಇನ್ನು ಈ ಮಸೂದೆ ಅಂಗೀಕಾರವಾಗಬೇಕಾದರೆ ಮುಂದಿನ ಅಧಿವೇಶನದವರೆಗೆ ಕಾಯಲೇಬೇಕು. "ಎರಡು ಮದಗಜಗಳ ಕಾಳಗದ ನಡುವೆ ಸಣ್ಣಪುಟ್ಟ ಗಿಡಗಂಟೆಗಳು ನಾಶವಾದಂತೆ" ಸರ್ಕಾರ ಮತ್ತು ಪ್ರತಿಪಕ್ಷಗಳ ಗದ್ದಲದಲ್ಲಿ ಉದ್ಯೋಗ ಬಡ್ತಿ ಮೀಸಲಾತಿ ಎಂಬ ಮಸೂದೆ ಮಿಂಚಿ ಮರೆಯಾಗಿ ಹೋಯಿತು. ಇದೆಲ್ಲ ಏನೆ ಇರಲಿ ಮಸೂದೆ ಮಂಡನೆಯ ವೇಳೆ ರಾಜ್ಯಸಭೆಯಲ್ಲಿ ನಡೆದ ಘಟನೆಯಂತು ಬೇಸರ ಹುಟ್ಟಿಸುವಂತದ್ದು. ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜವಾದಿ ಪಕ್ಷದ ರಾಜ್ಯಸಭಾ ಸದಸ್ಯರು ಪರಸ್ಪರ ಕೈ ಕೈ ಮಿಲಾಯಿಸಿ ತಳ್ಳಾಡಿದರು. ಒಂದರ್ಥದಲ್ಲಿ ಸಣ್ಣ ಮಕ್ಕಳಂತೆ ಕಿತ್ತಾಡಿದರು. ಪ್ರಜಾಪ್ರಭುತ್ವದ ದೇಗುಲವಾದ ರಾಜ್ಯಸಭೆಯನ್ನು ಕುಸ್ತಿ ಅಖಾಡ ಮಾಡಿಕೊಂಡಿದ್ದರು. ಹಿರಿಯರ ಮನೆ, ಚಿಂತಕರ ಛಾವಡಿ, ಬುದ್ಧಿವಂತರ ಅಖಾಡ ಎಂದು ಕರೆಯಲ್ಪಡುವ ರಾಜ್ಯಸಭೆಯಲ್ಲಿ ಈ ರೀತಿಯ ನಡವಳಿಕೆಯನ್ನು ದೇಶದ ಜನತೆ ನಿರೀಕ್ಷಿಸಿರಲಿಲ್ಲ, ಮೆಚ್ಚುವುದೂ ಇಲ್ಲ. ರಾಜಕೀಯ ವ್ಯವಸ್ಥೆ ಕುಲಗೆಟ್ಟು ಹೋಗಿರುವ ಈ ಸಂದರ್ಭದಲ್ಲಿ, ಲೋಕಸಭೆ, ರಾಜ್ಯ ವಿಧಾನಸಭೆ ಸದನಗಳಲ್ಲಿ ಉತ್ತಮ ಸಂಸದೀಯ ಪಟುಗಳಿಲ್ಲದೆ ಕಲಾಪಗಳು ಅರ್ಥವನ್ನೇ ಕಳೆದುಕೊಳ್ಳುತ್ತಿವೆ. ರಾಜ್ಯಸಭೆ ಮತ್ತು ವಿಧಾನಪರಿಷತ್ತುಗಳ ಸದಸ್ಯರು ಈ ರೀತಿಯ ಕೊರತೆಗಳನ್ನು ತುಂಬುವ ಕಾರ್ಯವನ್ನು ಮಾಡಬೇಕು. ಆದರೆ ರಾಜ್ಯಸಭೆಯಲ್ಲಿಯೇ ಜಟಾಪಟಿಗೆ ಇಳಿಯುವ ಸದಸ್ಯರ ನಡವಳಿಕೆ ನಿಜಕ್ಕೂ ಖೇದಕರ. ಪ್ರಜಾಪ್ರಭುತ್ವದ ಮೌಲ್ಯವನ್ನು ಕಾಪಾಡುವ ಹಿರಿಯರೇ ತಮ್ಮ ಜವಾಬ್ದಾರಿ ಮರೆತು ಈ ರೀತಿ ವರ್ತಿಸಿದರೆ ರಾಜಕೀಯ ಕ್ಷೇತ್ರಕ್ಕೆ ಕಾಲಿಡುವ ಯುವಪೀಳಿಗೆಗೆ ನೀಡುವ ಸಂದೇಶವಾದರೂ ಏನು ಎಂಬುದನ್ನು ಸ್ವತಃ ರಾಜಕಾರಣಿಗಳೇ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂಗತಿ. ದೇಶದಲ್ಲಿ ಜನಪ್ರತಿನಿಧಿ ಸಭೆಗಳು ಅಸ್ತಿತ್ವಕ್ಕೆ ಬಂದ ಕೇವಲ ಆರು ದಶಕಗಳಲ್ಲಿಯೇ ಹೊಡೆದಾಟ, ಬಡಿದಾಟ, ಅಶ್ಲೀಲದೃಶ್ಯ ವೀಕ್ಷಣೆಗಳಂತಹ ಅನೈತಿಕ ಕಾರ್ಯಗಳು ಸದನದಲ್ಲಿ ನಡೆಯುತ್ತಿರುವುದನ್ನು ಅವಲೋಕಿಸಿದರೆ ಸದನಗಳ ಭವಿಷ್ಯ ದುರ್ಬರ ಎನಿಸುವ ಆತಂಕ ಕಾಡುತ್ತದೆ. ಶೋಷಣೆಗೆ ಒಳಗಾದ ಜನಸಮುದಾಯಕ್ಕೆ ನ್ಯಾಯ ಕಲ್ಪಿಸಿಕೊಡುವಂಥ ಮಸೂದೆಗೆ ಅಂಗೀಕಾರ ದೊರಕಿಸಿಕೊಡುವ ಸಂದರ್ಭದಲ್ಲಿ ಈ ರೀತಿ ನಡೆದದ್ದು ನಿಜಕ್ಕೂ ನೋವಿನ ಸಂಗತಿ. ಅಲ್ಲದೆ ಬಿಜೆಪಿ ಪಕ್ಷವೂ ಸಹ ತಮ್ಮ ಮೊಂಡು ವಾದವನ್ನು ಕೈಬಿಟ್ಟು ಈ ಅರ್ಥಪೂರ್ಣ ಮಸೂದೆಗೆ ಸಹಕರಿಸಬಹುದಿತ್ತು. ಆದರೆ ಆ ಪಕ್ಷಕ್ಕೆ ಮಸೂದೆ ಅಂಗೀಕಾರವೇ ಬೇಡವೇನೋ ಎಂಬಂತೆ ಪ್ರಧಾನಿಯನ್ನು ನೆಪವನ್ನಾಗಿಟ್ಟುಕೊಂಡು ಮಸೂದೆಗೆ ವಿರುದ್ಧವಾಗಿ ನಡೆದುಕೊಂಡಂತಿತ್ತು ಅದರ ನಡವಳಿಕೆ. ಸಂಸತ್ತಿನಲ್ಲಿ ಈ ಬಾರಿಯ ಮಾನ್ಸೂನ್ ಅಧಿವೇಶದಲ್ಲಿ ನಡೆದ ಘಟನೆಗಳು ನಿಜಕ್ಕೂ ಯುವ ಪೀಳಿಗೆಗೆ ಮಾದರಿಯಾಗುವಂಥದ್ದಲ್ಲ.

ಭಾರತಿ.ಎ, ಚಕ್ಕೆರೆ



ಪತ್ರಗಳು

ನಿಲ್ಲದ ಖಾಸಗಿ ಶಾಲೆಗಳ ದಾದಾಗಿರಿ!

ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ಅಡಿಯಲ್ಲಿ ಒಂದು ಪ್ರತಿಷ್ಠಿತ ಖಾಸಗಿ ಅನುದಾನರಹಿತ ಶಾಲೆಗೆ ಸೇರಿಸಲ್ಪಟ್ಟ ಬಡ ವಿದ್ಯಾರ್ಥಿಗಳನ್ನು ಇತರ ವಿದ್ಯಾರ್ಥಿಗಳಿಂದ ಪ್ರತ್ಯೇಕವಾಗಿರಿಸಿ ಅಸಮಾನತೆ ಮತ್ತು ತಾರತಮ್ಯದ ಧೋರಣೆಯನ್ನು ಪ್ರದರ್ಶಿಸಿದ ಅತ್ಯಂತ ಅಮಾನವೀಯ ಘಟನೆಯೊಂದು ಬೆಂಗಳೂರಿನಿಂದ ವರದಿಯಾಗಿದೆ. ಈ ಸುದ್ದಿಯನ್ನು ಓದಿದಾಗ ಒಂದು ಕ್ಷಣ ಇದನ್ನು ನಂಬಬೇಕೋ ಬೇಡವೋ ಎಂಬ ಗೊಂದಲ ಮೂಡಿತು. ಯಾಕೆಂದರೆ 21ನೇ ಶತಮಾನದಲ್ಲಿ ಇಂತಹದೊಂದು ವರ್ತನೆಯನ್ನು ಕನಸಿನಲ್ಲಿಯೂ ಊಹಿಸಲು ಸಾಧ್ಯವಿಲ್ಲ. ಸದರಿ ಘಟನೆ ಒಂದು ಝಲಕ್ ಅಷ್ಟೆ. ಇದನ್ನು ಹೀಗೇ ಮುಂದುವರಿಯಲು ಬಿಟ್ಟರೆ ಇಂತಹ ಅನೇಕಾನೇಕ ಘಟನೆಗಳು ನಡೆಯುವ ಸಾಧ್ಯತೆಗಳನ್ನು ಖಂಡಿತಾ ತಳ್ಳಿಹಾಕಲಾಗುವುದಿಲ್ಲ.

ವಾಸ್ತವದಲ್ಲಿ ಶಾಲೆಗಳ ಆದ್ಯ ಕರ್ತವ್ಯವೆಂದರೆ ವರ್ಗ, ಜಾತಿ, ಧರ್ಮ ಆಧಾರಿತ ವಿಭಜನೆಗಳನ್ನು ನಿರ್ಮೂಲನಗೊಳಿಸಲು ಪ್ರಯತ್ನಿಸುವ ಮೂಲಕ ಸಂವಿಧಾನದ ಆಶಯಗಳನ್ನು ಈಡೇರಿಸಲು ಪ್ರಯತ್ನಿಸುವುದು. ಆದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಇದಕ್ಕೆ ತದ್ವಿರುದ್ಧವಾಗಿ ಸಮಾಜ ವಿಭಜನೆಗೆ ಹೊರಟಿವೆ. ಇದನ್ನು ಈಗಿಂದೀಗಲೇ ತಡೆಗಟ್ಟಬೇಕಾಗಿದೆ. ನಾವೆಲ್ಲರೂ ಭಾರತವನ್ನು ಒಂದು ಸಾರ್ವಭೌಮಿಕ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣತಂತ್ರವಾಗಿಸಲು ನಿರ್ಧರಿಸಿ ಆಗಿದೆ. ಭಾರತದ ಎಲ್ಲಾ ಪ್ರಜೆಗಳಿಗೆ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ ಲಭ್ಯವಾಗಿಸುವ ತೀರ್ಮಾನವನ್ನು ಕೈಗೊಂಡಾಗಿದೆ. ಅದಕ್ಕೋಸ್ಕರವೇ ಈ ಸಂವಿಧಾನವನ್ನು ನಾವು ನಮಗೆ ಕೊಟ್ಟುಕೊಂಡಿದ್ದೇವೆ ಮತ್ತು ಮನುಧರ್ಮವನ್ನು ಎಂದೋ ಕಸದ ಬುಟ್ಟಿಗೆ ಎಸೆದಿದ್ದೇವೆ. ಆದುದರಿಂದ ಯಾವುದೇ ಕಾರಣಕ್ಕೂ ಮನುವಾದ ಮತ್ತೊಮ್ಮೆ ಕಾಲಿಡಲು ಅವಕಾಶ ಕೊಡಕೂಡದು.

ಈ ಘಟನೆ ನಮ್ಮ ಶಿಕ್ಷಣ ವ್ಯವಸ್ಥೆಯ ಹುಳುಕುಗಳನ್ನು ಹೊರಹಾಕಿದೆ. ವ್ಯವಸ್ಥೆಯಲ್ಲಿನ ಗಂಭೀರ ಲೋಪದೋಷಗಳನ್ನು ಎತ್ತಿತೋರಿಸಿದೆ. ಕೇಂದ್ರ ಸರ್ಕಾರ ಸಂವಿಧಾನಕ್ಕೆ ಕಿಂಚಿತ್ತೂ ಗೌರವ ತೋರಿಸದ ಇಂತಹ ಖಾಸಗಿ ಶಾಲೆಗಳನ್ನು ತಕ್ಷಣ ಮುಚ್ಚಿಸಬೇಕು. ಮುಚ್ಚಲು ಹೊರಟಿರುವ ಸರ್ಕಾರಿ ಶಾಲೆಗಳನ್ನು ಮತ್ತೆ ತೆರೆಸಿ, ಸಕಲ ಸೌಲಭ್ಯಗಳನ್ನು ಒದಗಿಸಿ, ಇಂಗ್ಲಿಷ್ ಭಾಷೆಯನ್ನು ಒಂದು ಪಠ್ಯವಾಗಿ ಕಲಿಸಲು ಏರ್ಪಾಟು ಮಾಡುವ ಮೂಲಕ ಈ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಅಲ್ಲಿ ಅವಕಾಶ ಕಲ್ಪಿಸಬೇಕು. ಅಷ್ಟು ಮಾತ್ರವಲ್ಲ ಶಿಕ್ಷಣ ಕ್ಷೇತ್ರದ ಖಾಸಗೀಕರಣವನ್ನು ಸಂಪೂರ್ಣ ನಿಷೇಧಿಸುವ ಮೂಲಕ ಸಂವಿಧಾನದ ಆಶಯಗಳಿಗೆ ಪೂರಕವಾಗಿ ನಡೆದುಕೊಳ್ಳುವ ಬಗ್ಗೆ ಮರುಚಿಂತನೆ ನಡೆಸಬೇಕು.

ಎಸ್. ಭಟ್ ಬಾಕ್ರಬೈಲು

ಚಂದಾ ವಿವರ

ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/–
ಪೋಷಕ ಚಂದಾ ರೂ.10,000/–

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು
ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಚಂದಾದಾರರ ಗಮನಕ್ಕೆ

'ಸಂವಾದ' ಪತ್ರಿಕೆಯ ಚಂದಾ ವಿವರ, ಹೊಸದಾಗಿ ಚಂದಾರರಾಗುವವರು, ಚಂದಾ ನವೀಕರಿಸುವವರು ಹಾಗೂ ಪತ್ರಿಕೆ ಸರಬರಾಜಿನಲ್ಲಾಗುವ ಯಾವುದೇ ವ್ಯತ್ಯಯ-ದೂರುಗಳನ್ನು ಕುರಿತ ಮಾಹಿತಿಗಾಗಿ ಈ ಕೆಳಕಂಡ ಫೋನ್ ಸಂಖ್ಯೆಗಳನ್ನು ಮಾತ್ರ ಸಂಪರ್ಕಿಸಬೇಕಾಗಿ ವಿನಂತಿ.

ಮೊಬೈಲ್: 9945264687
ದೂರವಾಣಿ: 080–23480278
ಇ-ಮೇಲ್: **samvaadacirculation@gmail.com**

ಹೊಸ ಪುಸ್ತಕ

ಇನ್ನಷ್ಟು ಕನ್ನಡ
ಲೇ: ಕೆ.ವಿ. ತಿರುಮಲೇಶ್
ಬೆಲೆ: ರೂ. 125/-

ಕಳೆದ ನಾಲ್ಕು ದಶಕಗಳಿಂದ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸುತ್ತಿರುವ ಕೆ.ವಿ. ತಿರುಮಲೇಶರು ಭಾಷೆ ಮತ್ತು ಭಾಷಾಶಾಸ್ತ್ರ ಕುರಿತು ವಿವಿಧ ಸಂದರ್ಭಗಳಲ್ಲಿ ಬರೆದ ಆಳ ಅಧ್ಯಯನದ ಲೇಖನಗಳ ಸಂಗ್ರಹ ಕೃತಿ ಇದು. ಇಲ್ಲಿನ ಎಲ್ಲಾ ಲೇಖನಗಳಲ್ಲಿ ಕನ್ನಡವನ್ನು ಸಮಗ್ರವಾಗಿ ಕಟ್ಟುವ, ಪುನಾರೂಪಿಸುವ, ಬಹುಮುಖಿಯಾಗಿಸುವ ಶ್ರಮ ಎದ್ದು ಕಾಣುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ತೀವ್ರ ಬೆಳವಣಿಗೆ ಕಾಣುತ್ತಿರುವ ಸಂದರ್ಭದಲ್ಲಿ ಜೀವಂತ ಭಾಷೆಯೊಂದು ಇವೆಲ್ಲಕ್ಕೂ ಸ್ಪಂದಿಸಬೇಕು. ಮಾಹಿತಿ ಸಂವಹನಕ್ಕೆ ಮಾತ್ರವಲ್ಲ ಜ್ಞಾನ ಸಂಪಾದನೆಗೂ ಅನುವಾಗಬೇಕೆಂಬ ಗಂಭೀರ ಚಿಂತನೆ ಇಲ್ಲಿ ನಡೆದಿದೆ.

ಪ್ರ: **ಅಭಿನವ ಪ್ರಕಾಶನ, ಬೆಂಗಳೂರು.**





ರಾಮದುರ್ಗಾ ಸಂಸ್ಥಾನ: ವಿಮೋಚನಾ ಹೋರಾಟ
ಲೇ: ಡಾ॥ ಎ.ಬಿ. ವಗ್ಗರ
: ಎಂ.ಆರ್. ಜರಕುಂಟಿ
ಬೆಲೆ: ರೂ. 80/-

ರಾಮದುರ್ಗಾ ಸಂಸ್ಥಾನದ ವಿಮೋಚನಾ ಹೋರಾಟವೆಂಬ ವಿದ್ಯಮಾನವೊಂದರ ಸಂಕೀರ್ಣತೆಯ ಬಗ್ಗೆ ಈ ಕೃತಿ ವಿವರ ನೀಡುತ್ತದೆ. ಈ ಪುಟ್ಟ ಸಂಸ್ಥಾನದ ನಗ್ನ ನಿರಂಕುಶ ಆಳ್ವಿಕೆಯನ್ನು ಮತ್ತು ಅದರ ವಿರುದ್ಧ ಮೇಲುದನಿಯಲ್ಲೂ ಪ್ರತಿಭಟಿಸಲಾಗದ ದುರ್ದೈವಿ ಪ್ರಜೆಗಳ ಅಸಹಾಯಕ ಸ್ಥಿತಿ ಹಾಗೂ ಇಲ್ಲಿನ ಜನತೆ ಸಂಸ್ಥಾನಿಕ ದಬ್ಬಾಳಿಕೆಯ ವಿರುದ್ಧ ಬಂಡೆದ್ದ ಬಗೆಗಿನ ಘಟನಾವಳಿಗಳನ್ನು ನಿರೂಪಿಸುತ್ತದೆ. ಅಲ್ಲದೆ ಶೀಘ್ರಕಾಲದಲ್ಲಿ ನಡೆದ ಆಂದೋಲನ ಉಂಟುಮಾಡಿದ ಕಂಪನಗಳು ಇತರೆಡೆಗೂ ಪರಿಣಾಮ ಬೀರಿದ್ದನ್ನು ಇಲ್ಲಿ ದಾಖಲಿಸಿದೆ.

ನೂರು ಬಣ್ಣದ ಕಣ್ಣು
ಲೇ: ವಿಜಯಕಾಂತ ಪಾಟೀಲ
ಬೆಲೆ: ರೂ. 50/-

ಚುರುಕುತನ, ಲವಲವಿಕೆ, ಒಂದು ಕ್ಷಣದಲ್ಲಿ ಮೂಡಿ ಮಾಯವಾಗುವ ಭಾವ ಮತ್ತು ಆಲೋಚನೆಗಳನ್ನು ಸಣ್ಣ ರಚನೆಗಳಲ್ಲಿ ಬಂಧಿಸುವ ಕುಶಲತೆಯಿಂದಾಗಿ ಇಲ್ಲಿನ ಪದ್ಯಗಳು ಗಮನ ಸೆಳೆಯುತ್ತವೆ. ಲೇಖಕರ ಕಾವ್ಯಕೃಷಿಯಲ್ಲಿ ದುಡಿಮೆಯ ಬೆವರು ಹನಿಯೊಂದಿಗೆ ತೋಟಗಾರಿಕೆಯ ಕಲಾವಂತಿಕೆಯೂ ಮೇಳೈಸಿದೆ. ಸಾಮಾಜಿಕ ಪ್ರಜ್ಞೆ ಮತ್ತು ಸೌಂದರ್ಯ ಪ್ರಜ್ಞೆ ಒಟ್ಟುಗೂಡಿದ್ದು ಬದುಕಿನ ಎಲ್ಲ ಆಯಾಮಗಳಿಗೂ ತೆರೆದುಕೊಳ್ಳಬಲ್ಲ ಅನನ್ಯತೆ ಎದ್ದುಕಾಣುತ್ತದೆ. ಒಟ್ಟಾರೆ ದೃಷ್ಟಿಯಿಂದ ನೋಡಿದಾಗ ಸ್ಥಳೀಯತನ, ಬಣ್ಣ, ಚಹರೆಗಳನ್ನು ತೋರುತ್ತ ತಮ್ಮ ಚಿತ್ರಕ ಶಕ್ತಿಯಿಂದ ಮತ್ತು ಸೂಕ್ಷ್ಮ ಚಿಂತನೆಗಳಿಂದ ಗಮನ ಸೆಳೆಯುತ್ತವೆ.

ಈ ಎರಡೂ ಪುಸ್ತಕಗಳ ಪ್ರಕಾಶಕರು: ಲಡಾಯಿ ಪ್ರಕಾಶನ, ಗದಗ.

ಬಾಳೆಯ ಕಂಬ
ಲೇ: ಡಾ॥ ಬಸು ಬೇವಿನಗಿಡದ
ಬೆಲೆ: ರೂ. 110/-

ಈ ಕೃತಿಯಲ್ಲಿನ ಕಥೆಗಳಲ್ಲಿ ಬರುವ ಮಹಿಳೆಯರು ಎಂಥ ದುರ್ಭರ ಸನ್ನಿವೇಶದಲ್ಲಿಯೂ ಬದುಕಿನ ಬಗೆಗಿನ ಆಸಕ್ತಿಯನ್ನು ಕಳೆದುಕೊಳ್ಳದೆ ಬದುಕಿನ ರಥವನ್ನು ಮುನ್ನಡೆಸುವ, ಕಷ್ಟ ಕೋಟಲೆಗಳನ್ನು ಎದುರಿಸಿಯೂ ಬದುಕಿನ ಜೀವಂತಿಕೆಯನ್ನು ತುಳುಕಿಸುವ ಸಾಮರ್ಥ್ಯ ಪಡೆದುಕೊಂಡಿದ್ದಾರೆ. ಪ್ರಸ್ತುತ ಸಾಮಾಜಿಕ ಸನ್ನಿವೇಶವನ್ನು ಕೌಟುಂಬಿಕ ಚೌಕಟ್ಟಿನೊಳಗೆ ಇಟ್ಟು ಪರಿಶೀಲಿಸಿರುವುದು ಈ ಕಥೆಗಳ ಇನ್ನೊಂದು ಮುಖ್ಯ ಲಕ್ಷಣ. ಲೇಖಕರು ತಮ್ಮ ಅನುಭವವನ್ನು ಬಹು ವಿವರಗಳಲ್ಲಿ ಕಟ್ಟಿಕೊಟ್ಟಿರುವುದರಿಂದ ಇಲ್ಲಿಯ ಕಥೆಗಳಿಗೆ ಎಡಬಿಡದೆ ಓದಿಸಿಕೊಳ್ಳುವ ಗುಣ ಪ್ರಾಪ್ತವಾಗಿದೆ.

ಪ್ರ: **ಚೈತ್ರ ಪ್ರಕಾಶನ, ಧಾರವಾಡ**



ಶಂಕರಾಚಾರ್ಯ ಮತ್ತು ಪ್ರತಿಗಾಮಿತನ ಕೃತಿ ಸಮೀಕ್ಷೆ
ಸಂ: ಪ್ರೊ॥ ಸೀ.ಚ. ಯತೀಶ್ವರ
ಬೆಲೆ: ರೂ. 125/-

ಒಂದು ವೈಚಾರಿಕ ಸಾಹಿತ್ಯ ಕೃತಿ ಸಮಾಜದ ಜನಮಾನಸದ ಮೇಲೆ ಬೀರಿರಬಹುದಾದ ಪ್ರಭಾವ ಎಂಥಹದು ಎಂಬುದನ್ನು ಅರಿಯಲು ಸಹಕಾರಿಯಾಗಿರುವ ಕೆ.ಎಸ್. ಭಗವಾನ್ ಅವರ 'ಶಂಕರಾಚಾರ್ಯ ಮತ್ತು ಪ್ರತಿಗಾಮಿತನ' ಹದಿನೈದು ಮುದ್ರಣಗಳನ್ನು ಕಂಡಿದೆ. ಪುರೋಹಿತಶಾಹಿಯ ಗರ್ಭದಾಳಕ್ಕೆ ಇಳಿದು ಅದರ ಹುನ್ನಾರಗಳನ್ನು ಬಹಿರಂಗ ಪಡಿಸಿದ ಈ ಕೃತಿಯ ಒಳನೋಟಗಳಿಗೆ ಮಾರುಹೋದ ನಾಡಿನ ಪ್ರಭಾವಿ ಲೇಖಕರು ಜಾಗೃತ ಪ್ರಜ್ಞೆಯಿಂದ ಬರೆದಿರುವ ವಿಚಾರ ಪೂರ್ಣ ಲೇಖನಗಳನ್ನು ಒಳಗೊಂಡ ಮಹತ್ವಪೂರ್ಣ ಕೃತಿ ಇದು.

ಪ್ರ: ಮಾನವ ಪ್ರಕಾಶನ, ಹಾಸನ.





ಮೀಡಿಯಾ ಮಿರ್ಚಿ
ಲೇ: ಜಿ.ಎನ್ ಮೋಹನ್
ಬೆಲೆ: ರೂ. 95/-

ಪತ್ರಿಕಾ ವೃತ್ತಿಗೆ ಘನತೆಯನ್ನು ತಂದ ಹೆಸರಾಂತ ಪತ್ರಕರ್ತ ಪಿ.ಸಾಯಿನಾಥ್ ಅವರ ಬರಹಗಳಿಂದ ಸಾಕಷ್ಟು ಪ್ರಭಾವಿತರಾಗಿರುವ ಮೋಹನ್ ಬರೆದ 'ಮೀಡಿಯಾ ಮಿರ್ಚಿ' ಅಂಕಣ ಬರಹಗಳ ಸಂಗ್ರಹ ಕೃತಿ ಇದು. ತಮ್ಮ ಲೇಖನಗಳ ಮೂಲಕ ಮಾಧ್ಯಮದ ಒಳಸುಳಿಯನ್ನು ಬಿಚ್ಚಿಟ್ಟಿದ್ದಾರೆ. ಕಲುಷಿತಗೊಂಡಿರುವ ಮಾಧ್ಯಮಲೋಕವನ್ನು ಹಸನುಗೊಳಿಸಲು ಯತ್ನಿಸುತ್ತಿರುವ ಲೇಖಕರ ಕಾಳಜಿ ಮೆಚ್ಚುವಂತಹದ್ದು. ಮೀಡಿಯಾ ಹೀಗೂ ಇರುತ್ತದೆಯೇ ಎಂದು ತಿಳಿಯಬಯಸುವವರಿಗೆ ಈ ಪುಸ್ತಕ ಒಂದು ಬೆಳಕಿಂಡಿ.

ಪ್ರ: ಅಂಕಿತ ಪುಸ್ತಕ, ಬೆಂಗಳೂರು.

ಸಂಪಾದಕರೊಡನೆ ಸಂವಾದ

ರಣವೀರ ಸೇನೆ: ಉಳ್ಳವರ ಉಗ್ರಸೇನೆ

ವಿಕಾಸ ಆರ್. ಮೌರ್ಯ

ಪ್ರಿಯ ಸಂಪಾದಕರೇ,

ಜೂನ್ 1, 2012ರಂದು ಬಿಹಾರದ ಅರಾ ಎಂಬ ಊರಿನಲ್ಲಿ ಬ್ರಹ್ಮೇಶ್ವರ ಸಿಂಗ್ ಎಂಬ 70ರ ವೃದ್ಧನನ್ನು ಬೆಳಿಗ್ಗೆ ವಾಯುವಿಹಾರಕ್ಕೆ ತೆರಳಿರುವಾಗ ಅನಾಮಿಕ ಶಸ್ತ್ರಧಾರಿಯೊಬ್ಬ ಸುಮಾರು 40 ಸುತ್ತು ಗುಂಡುಗಳನ್ನು ಹಾರಿಸಿ ಹತ್ಯೆ ಮಾಡಿದ್ದ. ಈತನ ಹತ್ಯೆ ತಿಳಿದ ಕೂಡಲೆ ಬಿಹಾರದ ಭೂಮಾಲೀಕರಿಗೆ ಸಹಿಸಲಾಗದ ದುಃಖ. ದಲಿತರಿಗೆ ಹೇಳತೀರದಷ್ಟು ಸಂತೋಷ. ಈತನ ಹಿಂಬಾಲಕರಿಗಂತು ಸಹಿಸಲಾರದಷ್ಟು ಆವೇಶ. ಆ ಆವೇಶದ ಪರಿಣಾಮವಾಗಿ 22 ವಾಹನಗಳು ಛಿದ್ರವಾದವು, ಪೊಲೀಸರ ವಾಹನ ಸೇರಿದಂತೆ 5 ವಾಹನಗಳು ಬೆಂಕಿಗೆ ಆಹುತಿಯಾದವು. ಹಲವಾರು ರಸ್ತೆಗಳಲ್ಲಿ ಸಂಚಾರ ಸ್ಥಗಿತವಾಗಿತ್ತು. ಕೆಲವು ಪೊಲೀಸರನ್ನು, ಪೊಲೀಸ್ ಸೂಪರಿಡೆಂಟರನ್ನು ರಣವೀರ ಸೇನೆಯ ಕಾರ್ಯಕರ್ತರು ಅಟ್ಟಾಡಿಸಿದರು. ಕೆಲವರಿಗೆ ಒದೆ ಸಹ ಬಿದ್ದವು, ಗಾಯಗಳಾದವು. ಶಾಸಕನೊಬ್ಬನಿಗೆ ಕಲ್ಲೆಸತದಿಂದ ಗಾಯವಾಯಿತು. ಇಷ್ಟೆಲ್ಲ ಮಾಡಿದರೂ ಪ್ರಭುತ್ವ ಶಾಂತವಾಗಿತ್ತು. ರೈತರು ತಮ್ಮ ಬೇಡಿಕೆಗಳಿಗೆ ಹೋರಾಟಕ್ಕಿಳಿದರೆ ಪೊಲೀಸರು ಗುಂಡು ಹಾರಿಸಿ ಸಾಯಿಸಿಬಿಡುತ್ತಾರೆ. ಆದರೆ ಇಲ್ಲಿ ಆ ಧಾಂದಲೆ ಮಾಡಿದವರಿಗೆ ಪ್ರಾರಂಭದಲ್ಲಿ ಪೊಲೀಸರಿಂದ ಕನಿಷ್ಠ ಪ್ರತಿರೋಧ ಬರಲಿಲ್ಲವೇಕೆ? ಇದಕ್ಕೆ ಉತ್ತರ ಹುಡುಕುವ ಮೊದಲು ಈ ರಣವೀರ ಸೇನೆಯ ಬಗ್ಗೆ, ಅದರ ಮುಖ್ಯಸ್ಥ ಬ್ರಹ್ಮೇಶ್ವರ ಸಿಂಗ್‌ನ ಬಗ್ಗೆ ತಿಳಿದುಕೊಳ್ಳೋಣ.

ಸದ್ಯಕ್ಕೆ ಬಿಹಾರ ಎಂದರೆ ನೆನಪಾಗುವುದು ನಿತೀಶಕುಮಾರ್ ಮತ್ತು ಅವರ ಆಡಳಿತ. ಆದರೆ ಅಲ್ಲಿನ ಆಡಳಿತದಲ್ಲಿರುವ ನ್ಯೂನ್ಯತೆಗಳನ್ನು ಪ್ರಶ್ನಿಸುವವರು ಕಡಿಮೆ ಜನ. ಅಲ್ಲಿನ ಭ್ರಷ್ಟಾಚಾರಗಳೇನು ಇಂದು ಗುಟ್ಟಾಗಿ ಉಳಿದಿಲ್ಲ. ಇನ್ನು ಇಡೀ ಭಾರತಕ್ಕೆ ಹೋಲಿಸಿಕೊಂಡರೆ ಬಿಹಾರದ ದಲಿತರ ಕತೆ ತೀರ ಚಿಂತಾಜನಕ. ಅದಕ್ಕೆ ರಣವೀರ ಸೇನೆಯ ಕುಕೃತ್ಯಗಳೆ ಸಾಕ್ಷಿ. ರಣವೀರ ಸೇನೆ ಒಂದು ಶಸ್ತ್ರಸಜ್ಜಿತ ಖಾಸಗಿ ಸೇನೆ. ಇದು ಬಿಹಾರದ ಮೇಲ್ವರ್ಗದ ಭೂಮಿಹಾರ ಭೂಮಾಲಿಕರು ತಮ್ಮ ರಕ್ಷಣೆಗೆಂದೇ ರಚಿಸಿಕೊಂಡಿರುವ ಸೇನೆ. ಬಹುಶಃ ಇವರಿಗಿರುವ ಸೌಲಭ್ಯಗಳು ನಮ್ಮ ದೇಶದ ಸೈನಿಕರಿಗೂ ಇಲ್ಲ. ಇವರ ಕೆಲಸವೇನೆಂದರೆ ಭೂಮಾಲಿಕರನ್ನು ಅವರ ವಿರೋಧಿಗಳಿಂದ ರಕ್ಷಿಸುವುದು. ಇವರ ವಿರೋಧಿಗಳು ಯಾರು? ಭಾರತದ ಬಹುತೇಕ ಭೂಮಾಲಿಕರಿಗೆ ಇರುವ ಹೆದರಿಕೆ ನಕ್ಸಲಿಯರದ್ದು.

ಅದಕ್ಕೆ ಕಾರಣ ಅವರ ಬಳಿ ಇರುವ ನೂರಾರು ಎಕರೆ ಜಮೀನು. ಕಾನೂನು ಬಾಹಿರವಾಗಿಯೊ, ಕಾನೂನಾತ್ಮಕವಾಗಿಯೋ, ಭೂಮಿ ಒತ್ತುವರಿಯಿಂದಲೋ, ದಲಿತರನ್ನು ಬೆದರಿಸಿ ಸಾಲ ಕೊಟ್ಟು ಕಬಳಿಸಿಯೋ ಗಳಿಸಿರುವ ಈ ಭೂಮಿಯೇ ಇಂದು ಜಮೀನ್ದಾರರಿಗೆ ನಿದ್ದೆ ಇಲ್ಲದಂತೆ ಮಾಡಿರುವುದು. ನಕ್ಸಲೈಟರು ಮತ್ತು ಅವರ ಬೆಂಬಲಿಗರು ರಣವೀರ ಸೇನೆಯ ಶತ್ರುಗಳು. ಅದಕ್ಕಾಗಿಯೆ ಕಿಂಚಿತ್ತು ನಿದ್ದೆ ಮಾಡಲು ರಣವೀರ ಸೇನೆಯನ್ನು ಸ್ಥಾಪಿಸಿಕೊಂಡದ್ದು. ಇಂದು ನಮಗೆಲ್ಲ ತಿಳಿದಿರುವಂತೆ ಇಂತಹ ಭೂಮಾಲಿರನ್ನು ಹೆದರಿಸಿ ಬೆದರಿಸಿ ಜಮೀನುಗಳನ್ನು ದಲಿತರಿಗೆ ಆದಿವಾಸಿಗಳಿಗೆ ನಕ್ಸಲರು ಹಂಚಿರುವ ಉದಾಹರಣೆಗಳು ನಮ್ಮಲ್ಲಿ ಇವೆ. ಒಂದು ಜನಪರ ಸರ್ಕಾರ ಮಾಡಬೇಕಾದ ಕೆಲಸವನ್ನು ನಕ್ಸಲರು ಮಾಡಿರುವುದು ಸ್ವಾಗತಾರ್ಹವಾದರೂ ಅದನ್ನು ಹಿಂಸಾತ್ಮಕವಾಗಿ ಪಡೆದದ್ದು ತೀರ ಖಂಡನೀಯ ಮತ್ತು ಇಂತಹ ಉದಾಹರಣೆಗಳು ಸರ್ಕಾರಗಳು ದಲಿತರ ಬಗ್ಗೆ ತಾಳಿರುವ ನಿರ್ಲಕ್ಷವನ್ನು ಸಹ ಬಿಂಬಿಸುತ್ತದೆ. ಯಾರ ಪರವಾಗಿ ಕೆಲಸ ಮಾಡುತ್ತಿದ್ದೇವೆ ಎಂದು ನಕ್ಸಲೈಟರು ಹೇಳುತ್ತಿದ್ದಾರೊ ಅವರ ಮಾರಣಹೋಮಗಳೇ ನಡೆದು ಹೋಗಿವೆ ಬಿಹಾರದಲ್ಲಿ.

ಗುಂಡೇಟಿಗೆ ಬಲಿಯಾದ ರಣವೀರ ಸೇನೆ ಮುಖ್ಯಸ್ಥ ಬ್ರಹ್ಮೇಶ್ವರ ಸಿಂಗ್

ತಮ್ಮ ಸಂಪತ್ತು ತಮ್ಮ ಮುಂದೆಯೇ ನಕ್ಸಲಿಯರಿಂದಾಗಿ ಬಡ ದಲಿತ ಆದಿವಾಸಿಗಳಿಗೆ ಹರಿದುಹೋಗುತ್ತಿರುವುದನ್ನು ಸಹಿಸಲಾಗದ ಭೂಮಾಲಿಕರು ಸಾಕಿಕೊಂಡ ರಕ್ತಪಿಪಾಸುಗಳ ಗುಂಪೇ ರಣವೀರ ಸೇನೆ. ಈ ಸೇನೆಯ ಕೆಲಸ ಊಳಿಗಮಾನ್ಯ ವ್ಯವಸ್ಥೆಯನ್ನು ರಕ್ಷಿಸುವುದು ಮತ್ತು ದಲಿತರ ಪರವಾಗಿ ಕೆಲಸಮಾಡುವವರನ್ನು ಕೊಲ್ಲುವುದು. ತಮ್ಮ ಸಾಮ್ರಾಜ್ಯವನ್ನು ಕಾಪಾಡಿಕೊಳ್ಳುವುದು. ಬಿಹಾರದಲ್ಲಿ ದಲಿತ ಆದಿವಾಸಿಗಳ ಪರವಾಗಿ ಹೋರಾಡುತ್ತಿರುವ ಪೀಪಲ್ಸ್ ವಾರ್ ಗ್ರೂಪ್, ಮಾವೋಯಿಸ್ಟ್ ಕಮ್ಯುನಿಸ್ಟ್ ಸೆಂಟರ್, ಸಿ.ಪಿ.ಐ (ಎಮ್.ಎಲ್)ಗಳ ಮೇಲೆಯೇ ಈ ಸೇನೆಯ ಕಣ್ಣು. ಇಂತಹ ಜನಪರ ಸಂಘಟನೆಗಳಿಗೆ ಸಹಾಯ ಮಾಡುವ, ಅವರ ಪರವಿರುವ ಪ್ರತಿಯೊಬ್ಬರಿಗೂ ಸಹ ಈ ಸೇನೆ ಬಂದೂಕಿನಿಂದಲೆ ಉತ್ತರ ಕೊಟ್ಟಿದೆ. ಒಂದೊಂದು ಹತ್ಯಾಕಾಂಡವನ್ನೇ ನಡೆಸಿದೆ. ಇಲ್ಲಿವರೆಗೆ ಸುಮಾರು 227 ಜನರನ್ನು ನಿರ್ದಾಕ್ಷಿಣ್ಯವಾಗಿ ಬಲಿಹಾಕಿದೆ. ಇಂತಹ ಸೇನೆಯ ಮುಖ್ಯಸ್ಥನೇ ಹತ್ಯೆಯಾಗಿರುವ ಬ್ರಹ್ಮೇಶ್ವರ ಸಿಂಗ್ ಅಲಿಯಾಸ್ ಮುಖಿಯಾಜಿ. ಈತನ ಮುಖಂಡತ್ವದಲ್ಲಿ ರಣವೀರ ಸೇನೆ ನಡೆಸಿರುವ ಮಾರಣ ಹೋಮಗಳನ್ನು ಗಮನಿಸಿರಿ.

1. 1995ರ ಬಿಹಾರ ಚುನಾವಣೆಯಲ್ಲಿ ರಣವೀರ ಸೇನೆ ಕೊಂದದ್ದು ಬರೋಬ್ಬರಿ 50 ಅಮಾಯಕರನ್ನು.
2. 23 ಮಾರ್ಚ್ 1997ರಂದು ಹೈಬಾಸಪುರದಲ್ಲಿ 10 ಕೂಲಿಕಾರರನ್ನು ಹತ್ಯೆ ಮಾಡಿತು.
3. 11 ಜೂನ್ 1996ರಂದು ಬೆತಾನಿ ತೋಲ ಎಂಬಲ್ಲಿ 21 ದಲಿತರನ್ನು ಕೊಂದಿತು. ಅವರಲ್ಲಿ 11 ಹೆಂಗಸರು 6 ಮಕ್ಕಳೂ ಸಹ ಇದ್ದರು. ಇದೇ ದಿನ 5 ಯುವತಿಯರನ್ನು ಅತ್ಯಾಚಾರ ಮಾಡಿ ಕೊಲ್ಲಲಾಯಿತು.
4. 1 ಡಿಸೆಂಬರ್ 1997ರಂದು 61 ದಲಿತರನ್ನು ಹತ್ಯೆಗೈದರು. ಅವರಲ್ಲಿ 16 ಮಕ್ಕಳು, 27 ಹೆಂಗಸರು ಇದ್ದರು. ಇದೇ ಕೃತ್ಯದ ನಂತರ ಬ್ರಹ್ಮೇಶ್ವರ ಸಿಂಗ್ ಹೇಳಿದ್ದು ಹೀಗೆ....

"ನಾವು ಮಕ್ಕಳನ್ನು ಕೊಲ್ಲುತ್ತೇವೆ ಏಕೆಂದರೆ ಅವರು ಬೆಳೆದು ದೊಡ್ಡವರಾಗಿ ನಕ್ಸಲರಾಗುತ್ತಾರೆ. ನಾವು ಹೆಂಗಸರನ್ನು ಕೊಲ್ಲುತ್ತೇವೆ ಏಕೆಂದರೆ ಅವರು ನಕ್ಸಲರಿಗೆ ಜನ್ಮ ನೀಡುತ್ತಾರೆ"

(10ನೇ ಪುಟಕ್ಕೆ)

ಸಂಪಾದಕರೊಡನೆ ಸಂವಾದ

ಮೂರ್ಖರ ಪೆಟ್ಟಿಗೆ ಹಾಗೂ ಜನಪ್ರಿಯ ಸಂಸ್ಕೃತಿಯ ಭರಾಟೆ

ಡಾ॥ ಎಸ್.ಬಿ ಜೋಗುರ

ಪ್ರಿಯ ಸಂಪಾದಕರೇ,

ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸೈಲೆಂಟ್ ಆಗಿ ಸಾಗಿಬರುವ ಪರಂಪರೆಯಾಗಿದ್ದ ಸಂಸ್ಕೃತಿಯೊಂದು ಈಗ ಮಾಧ್ಯಮಗಳ ಸಹವಾಸದಲ್ಲಿ ಜನಪ್ರಿಯ, ಸಮೂಹ ಸಂಸ್ಕೃತಿಯ ಸಹವಾಸದಲ್ಲಿ ಸುದ್ದಿ-ಗದ್ದಲಗಳೊಂದಿಗೆ ಭಿತ್ತರಗೊಳ್ಳುತ್ತ, ಜನಸಾಮಾನ್ಯನನ್ನು ಪ್ರಭಾವಿಸುತ್ತಲೇ ತನ್ನ ತೆಕ್ಕೆಗೆ ಅಪಾರ ಪ್ರಮಾಣದ ಜನಸಮೂಹವನ್ನು ತೆಗೆದುಕೊಂಡು ಪ್ರವಾಹದೋಪಾದಿಯಲ್ಲಿ ಸಾಗುತ್ತಿರುವದು, ಆ ಮೂಲಕ ಅಡುಗೆ ಮನೆಯವರೆಗೂ ಒಂದು ಬಗೆಯ ವಾಣಿಜ್ಯೀಕೃತ ಪರಿಣಾಮ ಮತ್ತು ಪ್ರಭಾವವನ್ನು ರೂಪಿಸುವಲ್ಲಿ ಕಾರಣವಾಗಿರುವದಂತೂ ಹೌದು. ಮಧ್ಯಮವರ್ಗದ ಮನೆಯೊಳಗಿನ ಬಹುತೇಕ ಪರಿಕರಗಳು ದೂರದರ್ಶನದ ಜಾಹೀರಾತುಗಳ ಪ್ರಭಾವಳಿಯಿಂದ ಎಂಟ್ರಿ ಪಡೆದವುಗಳಾಗಿವೆ.

ಸದ್ಯದ ಸಂದರ್ಭದ ಅತ್ಯಂತ ಪ್ರಭಾವಿ ಮಾಧ್ಯಮವಾದ ದೂರದರ್ಶನ ವೀಕ್ಷಕರ ಮನಃಸ್ಥಿತಿ ಮತ್ತು ಅವರು ಮೂರ್ಖರ ಪೆಟ್ಟಿಗೆಯ ಮುಂದೆ ಕುಳಿತುಕೊಳ್ಳುವ ಮೂಲಕ ಪಡೆಯುವ ಮತ್ತು ಹಿಂತಿರುಗಿ ಕೊಡುವ ಸಂಗತಿಗಳಾದರೂ ಯಾವುವು..? ಎನ್ನುವದರ ಬಗ್ಗೆ ನಮ್ಮಂಥಾ ರಾಷ್ಟ್ರಗಳಲ್ಲಿ ಈವರೆಗೂ ವಸ್ತುನಿಷ್ಠ ಅಧ್ಯಯನಗಳು ಜರುಗಿದ್ದು ತೀರಾ ಕಡಿಮೆ. ಹಾಗಾಗಿಯೇ ಮೂರ್ಖರ ಪೆಟ್ಟಿಗೆಯಲ್ಲಿ ಭಿತ್ತರಗೊಳ್ಳುವ ಎಲ್ಲ ಕಾರ್ಯಕ್ರಮಗಳನ್ನು ನಾವು ನೋಡಬೇಕಿದೆ.

ಬ್ರಿಟೀಷ್ ಫಿಲ್ಮ್ ಸಂಸ್ಥೆ ಈ ಬಗ್ಗೆ ಒಂದು ನಿಖರವಾದ ಅಧ್ಯಯನವನ್ನು ಮಾಡಿದೆ. ಆ ಬಗ್ಗೆ 'An introduction to studying popular culture' ಎನ್ನುವ ಕೃತಿಯಲ್ಲಿ ಡೊಮೆನಿಕ್ ಸ್ಟ್ರಿನಟಿ ಎನ್ನುವ ಲೇಖಕರು ಚರ್ಚಿಸಿದ್ದಾರೆ. ಯುರೋಪ್‌ನ ಪ್ರಮುಖ ರಾಷ್ಟ್ರಗಳಲ್ಲಿ ಹಗಲು ಹೊತ್ತಿನಲ್ಲಿ ಹೆಚ್ಚು ದೂರದರ್ಶನವನ್ನು ವೀಕ್ಷಣೆ ಮಾಡುವವರಿಗೆ ಒಂದು ಬಗೆಯ ತಪ್ಪಿತಸ್ಥ ಪ್ರಜ್ಞೆ ಕಾಡುವ ಬಗ್ಗೆ ಅಧ್ಯಯನದಲ್ಲಿ ತಿಳಿದುಬಂದಿದೆ. ಜೊತೆಗೆ ಹೆಚ್ಚೆಚ್ಚು ದೂರದರ್ಶನವನ್ನು ವೀಕ್ಷಿಸುವದು ಆರೋಗ್ಯಕರವೂ ಅಲ್ಲ ಎನ್ನುವ ಬಗ್ಗೆ ಆ ಅಧ್ಯಯನ ತೋರಿಸಿಕೊಟ್ಟಿದೆ. ಸದ್ಯದ ಸಂದರ್ಭದಲ್ಲಿ ಬದುಕು ಅನೇಕ ಬಗೆಯ ಬವಣೆಗಳಿಂದ ಸುತ್ತುವರೆದಿದೆ. ಪ್ರಾಥಮಿಕ ಶಾಲೆಯಲ್ಲಿ ಓದುವ ವಿದ್ಯಾರ್ಥಿಯಿಂದ ಹಿಡಿದು ಮಸಣ ಮಾರ್ಗದ ದಿನಗಳೆಣಿಸುವವರ ತನಕ ಎಲ್ಲರೂ ಉದ್ವೇಗದ ವಾತಾವರಣದಲ್ಲಿ ದಿನದೂಡುವ ನಡುವೆ ಕೊಂಚ ರಿಲ್ಯಾಕ್ಸ್ ಆಗಲು ಕಂಡುಕೊಂಡ ರೆಡಿಮೇಡ್ ಮಾರ್ಗ ಈ ಟಿ.ವಿ.ವೀಕ್ಷಣೆ.

ಆ ಸಂಶೋಧನೆಯಲ್ಲಿ ಕಂಡುಬಂದ ಇನ್ನೊಂದು ಸಂಗತಿಯೆಂದರೆ ಪುರುಷರು ಹೆಚ್ಚಾಗಿ ಸಾಹಸದ ಸನ್ನಿವೇಶಗಳು, ವಾಸ್ತವಿಕ ಘಟನೆಗಳು, ಕ್ರೀಡೆಯನ್ನು ಹೆಚ್ಚಾಗಿ ವೀಕ್ಷಣೆ ಮಾಡಿದರೆ, ಮಹಿಳೆಯರು ರಿಯಾಲಿಟಿ ಶೋ.. ನಾಟಕ ಮುಂತಾದವುಗಳನ್ನು ನೋಡುವ ಬಗ್ಗೆ ತಿಳಿದುಬಂದಿದೆ. ರಿಮೋಟ್ ಕಂಟ್ರೋಲ್ ಮೇಲಿನ ಅಧಿಪತ್ಯದಲ್ಲಿ 46 ಪ್ರತಿಶತ ಪುರುಷರದಾಗಿದ್ದರೆ, 22 ಪ್ರತಿಶತ ಮಹಿಳೆಯರದಾಗಿದೆ. ಯುವಕರು ಮಾತ್ರ ಹೆಚ್ಚಾಗಿ ಗ್ಲಾಮರಸ್ ಇಲ್ಲವೇ ಹಿಂಸಾತ್ಮಕವಾದ ಕಾರ್ಯಕ್ರಮಗಳನ್ನು ನೋಡುವದಿದೆ.

ದೂರದರ್ಶನದ ಕೆಲ ಹಿಂಸಾತ್ಮಕ ಕಾರ್ಯಕ್ರಮಗಳ ವೀಕ್ಷಣೆ ಯುವಜನಾಂಗದ ಅಶಾಂತಿಗೆ ಪರೋಕ್ಷವಾಗಿ ಕಾರಣವಾಗುವ ಬಗ್ಗೆ ಮತ್ತೊಂದು ಸಮೀಕ್ಷಾ ಅಧ್ಯಯನವು ತಿಳಿಸಿರುವದಿದೆ. ಆ ಕುರಿತು ಮಾರ್ಚ್ 19-1999ರಲ್ಲಿ ಗಾರ್ಡಿಯನ್ ಪತ್ರಿಕೆಯಲ್ಲಿ ವರದಿ ಮಾಡಲಾಗಿತ್ತು. ಬ್ರಿಟಿಷ್ ಯುವಕರು ಅದರಲ್ಲೂ 17 ವರ್ಷ ವಯೋಮಿತಿಯ ಒಳಗಿನವರು ಪುಸ್ತಕಗಳನ್ನು ಓದುವ ಬಗ್ಗೆ ರೇಜಿಗೆ ಬೆಳೆಸಿಕೊಂಡಿದ್ದಾರೆ. ಬಹುತೇಕ ಮಕ್ಕಳು ತಮ್ಮ ಬೆಡ್‌ರೂಮಲ್ಲಿ ಒಂದು ಟಿ.ವಿ.ಯನ್ನು ಹೊಂದಿರುವರು. ಅವರು ಬೆಳೆಯುತ್ತಿರುವದೇ ಈ ಬೆಡ್‌ರೂಮ್ ಸಂಸ್ಕೃತಿಯಲ್ಲಿ ದಿನಕ್ಕೆ 5-6 ಗಂಟೆ ತಮ್ಮ ಅಮೂಲ್ಯವಾದ ಸಮಯವನ್ನು ಟಿ.ವಿ.ಮುಂದೆ ಕಳೆಯುವದಿದೆ. ಎಂದು ಅದು ವರದಿ ಮಾಡಿತ್ತು. ಈ ಮಾತು ನಮ್ಮ ಯುವಕರಿಗೂ ಅನ್ವಯಿಸುತ್ತದೆ.

ಆದರೆ ಯುರೋಪಿನ ರಾಷ್ಟ್ರಗಳಿಗಿಂತಲೂ ನಮ್ಮ ಸಂಸ್ಕೃತಿ, ಸಾಮಾಜಿಕ ಪರಿಸರ ವಿಭಿನ್ನ. ಅಜ್ಜಿ ಹೇಳುವ ಕಥೆಗಳಲ್ಲಿಯೇ ಸುಖ ಕಾಣುವ ಜಮಾನಾ ಒಂದಿತ್ತು. ಮಕ್ಕಳಾಡುವ ತೊದಲು ನುಡಿಯೇ ಮನರಂಜನೆಯಾಗಿದ್ದ ದಿನಗಳೂ ಹೋದವು.. ಭಜನೆ.. ಕೀರ್ತನೆ..ಗಳೂ ಇಂದಿನ ಯುವಜನತೆಗೆ ಮನರಂಜನೆಯನ್ನು ನೀಡುವ ತಾಕತ್ತನ್ನು ಕಳೆದುಕೊಂಡವು. ಈಗ ಒಂದೇ ಒಂದು ಬಟನ್ ಒತ್ತುವ ಮೂಲಕ ನೂರಾರು ಗ್ಲಾಮರಸ್ ಚಾನೆಲ್‌ಗಳು ನಮ್ಮ ಯುವಕರ ಎದುರು ಬಿಚ್ಚಿಕೊಳ್ಳುತ್ತವೆ. ಸರಿ-ತಪ್ಪುಗಳ ಎಗ್ಗಿಲ್ಲದೇ ಇಷ್ಟವಾಗುವ ಕಾರ್ಯಕ್ರಮಗಳನ್ನು ನಿರಂತರವಾಗಿ ವೀಕ್ಷಿಸುವ ಮೂಲಕ ಟಿ.ವಿ. ಮತ್ತು ಅಲ್ಲಿಯ ಜಾಹೀರಾತುಗಳು ಸೃಷ್ಟಿಸಲು ಬಯಸಿರುವ ವೀಕ್ಷಕರಾಗಿ ಮಾರ್ಪಾಡು ಹೊಂದುತ್ತಾರೆ. ಬಡ ಮತ್ತು ಮಧ್ಯಮ ವರ್ಗದ ಯುವಕರಂತೂ ಈ ಗ್ಲಾಮರ್ ಲೋಕದ ಪರಿಧಿಗೆ ಬಂದ ಮಿಂಚುಹುಳದಂತಾಗುತ್ತಾರೆ. ಇತ್ತೀಚಿಗೆ ಒಂದು ರಿಯಾಲಿಟಿ ಶೋದಲ್ಲಿ ಭಾಗವಹಿಸಿ ಆಮೇಲೆ ವಿಕ್ಷಿಪ್ತನಾಗಿ ಆಸ್ಪತ್ರೆ ಸೇರಿರುವ ಬಳ್ಳಿಹಾಡಿಯ ಹುಡುಗ ರಾಜೇಶನೂ ಒಂದು ಉದಾಹರಣೆ.

ಯುರೋಪದಂತಹ ರಾಷ್ಟ್ರಗಳಲ್ಲಿ ಈಗೀಗ ಜನತೆ ದೂರದರ್ಶನದ ಮುಂದೆ ಹೆಚ್ಚು ಹೊತ್ತು ಕುಳಿತುಕೊಳ್ಳುವದನ್ನು ಒಂದು ಬಗೆಯ ಮಾರಲ್ ಗಿಲ್ಟ್ ಅಂದುಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಆ ಬಗೆಯ ಮನಃಸ್ಥಿತಿ ಇನ್ನೂ ಒಡಮೂಡಿಲ್ಲ. ಹಾಗಾಗಿಯೇ ವೀಕ್ಷಕನ ಆಯುಷ್ಯದಷ್ಟೇ ದೀರ್ಘವಾದ ಧಾರವಾಹಿಗಳು ನಮ್ಮಲ್ಲಿ ತಯಾರಾಗುತ್ತವೆ. ನಮ್ಮಲ್ಲಿಯ ಟಿ.ವಿ. ವೀಕ್ಷಕರಿಗೆ ಇಂದಿಗೂ ಯಾವ ಕಾರ್ಯಕ್ರಮವನ್ನು ಆಯ್ಕೆ ಮಾಡಿಕೊಂಡು ನೋಡಬೇಕು ಎನ್ನುವ ಬಗ್ಗೆ ಸ್ಪಷ್ಟವಾದ ಸೂತ್ರಗಳಿಲ್ಲ. ದಿನದ 24 ಗಂಟೆಯೂ ಮನೆಯಲ್ಲಿ ವಕ್ಕರಿಸಿರುವ ಟಿ.ವಿ. ತರ್ಕಸಮ್ಮತವಾತ ಕಾರ್ಯಕ್ರಮಗಳ

(10ನೇ ಪುಟಕ್ಕೆ)

ಲೇಖಕರಿಗೆ ಸೂಚನೆ

ಲೇಖಕರು ತಮ್ಮ ಲೇಖನದ ಮೂಲ ಪ್ರತಿಯನ್ನು ಮಾತ್ರ ಕಳುಹಿಸಬೇಕು. ಈ ಹಿಂದೆಯೇ ತಿಳಿಸಿದ್ದರೂ ಕೆಲ ಲೇಖಕರು ಝೆರಾಕ್ಸ್ ಪ್ರತಿಗಳನ್ನು ಈಗಲೂ ಕಳುಹಿಸುತ್ತಿದ್ದಾರೆ. ಅವುಗಳನ್ನು ಪರಿಗಣಿಸುವುದಿಲ್ಲ. ಬೇರೆ ಪತ್ರಿಕೆಗಳಿಗೆ ಕಳುಹಿಸಿದ ಲೇಖನವನ್ನು 'ಸಂವಾದ'ಕ್ಕೂ ಕಳುಹಿಸಿದ್ದಲ್ಲಿ ಆ ಬಗ್ಗೆ ತಿಳಿಸಬೇಕು. 'ಸಂಪಾದಕರೊಂದಿಗೆ ಸಂವಾದ'ಕ್ಕೆ ಬರೆಯುವ ಬರಹಗಳು ಕನಿಷ್ಠ ಒಂದು ಸಾವಿರ ಪದಗಳ ಮಿತಿಯಲ್ಲಿರಬೇಕು. ಉಳಿದ ಲೇಖನಗಳು ಎರಡು ಸಾವಿರ ಪದಗಳ ಆಸುಪಾಸಿನಲ್ಲಿರಬೇಕು. ದೀರ್ಘವಾದ ಲೇಖನಗಳನ್ನು ಯಾವ ಕಾರಣಕ್ಕೂ ಪ್ರಕಟಿಸುವುದಿಲ್ಲ. ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File** ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.-ಸಂ.

ಸಂಪಾದಕರೊಡನೆ ಸಂವಾದ

ಮಾಧ್ಯಮ ಮತ್ತು ಶಂಕಿತ ಉಗ್ರರು

ಸನತ್‌ಕುಮಾರ ಬೆಳಗಲಿ

ಪ್ರಿಯ ಸಂಪಾದಕರೇ,

ಕರ್ನಾಟಕದ ಮಾಧ್ಯಮರಂಗದ ಮೂವರನ್ನು ಕೊಲ್ಲಲು ಶಂಕಿತ ಭಯೋತ್ಪಾದಕರು ನಡೆಸಿದ ಸಂಚು ಬಯಲಾದಾಗ ನಾನು ಮಹಾರಾಷ್ಟ್ರದ ಅಹಮದ್‌ನಗರದಲ್ಲಿ ಇದ್ದೆ. ಅಲ್ಲಿ ಯಾವ ಕನ್ನಡ ಪತ್ರಿಕೆಗಳೂ ಸಿಗುವುದಿಲ್ಲ. ನಾನು ಇಳಿದುಕೊಂಡ ಕಡೆ ಟಿವಿಯೂ ಇರಲಿಲ್ಲ. ಆದರೆ ವಿವಿಧ ಕನ್ನಡ ಚಾನೆಲ್‌ಗಳು ಈ ಬಗ್ಗೆ ರೋಚಕ ವರದಿಗಳನ್ನು ಬಿತ್ತರಿಸುತ್ತಿವೆ ಎಂದು ಕೆಲ ಗೆಳೆಯರು ಫೋನ್ ಮಾಡಿ ಹೇಳಿದರು. ಶಂಕಿತ ಉಗ್ರರ ಹಿಟ್‌ಲಿಸ್ಟ್‌ನಲ್ಲಿ ಇರುವ ಹೆಸರುಗಳನ್ನು ಕೇಳಿ ನನಗೂ ದಿಗಿಲಾಯಿತು.

ಫೋನ್ ಮಾಡಿದ ಗೆಳೆಯರು ಈ ಬಗ್ಗೆ ನಿಮಗೇನು ಅನ್ನಿಸುತ್ತದೆ ಎಂದು ಕೇಳಿದರು. ಆಗ ನನ್ನ ಬಾಯಿಯಿಂದ ಬಂದ ಸಹಜ ಮಾತು, 'ಇದೆಲ್ಲ ಬಿಜೆಪಿ ಸರ್ಕಾರದ ಕುತಂತ್ರ. ನಾನಾ ಹಗರಣಗಳಲ್ಲಿ ಸಿಲುಕಿ ಆಂತರಿಕ ಕಚ್ಚಾಟದಲ್ಲಿ ವಿಲಿ ವಿಲಿ ಒದ್ದಾಡುತ್ತಿರುವ ಭ್ರಷ್ಟ ಕೋಮುವಾದಿ ಪಕ್ಷವೊಂದಕ್ಕೆ ಜನರ ಬಳಿ ಹೋಗಲು ಮುಖವಿಲ್ಲ. ಅದಕ್ಕಾಗಿ ಮತ್ತೆ ಹಿಂದೂ ವೋಟ್‌ಬ್ಯಾಂಕ್ ನಿರ್ಮಿಸಲು, ಜನರ ಗಮನ ಬೇರೆಡೆ ಸೆಳೆಯಲು ಸಂಘ ಪರಿವಾರ ಈ ಪ್ರಕರಣವನ್ನು ಬಳಸಿಕೊಳ್ಳುತ್ತಿದೆ' ಎಂದೆ. ನನ್ನ ಸ್ನೇಹಿತರಿಗೂ ಈ ಮಾತು ಸರಿ ಅನ್ನಿಸಿತು. ನಂತರದ ಘಟನೆಗಳು ಅದನ್ನೇ ದೃಢಪಡಿಸತೊಡಗಿದವು.

ಕರ್ನಾಟಕದ ಪೊಲೀಸರ ಈ ಸಾಹಸಗಾಥೆ ಬಗ್ಗೆ ಕೇಳಿದಾಗ ಹಾಗೂ ಮಾಧ್ಯಮಗಳು ಈ ಪ್ರಕರಣವನ್ನು ವರದಿ ಮಾಡಿದ ಶೈಲಿಯನ್ನು ಗಮನಿಸಿದಾಗ ಪತ್ರಿಕಾ ಮಂಡಳಿ ಅಧ್ಯಕ್ಷ ನ್ಯಾಯಮೂರ್ತಿ ಮಾರ್ಕಂಡೇಯ ಖಟ್ಜು ಅವರು ಹೇಳಿದ ಮಾತೊಂದು ಮಾತು ನೆನಪಿಗೆ ಬಂತು. 2011ರ ಅಕ್ಟೋಬರ್ 10ರಂದು ದಿಲ್ಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ದಿಲ್ಲಿ, ಮುಂಬೈ, ಬೆಂಗಳೂರು ಅಲ್ಲದೇ ದೇಶದ ಯಾವುದೇ ಮೂಲೆಯಲ್ಲಿ ಬಾಂಬ್ ಸ್ಫೋಟವಾಗಲಿ ಮುಂದೆ ಒಂದೇ ತಾಸಿನಲ್ಲಿ ದೇಶದ ಟಿವಿ ಚಾನೆಲ್‌ಗಳಲ್ಲಿ ಬಾಂಬ್ ಸ್ಫೋಟವಾಗುತ್ತದೆ. ಕಿರುತೆರೆಯ ಪರದೆ ಮೇಲೆ 'ಇಂಡಿಯನ್ ಮುಜಾಹಿದ್ದೀನ್', 'ಲಷ್ಕರ್-ಇ-ತೊಯ್ಬಾ', 'ಜೈಷ್-ಇ-ಮಹಮ್ಮದ್' ಈ ಸಂಘಟನೆಗಳ ಹೆಸರುಗಳು ಮೂಡುತ್ತವೆ. ಸ್ಫೋಟದ ಹೊಣೆಯನ್ನು ಹೊತ್ತು ಈ ಸಂಘಟನೆಗಳ ಹೆಸರಿನಲ್ಲಿ ಯಾರೇ ಇ-ಮೇಲ್ ಕಳುಹಿಸಿದರೂ ಟಿವಿ ಚಾನೆಲ್‌ಗಳು ಹಿಂದೆ-ಮುಂದೆ ನೋಡದೇ ಪ್ರಸಾರ ಮಾಡುತ್ತವೆ. ಸಾಮಾನ್ಯವಾಗಿ ಇವೆಲ್ಲ ಮುಸ್ಲಿಂ ಹೆಸರುಗಳನ್ನು ಹೊಂದಿರುತ್ತವೆ. ಈ ಸಂದೇಶವನ್ನು ಯಾವನೋ ಕಿಡಿಗೇಡಿ ಕಳುಹಿಸಿದರೂ ಸಾಕು ಅದರ ಮೂಲವನ್ನು ಪತ್ತೆ ಹಚ್ಚದೇ ಪ್ರಸಾರ ಮಾಡುವುದು ಟಿವಿಗಳ ಚಾಳಿಯಾಗಿದೆ' ಎಂದು ಅವರು ಹೇಳಿದ್ದರು.

ಬೆಂಗಳೂರಿಗೆ ವಾಪಸಾಗಿ ನಾಲ್ಕು ದಿನಗಳ ಪತ್ರಿಕೆಗಳನ್ನೆಲ್ಲ ತಿರುವಿ ಹಾಕಿದಾಗ, ನ್ಯಾಯಮೂರ್ತಿ ಖಟ್ಜು ಅವರ ಮಾತು ನೆನಪಿಗೆ ಬಂತು. ಉಗ್ರರ ಹಿಟ್‌ಲಿಸ್ಟ್‌ನಲ್ಲಿದ್ದವರು ನರೇಂದ್ರಮೋದಿ ಜೊತೆಗೆ ಫೋಟೋ ತೆಗೆಸಿಕೊಂಡಿದ್ದಕ್ಕಾಗಿ, ರಾಷ್ಟ್ರವಾದಿ ವಿಚಾರಗಳನ್ನು ಹೊಂದಿದ್ದಕ್ಕಾಗಿ ತಮಗೆ ಬೆದರಿಕೆ ಬಂದಿದೆ ಎಂದು ಹೇಳಿಕೊಂಡಿದ್ದರು. ಈ ಮೂವರನ್ನು ಮಾತ್ರವಲ್ಲ ಕೈಗಾ ಅಣುಸ್ಥಾವರವನ್ನು, ಮೆಟ್ರೊ ರೈಲು ನಿಲ್ದಾಣವನ್ನು, ಶೃಂಗೇರಿ ದೇವಾಲಯವನ್ನು ನಾಶ ಮಾಡಲು ಮುಸ್ಲಿಂ ಸಂಘಟನೆಗಳು ಸಂಚು ರೂಪಿಸಿವೆ ಎಂದು ಕೆಲ ಪತ್ರಿಕೆಗಳು ವರದಿ ಮಾಡಿದ್ದವು. ಈ ವರದಿಯ ಮೂಲ ಯಾವುದು ಎಂಬುದನ್ನು ಹೇಳಿರಲಿಲ್ಲ. ಪೊಲೀಸರು ಹೇಳಿದ್ದರೆ, ಅವರ ಹೆಸರು ಇರುತ್ತದೆ. ಆದರೆ ಖಚಿತ ಮೂಲಗಳು ಎಂಬ ಹೆಸರಿನಲ್ಲಿ ಇಂಥ ಕುಚೇಷ್ಟೆಯ ಸುದ್ದಿಗಳನ್ನು ಪ್ರಕಟಿಸುವುದು ರೋಗಗ್ರಸ್ಥ ಮನಸ್ಸುಗಳಿಂದ ಮಾತ್ರ ಸಾಧ್ಯ.

ಈ ರೀತಿ ಸುದ್ದಿಗಳು ಪ್ರಕಟವಾಗುವುದನ್ನು ಕಂಡು ರೋಸಿ ಹೋದ ಬೆಂಗಳೂರು ಪೊಲೀಸ್ ಆಯುಕ್ತ ಜ್ಯೋತಿಪ್ರಕಾಶ್ ಮಿರ್ಜಿ ಅವರು ಪತ್ರಿಕೆಗಳ ಹಾಗೂ ಟಿವಿ ಚಾನೆಲ್ ಸಂಪಾದಕರ ಸಭೆ ಕರೆದರು. ಶೃಂಗೇರಿ ದೇವಾಲಯ, ಕೈಗಾ ಅಣುಸ್ಥಾವರ ಸ್ಫೋಟಗೊಳಿಸುತ್ತಾರೆ ಎಂಬುದು ಸುಳ್ಳು. ಈ ರೀತಿ ನಮ್ಮನ್ನು ಸಂಪರ್ಕಿಸದೇ ನಿರಾಧಾರ ವರದಿಗಳನ್ನು ಪ್ರಕಟಿಸಬೇಡಿ ಎಂದು ಮನವಿ ಮಾಡಬೇಕಾಗಿ ಬಂತು. ಆದರೆ ಗೃಹಸಚಿವ ಅಶೋಕ್ ಅವರು ಮಾತ್ರ ಭಯೋತ್ಪಾದಕರ ಬಗ್ಗೆ ವಿವರ ತಿಳಿಸಲು ಅತ್ಯುತ್ಸಾಹದಲ್ಲೇ ಇದ್ದರು. ವೆಬ್‌ಸೈಟ್ ಆರಂಭಿಸುವುದಾಗಿ ಹೇಳಿದರು. ಕೊನೆಗೆ ಕೇಂದ್ರ ಗೃಹ ಸಚಿವ ಖಾತೆ ಮಧ್ಯಪ್ರವೇಶಿಸಿ ಕರ್ನಾಟಕ ಸರ್ಕಾರದ ಕಿವಿ ಹಿಂಡಿ, 'ಈ ರೀತಿ ಶಂಕಿತ ಉಗ್ರರ ಬಗ್ಗೆ ಸುದ್ದಿ ಸೋರಿಕೆಯಾಗಲು ಅವಕಾಶ ಕೊಡಬೇಡಿ' ಎಂದು ಎಚ್ಚರಿಕೆ ನೀಡಿತು.

ಮಾಧ್ಯಮಗಳು ಜನರಿಗೆ ಸುದ್ದಿ ನೀಡಲು ಯಾರ ಆಕ್ಷೇಪವೂ ಇಲ್ಲ. ಆದರೆ ಯಾವುದೇ ಸುದ್ದಿ ಸಾಮಾಜಿಕ ಅಶಾಂತಿಗೆ ಕಾರಣವಾಗಬಾರದು. ಸುದ್ದಿಯಲ್ಲಿ ಜಾತಿ-ಕೋಮಿನ ದುರ್ವಾಸನೆ ಇರಬಾರದು. ಎಂದೂ ಭಯೋತ್ಪಾದಕ ಸಂಘಟನೆಗಳ ಚಟುವಟಿಕೆಗಳ ಬಗ್ಗೆ ಮೃದು ಧೋರಣೆ ತಾಳುವುದು, ಅಲ್ಪಸಂಖ್ಯಾತ ಯುವಕರನ್ನು ರಾಷ್ಟ್ರದ್ರೋಹಿ ಎಂದು ಬಿಂಬಿಸುವುದು ಪತ್ರಿಕಾಧರ್ಮವಲ್ಲ. ಸಂಘಪರಿವಾರಕ್ಕೆ ತನ್ನ ಅಜೆಂಡಾ ಜಾರಿಗೆ ತರಲು ಇಂಥ ಕಥೆ ಕಟ್ಟುವುದು ಅನಿವಾರ್ಯ ಆಗಿರಬಹುದು. ಆದರೆ ಮಾಧ್ಯಮದಲ್ಲಿ ಇರುವವರು ಬಿಜೆಪಿ ಏಜೆಂಟರಂತೆ ಕೆಲಸ ಮಾಡಬಾರದು. ಚುನಾವಣೆ ಸಮೀಪಿಸಿದಾಗ ಇಂಥ ಪ್ರಚೋದನಕಾರಿ ಚಟುವಟಿಕೆಗಳು, ವದಂತಿಗಳು ರೆಕ್ಕೆಪುಕ್ಕ ಪಡೆದುಕೊಳ್ಳುತ್ತವೆ ಎಂಬ ಎಚ್ಚರ ಇರಬೇಕು.

ಕಳೆದ ವಿಧಾನಸಭಾ ಚುನಾವಣೆಗೆ ಮುಂಚೆ ಅಂದರೆ 2008ರ ಮೇ 10ರಂದು ಹುಬ್ಬಳ್ಳಿಯ ಸಿವಿಲ್ ಕೋರ್ಟ್‌ನಲ್ಲಿ ಬಾಂಬ್ ಸ್ಫೋಟವಾಯಿತು. ಈ ಬಾಂಬ್ ಸ್ಫೋಟಕ್ಕೆ ಮುಸ್ಲಿಂ ಉಗ್ರರು ಕಾರಣವೆಂದು ಈಗಿನ ಮುಖ್ಯಮಂತ್ರಿ ಜಗದೀಶ ಶೆಟ್ಟರ ಅವರಿಂದ ಹಿಡಿದು ಪ್ರಹ್ಲಾದ ಜೋಷಿ, ಪ್ರಮೋದ ಮುತಾಲಿಕ್‌ವರೆಗೆ ಎಲ್ಲರೂ ಹಿಂದೂ ಭಾವನೆ ಕೆರಳಿಸಲು ಯತ್ನಿಸಿದರು. ಮಾಧ್ಯಮಗಳು ಕೂಡ ತಮ್ಮ ಪಾಲಿನ ಸೇವೆಯನ್ನು ಸಲ್ಲಿಸಿದವು. ಅಮಾಯಕ ಮುಸ್ಲಿಂ ಯುವಕರನ್ನು ಬಂಧಿಸಲಾಯಿತು. ಅವರ ಪರವಾಗಿ ವಕಾಲತ್ತು ಹಾಕಲು ಬಂದ ವಕೀಲರನ್ನು ತಡೆಯಲಾಯಿತು. ಆದರೆ ಪೊಲೀಸರು ವಿಚಾರಣೆ ಮುಂದುವರೆಸಿದಾಗ, ಈ ಬಾಂಬ್ ಸ್ಫೋಟಕ್ಕೆ ಪ್ರಮೋದ ಮುತಾಲೀಕರ ಶ್ರೀರಾಮ ಸೇನೆ ಕಾರ್ಯಕರ್ತರು ಕಾರಣ ಎಂಬ ಸಂಗತಿ ಬಯಲಿಗೆ ಬಂತು. ಅವರನ್ನು ಬಂಧಿಸಲಾಯಿತು. ಆದರೆ ಬಿಜೆಪಿ ಸರ್ಕಾರ ಪೊಲೀಸರ ಮೂಲಕ ದುರ್ಬಲ ಆರೋಪಪಟ್ಟಿ ಸಲ್ಲಿಸಿ, ಇವರು ಆರೋಪಮುಕ್ತಗೊಳಿಸಲು ಕಾರಣವಾಯಿತು. ಮುಸ್ಲಿಂ ಯುವಕರನ್ನು ಬಂಧಿಸಿದಾಗ, ಮುಖಪುಟದಲ್ಲಿ ವರ್ಣರಂಜಿತ ಸುದ್ದಿಗಳನ್ನು ಪ್ರಕಟಿಸಿದ ಮಾಧ್ಯಮಗಳು, ಟಿವಿ ಚಾನೆಲ್‌ಗಳು ಹಿಂದೂ ಕೋಮುವಾದಿ ಕಾರ್ಯಕರ್ತರು ಸಿಕ್ಕಿಬಿದ್ದಾಗ ಯಾವುದೋ ಪುಟದ ಯಾವುದೋ ಮೂಲೆಯಲ್ಲಿ ಕಂಡು ಕಾಣದಂತೆ ಪ್ರಕಟಿಸಿದವು.

2006-2008ರ ಕಾಲಾವಧಿಯಲ್ಲಿ ದೇಶದಲ್ಲಿ ಚುನಾವಣಾ ಜ್ವರ ಏರಿತ್ತು. ಮತ್ತೆ ಕೇಂದ್ರದ ಅಧಿಕಾರ ಸೂತ್ರ ಹಿಡಿಯಲು ಬಿಜೆಪಿ ತುದಿಗಾಲಲ್ಲಿ ನಿಂತಿತ್ತು. ಆಗ ಮಹಾರಾಷ್ಟ್ರದ ಮಾಲೇಗಾಂವ್, ನಾಂದೇಡ, ಹೈದರಾಬಾದ್, ಶಿವಕಾಶಿ, ನಾಸಿಕ್,

(14ನೇ ಪುಟಕ್ಕೆ)



ಸಂಪಾದಕರೊಡನೆ ಸಂವಾದ

ರೈತನ ಮನೆ ಬಾಗಿಲಲ್ಲಿ ಕ್ಯೂ ನಿಲ್ಲುವ ಕಾಲ ದೂರವಿಲ್ಲ!

ಡಾ॥ ರಾಜೇಗೌಡ ಹೊಸಹಳ್ಳಿ

ಪ್ರಿಯ ಸಂಪಾದಕರೇ,

ನಮ್ಮ ಮಹಾಕವಿ ಪಂಪ ಹೇಳಿಲ್ಲವೆ ಹಾಗೆ; ನಾನು ಆಗಾಗ್ಗೆ, ಹುಟ್ಟಿದೂರಿಗೆ ಹೋಗಿ ಬರುವುದು ರೂಢಿ. ಐವತ್ತು ವರ್ಷಗಳ ಹಿಂದಿನ ಮಾತು. ಆಗ ಬೇಸಾಯ ಬಿಟ್ಟರೆ ನನ್ನೂರಿನವರಿಗೆ ಬೇರೆ ಗೊತ್ತಿರಲಿಲ್ಲ. ನನ್ನಜ್ಜನಂತೆ ಎಲ್ಲಾ ಮನೆಯಲ್ಲಿ ಗದ್ದೆ ಹೊಲದ ಕಡೆ ನಿಗಾಯಿಟ್ಟಿದ್ದರು. ನನ್ನಜ್ಜಿಯಂತೆ ಎಲ್ಲರೂ ಹಿತ್ತಲು ಮುಸುರೆಯಲ್ಲಿ ಚಪ್ಪರದವರೆ, ತೊಂಡೆಬೀಳು, ಬಾಯಿಬಸಳೆ ಹಾಕೊಂಡಿದ್ದರು. ಅಡ್ಡಾಡಿಕೊಂಡು ಹೋಗಿ ನನ್ನವ್ವನಂತೋರು ಸೊಪ್ಪುಸೆದೆ ಕಿತ್ತು ತರುತ್ತಿದ್ದರು. ಹಾಸನಕ್ಕೆ ಹೋಗೋದಿರಲಿ, ಆಲೂರಿನ ಬುಧುವಾರ ಸಂತೆಲಿ ತರೋದೇನಿದ್ದರೂ ಎಲ್ಲೊ ಆತುರಕ್ಕೆ ಗೀರುವ ಬೆಂಕಿಕಡ್ಡಿ, ಉಪ್ಪು, ಉಳ್ಳಿ, ಬೆಳ್ಳುಳ್ಳಿ, ಹೊಗೆಕಡ್ಡಿ, ಗೋಟಡಕೆ, ಮಕ್ಕಳಿಗೆ ಬಾಯಾಡಲು ಪುರಿಕಡ್ಲೆ ಮುಂತಾದವು. ಸ್ವಾತಂತ್ರ ಬಂದ ಹೊಸದಲ್ಲವೆ! ದೇಶದ ತುಂಬಾ ಬದಲಾವಣೆಯ ಗಾಳಿ. ನನ್ನಪ್ಪ ಮಕ್ಕಳೋದಿಸೋ ಭರಾಟೆಯಲ್ಲಿ ದನಕರು ಹಿಡಿದಿರುವ ಹುಡುಗರನ್ನು ಹೊಲೆಗೇರಿ ಗಂಡಿಲಿ ಓಡಿ ಹೋಗುವ, ಗೊಣ್ಣೆ ಸುರಿಸುವ ಮಕ್ಕಳನ್ನು ಹೊಸ ಇಸ್ಕೂಲಿಗೆ ಸೇರಿಸಿ ಕೂರಿಸಿಬಿಡುತ್ತಿದ್ದರು. ಆಗಿನ ಕಾಲದಲ್ಲಿ ಮೇಸ್ಟರುಗಳು ನಿಯತ್ತಾಗಿ ಹೊಡೆದು ಬಡಿದು ಕಲಿಸುತ್ತಿದ್ದರೆನ್ನಿ.

ಈಗ ಮೊನ್ನೆ ನಾನು ಓದಿದ ಸ್ಕೂಲು ಹೇಗಿದ್ದೀತೆಂದು ಶಾಲೆಯ ಬೇಲಿ ಹತ್ತಿರ ಇಣುಕಿದೆ. ಮೇಡಮ್ಮು ಓಡೋಡಿ ಬಂತು. ಕರೆದು ಎದುರು ಕುರ್ಚಿ ಮೇಲೆ ಕೂರಿಸಿ ಹೇಳಿತು. ಕತ್ತೆತ್ತಿ ನೋಡಿದೆ, ಮದುವೆ ಚಪ್ಪರಕ್ಕೆ ಬ್ಯಾಗಡೆ ಕಟ್ಟೋ ರೀತಿ ಅತ್ತ ಇತ್ತ ಗ–ಮ–ಪ, ಅ–ಇ ಎಲ್ಲವನ್ನೂ ಮಿಶ್ರಮಾಡಿ ಕಟ್ಟಲಾಗಿತ್ತು. 'ನಲಿ ಕಲಿ' ರೀತಿಯಂತೆ. ಗರ ಗರಗರ ಹೀಗೆಲ್ಲಾ ಪಾಠ ಮಾಡುವ ರೀತಿ ಹೇಳುತ್ತಾ ಹೋಯಿತು. ಅಆ – ಕ ಕಾ ಕಿ ಕೀ, 1 ರಿಂದ 100, 2–4–6 ಹೀಗೆ ನಾವು ಕಲಿತಿದ್ದ ಪಾಠಗಳು ಈಗಿಲ್ಲವಂತೆ, ನಾಗರಹಾವೇ ಹಾವೊಳು ಹೂವೆ, ಇದೆಲ್ಲಾ ಮಕ್ಕಳಿಗೆ ಕಷ್ಟವೆಂದೂ ಅದಕ್ಕಾಗಿ ನಲಿ ಕಲಿ ರೀತಿ ಪಾಠ ಹೇಳಲು ನಮಗೆಲ್ಲಾ ಟ್ರೈನಿಂಗ್ ಆಗುತ್ತದೆಂದು ಮೇಡಮ್ಮನೇನೋ ಸಡಗರದಿಂದ ಹೇಳಿತು. ನನಗೇನೂ ಅರ್ಥವಾಗಲಿಲ್ಲ ಅನ್ನಿ, ಇರಲಿ ಎಷ್ಟು ಮಕ್ಕಳಿವೆ ಎಂದೆ! ಹೊರಾಂಡದಲ್ಲಿ ಆಗಲೇ ಅಡುಗೆ ಮಾಡುತ್ತಿದ್ದ ನಮ್ಮೂರ ಗರತಿ ಊರ ಮನುಷ್ಯನಲ್ಲವೆ ನಾನು ಎಂದು ಬಂದು ನಿಂತಳು. 'ನಡಿರಿ ಮಕ್ಕಳೇ' ಊಟ ಮಾಡೋಣ; ಬನ್ನಿ ಸಾರ್ ಊಟಕ್ಕೆ ಎಂದು ಮೇಡಮ್ಮನೇನೋ ಬಾಯ್ತುಂಬ ನೆಂಟರು ಕರೆದಂತೇನೋ ಕರೆಯಿತು. ಹುಡುಗರು ಎಲ್ಲಿ ಇಷ್ಟೇನಾ! ಅಂದೆ. ಹೌದು. ಈಗ ಊರಲ್ಲಿ ಮಕ್ಕಳೇ ಇಲ್ಲ. ಎಲ್ಲರಿಗೂ ಒಂದೊಂದೇ ಅಲ್ಲವಾ; ಒಂದೆರಡು ಪ್ಯಾಟೆ ಕಾನ್ವೆಂಟಿಗೆ ಹೋಗುತ್ತವೆ. ಆದರೂ ಊರಲ್ಲಿ ಮಕ್ಕಳೇ ಇಲ್ಲ ಬಿಡಿ ಅಂದಿತು ಮೇಡಮ್ಮ.

ಭಲೇ ಕುಟುಂಬ ಯೋಜನೆ! ಎಂದುಕೊಂಡೆ. ಕಷ್ಟ ಸಾರ್ ಶಾಲೆ ನಡೆಸೋದು, ನೋಡಿ ಈ ಗೋಡೆ–ಮಾಡು; ರಿಪೇರಿಯಾಗಿ ವರ್ಷವಾಗಿಲ್ಲ. ಆಗಲೇ ಮತ್ತೆ ರಿಪೇರಿ. ಖರ್ಚಿಗಂತ ಸರ್ಕಾರ ಇಟ್ಟಿರೋ ನಮ್ಮ ಆಪತ್ ದುಡ್ಡಲ್ಲೂ... ಅರ್ಧಕ್ಕೆ ಬಾಯ್ಮುಚ್ಚಿ ಮೇಡಮ್ಮ ಹೇಳಿತು. ಏನು ಹೇಳಿ ಅಂದೆ. ಎಲ್ಲರೂ ಹಂಗಿಲ್ಲ ದುಡ್ಡ ಕೊಡದೇ ಹೋದರೆ ಬಿಟ್ಟಾರೆ! ಅಂದಿತು ಮೇಡಮ್ಮ. ಇರೋ ಹದಿನೈದು ಹುಡುಗರ ಅಪ್ಪಂದಿರಲ್ಲೆ ಕಮಿಟಿ ಮೆಂಬರುಗಳಂತೆ. ಅವರು ಹೇಳಿದಂತೆ ಶಾಲಾ ಮೇಸ್ಟರು ಕೇಳಬೇಕೆಂಬುದು ರೂಲಂತೆ. ಸರಿ. ಹೇಗಿದೆ ವಿದ್ಯಾಭ್ಯಾಸ ಎಂದೆ. ಎಲ್ಲಾ ರೀತಿ ನೀತಿ ಒಳ್ಳೆಯದೆ, ಅದನ್ನು ಉಪಯೋಗಿಸೋದಕ್ಕೆ ಗ್ರಾಮ ಮತ್ತು ಉಪಾಧ್ಯಾಯರು ಸೇರಿ ಚಿಂತಿಸಬೇಕೆಂದಿತು ಮೇಡಮ್ಮ. ಈ ಮೇಡಮ್ಮನಿಗಿರುವ ಆಸಕ್ತಿ ಅಲ್ಲೆ ಇದ್ದ ಮೇಡಪ್ಪನಿಗಿದ್ದಂತೆ ಕಾಣಲಿಲ್ಲ ಅನ್ನಿ.

ಹೌದು, ಅಂದು ನನ್ನಪ್ಪ ಊರಿಗೆ ಶಾಲೆ ತಂದಾಗ ಊರು ಹೊಲೆಗೇರಿಯೆಲ್ಲ ಸಡಗರದಲ್ಲಿತ್ತು. ಕನ್ನಡಮ್ಮನೇ ಎಲ್ಲರ ಮನೆಯಲ್ಲೂ ಸರ್ವಾಧಿಕಾರದಲ್ಲಿದ್ದಳು. ಆಗ ಬ್ರಿಟಿಷರು ಕನ್ನಡಮ್ಮನಿಗೆ ಸ್ವಾತಂತ್ರ ನೀಡಿ ಲಂಡನ್ನಿಗೆ ಅವರ ಇಂಗ್ಲಿಷಮ್ಮನ ಕರೆದುಕೊಂಡು ಹೋಗಿದ್ದಾರೆಂದುಕೊಂಡಿದ್ದೆವು. ಆ ಇಂಗ್ಲಿಷಮ್ಮ ತನ್ನ ಪ್ರಭಾವವನ್ನು ಇಷ್ಟರಮಟ್ಟಿಗೆ ಬೀರಿ ಹೋಗುತ್ತಾಳೆಂಬ ಕಲ್ಪನೆ ಗಾಂಧಿ ಬಿಟ್ಟು ಇನ್ನಾರಿಗೂ ಇರಲಿಲ್ಲವೆನ್ನಿ. ಪೇಟೆ ಕ್ವಾಟೆಗಳೆಲ್ಲಾ ಬೆಳೆಯುತ್ತಾ ಹೋದವು. ಕೆರೆಕಟ್ಟೆಗಳೆಲ್ಲಾ ಸೈಟುಗಳಾಗುತ್ತಾ ಹೋದವು. ಹಳ್ಳಿಗಳಲ್ಲಿ ಹೊಲಗದ್ದೆಗಳೆಲ್ಲಾ ಹಾಳು ಬೀಳುತ್ತಾ ಹೋದವು. ತಿನ್ನುವ ತರಕಾರಿ, ಹಣ್ಣು ಹಂಪಲುಗಳಿಗೆಲ್ಲಾ ಹುಳ–ಹುಪ್ಪಳೆ ಬಿದ್ದು ಎಂಜಲಾಗುತ್ತದೆ ಎಂದು; ಬಂತೋ ಬಂತು! ತುಂಬಿದ ಹಡಗಲಿ ಹುಳ ಸಾಯುವ ವಿಷ ಬಂತು. ದೇಶ ವಿದೇಶಗಳಿಂದ ಸೀಮೆಗೊಬ್ಬರ ಬಂತು. ಬಂತು ಜಪಾನ್ ನಾಟಿ ಬಂತು. ಮಕ್ಕಳು ಕುಡಿಯೋ ಹಾಲಿಗೂ, ತಿನ್ನೋ ಅನ್ನಕ್ಕೂ ಯೂರಿಯಾ, ಪೊಟ್ಯಾಸ್. ತರಕಾರಿ ಬೆಳೆಗಿಂತ ವೇಗದಲ್ಲಿ ಬೆಳೆಯೋ ಬಾಯ್ಲರ್ ಕೋಳಿ ಕೊಳ್ಳಬಹುದು. ಹಸಿರು ತರಕಾರಿ ಆಗೋಲ್ಲವೆ! ಇದೇನಪ್ಪಾ ಚೋಜಿಗ! ಬಿಸಿಲಿಗೆ ಹೋದರೆ ಜಿನುಗಿ ಹೋಗಬಹುದೆಂದು; ಚರ್ಮ ಕಪ್ಪಾಗಿ ಒಣಕಲಾಗಬಹುದೆಂದು; ಈಗ ನಮ್ಮ ಗ್ರಾಮೀಣ ಮಕ್ಕಳು ಓದು ಬಿಟ್ಟೋರು! ಇಂಗ್ಲಿಷ್ ಹತ್ತದೋರು! ಮಾಲುಗಳಲ್ಲಿ ಈಗ ಡ್ರೆಸ್ ಹಾಕಿ ನಿಂತು ಬಿಟ್ಟಿದ್ದಾರೆನ್ನಿ! ಗ್ರಾಮೀಣರೂ ನಗರದವರಂತೆ ಗಾಡಿ ನೂಕಿ ಗಾಲಿ ಮೇಲೆ ಸಾಮಾನು ಸರಂಜಾಮು ತುಂಬುತ್ತಾ ಬಿಲ್ಲು ಹಾಕಿಸಿದಾಗ ಹಳ್ಳಿಗಳಲ್ಲೂ ಕೊಳ್ಳೋಶಕ್ತಿ ಬಂದಿರಬೇಕಲ್ಲವೆ! ಖುಷಿಯಾಗಬೇಕೋ ನೋವಾಗಬೇಕೋ ಕಾಲ ನಮ್ಮನ್ನೇನು ಕೇಳೀತು! ಆದರೆ ಊರ ಸುತ್ತಲೂ ಉಳೋಕೆ ಜನರಿಲ್ಲ ಎಂಬ ಮಾತಂತೂ ಉಂಟು! ಜಾನವಾರೆಲ್ಲಾ ಮಂಗಳೂರುಗೆ ಜನರೆಲ್ಲಾ ಬೆಂಗಳೂರಿಗೆ ಎಂಬ ಮಾತುಂಟು!

ಹಳ್ಳಿ ಶಾಲೆಗಳಲ್ಲಿ ಕಲಿಯೋಕೆ ಗ್ರಾಮಗಳಲ್ಲಿ ಮಕ್ಕಳಿಲ್ಲ! ಸಡಗರದಲ್ಲಿ ಹಟ್ಟೀಲಿ ಮಾತನಾಡೋಕೆ ಓರಗೆಯವರಿಲ್ಲ, ನನ್ನೂರಿಗೆ ಒಂದು ರೀತಿ ಅನಾಥ ಪ್ರಜ್ಞೆ, ಹಾಗಾದರೆ ನನ್ನ ದೇಶಕ್ಕೆ? ಮುಂದೇನು ಹೇಳಲಿ. ಇದಿರಲಿ ಈ ದಿನ ನ್ಯೂಸ್ ಪೇಪರ್ ತುಂಬಾ GIS ಭರಾಟೆ! ಟಿವಿ ತುಂಬಾ ಮಠ ಮಾನ್ಯಗಳ 'ನಿತ್ಯಾ' ಗಲಾಟೆ. ನಮ್ಮನ್ನಾಳುವ ರಾಜಾಧಿರಾಜರುಗಳೆಲ್ಲಾ ಕೃಷ್ಣ ಜನ್ಮಸ್ಥಾನದಲ್ಲಿ ಕೂರೋ ಬೇಸರಕ್ಕೆ, ನ್ಯಾಯದೇವಿಯ ಅರ್ಚಕರನ್ನು ಜೊತೆಗೆ ಕರೆಯೋದೆ! ಏನಿದೆಲ್ಲಾ! ಗಾಂಧಿಮಾತ್ಮ ಹೇಳಿದ್ದೇನು! ನಾವು ಮಾಡುತ್ತಿರುವುದೇನು! ಯುವಶಕ್ತಿ ಏನು ಮಾಡುತ್ತಿದೆ? ಮಂಕು ಕವಿದಿದೆಯೆ? ಒಂದು ದಿನ ಒಂದು ಕೆ.ಜಿ. ಅಕ್ಕಿಗೆ ರೈತನ ಮನೆ ಬಾಗಿಲಿಗೆ ಹೋಗಿ ಕ್ಯೂ ನಿಲ್ಲುವ ಕಾಲ ನಮ್ಮ ಮುಂದೆಯೇ ಬರಬಹುದು ಅಲ್ಲವೆ! ಉರಿದ ಅಡವಿಯಲ್ಲೂ ಚಿಗುರು ಬರುವುದುಂಟು. ಮಳೆಬೆಳೆ ಹೋಗಿದ್ದರೇನು ಭೂಮಿ ತಾಯಿ ಬರಡೆ? ಎಂಬ ಆಶೆಯೇ ಬದುಕು. ■

ಪೇಟೆ ಕ್ವಾಟೆಗಳೆಲ್ಲಾ ಬೆಳೆಯುತ್ತಾ ಹೋದವು. ಕೆರೆಕಟ್ಟೆಗಳೆಲ್ಲಾ ಸೈಟುಗಳಾಗುತ್ತಾ ಹೋದವು. ಹಳ್ಳಿಗಳಲ್ಲಿ ಹೊಲಗದ್ದೆಗಳೆಲ್ಲಾ ಹಾಳು ಬೀಳುತ್ತಾ ಹೋದವು. ತಿನ್ನುವ ತರಕಾರಿ, ಹಣ್ಣು ಹಂಪಲುಗಳಿಗೆಲ್ಲಾ ಹುಳ–ಹುಪ್ಪಳೆ ಬಿದ್ದು ಎಂಜಲಾಗುತ್ತದೆ ಎಂದು; ಬಂತೋ ಬಂತು! ತುಂಬಿದ ಹಡಗಲಿ ಹುಳ ಸಾಯುವ ವಿಷ ಬಂತು. ಈಗ ನಮ್ಮ ಗ್ರಾಮೀಣ ಮಕ್ಕಳು ಓದು ಬಿಟ್ಟೋರು! ಇಂಗ್ಲೀಷ್ ಹತ್ತದೋರು! ಮಾಲುಗಳಲ್ಲಿ ಈಗ ಡ್ರೆಸ್ ಹಾಕಿ ನಿಂತು ಬಿಟ್ಟಿದ್ದಾರೆನ್ನಿ!

(6ನೇ ಪುಟದಿಂದ)

ರಣವೀರ ಸೇನೆ...

ಈ ಪಾಪಿಗಳು ಕೊಲ್ಲುತ್ತಿದ್ದದ್ದು ದಲಿತ ಮಕ್ಕಳನ್ನು ಮತ್ತು ಹೆಂಗಸರನ್ನು. ಏಕೆಂದರೆ ಇತ್ತೀಚೆಗೆ ಇವರು ಭೂಮಿ ಕೇಳಲು ಪ್ರಾರಂಭಿಸಿದ್ದಾರೆ. ರಣವೀರ ಸೇನೆಯವರ ಪ್ರಕಾರ ದಲಿತರು ಹಳೇ ಕಾಲದ ಕೆಲಸಗಳನ್ನೇ ಮುಂದುವರೆಸಬೇಕು. ಅಲ್ಪ ಸ್ವಲ್ಪ ಭೂಮಿ ಇದ್ದರೆ ಅದನ್ನು ತಮಗೆ ಮಾರಿ ಬಡವರಾಗಿಯೇ ಉಳಿಯಬೇಕೆಂಬುದು. ಇದನ್ನು ಧಿಕ್ಕರಿಸಿದವರು ಮುಂದೆ ಹೆಣಗಳಾಗುತ್ತಿದ್ದರು. ಇದಷ್ಟೆ ಅಲ್ಲದೆ ನಕ್ಸಲರ ರಕ್ತಸಿಕ್ತ ಚರಿತ್ರೆಯಿಂದಾಗಿ ದಲಿತ ಅಮಾಯಕರು ಬಲಿಯಾಗುತ್ತಿರುವುದು ನಿಜಕ್ಕೂ ಖಂಡನೀಯ. ಇಂತಹ ಪರಿಸ್ಥಿತಿಯಲ್ಲಿ ಮನುವಾದಿ ಸ್ವಾಮೀಜಿ ರವಿಶಂಕರ ಸರ್ಕಾರಿ ಶಾಲೆಯ ಮಕ್ಕಳು ನಕ್ಸಲಿಯರಾಗುತ್ತಾರೆ ಎಂದಿರುವುದು ಆಕ್ಷೇಪಾರ್ಹ. ಇಂತಹ ಹೇಳಿಕೆಗಳು ರಣವೀರ ಸೇನೆಯಂತಹವಕ್ಕೆ ಪುಷ್ಟಿ ನೀಡುವುದರಲ್ಲಿ ಸಂಶಯವಿಲ್ಲ. ಇಂತಹ ಸ್ವಾಮೀಜಿಯನ್ನು ಗಡಿಪಾರು

ರಣವೀರ ಸೇನೆ

ಮಾಡದಿರುವುದು ಸರ್ಕಾರದ ನಕಾರಾತ್ಮಕ ಧೋರಣೆಯನ್ನು ತಿಳಿಸುತ್ತದೆ. ಚಳವಳಿಗಳು ಸತ್ತಿರುವುದನ್ನು ಸೂಚಿಸುತ್ತದೆ.

5. 1 ಡಿಸೆಂಬರ್ 1997ರಂದು 8 ದಲಿತರನ್ನು ಕೊಂದು ನದಿಗೆ ಎಸೆಯುತ್ತಾರೆ.
6. 25 ಜನವರಿ 1999ರಂದು ಜಹಾನಾಬಾದ ಜಿಲ್ಲೆಯ ಶಂಕರಭಿಗದಲ್ಲಿ 22 ದಲಿತರನ್ನು ಹತ್ಯೆ ಮಾಡಿದ್ದಾರೆ. ಎರಡು ವಾರದ ನಂತರ ನಾರಾಯಣಪುರದಲ್ಲಿ 12 ಕೆಳವರ್ಗದವರನ್ನು ಕೊಲ್ಲುತ್ತಾರೆ.
7. ಏಪ್ರಿಲ್ 1997ರಂದು ದಲಿತರ ಮನೆಗೆ ನುಗ್ಗಿ ಅರಾದಲ್ಲಿ 8 ದಲಿತರ ಹತ್ಯೆ ಮಾಡುತ್ತಾರೆ. ಈ ಕೃತ್ಯಕ್ಕೆ ಒಬ್ಬ ಪೊಲೀಸ್ ಸಹಾಯ ಮಾಡುತ್ತಾನೆ.

ಹೀಗೆ ರಣವೀರ ಸೇನೆ ಬ್ರಹ್ಮೇಶ್ವರನ ನಾಯಕತ್ವದಲ್ಲಿ ಸುಮಾರು 227 ದಲಿತರನ್ನು ಬಲಿತೆಗೆದುಕೊಂಡಿದೆ. ಪ್ರಾರಂಭದಲ್ಲಿ ಭೋಜಪುರದಲ್ಲಿ ಪ್ರಭಾವ ಹೊಂದಿದ್ದ ಈ ಸೇನೆ ನಂತರದಲ್ಲಿ ಜಹಾನಬಾದ್, ಪಾಟ್ನ, ರೋಹಪಾಸ, ಔರಂಗಬಾದ್, ಗಯಾ ಜಿಲ್ಲೆಗಳಿಗೆ ಹರಡಿದೆ. ಈ ಮೇಲಿನ ಹತ್ಯಾಕಾಂಡಗಳು ನಮ್ಮ ದೇಶದಲ್ಲಿರುವುದು ಪ್ರಜಾಪ್ರಭುತ್ವವೋ ಅಥವಾ ಸರ್ವಾಧಿಕಾರವೋ ಎಂಬ ಪ್ರಶ್ನೆಯನ್ನು ಪದೇ ಪದೇ ನೆನಪಿಸುತ್ತದೆ.

1995ರಲ್ಲಿಯೇ ರಣವೀರ ಸೇನೆಯನ್ನು ಬಿಹಾರ ಸರ್ಕಾರ ನಿಷೇಧಿಸಿದೆಯಾದರೂ ಅದು ಕೇವಲ ತೋರಿಕೆಗೆ ಎಂಬುದು ನಂತರದಲ್ಲಿ ನಡೆದ ಹತ್ಯಾಕಾಂಡಗಳಿಂದ ಮತ್ತು ಮೊನ್ನೆ ಸಿಂಗ್‌ನ ಹತ್ಯೆಯ ನಂತರ ನಡೆದ ಗಲಭೆಗಳಿಂದ ತಿಳಿಯುತ್ತದೆ. ನಾನಾಗಲೆ ಹೇಳಿದಂತೆ ಭಿತ್ತನೆ ಬೀಜ ಗೊಬ್ಬರಗಳಿಗೆ ಹೋರಾಟ ಮಾಡುವ ರೈತರನ್ನು ಸುಟ್ಟುಬಿಡುವ ಸರ್ಕಾರ ಇಂತಹವರ ಮೇಲೆ ಇಟ್ಟಿರುವ ಮೃದು ಧೋರಣೆ ಹಲವು ಅನುಮಾನಗಳಿಗೆ ಕಾರಣವಾಗಿದೆ. ಇದಷ್ಟೂ ಹತ್ಯಾಕಾಂಡಗಳ ಪಾತ್ರದಾರಿ ಬ್ರಹ್ಮೇಶ್ವರನನ್ನು ಬಿಹಾರ ಸರ್ಕಾರ ಬಂಧಿಸಿದ್ದು 2002ರಲ್ಲಿ. 17 ಪ್ರಕರಣಗಳಲ್ಲಿ ಈತನನ್ನು ಜೈಲಿಗೆ ಹಾಕಲಾಗಿತ್ತಾದರೂ 9 ವರ್ಷಗಳ ನಂತರ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದನು.

ಬಿಡುಗಡೆಯಾದ ಒಂದು ವರ್ಷದಲ್ಲೆ ಹತ್ಯೆಯಾಗಿದ್ದಾನೆ. ಅದೇನೆ ಇರಲಿ ಇಂತಹ ಪಿಶಾಚಿಗಳ ಅನುಯಾಯಿಗಳು ರಾಜಾರೋಷವಾಗಿ ಧಾಂದಲೆ ನಡೆಸಿದ್ದು ಮಾತ್ರ ನಿಜಕ್ಕೂ ಸರ್ಕಾರದ ಮೇಲೆ ಗುಮಾನಿ ಹುಟ್ಟಿಸುತ್ತದೆ. ಈತನ ಹತ್ಯೆಯನ್ನು ತೀವ್ರವಾಗಿ ಖಂಡಿಸಿರುವ ವಿರೋಧಪಕ್ಷಗಳು ಕಂಬನಿ ಕರೆದಿವೆ. ಸಮಾಜವಾದಿಗಳು, ದಲಿತಪರರು ಎನಿಸಿಕೊಂಡಿರುವ ಲಾಲೂಪ್ರಸಾದ್ ಯಾದವ್, ರಾಮ್ ವಿಲಾಸ್ ಪಾಸ್ವಾನ್, ಕಾಂಗ್ರೆಸ್ ಪಾರ್ಟಿ ಸಿ.ಬಿ.ಐ ತನಿಖೆಗೆ ಆಗ್ರಹಿಸಿವೆ ಮತ್ತು ಈ ಆಗ್ರಹವನ್ನು ಪುರಸ್ಕರಿಸಿರುವ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿದೆ. ಇದೇ ಉಗ್ರ ನೂರಾರು ದಲಿತರನ್ನು ಕೊಲ್ಲಿಸಿದಾಗ ಸಿಬಿಐ ತನಿಖೆಗೆ ಯಾರಾದರೂ ಆಗ್ರಹಿಸಿದ್ದರೆ? ಇಂತಹವರೆಲ್ಲ ನಮ್ಮ ನಾಯಕರು! ಇಂತಹ ಉಗ್ರನ ಅಂತ್ಯಸಂಸ್ಕಾರಕ್ಕೆ ಬಿಹಾರದ ಬಿ.ಜೆ.ಪಿ ಅಧ್ಯಕ್ಷ ಸಿ.ಪಿ.ಠಾಕೂರ್ ಮತ್ತು ಕೆಲವು ಶಾಸಕರು ಕೂಡ ಹಾಜರಿದ್ದದ್ದು ನಿಜಕ್ಕೂ ನಾಚಿಕೇಗೇಡಿನ ಸಂಗತಿ.

ಟೀ ಪುಡಿ, ಸಕ್ಕರೆ, ಭಗತ್ ಸಿಂಗನ ಪುಸ್ತಕವನ್ನು ಇಟ್ಟುಕೊಂಡರೆ ಸಾಕು ಜೈಲಿಗೆ ಹಾಕುವ ಸರ್ಕಾರಗಳು ಬ್ರಹ್ಮೇಶ್ವರನಂತಹವರನ್ನು ನಡೆಸಿಕೊಳ್ಳುವ ರೀತಿ ಜಿಗುಪ್ಸೆ ಹುಟ್ಟಿಸುತ್ತದೆ. ಇತ್ತ ರಣವೀರ ಸೇನೆಯ ಉಗ್ರರಿಂದ, ಅತ್ತ ದಾರಿ ತಪ್ಪಿರುವ ನಕ್ಸಲರಿಂದ, ಇವರಿಬ್ಬರನ್ನು ಹದ್ದುಬಸ್ತಿನಲ್ಲಿಡಬೇಕಿದ್ದ ಸರ್ಕಾರದಿಂದ ನಷ್ಟವಾಗುತ್ತಿರುವುದು ಬಿಹಾರದ ದಲಿತರಿಗೆ ಮಾತ್ರ. ಅವರನ್ನು ಈಗ ಕಾಪಾಡುವುದು ಶಿಕ್ಷಣ, ಸಂಘಟನೆ ಮತ್ತು ಹೋರಾಟ ಮಾತ್ರ. ■

(7ನೇ ಪುಟದಿಂದ)

ಮೂರ್ಖರ ಪೆಟ್ಟಿಗೆ...

ಆಯ್ಕೆಗೆ ನಮ್ಮ ವೀಕ್ಷಕರಿಗೆ ಅವಕಾಶ ಮಾಡಿಕೊಟ್ಟಿರುವದಿದೆಯೇ? ಎನ್ನುವದು ಇನ್ನೊಂದು ಪ್ರಶ್ನೆ.

ಟಿ.ವಿ.ಯಲ್ಲಿ ಬರುವ ಖಾಸಗಿ ಚಾನೆಲ್‌ಗಳ ಗುರಿ ಮಾತ್ರ ಕೈಗೂಡಿದಂತಾಗಿದೆ. ಜನಪ್ರಿಯ ಸಂಸ್ಕೃತಿಯ ಹೆಸರಲ್ಲಿ ಬೃಹತ್ ಪ್ರಮಾಣದ ವೀಕ್ಷಕರನ್ನು ಗ್ಲಾಮರಸ್ ಆಗಿರುವ ಜಾಹೀರಾತುಗಳ ಮೂಲಕ ಕೊಳ್ಳುಬಾಕ ಸಂಸ್ಕೃತಿಯಲ್ಲಿ ಸಿಲುಕಿಸಿರುವದಂತೂ ಹೌದು. ಭಾರತದಂತಹ ರಾಷ್ಟ್ರದಲ್ಲಿ ಭಾವುಕ ಪ್ರೇಕ್ಷಕರ ಸಂಖ್ಯೆ ಅಪಾರ. ಅಲ್ಲಿಯ ಕಾರ್ಯಕ್ರಮಗಳು ಇವರನ್ನು ಹೆಜ್ಜೆ ಹೆಜ್ಜೆಗೂ ಹಿಂಬಾಲಿಸುವದಿದೆ. ಹಾಗಾಗಿಯೇ ಇಂದಿನ ಕೌಟುಂಬಿಕ ಪರಿಸರದಲ್ಲಿ ಧಾರವಾಹಿಯ ಅನೇಕ ಪಾತ್ರಗಳು ಸುತ್ತಿ ಸುಳಿಯುತ್ತವೆ.

ಸಿನಿಮಾ ದಿನಾಲು ಕೈಗೆಟಕುವದಿಲ್ಲ. ಎಟಕಿದರೂ ದಿನಾಲು ಸಿನಿಮಾ ನೋಡುವವರನ್ನು ಈ ಸಮಾಜ ಸಾಮಾನ್ಯವಾಗಿ ಸಹಿಸುವದಿಲ್ಲ. ಟಿ.ವಿ.ಹಾಗಲ್ಲ ದಿನದ 24 ಗಂಟೆ ತೀರಾ ಸುಲಭವಾಗಿ ಎಟಕಬಹುದಾದ ಸಾಧನ. ಪರಿಣಾಮವಾಗಿ ಆ ಕುಟುಂಬದಲ್ಲಿರುವ ಎಲ್ಲ ವಯೋಮಾನದವರು ಅವರವರಿಗೆ ಬೇಕಾದ ಕಾರ್ಯಕ್ರಮಗಳನ್ನು ನೋಡಿ ಹಗುರಾಗುತ್ತಾರೆ. ಅಲ್ಲಿ ಬರುವ ಜಾಹೀರಾತುಗಳು ಮಾತ್ರ ಆ ಮನೆಯ ಯಜಮಾನನ ಪಾಲಿಗೆ ಪರೋಕ್ಷವಾಗಿ ಭಾರವಾಗುತ್ತವೆ. ಲೆವಿಸ್ ಎನ್ನುವ ಚಿಂತಕರು ಟಿ.ವಿ ವೀಕ್ಷಕರ ಮೇಲೆ ಬೀರಬಹುದಾದ ಪ್ರಭಾವವನ್ನು ಹೀಗೆ ಚರ್ಚಿಸಿರುವರು. ಅವರು ಹೇಳುವಂತೆ

* ಟಿ.ವಿ. ವೀಕ್ಷಕರ ಆಲೋಚನೆಗಳ ಮೇಲೆ ಪ್ರಭಾವ ಬೀರಬಹುದೇ ಹೊರತು ಅವರ ವರ್ತನೆಗಳ ಮೇಲಲ್ಲ.
* ಅದು ಬೀರುವ ಪ್ರಭಾವ ಅತ್ಯಂತ ಸಂಕೀರ್ಣವಾದುದು. ಅದು ಹೀಗೆ ಎಂದು ಖಚಿತವಾಗಿ ಹೇಳಲಾಗದು.
* ವೀಕ್ಷಕರು ವಿಭಿನ್ನವಾಗಿರುತ್ತಾರೆ ಹಾಗೆಯೇ ಪ್ರಭಾವವೂ ಭಿನ್ನವೇ.
* ವೀಕ್ಷಕರನ್ನು ಖಾಲಿ ಪಾತ್ರೆಗಳೆಂದು ತಿಳಿಯುವದೇ ಹೆಚ್ಚೆಚ್ಚು ಮಾರಕ ಪರಿಣಾಮಗಳಾಗಲು ಕಾರಣ.
* ವೀಕ್ಷಕರ ಸಾಮಾಜಿಕ ಸಂದರ್ಭವನ್ನು ನಿರ್ಲಕ್ಷಿಸಿ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತದೆ.

ವೀಕ್ಷಕರಲ್ಲಿ ಎಲ್ಲ ರೀತಿಯ ಮನೋಭಾವ, ಸ್ತರ, ಶಿಕ್ಷಣ, ವರ್ಗದವರಿದ್ದಾರೆ ಅವರ ನಿರೀಕ್ಷೆಗಳ ಅಧ್ಯಯನದ ಮೂಲಕ ಕಾರ್ಯಕ್ರಮಗಳು ರೂಪಗೊಳ್ಳಬೇಕು. ಜೊತೆಗೆ ವಸ್ತುನಿಷ್ಠವಾಗಿ ಟಿ.ವಿ. ಪ್ರೇಕ್ಷಕರ ಮೇಲೆ ಬೀರಬಹುದಾದ ಪ್ರಭಾವವನ್ನು ಅಧ್ಯಯನ ಮಾಡದೇ ಭಾವನೆಗಳನ್ನು ಕೆರಳಿಸಬಹುದಾದ, ಹಿಂಸಾತ್ಮಕ ಕಾರ್ಯಕ್ರಮಗಳನ್ನು ರೂಪಿಸಬಾರದು. ಅತಿ ಮುಖ್ಯವಾಗಿ ವೀಕ್ಷಕರು ಯಾವಾಗಲೂ ಸಿನಿಕರಾಗಿರುತ್ತಾರೆ, ಕಾರ್ಯಕ್ರಮಗಳಲ್ಲಿ ತೋರಿಸುವ ಪ್ರತಿಯೊಂದು ಸಂಗತಿಯನ್ನು ಅವರು ಪ್ಯಾಸಿವ್ ಆಗಿ ತೆಗೆದುಕೊಳ್ಳುತ್ತಾರೆ ಎಂದು ಭಾವಿಸಬಾರದು. ಮೂರ್ಖರ ಪೆಟ್ಟಿಗೆಯ ಮುಂದಿರುವವರೆಲ್ಲಾ ಮೂರ್ಖರಲ್ಲ. ■

ಕವನ

ಸಂತೆ

ಒಂದಿಷ್ಟು ಬಿಡಿ ಕವಿತೆಗಳು

1

ಅಮ್ಮ, ನೀನಿಲ್ಲದ ಹೊತ್ತಲ್ಲಿ
ನಡೆಯುತ್ತಿದ್ದೇನೆ ಸಂತೆಯಲ್ಲಿ
ಏನೆಲ್ಲ ಕೊಳ್ಳಬಹುದು ದುಡ್ಡು ಕೊಟ್ಟು
ನಿನ್ನ ಅಪ್ಪಟ ಪ್ರೀತಿಯೊಂದನ್ನು ಬಿಟ್ಟು.

2

ಸಾಲುಗಟ್ಟಿದ ಅಂಗಡಿಗಳಲ್ಲಿ
ಎಷ್ಟೊಂದು ಟೊಪ್ಪಿಗೆಗಳು;
ಕಾದು ಕೂತಿವೆ ಸಿಗುವತನಕ
ಸಿಕ್ಕಿಸಿಕೊಳ್ಳುವ ತಲೆಗಳು.

3

ಬಿಕರಿಗಿಟ್ಟ ಸರಕುಗಳಲ್ಲಿ
ಅಸಲಿಗು ನಕಲಿಗು ಫರಕಿಲ್ಲ
ಕೊಳ್ಳುತ್ತಿದ್ದಾರೆ ಜನ
ಬದುಕೆಂಬ ಮ್ಯಾರಾಥಾನ್‌ನಲ್ಲಿ
ಓಡುತ್ತೋಡುತ್ತ ಬೇಸತ್ತವರು
ಅಕ್ಷರಶಃ ನರಸತ್ತವರು.

4

ರೈತ ಜನ
ಬೆವರ ಸುರಿಸಿ
ಬೆಳೆದ ಬೆಳೆಯ
ತರುತ್ತಾರೆ ಪೇಟೆಯಲ್ಲಿ;
ಕೂತ ಕುಂಡೆಗೆ
ಮೂರು ಪಾಲೆಂಬುವ
ದಲ್ಲಾಳಿಗಳು
ತೊಡಗಿದ್ದಾರೆ ಬೇಟೆಯಲ್ಲಿ.

5

ಸಂತೆಯ ಸಂಜೆಯಲ್ಲಿ
ಈ ಸಂತೆ ಜನರ
ಜೇಬು, ಗಲ್ಲೆ, ಲಾಕರ್‌ಗಳಲ್ಲಿ
ನೋಟುಗಳು ಬಂಧಿ;
ಕತ್ತಲಲ್ಲಿ
ನಗಲಾಗದೇ ಅಳಲಾಗದೇ
ಮಿಸುಕಾಡುತ್ತಾರೆ ಗಾಂಧಿ!

■ ಪಿ.ಮಂಜುನಾಥ





ಜಾತೀಯತೆ ಎಂಬುದು ರಾಷ್ಟ್ರಕ್ಕೆ ಹಿಡಿದಿರುವ ಶಾಪವಾಗಿದೆ. ಅದನ್ನು ಎಷ್ಟು ಬೇಗ ನಾಶಪಡಿಸುತ್ತೇವೆಯೋ ಅಷ್ಟೂ ಒಳ್ಳೆಯದು. ರಾಷ್ಟ್ರದ ಮುಂದಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು, ಒಗ್ಗಟ್ಟಿನಿಂದ ನಾವು ನಿಲ್ಲಬೇಕಿರುವುದು ಅತ್ಯವಶ್ಯವಾಗಿರುವಾಗ, ಜಾತೀಯತೆ ರಾಷ್ಟ್ರವನ್ನು ಒಡೆಯುತ್ತಿದೆ. ಅಂತರಜಾತಿ ವಿವಾಹವು ಜಾತಿ ಪದ್ಧತಿಯನ್ನು ನಾಶಪಡಿಸುವ ಸಾಧನವಾಗಿರುವುದರಿಂದ ಅದು ವಾಸ್ತವವಾದಿ ದೇಶದ ಹಿತಾಸಕ್ತಿಯನ್ನು ಎತ್ತಿ ಹಿಡಿಯುವಂಥದ್ದಾಗಿದೆ.

ಅಂತರಜಾತಿ ವಿವಾಹ
ಸುಪ್ರೀಂ ಕೋರ್ಟಿನ ತೀರ್ಪು

■ ಮಂಗ್ಳೂರ ವಿಜಯ

ಸುಪ್ರೀಂ ಕೋರ್ಟ್ ಆಫ್ ಇಂಡಿಯಾ
ಕೇಸ್ ನಂಬರ್ ರಿಟ್ ಪಿಟಿಷನ್ (ಕ್ರಿಮಿನಲ್)
208/2004.
ಅರ್ಜಿದಾರರು: ಲತಾ ಸಿಂಗ್ ವರ್ಸಸ್ ಉ. ಪ್ರದೇಶ ಸರ್ಕಾರ ಮತ್ತು ಇನ್ನೊಬ್ಬರು.
ತೀರ್ಪು ನೀಡಿದ ದಿನಾಂಕ: 07-7-2006.
ನ್ಯಾಯಮೂರ್ತಿಗಳು: ಅಶೋಕ ಭಾನ್ ಮತ್ತು ಮಾರ್ಕಂಡೇಯ ಖಟ್ಜು.

ಉತ್ತರ ಪ್ರದೇಶದ ಲಖನೌ ನಗರದ ಸರೋಜಿನಿ ನಗರ ಪೊಲೀಸ್ ಠಾಣೆಯಲ್ಲಿ 2000ರಲ್ಲಿ ನೋಂದಾವಣೆಗೊಂಡ ಪ್ರಕರಣ ಇದು. ಇದರ ಎಫ್.ಐ.ಆರ್.ಸಂಖ್ಯೆ 336/2000. ಇದನ್ನು ಲಖನೌ ನಗರದ 5ನೇ ಫಾಸ್ಟ್ ಟ್ರಾಕ್ ಕೋರ್ಟು ವಿಚಾರಣೆ ನಡೆಸಿದೆ. 2001ರಲ್ಲಿ 1201ನೇ ಸಂಖ್ಯೆ ತೀರ್ಪಿನಲ್ಲಿ ಪ್ರಕರಣವನ್ನು ಇತ್ಯರ್ಥಪಡಿಸಲಾಗಿದೆ. ಆ ತೀರ್ಪಿನ ಪ್ರಕಾರ ತಮಗೆ ಐ.ಪಿ.ಸಿ. ವಿಧಿ 366 ಮತ್ತು 368ರ ಅಡಿಯಲ್ಲಿ ಸಂವಿಧಾನದ ಅನುಚ್ಛೇದ 32ರ ಪ್ರಕಾರ ಸುಪ್ರೀಂ ಕೋರ್ಟಿಗೆ ಮೇಲ್‌ಮನವಿ ಸಲ್ಲಿಸಲಾಗಿದೆ. ಪ್ರಕರಣದ ವಿವರಗಳು ಹೀಗಿವೆ:

ಲತಾ ಸಿಂಗ್ (ವಯಸ್ಸು ಸುಮಾರು 27) ಪದವೀಧರೆ. ಲಖನೌ ವಿಶ್ವವಿದ್ಯಾಲಯದಲ್ಲಿ ಹಿಂದಿ ವಿಷಯದಲ್ಲಿ ಎಂ.ಎ. ಅಭ್ಯಾಸ ಮಾಡುತ್ತಿರುವರು. ತಂದೆ-ತಾಯಿ ನಿಧನಾನಂತರ ಅವರು ತಮ್ಮ ಸೋದರ ಅಜಯ ಪ್ರತಾಪ್ ಸಿಂಗ್ ಮನೆಯಲ್ಲಿ (ಎಲ್.ಡಿ.ಎ.ಕಾಲೊನಿ, ಕಾನಪುರ ರಸ್ತೆ, ಲಖನೌ) ಆಶ್ರಯ ಪಡೆದರು. 1997ರಲ್ಲಿ ಪಿ.ಯು ಮುಗಿಸಿದರು; 2000ರಲ್ಲಿ ಪದವಿ ಉತ್ತೀರ್ಣರಾದರು.

ದಿನಾಂಕ 02-11-2000ರಂದು ಅವರು ತಮ್ಮ ಸೋದರನ ಮನೆಯಿಂದ ದೆಹಲಿಗೆ ಹೋಗಿ, ದೆಹಲಿ ಮತ್ತು ಇತರ ನಗರಗಳಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದ ಬ್ರಹ್ಮಾನಂದ ಗುಪ್ತಾ ಎಂಬವರ ಜೊತೆಗೆ ಆರ್ಯ ಸಮಾಜ ಮಂದಿರದಲ್ಲಿ ಮದುವೆಯಾದರು; ನಂತರ ಅವರಿಗೆ ಒಂದು ಮಗುವೂ ಜನಿಸಿತು.

ಲತಾ ಸಿಂಗ್ ಅವರಿಗೆ ಮೂವರು ಸೋದರರು. ಅವರುಗಳೆಂದರೆ, ಅಜಯ ಪ್ರತಾಪ್ ಸಿಂಗ್, ಶಶಿ ಪ್ರತಾಪ್ ಸಿಂಗ್ ಮತ್ತು ಆನಂದ ಪ್ರತಾಪ್ ಸಿಂಗ್. ತಮ್ಮ ತಂಗಿ ಮದುವೆಯಾಗಿದ್ದು ಬೇರೆ ಜಾತಿಗೆ ಸೇರಿದ ಹುಡುಗನೊಂದಿಗೆ ಎಂಬ ಕಾರಣಕ್ಕೆ ಅವರು ಕೋಪಾವಿಷ್ಟರಾದರು. ವಿಷಯ ತಿಳಿಯುತ್ತಲೇ ಅವರು ತಂಗಿ ಮದುವೆಯಾಗಿದ್ದ ಹುಡುಗನ ಮನೆಗೆ ಹೋಗಿ ಹುಡುಗನ ತಾಯಿ ಮತ್ತು ಸೋದರಮಾವರನ್ನು ಚೆನ್ನಾಗಿ ಥಳಿಸಿದರು. ಮನೆಯಲ್ಲಿಯ ವಸ್ತುಗಳನ್ನು ಹೊರಕ್ಕೆ ಎಸೆದು, ಧಾಂದಲೆ ಮಾಡಿದರು. ಹುಡುಗನ ಒಬ್ಬ ಸೋದರನನ್ನು ಮನೆಯಲ್ಲಿನ ಒಂದು ಕೋಣೆಯಲ್ಲಿ ಕೂಡಿ ಹಾಕಿ ಇತರ ಎಲ್ಲರನ್ನೂ ಹೊರಗೆ ನೂಕಿ, ತಾವು ತಂದಿದ್ದ ಬೀಗವನ್ನು ಮನೆಗೆ ಹಾಕಿ ಹೋದರು. ಈ ವಿಷಯ ಠಾಣೆಗೆ ತಿಳಿದು, ಮನೆಯೊಳಗಿದ್ದ ಒಬ್ಬನನ್ನು ಹೊರಗೆ ತೆಗೆದದ್ದು ನಾಲ್ಕು ದಿನಗಳ ಬಳಿಕ! ಅಲ್ಲಿಯವರೆಗೆ ಅವನಿಗೆ ಯಾರೂ ಊಟ-ನೀರು ಕೊಟ್ಟರಲಿಲ್ಲ. ಇಷ್ಟಕ್ಕೆ ನಿಲ್ಲದೆ, ಈ ಮೂವರೂ ಸೋದರರು ತಮ್ಮ ತಂಗಿಯ ಮಾವನಿಗೆ (ಗಂಡನ ತಂದೆಗೆ) ಸೇರಿದ್ದ ಜಮೀನಿನಲ್ಲಿ ಬೆಳೆದಿದ್ದ ಬೆಳೆಯನ್ನು ಕಟಾವ್ ಮಾಡಿದರು; ಅದನ್ನು ಮಾರಾಟ ಮಾಡಿಕೊಂಡರು; ಆ ಜಮೀನಿನಲ್ಲಿ ಬೆಳೆ ತೆಗೆದುಕೊಳ್ಳಲು ಇತರರಿಗೆ ಅನುಮತಿ ನೀಡಿದರು.

ಇಷ್ಟು ಮಾಡಿದ ಬಳಿಕ, ಅವರು ದಿನಾಂಕ 04-11-2000ರಂದು ಸರೋಜಿನಿ

ನಗರ ಠಾಣೆಗೆ ಹೋಗಿ, 'ಸೋದರಿ ಕಾಣೆಯಾಗಿದ್ದಾಳೆ' ಎಂದು ದೂರು ನೀಡಿದರು. ಈ ದೂರಿನಲ್ಲಿ ಅವರು ಯಾರೊಬ್ಬರ ಮೇಲೂ ಸಂದೇಹ ವ್ಯಕ್ತಪಡಿಸದೇ ಇದ್ದರೂ, ಪೊಲೀಸರು ದಿನಾಂಕ 02-12-2000ರಂದು ಸಂಗೀತಾ ಗುಪ್ತಾರ ಪತಿಯ ಸೋದರ ಸಂಬಂಧಿ(ಕಸಿನ್) ಕಲ್ಲು ಗುಪ್ತಾರನ್ನು ಮತ್ತು ದಿನಾಂಕ 17-12-2000ರಂದು ಪತಿಯ ಇಬ್ಬರು ಸೋದರಿಯರಾದ ಮಮತಾ ಗುಪ್ತಾ, ಸಂಗೀತಾ ಗುಪ್ತಾ ಮತ್ತು ಮೊದಲ ಸೋದರಿಯ ಪತಿ ರಾಕೇಶ್ ಗುಪ್ತಾರನ್ನು ಬಂಧಿಸಿದರು. ಮಮತಾ ಗುಪ್ತಾ ಜೊತೆ ಅವರ ಒಂದು ತಿಂಗಳ ಕೂಸನ್ನೂ ಜೈಲಿಗೆ ಹಾಕಲಾಗಿತ್ತು. ಇವರು ಜಾಮೀನು ಪಡೆಯಲು ಮಾಡಿದ ಎಲ್ಲಾ ಪ್ರಯತ್ನಗಳೂ ವಿಫಲವಾದವು.

ಸಂಗೀತಾ ಗುಪ್ತಾರ ಪತಿ ರಂಗಪುಠಿಯಲ್ಲಿ ಬದಾನ್ ಸಿಂಗ್ ಮಾರ್ಕೆಟ್‌ನಲ್ಲಿ ಒಂದು ಹೆಲ್ಮೆಟ್ ಅಂಗಡಿಯನ್ನು ಹೊಂದಿದ್ದ. ಅದನ್ನೂ ಈ ಮೂವರು ಸೋದರರು ತಮ್ಮ ಕೈವಶ ಮಾಡಿಕೊಂಡರು. ಅಲ್ಲದೆ, ಅವರು ತಂಗಿಯ ಪತಿ ಮತ್ತು ಅವರ ಸೋದರಿಯರನ್ನು ಕೊಲೆ ಮಾಡುವ ಬೆದರಿಕೆ ಕೂಡ ಹಾಕಿದರು.

ತಮ್ಮ ಪತಿ ಮತ್ತು ಅವರ ಸಂಬಂಧಿಗಳ ಮೇಲೆ ತಮ್ಮ ಸೋದರರು ಸುಳ್ಳು ದೂರು ನೀಡಿದ್ದಾರೆ ಎಂದು ಲತಾ ಸಿಂಗ್ ದೂರು ನೀಡಿ, ತಾವು ಅಂತರಜಾತಿ ವಿವಾಹವಾಗಿದ್ದರಿಂದ ತಮ್ಮ ಸೋದರರು ಕೋಪಾವಿಷ್ಟರಾಗಿ ಈ ಕ್ರೌರ್ಯವನ್ನು ಮೆರೆಯುತ್ತಿದ್ದಾರೆ ಎಂದು ತಿಳಿಸಿದರು.

ಅಂತರಜಾತಿ ವಿವಾಹವಾಗಿದ್ದಕ್ಕೆ ತಮಗೆ, ತಮ್ಮ ಪತಿಗೆ, ಪತಿಯ ಮನೆಯವರಿಗೆ ಕಿರುಕುಳ ಆಗುತ್ತಿದೆ ಎಂಬ ಬಗ್ಗೆ ಅವರು ರಾಜಸ್ತಾನ್ ಮಹಿಳಾ ಆಯೋಗಕ್ಕೂ ದೂರು ನೀಡಿದರು. ಆಯೋಗವು ಲತಾ ಸಿಂಗ್ ಹೇಳಿಕೆಯನ್ನು ದಿನಾಂಕ 13-3-2001ರಂದು ದಾಖಲಿಸಿಕೊಂಡು, ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿ, ಈ ಹೇಳಿಕೆಯ ವರದಿಯನ್ನು ಲಖನೌ ನಗರದ ಎಸ್.ಪಿ. ಕಚೇರಿಗೆ ಕಳುಹಿಸಿಕೊಟ್ಟಿತು. ಆಯೋಗವು ಈ ಬಗ್ಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೂ ಅದೇ ದಿನ ವರದಿ ಸಲ್ಲಿಸಿ, ಈ ಬಗ್ಗೆ ಮಧ್ಯಪ್ರವೇಶ ಮಾಡುವಂತೆ ರಾಜಸ್ತಾನ ಸರ್ಕಾರದ ಮುಖ್ಯಕಾರ್ಯದರ್ಶಿಯವರಿಗೆ ಆದೇಶ ನೀಡುವಂತೆ ಕೋರಿತು.

ಸರೋಜಿನಿ ನಗರ ಠಾಣೆಯ ಪೊಲೀಸ್ ಅಧಿಕಾರಿಯು, ಈ ಪ್ರಕರಣದಲ್ಲಿ ಯಾವ ಅಪರಾಧವೂ ಜರುಗಿರುವುದಿಲ್ಲ ಎಂಬ ವರದಿಯನ್ನು ಲಖನೌ ಸೆಷನ್ಸ್ ಕೋರ್ಟಿಗೆ ಸಲ್ಲಿಸಿದರು. ಎಲ್ಲಾ ಆರೋಪಿಗಳನ್ನು ದಿನಾಂಕ 17-5-2001ರಂದು ಬಿಡುಗಡೆ ಮಾಡಲಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಲಖನೌ ಎಸ್.ಪಿ. ವರದಿ ಸಲ್ಲಿಸಿದರು.

ಲತಾ ಸಿಂಗ್ ಅವರಿಂದ ತನಿಖಾ ಅಧಿಕಾರಿ 28-5-2001ರಂದು ಹೇಳಿಕೆ ಪಡೆದರೆ, ಮಾರನೇ ದಿನ ಲಖನೌ ನಗರದ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರು ಸಿಆರ್.ಪಿ.ಸಿ. 164ರ ಮೇರೆಗೆ ಹೇಳಿಕೆ ಪಡೆದರು. ಅದರಲ್ಲಿ ಲತಾ ಸಿಂಗ್, ತಾವು ಬ್ರಹ್ಮಾನಂದ ಗುಪ್ತಾ ಅವರನ್ನು ಸ್ವಇಚ್ಛೆಯಿಂದ ವಿವಾಹವಾಗಿರುವುದಾಗಿ, ತಮ್ಮ ಸೋದರರು ತಮಗಾಗಲಿ ಅಥವಾ ತಮ್ಮ ಪತಿಗಾಗಲಿ, ಪತಿಯ ಸಂಬಂಧಿಕರಿಗಾಗಲಿ ಯಾವುದೇ ರೀತಿಯ ತೊಂದರೆ ಕೊಡುವುದು ಅಪರಾಧವಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿದರು.

ಈ ಮಧ್ಯೆ ತಮ್ಮ ತಂಗಿ ಮಾನಸಿಕವಾಗಿ ಅನಾರೋಗ್ಯದಿಂದಿದ್ದಾಳೆ ಎಂದು ಲತಾ ಸಿಂಗ್ ಸೋದರರು ಪೊಲೀಸರಿಗೆ ಇನ್ನೊಂದು ದೂರು ನೀಡಿದರು. ಇದರ ಆಧಾರದಲ್ಲಿ ಲಖನೌ ನಗರದ ಚೀಫ್ ಜುಡಿಷಿಯಲ್ ಮ್ಯಾಜಿಸ್ಟ್ರೇಟರು ಲತಾ ಸಿಂಗ್ ಅವರನ್ನು ಬಂಧಿಸಿ, ಜಯಪುರದ ಬೋರ್ಡ್ ಆಫ್ ಡಾಕ್ಟರ್ಸ್ ಆಫ್ ಸೈಕ್ಯಾಟ್ರಿಕ್ ಸೆಂಟರ್‌ನಲ್ಲಿ ತಪಾಸಣೆಗೆ ಒಳಪಡಿಸಿದರು. ಆದರೆ, ಲತಾ ಸಿಂಗ್ ಯಾವುದೇ ರೀತಿಯ ಮಾನಸಿಕ ಅನಾರೋಗ್ಯದಿಂದ ಬಳಲುತ್ತಿಲ್ಲ ಎಂಬುದು ಅಲ್ಲಿ ದೃಢಪಟ್ಟಿತು.

ಈ ಪ್ರಕರಣದ ವಿಚಾರಣೆಯನ್ನು ನಡೆಸುತ್ತಿದ್ದ ಲಖನೌ ಫಾಸ್ಟ್ ಟ್ರಾಕ್ ಕೋರ್ಟು, ಲತಾ ಸಿಂಗ್ ಸೋದರರನ್ನು ಬಂಧಿಸಲು ವಾರೆಂಟ್ ಜಾರಿ ಮಾಡಿತು. ಇದನ್ನು ಪ್ರಶ್ನಿಸಿ ಅವರು ಸಿಆರ್.ಪಿ.ಸಿ. 482ನೇ ವಿಧಿ ಅಡಿಯಲ್ಲಿ ಅಲಹಾಬಾದ್ ಹೈಕೋರ್ಟಿನ ಲಖನೌ ಪೀಠದ ಮುಂದೆ ಅರ್ಜಿ (ಸಂಖ್ಯೆ ಕ್ರಿಮಿನಲ್ ಇತರೆ 520/2003) ಸಲ್ಲಿಸಿದರು. ಇದನ್ನು ವಿಚಾರಣೆಗೆ ಎತ್ತಿಕೊಳ್ಳಲು ನಿರಾಕರಿಸಿದ ಪೀಠವು 'ಸೆಷನ್ಸ್ ನ್ಯಾಯಾಧೀಶರ ಮುಂದೆ ವಿಚಾರಣೆಗೆ ಹಾಜರಾಗಿ' ಎಂದು ಸೂಚಿಸಿತು.

ತಮ್ಮ ಸೋದರರು ಈಗಾಗಲೇ ತಮ್ಮ ಪತಿ ಮತ್ತು ಅವರ ಸಂಬಂಧಿಗಳನ್ನು ಬೆದರಿಸಿದ್ದಾರೆ, ಹೊಡೆದಿದ್ದಾರೆ, ಪತಿಗೆ ಸೇರಿದ ಆಸ್ತಿ-ಪಾಸ್ತಿಯನ್ನು ನಾಶ ಮಾಡಿದ್ದಾರೆ; ಅವರಿಂದ ನಮಗೆಲ್ಲಾ ಪ್ರಾಣಭೀತಿ ಇದೆ. ಹಾಗಾಗಿ, ವಿಚಾರಣೆಯು ಲಖನೌನಲ್ಲಿ ನಡೆಯುತ್ತಿರುವುದರಿಂದ, ಅಲ್ಲಿಗೆ ಹೋಗಲು ತಮಗೆ ಭಯ ಇರುವುದಾಗಿ ಲತಾ ಸಿಂಗ್ ಮನವಿ ಮಾಡಿಕೊಂಡರು.

* * *

"ಈಗ ಈ ಪ್ರಕರಣ ನಮ್ಮ ಮುಂದೆ ಬಂದಿದೆ. ಇದು ಕೆಲವು ಅತಿ ಭೀಕರ ಮತ್ತು ಕಟು ಸತ್ಯವನ್ನು ಬಯಲಿಗಿಟ್ಟಿದೆ. ಲತಾ ಸಿಂಗ್ ವಿವಾಹವಾದಾಗ ವಯಸ್ಕರಾಗಿದ್ದರು; ಆದ್ದರಿಂದ ತಮ್ಮ ವಿವಾಹದ ನಿರ್ಣಯ ಕೈಗೊಳ್ಳಲು ಅವರು ಸ್ವತಂತ್ರರಿದ್ದರು. ತಮಗೆ ಇಷ್ಟವಾದವರನ್ನು ಅವರು ಆಯ್ಕೆ ಮಾಡಿಕೊಳ್ಳಬಹುದಿತ್ತು. ಅಂತರಜಾತಿ ವಿವಾಹ ಆಗಬಾರದು ಎಂದೇನೂ ಹಿಂದೂ ವಿವಾಹ ಕಾಯ್ದೆ ಅಥವಾ ಇನ್ನಾವ ಕಾಯ್ದೆಯೂ ಹೇಳುವುದಿಲ್ಲ. ಆದ್ದರಿಂದ, ಲತಾ ಸಿಂಗ್ ಯಾವುದಾದರೂ ಅಪರಾಧವನ್ನು ಎಸಗಿದ್ದಾರೆ ಎನ್ನಲು ಯಾವುದೇ ಆಧಾರಗಳಿಲ್ಲ. ಹಾಗೆಯೆ, ಅವರ ಪತಿಯಾಗಲಿ ಅಥವಾ ಪತಿಯ ಸಂಬಂಧಿಕರಾಗಲಿ ಯಾವುದೇ ಅಪರಾಧವನ್ನು ಎಸಗಿರುವ ಬಗ್ಗೆ ದೂರುಗಳಿಲ್ಲ.

ಹೀಗಿರುವಾಗ, ಇದನ್ನು ಕ್ರಿಮಿನಲ್ ಪ್ರಕರಣ ಎಂದು ಪರಿಗಣಿಸಿದ್ದೇ ತಪ್ಪು. ಇದು ಕೋರ್ಟು ಮತ್ತು ಪೊಲೀಸ್ ವ್ಯವಸ್ಥೆಯಿಂದಾಗಿರುವ ದೋಷ. ಆಡಳಿತ ಕೂಡ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪು ಮಾಡಿದೆ. ಇದಕ್ಕೆಲ್ಲಾ ಲತಾ ಸಿಂಗ್ ಸೋದರರ ಚಿತಾವಣೆ, ಪ್ರಭಾವ ಇತ್ಯಾದಿ ಕಾರಣ ಇರಬಹುದು; ಆದರೆ ಇವುಗಳನ್ನು ಪೊಲೀಸ್, ಆಡಳಿತ ಮತ್ತು ಕೋರ್ಟು ತಿರಸ್ಕರಿಸಬೇಕಿತ್ತು. ಹಾಗೆ ನೋಡಿದರೆ, ಇಡೀ ಪ್ರಕರಣದಲ್ಲಿ ದಬ್ಬಾಳಿಕೆ ಮಾಡಿರುವವರು ಲತಾ ಸಿಂಗ್ ಸೋದರರು; ಕಾನೂನು ಕೈಗೆ ತೆಗೆದುಕೊಂಡವರು ಅವರು; ಅವರ ಮೇಲೆ ಪೊಲೀಸರು ಕ್ರಮ ಕೈಗೊಳ್ಳುವ ಬದಲು, ಲತಾ ಸಿಂಗ್, ಅವರ ಪತಿ ಮತ್ತು ಅವರ ಸಂಬಂಧಿಕರ ಮೇಲೆ ಅಕ್ರಮವಾಗಿ ಕ್ರಮ ಕೈಗೊಂಡಿರುವುದು ನಮಗೆ ದಿಗ್ಭ್ರಮೆ ಉಂಟು ಮಾಡಿದೆ.

ಅಂತರಜಾತಿ ವಿವಾಹವಾಗುವ ಯುವಕ-ಯುವತಿಯರಿಗೆ ಕಿರುಕುಳ ನೀಡುವ, ಅವರನ್ನು ಬೆದರಿಸುವ, ಅವರ ಮೇಲೆ ದೌರ್ಜನ್ಯ ನಡೆಸುವ ಮತ್ತು ಅವರನ್ನು ಹಿಂಸೆಗೆ ಗುರಿಪಡಿಸುವ ಅನೇಕ ಪ್ರಕರಣಗಳು ನಮ್ಮ ಮುಂದೆ ಆಗಾಗ ಬಂದಿವೆ. ಆದ್ದರಿಂದ ಈ ಕುರಿತು ನಾವು ಕೆಲವು ಮಾತುಗಳನ್ನು ದಾಖಲಿಸುವುದು ಅವಶ್ಯ ಎಂದು ಭಾವಿಸಿದ್ದೇವೆ.

ನಮ್ಮ ಚರಿತ್ರೆಯಲ್ಲಿ ರಾಷ್ಟ್ರವು ಒಂದು ಗಂಭೀರ ಸಂಕ್ರಮಣ ಸ್ಥಿತಿಯಲ್ಲಿ ಹಾದು ಹೋಗುತ್ತಿದೆ; ಈ ಪ್ರಕರಣದಲ್ಲಿ ಕಾಣುವಂಥ ಒಂದು ಮಹತ್ವದ ಜ್ವಲಂತ ವಿಷಯದ ಬಗ್ಗೆ ಕೋರ್ಟು ಮೌನವಹಿಸುವುದು ಸಮುಚಿತವಲ್ಲ.

ಜಾತೀಯತೆ ಎಂಬುದು ರಾಷ್ಟ್ರಕ್ಕೆ ಹಿಡಿದಿರುವ ಶಾಪವಾಗಿದೆ. ಅದನ್ನು ಎಷ್ಟು ಬೇಗ ನಾಶಪಡಿಸುತ್ತೇವೆಯೋ ಅಷ್ಟೂ ಒಳ್ಳೆಯದು. ರಾಷ್ಟ್ರದ ಮುಂದಿರುವ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು, ಒಗ್ಗಟ್ಟಿನಿಂದ ನಾವು ನಿಲ್ಲಬೇಕಿರುವುದು ಅತ್ಯವಶ್ಯವಾಗಿರುವಾಗ, ಜಾತೀಯತೆ ರಾಷ್ಟ್ರವನ್ನು ಒಡೆಯುತ್ತಿದೆ. ಅಂತರಜಾತಿ ವಿವಾಹವು ಜಾತಿ ಪದ್ಧತಿಯನ್ನು ನಾಶಪಡಿಸುವ ಸಾಧನವಾಗಿರುವುದರಿಂದ ಅದು ವಾಸ್ತವವಾದಿ ದೇಶದ ಹಿತಾಸಕ್ತಿಯನ್ನು ಎತ್ತಿ ಹಿಡಿಯುವಂಥದ್ದಾಗಿದೆ.

ಆದರೆ, ಅಂತರಜಾತಿ ವಿವಾಹ ಮಾಡಿಕೊಳ್ಳಲು ಮುಂದಾದ ಯುವಕ-ಯುವತಿಯರಿಗೆ ಕಿರುಕುಳ ನೀಡುವ, ಅವರನ್ನು ಬೆದರಿಸುವ, ಅವರ ಮೇಲೆ ದೌರ್ಜನ್ಯ ನಡೆಸುವ ಮತ್ತು ಅವರನ್ನು ಹಿಂಸೆಗೆ ಗುರಿಪಡಿಸುವ ಅನೇಕ ಪ್ರಕರಣಗಳು ದೇಶದ ಮೂಲೆ ಮೂಲೆಗಳಿಂದ ವರದಿಯಾಗುತ್ತಿವೆ. ಇಂಥ ದೌರ್ಜನ್ಯಗಳು, ಬೆದರಿಕೆಗಳು, ಕುಕೃತ್ಯಗಳು ಎಲ್ಲವೂ ಕಾನೂನು ವಿರೋಧಿಯಾಗಿವೆ. ಇಂಥ ಕೃತ್ಯಗಳಲ್ಲಿ ತೊಡಗಿದವರನ್ನು ಕಾನೂನು ಪ್ರಕಾರ ಕಠಿಣ ಶಿಕ್ಷೆಗೆ ಗುರಿಪಡಿಸಬೇಕಿದೆ.

ನಮ್ಮದು ಸ್ವತಂತ್ರ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರ; ಇಲ್ಲಿ ವಯಸ್ಕ ವ್ಯಕ್ತಿಯು ತಮಗೆ ಇಷ್ಟವಾಗುವ ಯಾರೇ ವಯಸ್ಕರನ್ನು ವಿವಾಹವಾಗುವ ಹಕ್ಕು ಹೊಂದಿದ್ದಾರೆ. ಒಂದು ವೇಳೆ ಯುವಕನ ಅಥವಾ ಯುವತಿಯ ತಂದೆ-ತಾಯಿ-ಬಂಧುಗಳಿಗೆ ಈ ವಿವಾಹ ಇಷ್ಟವಾಗುವುದಿಲ್ಲ ಎಂದಾದರೆ, ಅವರು ಹೆಚ್ಚೆಂದರೆ, ಅವರು ವಿವಾಹದಿಂದ ಮತ್ತು ನೂತನ ದಂಪತಿಯ ಮುಂದಿನ ಬದುಕಿನಿಂದ ದೂರ ಉಳಿಯಬಹುದು, ಅಷ್ಟೆ. ಇದರ ಹೊರತಾಗಿ, ಯುವಕನ ಅಥವಾ ಯುವತಿಯ ತಂದೆ-ತಾಯಿ-ಬಂಧುಗಳು ಯುವಕನಿಗೆ ಅಥವಾ ಯುವತಿಗೆ ಅಥವಾ ಅವರ ಸಂಬಂಧಿಕರಿಗೆ ಬೆದರಿಕೆ ಕಿರುಕುಳ ನೀಡುವುದು, ಅವರನ್ನು ಬೆದರಿಸುವುದು, ಅವರ ಮೇಲೆ ದೌರ್ಜನ್ಯ ನಡೆಸುವುದು ಮತ್ತು ಅವರನ್ನು ಹಿಂಸೆಗೆ ಗುರಿಪಡಿಸುವುದು ಕಾನೂನು ವಿರೋಧಿ ಕೃತ್ಯಗಳಾಗುತ್ತವೆ. ಇದಕ್ಕಾಗಿ ಅಂಥವರ ಮೇಲೆ ಪ್ರಕರಣ ದಾಖಲಿಸಬೇಕಾಗುತ್ತದೆ; ಶಿಕ್ಷಿಸಬೇಕಾಗುತ್ತದೆ.

ಅಂತರಜಾತಿ ವಿವಾಹವಾದವರಿಗೆ ರಕ್ಷಣೆ ನೀಡುವುದು, ಅವರು ತಮ್ಮ ಹಕ್ಕುಗಳನ್ನು ಅಬಾಧಿತವಾಗಿ ಅನುಭವಿಸುವುದಕ್ಕೆ ಅವಕಾಶ ಕಲ್ಪಿಸುವುದು ಆಡಳಿತದ ಹೊಣೆ. ಇದನ್ನು ಇಡೀ ದೇಶದ ಗಮನಕ್ಕೆ ನಾವು ತರುತ್ತಿದ್ದೇವೆ. ಅಂತರಜಾತಿ ವಿವಾಹವಾದವರನ್ನು ಯಾವುದೇ ರೀತಿಯ ತೊಂದರೆಗೆ ಸಿಲುಕಿಸುವ ಮೂಲಕ ಕಾನೂನು ವಿರೋಧಿ ಕ್ರಮಗಳನ್ನು ಕೈಗೊಳ್ಳುವವರ ಮೇಲೆ ಪೊಲೀಸ್ ಸೇರಿದಂತೆ ಇಡೀ ಆಡಳಿತ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ, ಅಂಥವರ ಮೇಲೆ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕೆಂದು

ಸೂಚಿಸುತ್ತೇವೆ.

'ಮರ್ಯಾದಾ ಹತ್ಯೆ' ಎಂಬ ವಿಷಯ ಆಗಾಗ ಮಾಧ್ಯಮಗಳ ಮೂಲಕ ವರದಿಯಾಗುತ್ತದೆ. ಅಂತರಜಾತಿ ಮತ್ತು ಅಂತರಧರ್ಮೀಯ ವಿವಾಹವಾದ ಕಾರಣಕ್ಕೆ ತಮ್ಮ ಮರ್ಯಾದೆ ಬೀದಿಪಾಲಾಯಿತು ಎಂದು ಭಾವಿಸುವ ಯುವಕ-ಯುವತಿ ಸಂಬಂಧಿಕರು, ಹೀಗೆ ವಿವಾಹವಾದವರನ್ನೇ ಮತ್ತು ಅವರ ಸಂಬಂಧಿಕರನ್ನೇ ಬೆದರಿಸುವ, ಹಿಂಸೆಗೆ ಗುರಿಪಡಿಸುವ, ಕೊಲೆ ಮಾಡುವ ಕೃತ್ಯಗಳೂ ನಡೆದುದೂ ತಿಳಿದು ಬರುತ್ತದೆ. ಇಂಥ ಕಿರುಕುಳ, ಹಿಂಸೆ, ಕೊಲೆಗಳಲ್ಲಿ 'ಗೌರವಾರ್ಹವಾದುದು' ಏನೇನೂ ಇಲ್ಲ; ನಿಜವೆಂದರೆ, ಇವು ಪೈಶಾಚಿಕ ಕೃತ್ಯಗಳು; ನಾಚಿಕೆಗೇಡಿನ ಕೃತ್ಯಗಳು. ಇಂಥ ಕೃತ್ಯಗಳ ಹಿಂದೆ ಕ್ರೌರ್ಯ, ಪಾಳೆಯಶಾಹಿ ಮನೋಭಾವ ಅಡಗಿರುತ್ತದೆ; ಇಂಥವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ವಯಸ್ಕ ಯುವಕ-ಯುವತಿ ತಮಗಿಷ್ಟವಾದ ವಯಸ್ಕರನ್ನು ವಿವಾಹವಾಗುವ ಮೂಲಭೂತ ಹಕ್ಕು ಹೊಂದಿದ್ದಾರೆ. ಅವರು ತಮ್ಮ ಹಕ್ಕು ಚಲಾಯಿಸಲು ಯಾರೂ ಅಡ್ಡಿಯಾಗಕೂಡದು; ಏಕೆಂದರೆ ಯಾರೇ ಆಗಲಿ ತಮ್ಮ ಮೂಲಭೂತ ಹಕ್ಕು ಪಡೆದುಕೊಂಡು, ಅದರಂತೆ ಜೀವನ ಮಾಡುವುದಕ್ಕೆ ಅಡ್ಡಿಪಡಿಸುವುದು ಕಾನೂನಿಗೆ ವಿರೋಧವಾಗುತ್ತದೆ; ಅಂಥವರು ಕಾನೂನು ಮೇರೆಗೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ಮುಂದಿನ ಪ್ರಕರಣವನ್ನು ನಾವು ವಜಾ ಮಾಡುತ್ತಿದ್ದೇವೆ. ಲಖನೌ ನಗರದ ಸರೋಜಿನಿ ನಗರ ಪೊಲೀಸ್ ಠಾಣೆಯಲ್ಲಿ ನೋಂದಾವಣೆಗೊಂಡ ಎಫ್.ಐ.ಆರ್. ಸಂಖ್ಯೆ 336/2000ದಿಂದಾಗಿ ಸೆಷನ್ಸ್ ವಿಚಾರಣೆ ಸಂಖ್ಯೆ 1201/2001 (ಉ.ಪ್ರದೇಶ ಸರ್ಕಾರ ವರ್ಸಸ್ ಸಂಗೀತಾ ಗುಪ್ತಾ ಮತ್ತು ಇತರರು) ಪ್ರಕರಣವನ್ನು ನಾವು ವಜಾಗೊಳಿಸುತ್ತಿದ್ದೇವೆ. ಯಾವುದೇ ಸ್ಥಳದಲ್ಲಿ ಸಂಗೀತಾ ಗುಪ್ತಾ, ಅವರ ಪತಿ ಮತ್ತು ಪತಿಯ ಸಂಬಂಧಿಕರಿಗೆ ಯಾವುದೇ ರೀತಿಯ ಕಿರುಕುಳ, ಹಿಂಸೆ, ಬೆದರಿಕೆ ಮುಂತಾದ ತೊಂದರೆಗಳು ಆಗದಂತೆ ನೋಡಿಕೊಳ್ಳಬೇಕೆಂದು ನಾವು ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಸೂಚಿಸುತ್ತಿದ್ದೇವೆ. ಅವರಿಗೆ ಇಂಥ ಯಾವುದೇ ತೊಂದರೆಗಳನ್ನು ನೀಡಿದ್ದು ಕಂಡು ಬಂದಲ್ಲಿ, ಅಧಿಕಾರಿಗಳು ಕಾನೂನು ಪ್ರಕಾರ ಅಂಥವರ ಮೇಲೆ ತುರ್ತು ಕ್ರಮಗಳನ್ನು ಕೈಗೊಳ್ಳಬೇಕೆಂದೂ ನಾವು ಆದೇಶಿಸುತ್ತಿದ್ದೇವೆ.

ಸಂಗೀತಾ ಗುಪ್ತಾ ತಮ್ಮ ಅರ್ಜಿಯಲ್ಲಿ ದಾಖಲಿಸಿರುವ ಆರೋಪಗಳಿಗೆ ಸಂಬಂಧಿಸಿದಂತೆ ಪೊಲೀಸರು ಅರ್ಜಿದಾರರ ಸೋದರರ ಮೇಲೆ ಕಾನೂನು ರೀತ್ಯಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೂಡ ನಿರ್ದೇಶಿಸಲಾಗಿದೆ". ■

(8ನೇ ಪುಟದಿಂದ)

ಮಾಧ್ಯಮ ಮತ್ತು ...

ಖಾನಪುರ ಮತ್ತು ಸಂಜೋತಾ ಎಕ್ಸ್‌ಪ್ರೆಸ್ ರೈಲಿನಲ್ಲಿ ಬಾಂಬ್‌ಗಳು ಸ್ಫೋಟಗೊಂಡು ಅಮಾಯಕರು ಸಾವಿಗೀಡಾದರು. ಅದೇ ಸಂದರ್ಭದಲ್ಲಿ ದಿಲ್ಲಿಯಲ್ಲಿ ಟೀಸ್ತಾ ಸೆಟಲ್ವಾಡ್ ಅವರು ಏರ್ಪಡಿಸಿದ್ದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ನಾನು ಪಾಲ್ಗೊಂಡಿದ್ದೆ. ಅಲ್ಲಿ ಮಾಲೇಗಾಂವ್‌ನಿಂದ ಬಂದಿದ್ದ ಭಯಭೀತ ಮುಸಲ್ಮಾನರು ಅಲ್ಲಿದ್ದ ಸಿಪಿಎಂ ನಾಯಕ ಸೀತಾರಾಂ ಯೆಚೂರಿ ಅವರ ಬಳಿ ತಮ್ಮ ಅಳಲನ್ನು ತೋಡಿಕೊಂಡಿದ್ದನ್ನು ನಾನು ಕಣ್ಣಾರೆ ಕಂಡಿದ್ದೆ.

ಈ ಮಾಲೇಗಾಂವ್ ಬಾಂಬ್‌ಸ್ಫೋಟದ ಬಗ್ಗೆ ಮಹಾರಾಷ್ಟ್ರದ ಮುಖ್ಯಸ್ಥ ಹೇಮಂತ್ ಕರ್ಕರೆ ಜಾಲಾಡತೊಡಗಿದಾಗ, ಎಬಿವಿಪಿ ನಾಯಕಿ ಸಾಧ್ವಿ ಪ್ರಜ್ಞಾ ಸಿಂಗ್ ಸಿಕ್ಕಿಬಿದ್ದರು. ಮಾಲೇಗಾಂವ್ ಬಾಂಬ್‌ಸ್ಫೋಟದ ಸಂಚು ಉತ್ತರ ಕರ್ನಾಟಕದ ಗೋಕಾಕ್‌ನಲ್ಲಿ ರೂಪುಗೊಂಡಿತೆಂದು ಪ್ರಜ್ಞಾಸಿಂಗ್‌ಗೆ ಅದಕ್ಕಾಗಿ ಇಲ್ಲಿಂದ 80 ಲಕ್ಷ ರೂಪಾಯಿ ಹೋಗಿತ್ತು ಎಂದು ಮುತಾಲಿಕ್ ಶಿಷ್ಯ ನಾಗರಾಜ್ ಜಂಬಗಿ ಪೊಲೀಸರ ಎದುರು ಬಾಯಿಬಿಟ್ಟ. ಆದರೆ ಈ ಮಾತನ್ನು ನ್ಯಾಯಾಲಯದಲ್ಲಿ ಹೇಳುವ ಮುನ್ನವೇ ಜೈಲಿನಲ್ಲಿ ಆತನ ಕೊಲೆಯಾಯಿತು. ಈ ಯಾವ ಸುದ್ದಿಗಳು ಕೂಡ ಮಾಧ್ಯಮಗಳಲ್ಲಿ ಪ್ರಕಟಗೊಳ್ಳಲೇ ಇಲ್ಲ.

ಇತ್ತೀಚೆಗೆ ಉಡುಪಿ ಜಿಲ್ಲೆ ಬ್ರಹ್ಮಾವರದಲ್ಲಿ ಗಣೇಶ್‌ಪ್ರಸಾದ್ ಎಂಬಾತನಿಂದ ಭಾರಿ ಪ್ರಮಾಣದ ಸ್ಫೋಟಕ ಸಾಮಗ್ರಿಗಳನ್ನು ಪೊಲೀಸರು ವಶಪಡಿಸಿಕೊಂಡರು. ಈತನ ಬಳಿ 16 ಜಿಲೆಟಿನ್ ಸ್ಟಿಕ್‌ಗಳು ಸಿಕ್ಕವು. ಈತ ಹಿಂದೂವಾದಿ ಸಂಘಟನೆಯ ಕಾರ್ಯಕರ್ತನೆಂದು ತಿಳಿದು ಬಂತು. 75 ಸಾವಿರ ರೂಪಾಯಿ ಮೊತ್ತದ ಸ್ಫೋಟಕ ಸಾಮಗ್ರಿಗಳು ದೊರೆತಿವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೇ ಹೇಳಿದ್ದರು. ಇದೇ ಸಾಮಗ್ರಿ ಅಕಸ್ಮಾತ್ ಮುಸ್ಲಿಂ ಯುವಕನ ಬಳಿ ದೊರೆತಿದ್ದರೆ, ಆತನ ಗತಿ ಏನಾಗುತಿತ್ತು. ಇದನ್ನೇಕೆ ಮಾಧ್ಯಮಗಳು ದೊಡ್ಡದಾಗಿ ಪ್ರಕಟಿಸಲಿಲ್ಲ. 90ರ ದಶಕದ ನಂತರ ಮಾಧ್ಯಮಗಳಲ್ಲಿ ಸೇರಿಕೊಂಡ ಸಂಘಪರಿವಾರದ ವಿಷಜಂತುಗಳು ಒಂದು ಜನ ಸಮುದಾಯಕ್ಕೆ ಸೇರಿದ ಯುವಕರನ್ನು ರಾಷ್ಟ್ರದ್ರೋಹಿ ಎಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಹುನ್ನಾರ ಇದಲ್ಲವೇ?

ಈ ಬಾರಿ ಬೆಂಗಳೂರು, ಹುಬ್ಬಳ್ಳಿಗಳಲ್ಲಿ ಬಂಧಿಸಲ್ಪಟ್ಟ ಯುವಕರು ನಿಜವಾಗಲೂ ಭಯೋತ್ಪಾದಕರೇ? ಇದು ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾದ ವಿಷಯ. ಇದಕ್ಕೆ ಪೊಲೀಸರು ಸೂಕ್ತವಾದ ಸಾಕ್ಷ್ಯಾಧಾರಗಳನ್ನು ಒದಗಿಸಬೇಕಾಗುತ್ತದೆ. ಆದರೆ ಈವರೆಗೆ ಲಭ್ಯವಿದ್ದ ಮಾಹಿತಿ ಪ್ರಕಾರ, ಯಾವ ಸ್ಫೋಟಕ ಸಾಮಗ್ರಿಗಳೂ ಇವರ ಬಳಿ ದೊರೆತಂತೆ ಕಾಣುವುದಿಲ್ಲ. ವಶಪಡಿಸಿಕೊಂಡ ಸಾಮಗ್ರಿಗಳನ್ನು ಪೊಲೀಸರು ಕಾನೂನು ಪ್ರಕಾರ ಪಂಚನಾಮೆ ಮಾಡಿಲ್ಲ. ಬಿನ್ ಲಾಡೆನ್ ಫೋಟೋವನ್ನು ಯಾರು ಬೇಕಾದರೂ ಡೌನ್‌ಲೋಡ್ ಮಾಡಿಸಿಕೊಳ್ಳಬಹುದು. ಅದು ಅಪರಾಧವಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಯುವಕರು ಕೊಲೆ ಸಂಚು ನಡೆಸಿದ್ದರು ಎಂಬುದಕ್ಕೆ ನ್ಯಾಯಾಲಯದಲ್ಲಿ ಸಾಕ್ಷ್ಯಾಧಾರ ಒದಗಿಸಬೇಕಾಗುತ್ತದೆ. ಮಾಧ್ಯಮಗಳಲ್ಲಿನ ಮೂಲವ್ಯಾಧಿಗಳಂತೆ ಕೋರ್ಟ್‌ನಲ್ಲಿ ಕಂಡಿದ್ದನ್ನು ಮಾತನಾಡಲು ಆಗುವುದಿಲ್ಲ. ಹಾಗೆಂದು ಪೊಲೀಸರಿಂದ ಬಂಧಿಸಲ್ಪಟ್ಟವರೆಲ್ಲ ನಿರಪರಾಧಿಗಳೆಂದಲ್ಲ. ಆದರೆ ಆರೋಪ ಸಾಬೀತಾಗುವವರೆಗೆ ತಾನು ನಿರಪರಾಧಿ ಎಂದು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿಕೊಳ್ಳುವುದಾದರೆ, ಅದೇ ರೀತಿ ಇವರಿಗೆ ಹೇಳಿಕೊಳ್ಳಲು ಹಕ್ಕಿದೆ.

ರಾಜ್ಯದ ಹಿರಿಯ ವಕೀಲ, ಮಾಜಿ ಶಾಸಕ ಎ.ಕೆ.ಸುಬ್ಬಯ್ಯನವರು ಹೇಳಿದಂತೆ ಪೊಲೀಸರು ಸಂಘಪರಿವಾರದ ಕೈಗೊಂಬೆಗಳಾಗಿ ವರ್ತಿಸಿದ್ದಾರೆ. ಇವರಿಂದ ನಿಷ್ಪಕ್ಷಪಾತ ತನಿಖೆಗೆ ಅವಕಾಶ ಆಗುವುದಿಲ್ಲ. ಶಂಕಿತ ಬಂಧಿತರು ಉಗ್ರರೇ ಆಗಿದ್ದಲ್ಲಿ, ಅವರಿಗೆ ಕಠಿಣ ಶಿಕ್ಷೆಯಾಗಲಿ. ಅದೇ ರೀತಿ ಪೊಲೀಸರು ತಪ್ಪಿತಸ್ಥರಾಗಿದ್ದರೆ, ಅವರಿಗೂ ಶಿಕ್ಷೆಯಾಗಬೇಕಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಮಾಧ್ಯಮಗಳಲ್ಲಿ ಇರುವವರು ವರದಿ ಮಾಡಬೇಕಾಗುತ್ತದೆ. ಹಾಗೆ ಮಾಡದಿದ್ದರೆ, ಅದು ಸುದ್ದಿಯೆನ್ನಿಸಿಕೊಳ್ಳುವುದಿಲ್ಲ. ಮುತಾಲಿಕ್ ಮತ್ತು ಜಗದೀಶ ಕಾರಂತರ ಭಾಷಣದ ನಕಲು ಅನ್ನಿಸಿಕೊಳ್ಳುತ್ತದೆ. ■



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.



ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ 2 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ,
ವಿಶ್ವನೀಡಂ ಅಂಚೆ, ಬೆಂಗಳೂರು-560091
☎:080-23480278, 9448048306

ಸಂವಾದ

ವಿಶೇಷಾಂಕ - 2013

ಸಹೃದಯರೆ,

ನಿಮ್ಮೆಲ್ಲರ ಪ್ರೀತಿ-ಅಭಿಮಾನ ಮತ್ತು ಸಹಕಾರದಿಂದಾಗಿ ನಿರಂತರವಾಗಿ ತಮ್ಮ ಜತೆ ಸಂವಾದಿಸುತ್ತಿರುವ 'ಸಂವಾದ' ಮಾಸ ಪತ್ರಿಕೆ ಇದೀಗ ಹನ್ನೊಂದನೆ ವರ್ಷಕ್ಕೆ ದಾಪುಗಾಲಿಟ್ಟಿದೆ. ಪ್ರತಿ ವರ್ಷದಂತೆ ಈ ವರ್ಷವೂ (2013ರ ಜನವರಿ ತಿಂಗಳಿನಲ್ಲಿ) 'ಸಂವಾದ ವಿಶೇಷಾಂಕ'ವೊಂದನ್ನು ಹೊರತರಲು ತೀರ್ಮಾನಿಸಿರುತ್ತೇವೆ.





ಬದಲಾಗುತ್ತಿರುವ ಸಾಮಾಜಿಕ ಮೌಲ್ಯಗಳು, ಮರೆಯಾಗುತ್ತಿರುವ ಜೀವನಕ್ರಮಗಳು, ತಲ್ಲಣಗೊಳ್ಳುತ್ತಿರುವ ಸಿದ್ಧಾಂತಗಳು, ಖಾಸಗೀಕರಣಗೊಂಡು ವ್ಯಕ್ತಿಸ್ವಾಮ್ಯಕ್ಕೆ ಒಳಪಡುತ್ತಿರುವ ಉದ್ಯಮಗಳು, ಅನುಕೂಲ ಸಿಂಧುಗಳಾಗುತ್ತಿರುವ ಜನರ ಮನಸ್ಸಿನಲ್ಲಿ ನಡೆಯುತ್ತಿರುವ ಚೌಕಾಸಿಗಳು, ಬಿಕ್ಕಟ್ಟಿಗೆ ಒಳಗಾಗುತ್ತಿರುವ ಬಹುರೂಪಿ ಸಂಸ್ಕೃತಿಯ ಜತೆಗೆ ಈ ನಾಡಿನ ಕೃಷಿ ಕಾರ್ಮಿಕರು, ವಿದ್ಯಾರ್ಥಿ ಯುವ ಜನರು, ಮಹಿಳೆಯರು, ಸಂಘ-ಸಂಸ್ಥೆಗಳು ಹಾಗೂ ಉದ್ಯೋಗಸ್ಥರು ಎದುರಿಸುತ್ತಿರುವ ಹೊಸ ಸವಾಲುಗಳನ್ನು ಕುರಿತ ಲೇಖನಗಳನ್ನು 'ಸಂವಾದ ವಿಶೇಷಾಂಕ'ದಲ್ಲಿ ಪ್ರಕಟಿಸಲು ಯೋಜಿಸಲಾಗಿದೆ.



ಇಂಥ ಗಂಭೀರ ವಿಚಾರಗಳನ್ನೊಳಗೊಂಡ ವಿಶ್ಲೇಷಣಾತ್ಮಕ ಲೇಖನಗಳಲ್ಲದೆ ಕಥೆ, ಕವನ, ವಿಡಂಬನೆ, ವ್ಯಕ್ತಿ ಚಿತ್ರ, ಛಾಯಾಚಿತ್ರಗಳ ನುಡಿಬರಹ ಮುಂತಾದ ಲೇಖನಗಳನ್ನು ಬರೆದು ಕಳುಹಿಸಿಕೊಡುವುದರ ಮೂಲಕ 'ಸಂವಾದದ ವಿಶೇಷಾಂಕ' ಸುಂದರವಾಗಿ ಮೂಡಿಬರಲು ಸಹಕರಿಸಬೇಕೆಂದು ಕೋರುತ್ತೇವೆ.

ನಿಮ್ಮ ಲೇಖನಗಳು ನಮಗೆ ತಲುಪಲು ಕೊನೆಯ
ದಿನಾಂಕ: 30-11-2012

ಲೇಖನಗಳನ್ನು ಇ-ಮೈಲ್ ಮೂಲಕ ಕಳುಹಿಸುವವರು 'ನುಡಿ' ಅಥವಾ 'ಬರಹ' ತಂತ್ರಾಂಶದಲ್ಲಿ ಟೈಪ್ ಮಾಡಿಸಿ **Page Maker** ಅಥವಾ **Word File**ನಲ್ಲಿ ಮಾತ್ರ ಇ-ಮೈಲ್ ಮಾಡಬೇಕು ಹಾಗೂ ಲೇಖನದೊಂದಿಗೇ ತಮ್ಮ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿ ಕಳುಹಿಸಬೇಕು.



e-mail: samvaada@hotmail.com
honnapura@yahoo.co.in
ವಿಳಾಸ: ಸಂಪಾದಕರು, ಸಂವಾದ ಮಾಸ ಪತ್ರಿಕೆ,
ಸ್ಫೂರ್ತಿಧಾಮ, ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ, ಬೆಂಗಳೂರು-560091.
✆: 9448048306, 080 - 23480278

* * * * *



ಮತ್ತೆ ಮತ್ತೆ ಗಾಂಧಿ...

ಪ್ರೊ॥ ವಿ. ಎಸ್ ಶ್ರೀಧರ

ಕಳೆದ ಕೆಲವು ವರ್ಷಗಳಲ್ಲಿ ಅದರಲ್ಲೂ 'ಹಿಂದ್ ಸ್ವರಾಜ್' ಪ್ರಕಟಣೆಯ ನೂರನೇ ವರ್ಷದ ಸಂದರ್ಭದಲ್ಲಿ ಗಾಂಧಿ ತತ್ವ ಮತ್ತು ವಿಚಾರಗಳ ಮರು ಓದುವಿಕೆ ಮುನ್ನೆಲೆಗೆ ಬಂದಿದೆ. ಒಂದು ಕಡೆ ಗಾಂಧಿವಾದ ಇವತ್ತಿಗೆ ಅಪ್ರಸ್ತುತವಾಗಿಬಿಟ್ಟಿದೆ ಎನ್ನುವ ಧೋರಣೆ ಬಲವಾಗಿ ಬೆಳೆದಿರುವಾಗಲೇ, ಮತ್ತೆ ಗಾಂಧಿ ಚಿಂತನೆ ಕುರಿತ ಈ ಹೊಸ ಆಸಕ್ತಿಗೆ ಕಾರಣಗಳೇನು ಎನ್ನುವುದು ಕುತೂಹಲದ ವಿಷಯ. 'ಗಾಂಧಿ ಪುನರುಜ್ಜೀವನ'ದ ಈ ಕಥನ ಗಾಂಧಿ ಚಿಂತನೆಗಳನ್ನು ಹೊಸದಾಗಿ ಅರಿಯುವ ಪ್ರಯತ್ನವಾದರೂ, ಇದು ನಮ್ಮ ಸಮಕಾಲೀನ ತಲ್ಲಣ ಮತ್ತು ಸವಾಲುಗಳನ್ನು ಇನ್ನೊಮ್ಮೆ ಶೋಧಿಸುವ ಪ್ರಕ್ರಿಯೆಯೂ ಹೌದು.

'ಹಿಂದ್ ಸ್ವರಾಜ್' ಪುಸ್ತಕದ ನೂರನೇ ವರ್ಧಂತಿ (2009) ಈ ಮರುಚಿಂತನೆಗೆ ಸೂಕ್ತ ಹಿನ್ನೆಲೆ ಒದಗಿಸಿದೆಯಾದರೂ, ಅದೊಂದೇ ಈ ಹೊಸ ಆಸಕ್ತಿಗೆ ಕಾರಣವಿರಲಾರದು. ಸನಾತನ ಧರ್ಮ, ವರ್ಣ ವ್ಯವಸ್ಥೆ, ಗೋರಕ್ಷಣೆ, ಬಂಡವಾಳಶಾಹಿ ಇತ್ಯಾದಿಗಳನ್ನು ಕುರಿತಂತೆ ಗಾಂಧೀಜಿಗೆ ಇದ್ದ ಒಲವು; ಹಾಗೆಯೇ ಆಧುನಿಕ ಯಂತ್ರನಾಗರಿಕತೆ, ಪಶ್ಚಿಮದ ಪಾರ್ಲಿಮೆಂಟ್ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಅವರ ನಿರಾಕರಣೆಯ ಧೋರಣೆಗಳು, ಇವೆರಡೂ ವಿವಿಧ ನೆಲೆಗಳಿಂದ ಟೀಕೆಗೆ ಗುರಿಯಾಗಿವೆ. ಈ ವಿಮರ್ಶೆಯನ್ನು ಸುಲಭವಾಗಿ ಅಲ್ಲಗಳೆಯುವಂತಿಲ್ಲ ಎನ್ನುವುದೂ ನಿಜ. ಯುವಜನತೆಯ ಮನಸ್ಸಿನಲ್ಲಂತೂ 'ಗಾಂಧಿ' ಎನ್ನುವ ಶಬ್ದ 'ಪಾಪದವ', 'ನಿಷ್ಪ್ರಯೋಜಕ' ಎಂಬ ಅರ್ಥ ಪಡೆದುಕೊಂಡಿದೆ. ಯುವಜನರಲ್ಲಿ ಬೇರೂರಿದ್ದ ಈ ನೆಗಟಿವ್ ಇಮೇಜನ್ನು ಸ್ವಲ್ಪ ಮಟ್ಟಿಗಾದರೂ ಹೋಗಲಾಡಿಸಿ 'ಗಾಂಧಿಗಿರಿ' ಎಂಬ ಹೊಸ ಸಂಕೇತವನ್ನು ಹುಟ್ಟುಹಾಕಿ, ಜನಪ್ರಿಯಗೊಳಿಸಿದ ಶ್ರೇಯಸ್ಸನ್ನು ಮುನ್ನಾಭಾಯಿಗೆ ಕೊಡಲೇಬೇಕು.

ಸಾಮಾನ್ಯವಾಗಿ ಇಂದು ಗಾಂಧಿ ತತ್ವಗಳನ್ನು ಗಂಭೀರವಾಗಿ ಪರಿಗಣಿಸುತ್ತಾ, ಆ ವ್ಯಕಿ–ವಿಚಾರಗಳ ಪರ ಇರುವವರೆಲ್ಲರೂ, ಹಳೆಯ ಗಾಂಧಿವಾದಿಗಳೇ. ಅವರ ಪ್ರತಿ ಮಾತು–ಕೃತಿ–ಆಚರಣೆಯಲ್ಲೂ ವಿಶೇಷ ಅರ್ಥಕಾಣುತ್ತಾ, ಗಾಂಧಿ ಪ್ರತಿಪಾದಿಸಿದ ಮೌಲ್ಯಗಳೆಲ್ಲವೂ ಇಂದು ನಶಿಸಿಹೋಗುತ್ತಿವೆ ಎಂಬ ವಿಷಾದದಲ್ಲಿ, ಆದರೆ ಅವು ಎಂದಿಗೂ ಪ್ರಸ್ತುತವೇ ಎನ್ನುವ ಆಶಾವಾದದಲ್ಲಿ ನಂಬಿಕೆ ಇಟ್ಟುಕೊಂಡಿರುವ ಒಂದು ತಲೆಮಾರು ಇಂದಿಗೂ ಇದೆ. ಗಾಂಧೀಜಿಯವರನ್ನು ಪ್ರಾಮಾಣಿಕವಾಗಿಯೇ ವೈಭವೀಕರಿಸುವ ಮತ್ತು ಅವರ ಮೌಲ್ಯಗಳನ್ನು ತಮ್ಮ ನಡೆ–ನುಡಿಗಳಲ್ಲಿ ಸಾಧ್ಯವಾದಷ್ಟೂ ಅಳವಡಿಸಿಕೊಳ್ಳಲು ಪ್ರಯತ್ತಿಸುತ್ತಿರುವ ಹಿರಿಯ ಹಾಗೂ ಗೌರವಾನ್ವಿತ ವರ್ಗ ಇದು. ಆದರೆ ಇವರಲ್ಲದೆ ಈ ಹೊತ್ತಿನಲ್ಲಿ ಗಾಂಧಿ ವಿಚಾರಗಳ ಬಗ್ಗೆ ಆಸಕ್ತಿಯನ್ನು ಪ್ರಕಟಿಸುತ್ತಿರುವ ಇನ್ನೊಂದು ವೈಚಾರಿಕ ವರ್ಗವೂ ಇದೆ. ತಮ್ಮ ವಿಚಾರ, ಬದುಕಿನಲ್ಲಿ ಆಧುನಿಕರಾಗಿರುವ, ಒಂದು ಕಾಲಕ್ಕೆ ಬಹುಶಃ ಮಾರ್ಕ್ಸ್‌ವಾದಿಗಳೂ ಆಗಿದ್ದಿರಬಹುದಾದ ಈ ವರ್ಗ, ಗಾಂಧಿ ತತ್ವ ಮತ್ತು ವಿಚಾರಗಳನ್ನು ಇವತ್ತಿನ ಸಂದರ್ಭಕ್ಕೆ ಅಳವಡಿಸಿಕೊಳ್ಳುವ ಸಾಧ್ಯತೆಗಳನ್ನು ಕುರಿತಂತೆ ಚಿಂತನೆ ನಡೆಸಿರುವ ಹೊಸ ಯುಗಧರ್ಮವೊಂದನ್ನು ಪ್ರತಿನಿಧಿಸುತ್ತದೆ. ಇವರು ಹಳೆಯ ಗಾಂಧಿವಾದಿಗಳ ಹಾಗೆ ಗಾಂಧಿ

ಗಾಂಧಿ ಚಿಂತನೆಯಲ್ಲಿ ಬಂಡವಾಳಶಾಹಿಯ ಚಾರಿತ್ರಿಕ ಬೆಳವಣಿಗೆ ಕುರಿತ ವಿವರಣೆಯಾಗಲೀ, ಅದನ್ನು ಎದುರಿಸಲು ಬೇಕಾದ ವಿಶ್ಲೇಷಣೆಗಳಾಗಲಿ ಇದ್ದಹಾಗೆ ಇಲ್ಲ. ಆದರೂ ಅವರ ಎಲ್ಲ ತತ್ವ ಮತ್ತು ವಿಚಾರಗಳು ಮೇಲೆ ಸೂಚಿಸಿರುವ ಬೆಳವಣಿಗೆಗಳ ವಿರುದ್ಧವಾಗಿಯೇ ಇವೆ. ಹಾಗಾದರೆ, ಬಂಡವಾಳಶಾಹಿ ಬೆಳವಣಿಗೆಯ ವಿಮರ್ಶೆಯನ್ನು ಭೌತಿಕವಾದವಲ್ಲದೆ, ಗಾಂಧಿಮಾರ್ಗದ ನೆಲೆಯಲ್ಲೂ ಮಾಡಬಹುದೇ? ಹೀಗೆ ವಿಭಿನ್ನ ತಾತ್ವಿಕ ನೆಲೆಗಳಿಂದ ಹೊರಡುವ ವಿಮರ್ಶೆ ಒಂದೇ ಗುರಿಯನ್ನು ಅಂದರೆ ಶೋಷಣೆ ಇಲ್ಲದ ಸಮಸಮಾಜವನ್ನು ಕಟ್ಟುವ ಗುರಿಯನ್ನು ಮುಟ್ಟಬಹುದೇ? ಅಥವಾ ವಿಭಿನ್ನ ತಾತ್ವಿಕ ನೆಲೆಗಳಿಂದ ಹೊರಡುವ ಪ್ರತಿರೊಧಗಳು ವಿಭಿನ್ನ ಸಮಾಜ ಮಾದರಿಗಳನ್ನು ತಮ್ಮ ಗುರಿಯನ್ನಾಗಿರಿಸಿ ಕೊಂಡಿರುತ್ತವೆಯೇ? ಇತ್ಯಾದಿ ಪ್ರಶ್ನೆಗಳನ್ನು ನಾವು ಎದುರಿಸಬೇಕಾಗುತ್ತದೆ.



ಭಜನೆ ಮಾಡುವವರಲ್ಲ; ಹಾಗೆಯೇ ಅನೇಕ ಪ್ರಗತಿಪರರ ಹಾಗೆ, ಗಾಂಧಿ ಭಂಜಕರೂ ಅಲ್ಲ. ಇವೆರಡು ಅತಿರೇಕಗಳ ನಡುವಿನ ಮಧ್ಯಮ ಮಾರ್ಗಿಗಳಾದ ಇವರ ಕೆಲವು ವಿಚಾರಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವುದು, ಮತ್ತು ಆ ಮೂಲಕ ಹೊಸ ಪ್ರಶ್ನೆಗಳನ್ನು ಕೇಳುವುದು ಈ ಲೇಖನದ ಉದ್ದೇಶ.

ಮೊದಲಿಗೆ, ಗಾಂಧಿ ವಿಚಾರಗಳನ್ನು ಕುರಿತಂತೆ ಪ್ರಚಲಿತವಿರುವ ಕೆಲವು ವೈಚಾರಿಕ ಪ್ರತಿರೋಧಗಳನ್ನು ಗಮನಿಸಬಹುದು. ಮಾರ್ಕ್ಸ್‌ವಾದಿಗಳಿಗೆ ಗಾಂಧಿ ಕುರಿತಂತೆ ಇರುವ ಭಿನ್ನಾಭಿಪ್ರಾಯಗಳು ಪರಿಚಿತವೇ. ಅದರಲ್ಲಿ ಪ್ರಮುಖವಾಗಿರುವುದು: ಬಂಡವಾಳಶಾಹಿ ಕುರಿತಂತೆ ಗಾಂಧೀಜಿಗೆ ಇದ್ದ ಮೃದು ಧೋರಣೆ ಅವರ 'ಟ್ರಸ್ಟಿಶಿಪ್' ಆರ್ಥಿಕತೆಯ ಅವಾಸ್ತವಿಕ ವಾದ, ಅಚಾರಿತ್ರಿಕ ಎನ್ನಿಸುವ ಅವರ ವಿಚಾರ ಸರಣಿ, ಔದ್ಯೋಗೀಕರಣದ ಬಗ್ಗೆ ಅವರಿಗಿದ್ದ ಅಪನಂಬಿಕೆ ಇತ್ಯಾದಿ. ಹಾಗೆಯೇ, ಸನಾತನ ಧರ್ಮದ ಬಗೆಗಿನ ಒಲವು, ಜಾತಿ ಹಾಗು ವರ್ಣ ವ್ಯವಸ್ಥೆ ಕುರಿತ ಸಮರ್ಥನೆಯಿಂದಾಗಿ, ಗಾಂಧಿ ವಿಚಾರಗಳ ಬಗ್ಗೆ ದಲಿತರಿಗೆ ಇರುವ ಅಪನಂಬಿಕೆ, ವಿಮರ್ಶೆಯನ್ನು ಸಲೀಸಾಗಿ ತಳ್ಳಿ ಹಾಕುವಂತಿಲ್ಲ. ಇವೆರಡು ಗುಂಪಿಗೆ ಸೇರದ ಆದರೆ, ಭಾರತದ ಔದ್ಯೋಗಿಕ ಪ್ರಗತಿಯಲ್ಲಿ ನಂಬಿಕೆ ಇರುವ ಆಧುನಿಕ ಉದಾರವಾದಿ ಜನರಿಗಂತೂ ಗಾಂಧೀಜಿಯವರ ಸಾಂಪ್ರದಾಯಿಕ ಧೋರಣೆಯ ಬಗ್ಗೆ, ಅವರ ಅಭಿವೃದ್ಧಿ ವಿರೋಧಿ ನಿಲುವಿನ ಬಗ್ಗೆ ಎಳ್ಳಷ್ಟೂ ಸಹಮತ ಇಲ್ಲ. ಆದರೆ, ಇಷ್ಟೆಲ್ಲಾ ವಿಮರ್ಶೆಗಳ ನಡುವೆ ಕೂಡ ಗಾಂಧೀಜಿ ಇಂದು ಮತ್ತೆ ಮತ್ತೆ ನೆನಪಿಗೆ ಬರಲು ನಮ್ಮ ಸಮಕಾಲೀನ ಬದುಕು ಎದುರಿಸುತ್ತಿರುವ ಅನೇಕ ತಲ್ಲಣಗಳು ಕಾರಣವಾಗಿವೆ. ಅವುಗಳನ್ನು ಬಹುಶಃ ಮೂರು ನೆಲೆಗಳಲ್ಲಿ ಗುರುತಿಸಬಹುದು:

ಒಂದು, ಇಂದು ಎಲ್ಲೆಡೆ ಹೆಚ್ಚುತ್ತಿರುವ ಕೋಮುಹಿಂಸೆ, ಅಸಹನೆ ಮತ್ತು ದ್ವೇಷ; ಹಿಂಸಾತ್ಮಕ ಹೋರಾಟಗಳ ವಿಫಲತೆ; ಸಮಾಜದ ಎಲ್ಲ ಸಮುದಾಯಗಳ ನಡುವೆ ಪ್ರೀತಿ–ಸಹಿಷ್ಣುತೆ ಕಡಿಮೆಯಾಗುತ್ತಿರುವ ಸನ್ನಿವೇಶ.

ಎರಡು, ಪರಿಸರದ ಸಮಸ್ಯೆ; ಬೃಹತ್ ಯೋಜನೆ/ಗಣಿಗಾರಿಕೆ, ಕೈಗಾರಿಕೆಗಳಿಂದ ಹೆಚ್ಚುತ್ತಿರುವ ಮಾಲಿನ್ಯ, ಸಮುದಾಯಗಳ ಎತ್ತಂಗಡಿ, ಬಡವರ ಜೀವನವನ್ನು ಇನ್ನಷ್ಟು ಹೈರಾಣಾಗಿಸುತ್ತಿರುವ ಅಭಿವೃದ್ಧಿ ಮಾರ್ಗ, ಇಂದು ಎಲ್ಲೆಡೆ ಹರಡುತ್ತಿರುವ ವಿನಾಶಕಾರಿ ಜೀವನ ಶೈಲಿ ಇತ್ಯಾದಿ ಬೆಳವಣಿಗೆಗಳು.

ಎಲ್ಲಕ್ಕಿಂತ ಮಿಗಿಲಾಗಿ, ಇಂದು ಭಾರತ ಒಪ್ಪಿಕೊಂಡಿರುವ ಮುಕ್ತ ಮಾರುಕಟ್ಟೆ, ಖಾಸಗೀಕರಣಗಳಿಗೆ ಕಾರಣವಾಗಿರುವ ಜಾಗತೀಕರಣ; ಅದರಿಂದ ಭಾರತದ ಸ್ವಾಯತ್ತತೆಗೆ ಮತ್ತು ಪ್ರಜಾಪ್ರಭುತ್ವಕ್ಕೆ ಒದಗಿರುವ ಧಕ್ಕೆ; ಪಾಶ್ಚಿಮಾತ್ಯ ಮಾದರಿಯ ಅಭಿವೃದ್ಧಿ, ಸಂಸ್ಕೃತಿ, ಜೀವನ ಶೈಲಿಯೇ ಅಂತಿಮ ಗುರಿ ಎಂಬಂತೆ ಬದಲಾಗುತ್ತಿರುವ ನಮ್ಮ ಸಮಾಜದ ಮೌಲ್ಯಗಳು.

ಗಾಂಧೀಜಿ ಮೇಲಿನ ಮೂರೂ ವಿದ್ಯಮಾನಗಳನ್ನು ವಿರೋಧಿಸುತ್ತಿದ್ದರೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಉದಾಹರಣೆಗೆ, ನರ್ಮದಾ ಅಣೆಕಟ್ಟಿನಿಂದ ಉಂಟಾಗಿರುವ ಹಿನ್ನೀರಿನಲ್ಲಿ ಮೂರು ವಾರಗಳಿಂದ ನಿಂತು 'ಜಲ ಸಮರ್ಪಣಾ' ಪ್ರತಿಭಟನೆ ಮಾಡುತ್ತಿರುವವರ ಜತೆ, ಕೂಡುಂಕುಳಂ ಅಣುಸ್ಥಾವರ ಸ್ಥಾಪನೆಯ ವಿರುದ್ಧ ಹೋರಾಡುತ್ತಿರುವವರ ಜತೆ, ಕಾಶ್ಮೀರ ಮತ್ತು ಈಶಾನ್ಯ ರಾಜ್ಯಗಳ ಜನತೆಯ ಸ್ವಯಂ ನಿರ್ಧಾರದ ಹಕ್ಕುಗಳ ಪರವಾಗಿ, ಅಷ್ಟೇ ಏಕೆ, ಬಹುಶಃ ಹೋರಾಟದ ಮಾರ್ಗದ ಬಗ್ಗೆ ತಮಗೆ ಇರಬಹುದಾದ ಎಲ್ಲ ಭಿನ್ನಾಭಿಪ್ರಾಯಗಳ ನಡುವೆಯೂ, ನಕ್ಸಲರು ಹೋರಾಡುತ್ತಿರುವ ಆದಿವಾಸಿಗಳ ಪರವಾಗಿ ಕೂಡ ಗಾಂಧೀಜಿ ತಮ್ಮ ಧ್ವನಿ ಕೂಡಿಸುತ್ತಿದ್ದರು ಎನ್ನಿಸುತ್ತದೆ. ಹಾಗೆಯೇ ಜಾಗತೀಕರಣದ ವಿರುದ್ಧ, ಎಸ್.ಇ.ಝಡ್, ಬಿ.ಟಿ ಬದನೆ, ರೈತರ ಆತ್ಮಹತ್ಯೆಗೆ ಕಾರಣವಾಗಿರುವ ಸರ್ಕಾರಿ ಪಾಲಿಸಿಗಳ ವಿರುದ್ಧವೂ ಗಾಂಧಿ ನಿಲ್ಲುತ್ತಿದ್ದುದು ಖಂಡಿತ.

ಮೇಲಿನ ಈ ಸನ್ನಿವೇಶ ನಮಗೆ ಮತ್ತೊಮ್ಮೆ ಗಾಂಧೀಜಿಯನ್ನು ನೆನಪಿಸಿರಬಹುದಾದರೂ, ಇವೆಲ್ಲ ವಿದ್ಯಮಾನಗಳನ್ನು ಎದುರಿಸಲು ಗಾಂಧಿಮಾರ್ಗವೇ ಆಗಬೇಕು ಎಂದೇನಿಲ್ಲ. ಮೇಲ್ನೋಟಕ್ಕೆ ಇವೆಲ್ಲವೂ ಬಿಡಿ, ಬಿಡಿಯಾದ ಸಂಗತಿಗಳ ಹಾಗೇ ಕಂಡರೂ ಆಳದಲ್ಲಿ ಇವುಗಳ ಹಿಂದೆ ಒಂದು ಅಧಿಕಾರ ಸೂತ್ರವಿದೆ. ಈ ಅಧಿಕಾರ ಸೂತ್ರ ಆಧುನಿಕ ಜಾಗತಿಕ ಬಂಡವಾಳಶಾಹಿಯ ನಿಯಂತ್ರಣದಲ್ಲಿದೆ, ಮತ್ತು ಬಂಡವಾಳಶಾಹಿ ಬೆಳವಣಿಗೆಗೆ ಒಂದು ಚಾರಿತ್ರಿಕತೆ ಇದೆ. ಸುಮಾರು 500 ವರ್ಷಗಳಿಂದ ಅಸ್ತಿತ್ವದಲ್ಲಿರುವ ಆಧುನಿಕ ಬಂಡವಾಳಶಾಹಿಯ (ಮೊದಲು ವ್ಯಾಪಾರಿ, ನಂತರ ಔದ್ಯೋಗಿಕ ಮತ್ತು ಈಗ ಹಣಕಾಸು ಬಂಡವಾಳ) ಬೆಳವಣಿಗೆಗೆ ಅಧಿಕಾರ ಮತ್ತು ಶೋಷಣೆಗಳ ತರ್ಕದ ಹಿನ್ನೆಲೆಯಿದೆ. ಹೀಗಾಗಿ, ಗುಜರಾತ್‌ನಲ್ಲಿ ಆಗುತ್ತಿರುವಂತೆ, ಕೋಮುವಾದ ರಾಜಕಾರಣ ಮತ್ತು ಘಾತಕಕಾರಿಯಾದ ಬಂಡವಾಳಶಾಹಿ ಅಭಿವೃದ್ಧಿ ಯೋಜನೆಗಳು ಜತೆ ಜತೆಯಲ್ಲೇ ಬೆಳೆಯಬಹುದು ಮತ್ತು ಪರಸ್ಪರ ಪೂರಕವಾಗಿಯೂ ಕೆಲಸಮಾಡಬಹುದು. ಅಣು ಸ್ಥಾವರ, ಬೃಹತ್ ಅಣೆಕಟ್ಟು, ವಿಶೇಷ ಆರ್ಥಿಕ ವಲಯ, ಕೊನೆಯಿಲ್ಲದ ನಗರೀಕರಣ ಇತ್ಯಾದಿಗಳ ಬಗ್ಗೆ ಇತರ ರಾಜಕೀಯ ಪಕ್ಷಗಳ ನಿಲುವಿಗೂ, ರಾಷ್ಟ್ರೀಯತೆಯ ಹೆಸರಿನಲ್ಲಿ ಕೋಮುವಾದವನ್ನು ಬೆಳೆಸುತ್ತಿರುವ ಪಕ್ಷಕ್ಕೂ ಯಾವ ವ್ಯತ್ಯಾಸಗಳೂ ಇಲ್ಲ. ಯಾಕೆಂದರೆ ಅವೆಲ್ಲಾ ಪಕ್ಷಗಳ ಅಜೆಂಡಾಗಳನ್ನು ನಿರ್ದೇಶಿಸುತ್ತಿರುವುದು ಅದೇ ಬಂಡವಾಳಶಾಹಿ ಶಕ್ತಿಯೇ.

ಗಾಂಧಿ ಚಿಂತನೆಯಲ್ಲಿ ಬಂಡವಾಳಶಾಹಿಯ ಚಾರಿತ್ರಿಕ ಬೆಳವಣಿಗೆ ಕುರಿತ ವಿವರಣೆಯಾಗಲೀ, ಅದನ್ನು ಎದುರಿಸಲು ಬೇಕಾದ ವಿಶ್ಲೇಷಣೆಗಳಾಗಲಿ ಇದ್ದಹಾಗೆ ಇಲ್ಲ. ಆದರೂ ಅವರ ಎಲ್ಲ ತತ್ವ ಮತ್ತು ವಿಚಾರಗಳು ಮೇಲೆ ಸೂಚಿಸಿರುವ ಬೆಳವಣಿಗೆಗಳ ವಿರುದ್ಧವಾಗಿಯೇ ಇವೆ. ಹಾಗಾದರೆ, ಬಂಡವಾಳಶಾಹಿ ಬೆಳವಣಿಗೆಯ ವಿಮರ್ಶೆಯನ್ನು ಭೌತಿಕವಾದವಲ್ಲದೆ, ಗಾಂಧಿಮಾರ್ಗದ ನೆಲೆಯಲ್ಲೂ ಮಾಡಬಹುದೇ? ಹೀಗೆ ವಿಭಿನ್ನ ತಾತ್ವಿಕ ನೆಲೆಗಳಿಂದ ಹೊರಡುವ ವಿಮರ್ಶೆ ಒಂದೇ ಗುರಿಯನ್ನು ಅಂದರೆ ಶೋಷಣೆ ಇಲ್ಲದ ಸಮಸಮಾಜವನ್ನು ಕಟ್ಟುವ ಗುರಿಯನ್ನು ಮುಟ್ಟಬಹುದೇ? ಅಥವಾ ವಿಭಿನ್ನ ತಾತ್ವಿಕ ನೆಲೆಗಳಿಂದ ಹೊರಡುವ ಪ್ರತಿರೊಧಗಳು ವಿಭಿನ್ನ ಸಮಾಜ ಮಾದರಿಗಳನ್ನು ತಮ್ಮ ಗುರಿಯನ್ನಾಗಿರಿಸಿಕೊಂಡಿರುತ್ತವೆಯೇ? ಇತ್ಯಾದಿ ಪ್ರಶ್ನೆಗಳನ್ನು ನಾವು ಎದುರಿಸಬೇಕಾಗುತ್ತದೆ.

* * *

ವಸಾಹತುಶಾಹಿ ಹಿಡಿತದಿಂದ ಬಿಡುಗಡೆ ಪಡೆಯುವ ಹೋರಾಟ ನಮ್ಮ ರಾಷ್ಟ್ರೀಯತೆಯನ್ನು

ಗಾಂಧೀಜಿಯವರ ಪರ್ಯಾಯ ನಾಗರೀಕತೆಯಲ್ಲಿ ಈ ದ್ವಂದಕ್ಕೆ ಆಸ್ಪದವಿಲ್ಲ. ಅಲ್ಲಿ ಸಾಮಾಜಿಕ ಸುಧಾರಣೆ ಕೇವಲ 'ಹೊರಗಿನ' ಬದಲಾವಣೆಯನ್ನು ಸೂಚಿಸುವುದಿಲ್ಲ; ಅದು ಸ್ವ-ಶುದ್ಧೀಕರಣದ ಕ್ರಿಯೆಯೂ ಹೌದು. 'ಎಲ್ಲ ಸುಧಾರಣೆಗಳ ಮೂಲ, ಅಲ್ಪಸಂಖ್ಯಾತರು ಬಹುಸಂಖ್ಯಾತ ಬಲಿಷ್ಠರ ವಿರುದ್ಧ ನಡೆಸುವ ಹೋರಾಟದಲ್ಲಿರುತ್ತದೆ' ಎನ್ನುವ ಅವರ ಮಾತನ್ನು ಗಮನಿಸಬೇಕು. ಆದ್ದರಿಂದಲೇ ಅವರು, ಸಾಮಾಜಿಕ ಬದಲಾವಣೆಗಳು ಕೇವಲ ಕಾನೂನುಗಳ ಮೂಲಕ, ಪ್ರಭುತ್ವದ ಹಸ್ತಕ್ಷೇಪದಿಂದ ಆಗುವಂಥದ್ದಲ್ಲ ಎಂದು ವಾದಿಸುತ್ತಿದ್ದರು.



ಎರಡು ವಿರುದ್ಧ ಪಾತಳಿಗಳಲ್ಲಿ ನಿಲ್ಲಿಸಿದ್ದು ಈಗ ಇತಿಹಾಸ. ಒಂದು ಆಧುನಿಕತೆಯತ್ತ ಮುಖ ಮಾಡಿದ್ದರೆ, ಇನ್ನೊಂದು ಸಂಪ್ರದಾಯದತ್ತ ನಮ್ಮನ್ನು ಕೊಂಡೊಯ್ಯಿತು. ಒಂದು ಅಂಬೇಡ್ಕರರ ಹಾದಿಯಾದರೆ, ಇನ್ನೊಂದು ಗಾಂಧಿ ಮಾರ್ಗ. ಹೀಗೆ ಇಬ್ಬರು ಮಹಾನ್ ನಾಯಕರ ನಿಲುವುಗಳನ್ನು ಒಂದಕ್ಕೊಂದು ಮುಖಾಮುಖಿಯಾಗಿ ನಿಲ್ಲಿಸುವುದು ತಾತ್ವಿಕವಾಗಿ ಅಷ್ಟೇನು ಪ್ರಯೋಜನಕಾರಿಯಲ್ಲವಾದರೂ, ಅದು ವಸಾಹತುಶಾಹಿಯ ಬಿಡುಗಡೆಯ ಸಂದರ್ಭದಲ್ಲಿ ಭಾರತದ ಸಮಾಜ ಎದುರಿಸಬೇಕಾಗಿದ್ದ ಸಂದಿಗ್ಧಗಳನ್ನು ಸಂಕೇತಿಸುವುದಂತೂ ನಿಜ. ಆ ಕಾಲದಲ್ಲಿ ಗಾಂಧೀಜಿಯವರನ್ನು ಎಷ್ಟೇ ಗೌರವಿಸಿದರೂ, ಅವರ ಆಧುನಿಕತೆಯ ವಿಮರ್ಶೆಯನ್ನು ಒಪ್ಪಿಕೊಳ್ಳುವುದು ನೆಹರೂ ಮೊದಲಾದವರಿಗೆ ಕಷ್ಟವಾಗಿತ್ತು. ಇಲ್ಲಿ ಆಧುನಿಕತೆ ಎಂದರೆ ಪಶ್ಚಿಮದ ಎನ್‌ಲೈಟನ್‌ಮೆಂಟ್ ಪ್ರಣೀತ ವೈಚಾರಿಕತೆ. ಹಾಗಾಗಿ ಪಶ್ಚಿಮದ ಅನೇಕ ಶಿಸ್ತು, ಸಂಸ್ಥೆ ಮತ್ತು ಐಡಿಯಾಲಜಿಗಳನ್ನು (ಉದಾ: ಶಿಕ್ಷಣ, ಆರೋಗ್ಯ, ಕಾನೂನು, ಪೀನಲ್ ಕೋಡುಗಳು, ಸೆಕ್ಯುಲರಿಸಂ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಇತ್ಯಾದಿ), ಅವು ವಿಶ್ವಾತ್ಮಕ ಮೌಲ್ಯಗಳೂ ಸಹ ಎಂಬ ನಂಬಿಕೆಯಲ್ಲಿ, ನಾವು ಉಳಿಸಿಕೊಂಡೆವು. ಇಂದಿಗೂ ನಮ್ಮ ಪಾರಂಪರಿಕ ಸಾಮಾಜಿಕ ವ್ಯವಸ್ಥೆಯಲ್ಲಿ ಹಕ್ಕುಗಳೇ ಇಲ್ಲದಿದ್ದ ಸಮುದಾಯಗಳಿಗೆ ಅವು ಆಧಾರಗಳಾಗಿರುವುದೂ ನಿಜ.

ಆದರೆ 70ರ ದಶಕದಿಂದಾಚೆಗೆ, ಎನ್‌ಲೈಟನ್‌ಮೆಂಟ್ ವೈಚಾರಿಕತೆಯ ವಿರುದ್ಧದ ತಾತ್ವಿಕ ಗಾಳಿ ಪಶ್ಚಿಮದಲ್ಲೇ ಬೀಸಲಾರಂಭಿಸಿತು. ಅಲ್ಲಿಯವರೆಗೆ ಸಾಮಾಜಿಕ ಅಭಿವೃದ್ಧಿಗೆ ಅಗತ್ಯವಾದದ್ದು ಎಂದು ನಂಬಿದ್ದ ರಾಷನಾಲಿಟಿಯನ್ನು, ಮತ್ತು ಅದರ ವಿಶ್ವಾತ್ಮಕತೆಯನ್ನು ಪ್ರಶ್ನಿಸಲಾಯಿತು. ವಸಾಹತು ಶಾಹಿಯ ತಾತ್ವಿಕ ಯಜಮಾನತ್ವದಿಂದ ಕಳಚಿಕೊಳ್ಳಲು ಇದರಿಂದ ಹೊಸ ದಾರಿಯೊಂದು ದೊರಕಿದಂತಾಯಿತು. ನಾವು ನಂಬಿ, ಒಪ್ಪಿಕೊಂಡಿದ್ದ ಅನೇಕ 'ಪ್ರಗತಿಪರ' ಧೋರಣೆಗಳು ಆಳದಲ್ಲಿ ನಮ್ಮನ್ನು ಪಶ್ಚಿಮದ ತಾತ್ವಿಕ ದಾಸ್ಯದಲ್ಲೇ ಉಳಿಸಿಬಿಟ್ಟಿರುವ ಬಗ್ಗೆ ಹೊಸ ಚಿಂತನೆ ಶುರುವಾಯಿತು. 90ರ ಬಾಬ್ರಿ ಮಸೀದಿ ವಿವಾದ ಸಂದರ್ಭದಲ್ಲಿ ನಡೆದ 'ಸೆಕ್ಯುಲರಿಸಂ' (ಜಾತ್ಯತೀತ ಎನ್ನುವುದು ಈ ಪದದ ಸರಿಯಾದ ಅನುವಾದವಲ್ಲ ಎನ್ನುವ ಚರ್ಚೆಯ ಹಿನ್ನೆಲೆಯಲ್ಲಿ, ಈ ಪದವನ್ನು ಹಾಗೆಯೇ ಬಳಸಲಾಗಿದೆ) ಕುರಿತ ವಿವಾದ ಇದಕ್ಕೆ ಒಂದು ಉದಾಹರಣೆ. ಪಶ್ಚಿಮದಿಂದ ಎರವಲು ಪಡೆದ ಅನೇಕ ಪರಿಕಲ್ಪನೆಗಳನ್ನು ಹಾಗೆಯೇ ನಮ್ಮ ಸಮಾಜಕ್ಕೂ ಅನ್ವಯಿಸಿಕೊಂಡಿದ್ದರಿಂದ ಆಗಿರುವ ಅನೇಕ ಎಡವಟ್ಟುಗಳನ್ನು ಎತ್ತಿ ತೋರಿಸುವ ಪಾಂಡಿತ್ಯ ಲೋಕವೊಂದು ಉದಯಿಸಿದ್ದು ಹೀಗೆ. ಇದಕ್ಕೆ ಪೂರಕವೆಂಬಂತೆ ಬೃಹತ್ ಅಭಿವೃದ್ಧಿ ಯೋಜನೆಗಳಿಂದ ಆಗುವ ಪರಿಸರ ಹಾನಿ ಕುರಿತ ಚಳವಳಿಗಳು ಪ್ರಾರಂಭವಾದದ್ದು ಇದೇ ಕಾಲ ಘಟ್ಟದಲ್ಲೇ. ಇದರಿಂದ ಅಲ್ಲಿಯವರೆಗೂ, ನೆಹರು ಬಣ್ಣಿಸಿದಂತೆ, 'ಭಾರತದ ಆಧುನಿಕ ದೇವಾಲಯ'ಗಳಾಗಿದ್ದ ದೊಡ್ಡ ಅಣೆಕಟ್ಟುಗಳು ಜನರ ಬದುಕನ್ನು ಮೂರಾಬಟ್ಟೆಯನ್ನಾಗಿಸುವ ಬಲಿಪೀಠಗಳಾಗಿ ಕಾಣತೊಡಗಿದವು. ಹೀಗೆ ಸಾಮಾಜಿಕ ಜೀವನದ ಎಲ್ಲ ಅಗತ್ಯಗಳನ್ನೂ ಪಶ್ಚಿಮದ ಆಧುನಿಕತೆ ಪೂರೈಸುತ್ತದೆ ಎಂಬ ನಂಬಿಕೆ ಸಡಿಲವಾಗುತ್ತಾ ಹೋದ ಹಾಗೆ, ಎಲ್ಲದಕ್ಕೂ ಪರ್ಯಾಯವೊಂದನ್ನು ಹುಡುಕುವುದು ನಿರ್ವಸಾಹತೀಕರಣದ ಪ್ರಕ್ರಿಯೆಗೆ ಅಗತ್ಯ ಎಂಬ ವಾದ ಬಲವಾಗುತ್ತಾ ಹೋಯಿತು. ಇದಕ್ಕೆ ಪೂರಕವಾಗಿ 90ರ ದಶಕದ ನಂತರ ನಮ್ಮ ಸಮಾಜ ಹಿಂದೆಂದೂ ಕಾಣದಷ್ಟು ಬದಲಾವಣೆಗೆ ತೆರೆದುಕೊಂಡಿದ್ದು ಪರ್ಯಾಯದ ಹುಡುಕಾಟಕ್ಕೆ ಮತ್ತಷ್ಟು ಇಂಬು ಕೊಟ್ಟಿತು. ಬದಲಾವಣೆಯ ಈ ವೇಗ ಮತ್ತು ಸ್ವರೂಪ ನಾಗರೀಕತೆಯ ಅಭಿವೃದ್ಧಿ ಕುರಿತಂತೆ ಅನೇಕ ಸ್ವೀಕೃತ ಥಿಯರಿಗಳನ್ನು ಪ್ರಶ್ನೆಮಾಡುವ, ಹೊಸ ಸಿದ್ಧಾಂತಗಳನ್ನು ಅನ್ವೇಷಿಸುವ ಅನಿವಾರ್ಯತೆಯನ್ನು ಉಂಟುಮಾಡಿತು. ಇದರಲ್ಲಿ ಪ್ರಮುಖವಾದುದು 'ಆಧುನಿಕತೆ' ಕುರಿತ ವ್ಯಾಖ್ಯಾನ. ಆಧುನಿಕತೆಯನ್ನು ಸಂಪ್ರದಾಯದ ವಿರುದ್ಧ ಅದರ ಪ್ರತಿಬಿಂಬವೆಂಬಂತೆ ಮುಖಾಮುಖಿಯನ್ನಾಗಿಸಿ, ಸಾಂಪ್ರದಾಯಿಕವಲ್ಲದ್ದೆಲ್ಲವೂ ಅಧುನಿಕ ಎಂಬ ಸಾಮಾನ್ಯ ಗ್ರಹಿಕೆಯನ್ನು ತಿರಸ್ಕರಿಸಿ, ಅದರ ಬದಲಿಗೆ, ಸಂಪ್ರದಾಯ ಮತ್ತು ಆಧುನಿಕತೆಯ ಒಳಗೇ ಇರುವ ಅನೇಕ ವೈರುಧ್ಯಗಳನ್ನು ಗುರುತಿಸುವ, ಆ ಮೂಲಕ ಅವುಗಳ ಒಳಗೇ ಇರುವ ವಿವಿಧ ಸ್ತರಗಳನ್ನು ಶೋಧಿಸುವ ಕೆಲಸ ಪ್ರಾರಂಭವಾಯಿತು. ಹೀಗಾಗಿ ಸಂಪ್ರದಾಯದ ಒಳಗೇ ಇರಬಹುದಾದ ಅನೇಕ ಬಿಡುಗಡೆಯ ಮಾರ್ಗಗಳನ್ನು? ಅಂದರೆ ಪ್ರಜಾಸತ್ತಾತ್ಮಕ ಸಹಜೀವನಕ್ಕೆ ಅಗತ್ಯವಾದ ಮೌಲ್ಯಗಳು, ಸಾಮುದಾಯಿಕ ಬದುಕಿನ ಕ್ರಮ, ನಂಬಿಕೆಗಳು ಇತ್ಯಾದಿ – ಹೊಸದಾಗಿ ಪರಿಶೀಲಿಸುವ ಚಿಂತನೆಗಳು ಚಾಲ್ತಿಗೆ ಬಂದವು. ಇದು ಆಧುನಿಕತೆಯ ಸಾರಾಸಗಟು ತಿರಸ್ಕಾರವೂ ಅಲ್ಲದ, ಹಾಗೆಯೇ ಸಂಪ್ರದಾಯವನ್ನು ಎಲ್ಲ ಅನಿಷ್ಟಗಳಿಗೆ ಮೂಲ ಎಂದು ಸಂಪೂರ್ಣವಾಗಿ ತಳ್ಳಿಯೂಹಾಕದ ಕಠಿಣ ಮಾರ್ಗ. ಹಾಗೆ ನೋಡಿದರೆ ಇದು ಈ ಹೊತ್ತಿನ ತವಕ ತಲ್ಲಣಗಳಿಗೆ ಬಂದ ಪ್ರತಿಕ್ರಿಯೆ ಆದ್ದರಿಂದ ಆಳದಲ್ಲಿ ಇದು ಪರ್ಯಾಯ ಆಧುನಿಕತೆಯ ಹುಡುಕಾಟವೇ ವಿನಃ, ಸಂಪ್ರದಾಯದ ಬಗ್ಗೆ ಇರುವ ಹಳಹಳಿಕೆಯೇನಲ್ಲ. ಆದರೆ ಇದೊಂದು ಕತ್ತಿಯಂಚಿನ ಹಾದಿ. ಸಂಪ್ರದಾಯದ ಹಿಂಬಾಲಕರು ಮತ್ತು ಆಧುನಿಕತೆಯ ವಕ್ತಾರರಿಬ್ಬರೂ ಅನುಮಾನಿಸುವ, ಇಬ್ಬರಿಂದಲೂ ತಿರಸ್ಕಾರಕ್ಕೆ ಒಳಗಾಗುವ ಅತ್ಯಂತ ಕ್ಲಿಷ್ಟವಾದ ನಿಲುವು ಇದು. ಆದರೆ, ಜನರ ಬದುಕಿಗೆ ಒಂದು ಅರ್ಥ, ನೆಮ್ಮದಿಯನ್ನು ತಂದುಕೊಡುವ ಅನೇಕ ಮೌಲ್ಯಗಳು ಮತ್ತು ಆಚರಣೆಗಳು ಆಧುನಿಕ ವೈಚಾರಿಕತೆಯ ಪರಿಧಿಯ ಆಚೆಯೂ ಇರಬಹುದಾದ ಸಾಧ್ಯತೆಯನ್ನು ಈ ಮಾರ್ಗ ಅನ್ವೇಷಿಸುತ್ತದೆ. ಒಂದು ಸಾಹಿತ್ಯ ಕೃತಿ ಇಂಥ ಕ್ಲಿಷ್ಟವಾದ ಹಾದಿಯನ್ನು, ದೇವನೂರರ ಮಂಟೇಸ್ವಾಮಿಯ ಹಾಗೆ, ಸಂಕೇತಗಳ ಮೂಲಕ ಕ್ರಮಿಸಿಬಿಡುತ್ತದೆ; ಆದರೆ ಸಮಾಜ ಶಾಸ್ತ್ರೀಯ ಬರವಣಿಗೆಯಲ್ಲಿ ಈ ಬಗೆಯ ಸಂಕೇತಗಳ ಮೊರೆಹೋಗುವುದು ಕಷ್ಟ. ಗಾಂಧಿಜಿಯವರ ಬರವಣಿಗೆ, ಅದರಲ್ಲೂ ಅವರ 'ಹಿಂದ್ ಸ್ವರಾಜ್' ಕೃತಿ ತನ್ನ ಸಾಂಕೇತಿಕ ಧ್ವನಿಯಿಂದ ಇಂಥ ಕಷ್ಟಕರವಾದ ಮಾರ್ಗವನ್ನು ಅನ್ವೇಷಿಸುತ್ತದೆ ಎನ್ನುವ ಕಾರಣಕ್ಕೆ ಇವತ್ತಿನ ಆಧುನಿಕತೆಯ ವಿಮರ್ಶಕರಿಗೆ ಅದು ತುಂಬಾ ಮುಖ್ಯವಾದ ಪಠ್ಯವಾಗಿಬಿಟ್ಟಿದೆ. ಇದುವೇ ಗಾಂಧೀಜಿ ವಿಚಾರಗಳ ಪುನರ್‌ವ್ಯಾಖ್ಯಾನದ ಹಿಂದೆ ಇರುವ ಪ್ರೇರಣೆ, ಮತ್ತು ಹಿನ್ನೆಲೆ. ಇಂಥ ಸಾಂಕೇತಿಕ ಓದಿಗೆ ಬೇಕಾದ ಸಮರ್ಥನೆಯನ್ನು ಗಾಂಧೀಜಿಯವರೇ ಒದಗಿಸಿದ್ದರು ಎನ್ನುವುದು ತುಂಬಾ ಸ್ವಾರಸ್ಯಕರ. ತಮ್ಮ ಹಿಂದ್‌ಸ್ವರಾಜ ಕೃತಿಯ ಬಗ್ಗೆ ಬರೆಯುತ್ತಾ ಸ್ವತಃ ಅವರೇ ಒಂದು ಕಡೆ, 'ತಮ್ಮ ಬರವಣಿಗೆ ಸೂತ್ರಾತ್ಮಕವಾದದ್ದು (aphoristic). ಆದ್ದರಿಂದ ಅದನ್ನು ಒಂದು ಸೂಕ್ತಿಯಹಾಗೆ ಓದಿಕೊಳ್ಳಬೇಕು' ಎಂದಿದ್ದಾರೆ. ಈ ಮಾತಿನ ಜಾಡಿನಲ್ಲೇ ಮುಂದುವರೆಯುತ್ತಾ, ಕೆಲ ವಿದ್ವಾಂಸರುಗಳು ಗಾಂಧೀಜಿ ಹೇಗೆ ಗೀತೆಯನ್ನು ಒಂದು ಅನಾದಿಕಾಲದ ದರ್ಶನ ನೀಡುವ ಪವಿತ್ರ ಗ್ರಂಥವನ್ನಾಗಿ ನೋಡದೆ, ಅದನ್ನು ಹಲವು ಅರ್ಥಸಾಧ್ಯತೆಯುಳ್ಳ ಕಾವ್ಯವೆಂಬಂತೆ ಓದುತ್ತಾರೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

(ರುಡಾಲ್ಫ್ ಮತ್ತು ರುಡಾಲ್ಫ್, ಪೋಸ್ಟ್ ಮಾಡರ್ನ್ ಗಾಂಧಿ ಮತ್ತು ಇತರ ಲೇಖನಗಳು, ಆಕ್ಸ್ ಫರ್ಡ್ ಯೂನಿವರ್ಸಿಟಿ ಪ್ರೆಸ್, 2009.) ಭಗವದ್ಗೀತೆಯ ಪುನರ್ ವ್ಯಾಖ್ಯಾನವನ್ನು ಸಮರ್ಥಿಸಿಕೊಳ್ಳುತ್ತಾ ಗಾಂಧೀಜಿ, 'ಒಬ್ಬ ಕವಿ ತನ್ನ ಮಾತಿನ ಎಲ್ಲ ಅರ್ಥಗಳನ್ನೂ, ಅದರ ಪರಿಣಾಮಗಳನ್ನೂ ಸಂಪೂರ್ಣವಾಗಿ ಸೂಚಿಸಿರುತ್ತಾನೆ ಎಂದು ಹೇಳಲಾಗದು. ಇದು ಕವಿಯ ಮಿತಿಗಿಂತಲೂ ಕಾವ್ಯದ ಮತ್ತು ಕೃತಿಕಾರನ ಹಿರಿಮೆಯನ್ನು ಎತ್ತಿತೋರಿಸುತ್ತದೆ. . . ಭಾಷೆಯ ಚರಿತ್ರೆಯನ್ನು ಗಮನಿಸಿದರೆ, ಮುಖ್ಯವಾದ ಅನೇಕ ಪದಗಳ ಅರ್ಥ ಬದಲಾಗಿರುವುದನ್ನು ಅಥವಾ ವಿಸ್ತರಣೆಗೊಂಡಿರುವದನ್ನು ನಾವು ಕಾಣಬಹುದು. ಇದು ಗೀತೆಯ ಮಟ್ಟಿಗೂ ಸತ್ಯ.' ಆಧುನಿಕ ಸಾಹಿತ್ಯ ವಿಮರ್ಶೆಯ ಪರಿಭಾಷೆಯಂತೆ ಕಾಣುವ ಈ ಮಾತುಗಳನ್ನು ಗಮನಿಸಿದರೆ, ಒಂದು ಪಠ್ಯದ ಅರ್ಥ ಕೃತಿಕಾರನ ಆಶಯವನ್ನೂ ಮೀರಿ ಬೆಳೆಯಬಹುದು ಎಂಬ ನಂಬಿಕೆಯಿಂದಲೇ ಗಾಂಧಿ ಗೀತೆಯನ್ನು ಓದಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ಹಿಂಸೆಯ ಸಮರ್ಥನೆಯಂತೆ ಕಾಣುವ ಗೀತೆಯಲ್ಲಿ ಅವರು ಅಹಿಂಸೆಯ ಸಂದೇಶವನ್ನು ಕಂಡಿದ್ದರು.

ಇಲ್ಲಿ ಭಾಷಾ ಪ್ರಯೋಗ ಮತ್ತು ಅರ್ಥ ಗ್ರಹಿಕೆಗೆ ಸಂಬಂಧಪಟ್ಟಂತೆ, ಸಾಹಿತ್ಯ ವಿಮರ್ಶೆಯಲ್ಲಿ ಜನಜನಿತವಾಗಿರುವ ಮುಖ್ಯವಾದ ವಿಚಾರವನ್ನು ಕುರಿತು ಗಾಂಧಿ ಹೇಳುತ್ತಿದ್ದಾರೆ. ಮತ್ತು ಸಾಮಾಜಿಕ-ರಾಜಕೀಯ ವಿಷಯಗಳಂಥ ಸಾಹಿತ್ಯೇತರ ಬರವಣಿಗೆಯನ್ನು ಕೂಡ ರೂಪಕಾಲಂಕಾರಿಕವಾಗಿ ಓದಿಕೊಳ್ಳುವ ಅಗತ್ಯವನ್ನು (ಅಥವಾ ಅನಿವಾರ್ಯತೆಯನ್ನು) ಅವರು ವಿವರಿಸುತ್ತಿದ್ದಾರೆ. ಅದರ ಪ್ರಕಾರ, ಒಂದು ಪಠ್ಯದ ಅರ್ಥ ವಿಸ್ತರಣೆಗೆ ಎರಡು ಕಾರಣಗಳಿರಲು ಸಾಧ್ಯ. ಒಂದು ಕೃತಿಯ ಸಾಮಾಜಿಕ ಬದುಕು ಕೃತಿಕಾರರಿಗಿಂತಲೂ ವಿಶಾಲವಾದದ್ದು. ನಿರಂತರವಾಗಿ ಬದಲಾಗುವ ಭಾಷೆಯ ಸಾಮರ್ಥ್ಯದಿಂದಾಗಿ ಪಠ್ಯವೊಂದು ಕಾಲಾನುಕಾಲಕ್ಕೆ ಹೊಸ ಅರ್ಥಗಳನ್ನು ಪಡೆದುಕೊಳ್ಳುತ್ತಾ ಹೋಗುತ್ತದೆ. ಕೃತಿಯನ್ನು ಬರೆದಿರುವ ಕಾಲಕ್ಕೂ, ಓದುಗರು ಅದನ್ನು ಓದುವ ಕಾಲಕ್ಕೂ ಇರುವ ಅಂತರ, ಈ ಅರ್ಥ ವೈವಿಧ್ಯತೆಯನ್ನು ಹೆಚ್ಚಿಸುತ್ತಾ ಇರುತ್ತದೆ. ಇದು ಪಠ್ಯದ ಅರ್ಥವನ್ನು ಇದಮಿತ್ಥಂ ಎಂದು ನಿಖರವಾಗಿ ಹಿಡಿದು ಇಡಲು ಸಾಧ್ಯವಾಗದೆ ಇರುವುದಕ್ಕೆ ಒಂದು ಕಾರಣವಾದರೆ, ಇನ್ನೊಂದು, ಮನುಷ್ಯನ ಗ್ರಹಿಕೆಯ ಮಿತಿಗೆ ಸಂಬಂಧ ಪಟ್ಟಿದ್ದು. ಕೃತಿಯ ಸತ್ಯಗಳು ಕಾಲಾನುಕ್ರಮದಲ್ಲಿ ಒದಗಿ ಬರುವಂಥದೇ ವಿನಃ ಒಮ್ಮೆಗೇ ಪ್ರಕಟಣೆಯಾಗುವಂಥದಲ್ಲ. ಹೀಗಾಗಿ ಸತ್ಯವೆನ್ನುವುದನ್ನು ಪಠ್ಯದ ಒಳಗೆ ಬಂಧಿಸಿಡಲು ಬಾರದು, ಅದು ಪ್ರತೀ ಐತಿಹಾಸಿಕ ಸನ್ನಿವೇಶದಲ್ಲಿ ಹೊಸ ಅರ್ಥದಲ್ಲಿ ಮೂಡುವಂಥದ್ದು. ತಾವು ಹೇಗೆ ಗೀತೆಯನ್ನು ತಮ್ಮ ಕಾಲದ ಸನ್ನಿವೇಶದ ಅಗತ್ಯಗಳಿಗೆ ಅನುಗುಣವಾಗಿ ಓದಿಕೊಂಡಿದ್ದಾರೋ, ಹಾಗೆಯೇ ತಮ್ಮ ಕೃತಿಗಳನ್ನೂ ಒಂದು ಕಾವ್ಯವೆಂಬಂತೆ ಓದಿಕೊಳ್ಳಬೇಕೆನ್ನುವುದು ಗಾಂಧೀಜಿಯವರ ಆಶಯ.

* * *

ಈ ಚರ್ಚೆಗೆ ಬಹಳ ಮುಂಚೆ, ಸ್ವಾತಂತ್ರ ಸಂಗ್ರಾಮದಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವದಕ್ಕಿಂತ ಮೊದಲೇ, ಗಾಂಧೀಜಿ ಪಶ್ಚಿಮ ನಾಗರಿಕತೆಯ ಪ್ರಖರ ಟೀಕಾಕಾರರಾಗಿದ್ದರು. ನಮ್ಮದೇ ಆದ ನಾಗರಿಕತೆಯನ್ನು ಕಟ್ಟಿಕೊಳ್ಳುವುದರ ಮೂಲಕ ಮಾತ್ರ ವಸಾಹತು ದಬ್ಬಾಳಿಕೆಯನ್ನು ಎದುರಿಸಲು ಸಾಧ್ಯ ಎನ್ನುವುದು ಕೊನೆಗಾಲದವರೆಗೂ ಗಾಂಧಿಯ ಪ್ರಬಲ ನಂಬಿಕೆಯಾಗಿತ್ತು. 'ಹಿಂದ್ ಸ್ವರಾಜ್' ಇಂಥ ನಾಗರಿಕತೆಯನ್ನು ಕುರಿತ ಒಂದು ಪಠ್ಯ. ಅವರ ಎಲ್ಲ ರಾಜಕೀಯ ಹೋರಾಟಗಳಿಗೂ ಈ ಪುಸ್ತಕದ ವಿಚಾರಗಳೇ ತಾತ್ವಿಕ ಹಿನ್ನೆಲೆಯನ್ನು ಒದಗಿಸಿವೆ. ಅದನ್ನು ಬರೆದ ಬಹಳ ವರ್ಷಗಳ ನಂತರವೂ ಅದರಲ್ಲಿನ ಯಾವ ವಾಕ್ಯವನ್ನೂ ತಾವು ಬದಲಿಸಬೇಕಾಗಿಲ್ಲ ಎನ್ನುವ ಅವರ ಮಾತುಗಳನ್ನು ನೋಡಿದರೆ, ಈ ಪುಸ್ತಕದ ತಾತ್ವಿಕತೆ ಕುರಿತ ಅವರ ನಿಲುವು ಅರ್ಥವಾಗುತ್ತದೆ. ಸಮಾಜ ಸುಧಾರಣೆಯೇ ತಮ್ಮ ಎಲ್ಲ ಹೋರಾಟದ ಮೂಲ ಆಶಯ ಎಂದು ನಂಬಿದ್ದ ಗಾಂಧೀಜಿ, 'ಸಮಾಜ ಸುಧಾರಣೆಯ ಕೆಲಸ ಯಾವ ರೀತಿಯಲ್ಲಿಯೂ, ರಾಜಕೀಯ ಕಾರ್ಯಕ್ಕಿಂತಲೂ ಕಡಿಮೆಯಾದದ್ದಲ್ಲ; ರಾಜಕೀಯ ಕೆಲಸದ ಬೆಂಬಲವಿಲ್ಲದೆ ಸಮಾಜ ಸುಧಾರಣೆ ಸಾಧ್ಯವಿಲ್ಲದ್ದರಿಂದ ತಾವು ರಾಜಕೀಯದಲ್ಲಿ ಇರುವುದಾಗಿ' ಹೇಳಿಕೊಂಡಿದ್ದರು. ಅಂದರೆ 'ಮೊದಲನೆಯದನ್ನು ಸಾಧಿಸುವುದಕ್ಕೆ ಎರಡನೆಯದು ಒಂದು ನಿಮಿತ್ತ' ಎಂಬುದು ಅವರ ನಿಲುವಾಗಿತ್ತು. ತಮ್ಮ ಪ್ರಥಮ ಕಾಳಜಿ ಹೊಸ ಸಮಾಜದ ನಿರ್ಮಾಣವೇ ಹೊರತು ರಾಜಕೀಯವಲ್ಲ ಎನ್ನುವುದನ್ನು ಅವರೇ ಒಂದು ಕಡೆ ಹೇಳಿಕೊಂಡಿದ್ದಾರೆ. ಆದರೆ ಇಷ್ಟಾಗ್ಯೂ, ನಾಗರಿಕ ಸಮಾಜದ ನಿರ್ಮಾಣ ಕುರಿತಂತೆ ಬಹುತೇಕ ಗಾಂಧಿ ತತ್ವಗಳು ಅನುಸರಿಸಲು ಅಸಾಧ್ಯವಾದ ಆದರ್ಶಗಳು ಎಂಬುದು ಅವುಗಳ ಬಗ್ಗೆ ಇರುವ ಒಂದು ಸಾಮಾನ್ಯ ಗ್ರಹಿಕೆ ಹಾಗೂ ಟೀಕೆ. ಜತೆಗೆ ಅವರ ತತ್ವಗಳಿಗೆ ಯಾವುದೇ ತರ್ಕದ ಅಥವಾ ರಾಷನಲ್ ವಿಶ್ಲೇಷಣೆಯ ಆಧಾರವಿಲ್ಲ ಎನ್ನುವುದು ಇನ್ನೊಂದು ಗಂಭೀರ ಆಪಾದನೆ ಕೂಡ. ಉದಾಹರಣೆಗೆ, ಬ್ರಹ್ಮಚರ್ಯ ಪಾಲನೆ ಅಥವಾ ಚರಕ. ಇವುಗಳನ್ನು ಗಾಂಧೀಜಿ ಯಾವುದೇ ಸಾಮಾಜಿಕ ಕಾರಣಕ್ಕಿಂತಲೂ ಮಿಗಿಲಾಗಿ ಆಧ್ಯಾತ್ಮಿಕ ಬಲ ಸಂವರ್ಧನೆಗಾಗಿ ಅಗತ್ಯವಾದ ಸಾಧನೆಗಳು ಎಂದೇ ತಿಳಿದಿದ್ದರು. ಇದು ಮನುಷ್ಯನ ಅಂತರಂಗ ಶುದ್ಧೀಕರಣಕ್ಕೆ ನೆರವಾಗುತ್ತವೆ ಎಂಬುದು ಅವರ ನಂಬಿಕೆಯಾಗಿತ್ತು.

ನಿರ್ವಸಾಹತೀಕರಣದ ಮಾರ್ಗಗಳಿಗೆ ಹುಡುಕಾಟ ಶುರುವಾದಾಗ, ಗಾಂಧೀಜಿಯ ಮೇಲಿನ ಚಿಂತನೆಗಳು ಹೊಸ ಜೀವ ಪಡೆದುಕೊಂಡವು. ಅಲ್ಲಿಯವರೆಗೆ ಆಧುನಿಕ ಸಮಾಜ ಗಾಂಧೀಜಿಯವರನ್ನು ಒಬ್ಬ 'ಗತಕಾಲದ ಪ್ರವಾದಿ' ಎಂಬಂತೆ ನೋಡುತ್ತಿತ್ತು. ಈಗ ಅವರಿಗೆ 'ಆಧುನಿಕ ಪ್ರವಾದಿ' ಗುಣ ಪ್ರಾಪ್ತವಾಯಿತು. ನಮ್ಮ ಎಲ್ಲ ಸಮಸ್ಯೆಗಳಿಗೆ ಗಾಂಧಿಮಾರ್ಗದಲ್ಲಿ ಸಂಪೂರ್ಣ ಉತ್ತರವಿದೆ ಎಂಬುದಕ್ಕಿಂತ, ಪ್ರಸ್ತುತ ಪರ್ಯಾಯಗಳ ಹುಡುಕಾಟದಲ್ಲಿ ಗಾಂಧಿ ತತ್ವಗಳು, ಅದರಲ್ಲೂ ಅವರ 'ಹಿಂದ್ ಸ್ವರಾಜ್'ನ ಪ್ರಣಾಳಿಕೆಗಳು, ನೆರವಾಗಬಲ್ಲವು ಎಂಬ ನಂಬಿಕೆ ಶುರುವಾಯಿತು.

ನಿರ್ವಸಾಹತೀಕರಣದ ಹೊಸ ವಾಚಿಕೆ ತನ್ನ ಒಳನೋಟಗಳನ್ನು ಗಾಂಧಿ ಮಾರ್ಗದ ಎರಡು ನೆಲೆಗಳಿಂದ ಪಡೆದುಕೊಂಡಿದೆ. ಒಂದು, ಮೇಲೆ ಸೂಚಿಸಿರುವ ಆಧುನಿಕತೆಯ ವಿದ್ಯಮಾನಗಳಾದ ಹಿಂಸೆ, ಅಸಹನೆ, ದುರಾಸೆ ಇತ್ಯಾದಿಗಳು ಪಾಶ್ಚಿಮಾತ್ಯ ನಾಗರೀಕತೆಯ ವಿಕಾರಗಳು ಎಂಬ ವಾದ. ಎರಡನೆಯದು, ಅದಕ್ಕೆ ಬದಲಾಗಿ ಗಾಂಧಿ ಮುಂದಿಡುವ, ಸತ್ಯ ಮತ್ತು ಅಹಿಂಸೆಯ ಆಧಾರದಮೇಲೆ ಕಟ್ಟಿಕೊಳ್ಳಬೇಕಾದ ಆತ್ಮೋದ್ಧಾರದ ಬದಲಾವಣೆ. ಕೇವಲ ಸದಾಶಯವಾಗಿ ಮಾತ್ರ ಕಾಣಿಸುವ ಈ ಚಿಂತನೆಗಳು ಈ ಹೊತ್ತಿನ ಸವಾಲುಗಳನ್ನು ಎದುರಿಸಲು ಬೇಕಾದ ಹತಾರಗಳನ್ನು ನೀಡುತ್ತವೆಯೇ ಎಂಬುದು ಮುಖ್ಯ ಪ್ರಶ್ನೆ.

ಮಾರ್ಕ್ಸ್, ಅಂಬೇಡ್ಕರ್ ಅಥವಾ ಇನ್ನಿತರ ಸಮಾಜ ವಿಜ್ಞಾನಿಗಳ ಹಾಗೆ ಸಾಮಾಜಿಕ ಕ್ಷೋಭೆಯ ಕಾರಣಗಳನ್ನು ಗಾಂಧೀಜಿ ಚಾರಿತ್ರಿಕ ವಿದ್ಯಮಾನಗಳಾದ ಉತ್ಪಾದನಾ ಸಂಬಂಧ, ಮಾರುಕಟ್ಟೆಯ ತರ್ಕ, ಫ್ಯೂಡಲ್ ಸಮಾಜದ ಸ್ವರೂಪ, ಇದರಲ್ಲಿನ ಪ್ರಭುತ್ವದ ಪಾತ್ರ ಇತ್ಯಾದಿ 'ವೈಜ್ಞಾನಿಕ' ವಿಶ್ಲೇಷಣಾ ಮಾರ್ಗದಲ್ಲಿ ಅನ್ವೇಷಿಸುವುದಿಲ್ಲ. ಇಡೀ ಆಧುನಿಕ ನಾಗರೀಕತೆಯನ್ನೇ ಒಂದು 'ಹುಸಿ ಪ್ರಜ್ಞೆ' (false consciousness) ಎನ್ನುವ ಅವರು, ಅದಕ್ಕೆ ಪರ್ಯಾಯವನ್ನು ಒಂದು ಮೌಲ್ಯಾಧಾರಿತ ಹಾಗೂ ಪ್ರಮಾಣಕವಾದ (normative) ಬದುಕಿನ ಕ್ರಮವನ್ನು ಸೂಚಿಸುವುದರ ಮೂಲಕ ಅನ್ವೇಷಿಸುತ್ತಾರೆ. (ಇದು ಹುಸಿ ಯಾಕೆಂದರೆ, ಆಧುನಿಕ ವೈಜ್ಞಾನಿಕ ವಿಚಾರವಾದ 'ಆತ್ಮ ವಿಕಾಸ' ಮತ್ತು 'ಆಧ್ಯಾತ್ಮಿಕತೆ' ಇತ್ಯಾದಿ ವಿಷಯಗಳನ್ನು ಸಾರ್ವಜನಿಕ ಕ್ಷೇತ್ರದಿಂದ ಹೊರಗಿಟ್ಟು, ಅದನ್ನು ಖಾಸಗಿ ವಲಯಕ್ಕೆ ಮಾತ್ರ ಸಂಬಂಧಪಟ್ಟಿದ್ದು ಎನ್ನುವಂತೆ ಮಾಡಿಬಿಟ್ಟಿರುವುದು. ಹೀಗೆ 'ಹೊರಗಿನ' ಸಾರ್ವಜನಿಕ ವಲಯ ಮತ್ತು 'ಒಳಗಿನ' ಖಾಸಗಿ ವಲಯ ಎಂಬ ವಿಭಜನೆಯೇ ಸರಿಯಿಲ್ಲ; ಆಧುನಿಕತೆಯ ವಿಕಾರಗಳಿಗೆ ಇಂಥ ಹುಸಿ ವಿಭಜನೆಯೂ ಒಂದು ಕಾರಣ.) ಇದರ ಸ್ವರೂಪಗಳನ್ನು, ಭಾರತದಂತ ಪಾರಂಪರಿಕ ಸಮಾಜಗಳಲ್ಲಿ ಕಾಣಬಹುದಾದರೂ, ಅದು ಒಂದು ಸಿದ್ಧ ಮಾದರಿಯಾಗಿ ಲಭ್ಯವಿರುವುದಿಲ್ಲ. ಆದ್ದರಿಂದ ಆಧುನಿಕ ನಾಗರೀಕತೆಯ ಪರ್ಯಾಯವನ್ನು ನಾವು ಹೊಸದಾಗಿಯೇ ಅನ್ವೇಷಿಸಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಲ್ಲಿ ನೋಡಿದರೆ, ಗಾಂಧಿಮಾರ್ಗ ಸೂಚಿಸುತ್ತಿರುವ ಪರ್ಯಾಯ ಆಧುನಿಕವಾದದ್ದೇ ವಿನಾ

(46ನೇ ಪುಟಕ್ಕೆ)



ಗಾಂಧಿ ದರ್ಶನದ ಸರಳೀಕರಣದ ಅಪಾಯಗಳು

ಡಿ.ಎಸ್ ನಾಗಭೂಷಣ

ಮನುಷ್ಯ ದೇವರಾಗುವ ತನಕ ಅವನಿಗೆ ಶಾಂತಿಯಿಲ್ಲ.

–ಮಹಾತ್ಮ ಗಾಂಧಿ

(ಮೇಲಿನ ವಾಕ್ಯದಲ್ಲಿ, ಅವನಿಗೆ ಎಂದರೆ ಮನುಷ್ಯನಿಗೋ ದೇವರಿಗೋ ಎಂಬುದು ನನಗಿನ್ನೂ ಸ್ಪಷ್ಟವಾಗಿಲ್ಲವಾದರೂ, ದೇವರ ಕಲ್ಪನೆಯನ್ನೇ ಅಲ್ಲಗಳೆಯುವವರು ಮತ್ತು ಮನುಷ್ಯ ದೇವರಾಗುವ ಸಾಧ್ಯತೆಯನ್ನೇ ನಿರಾಕರಿಸುವವರು ಈ ಲೇಖನವನ್ನು ಓದುವ ಅಗತ್ಯವಿಲ್ಲ ಎಂದು ಮೊದಲಿಗೇ ಹೇಳಬಯಸುವೆ.–ಲೇಖಕ.)

ಇತ್ತೀಚೆಗೆ ಇಂಗ್ಲಿಷ್ ಟಿ.ವಿ. ವಾಹಿನಿಯೊಂದು ಇಂಗ್ಲಿಷ್ ವಾರಪತ್ರಿಕೆಯೊಂದರೊಡನೆ ಸೇರಿ ಭಾರತದ ಆಧುನಿಕ ಇತಿಹಾಸದಲ್ಲಿ ಮಹಾತ್ಮ ಗಾಂಧಿ ನಂತರದ ಅತಿ ಮಹತ್ವದ ವ್ಯಕ್ತಿ ಯಾರು ಎಂಬ ಬಗ್ಗೆ ಸಮೀಕ್ಷೆಯೊಂದನ್ನು ನಡೆಸಿತು. ಅದರ ಫಲಿತಾಂಶಗಳನ್ನು ದೂರವಾಣಿ ಕರೆಗಳ ಮೂಲಕ ಮಾಡಲಾದ ಸಮೀಕ್ಷೆಯಲ್ಲಿ ಮೂಡಿದ ಹತ್ತು ಜನರ ಪಟ್ಟಿ, 'ವೈಜ್ಞಾನಿಕ ಮಾದರಿ' ಆಧಾರದ ಮೇಲೆ ಮಾಡಲಾದ ಸಮೀಕ್ಷೆಯಲ್ಲಿ ಮೂಡಿದ ಹತ್ತು ಜನರ ಪಟ್ಟಿ, ರಾಷ್ಟ್ರ ಮಟ್ಟದ ಚಿಂತಕರ ತಂಡವೊಂದು ಚರ್ಚಿಸಿ ಸಿದ್ಧ ಮಾಡಿದ ಹತ್ತು ಜನರ ಪಟ್ಟಿ ಮತ್ತು ಈ ಮೂರೂ ಪಟ್ಟಿಗಳನ್ನು ಗಮನದಲ್ಲಿಟ್ಟುಕೊಂಡು ಸಂಪಾದಕ ಬಳಗ ಒಟ್ಟಾರೆಯಾಗಿ ಶ್ರೇಣೀಕರಣ ಮಾಡಿ ಸಿದ್ಧಪಡಿಸಿರುವ ಹತ್ತು ಜನರ ಪಟ್ಟಿ –ಈ ನಾಲ್ಕು ಸ್ತರಗಳಲ್ಲಿ ಪ್ರಕಟಿಸಿದೆ. ಈ ನಾಲ್ಕು ಪಟ್ಟಿಗಳಲ್ಲಿ ಶ್ರೇಣೀಕರಣ ಬೇರೆ ಬೇರೆಯಾಗಿ ಕಂಡು ಬಂದಿದ್ದರೂ ಈ ನಾಲ್ಕೂ ಪಟ್ಟಿಗಳಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರು ಕಾಣಿಸಿಕೊಂಡಿರುವುದಲ್ಲದೆ, ಇದರಲ್ಲಿ ದೂರವಾಣಿ ಕರೆಗಳನ್ನಾಧರಿಸಿದ ಸಮೀಕ್ಷೆಯಲ್ಲಿ ಅಂಬೇಡ್ಕರ್ ಎಲ್ಲರಿಗಿಂತ ಬಹು ಮುಂದಿದ್ದು ಒಟ್ಟಾರೆ ಶ್ರೇಣೀಕರಣದ ಪಟ್ಟಿಯಲ್ಲಿ ಮೊದಲ ಸ್ಥಾನ ಗಳಿಸಿದ್ದಾರೆ.(ಆಶ್ಚರ್ಯವೆಂದರೆ, ನಂತರದಲ್ಲೇ ಇನ್ನೊಂದು ಟಿ.ವಿ. ವಾಹಿನಿ ನಡೆಸಿದ ಇದೇ ಮಹತ್ವದ ಐದು ಜನರ ಆಯ್ಕೆಯ 'ವೈಜ್ಞಾನಿಕ ಮಾದರಿ' ಸಮೀಕ್ಷೆಯಲ್ಲಿ ಅಂಬೇಡ್ಕರ್ ಹೆಸರು ಕಾಣದೇ ಹೋಗಿ, ಯಾವುದು 'ವೈಜ್ಞಾನಿಕ'ವೋ ಯಾವುದು 'ಅವೈಜ್ಞಾನಿಕ'ವೋ ಗೊತ್ತಾಗದೇ ಹೋಗಿದೆ!)

ಇದೆಲ್ಲದುದಕ್ಕಿಂತ ಈ ಸಮೀಕ್ಷೆಯ ಗಮನಾರ್ಹ ಸಂಗತಿಯೆಂದರೆ, ಈ ಸಮೀಕ್ಷೆಗಳನ್ನು ಪ್ರಕಟಿಸಿರುವ ವಾರ ಪತ್ರಿಕೆಯ ಈ ಅಂಬೇಡ್ಕರ್ ವಿಶೇಷ ಸಂಚಿಕೆಯ ಗೌರವ ಸಂಪಾದಕ ಸೂಚ್ಯವಾಗಿ ವ್ಯಕ್ತಪಡಿಸಿರುವ ಈ ಆಕ್ಷೇಪಣೆ: ಈ ಸಮೀಕ್ಷೆಗಾಗಿ ಆಯ್ಕೆಗಳನ್ನು ಗಾಂಧಿ ನಂತರ ಎಂದು

ಏಕೆ ಸೀಮಿತಗೊಳಿಸಬೇಕಿತ್ತು? ಈ ಆಕ್ಷೇಪಣೆಯನ್ನು ಆತ ವ್ಯಕ್ತಪಡಿಸಿರುವುದು, ಅಂಬೇಡ್ಕರ್‌ಗೆ ಮೊದಲ ಸ್ಥಾನ ನೀಡಿದ್ದ ದೂರವಾಣಿ ಕರೆಗಳನ್ನಾಧರಿಸಿದ ಸಮೀಕ್ಷೆಯಲ್ಲಿ ಬಹಳ ಜನ ಕೇಳಿದ್ದ ಇದೇ ಪ್ರಶ್ನೆಯನ್ನು ಪ್ರತಿಧ್ವನಿಸುತ್ತಾ. ಹಾಗಾಗಿ, ಈ ಪ್ರಶ್ನೆ ದೂರವಾಣಿ ಕರೆ ಸಮೀಕ್ಷೆಯಲ್ಲಿ ಮಾತ್ರ ಮುನ್ನೆಲೆಗೆ ಬಂದಿರುವುದರ ಕಾರಣವೇನಿರಬಹುದೆಂದು ನೋಡಿದರೆ ಈ ದೂರವಾಣಿ ಕರೆಗಳ ಹರಹಿನಲ್ಲಿ ಇದಕ್ಕೆ ಉತ್ತರ ದೊರೆಯುತ್ತದೆ. ಈ ಕರೆಗಳು ಅತಿ ಹೆಚ್ಚು ಬಂದಿರುವುದು ದಲಿತ ಮತ್ತು ಸಂಘ ಪರಿವಾರಗಳ ರಾಜಕಾರಣ ತೀವ್ರವಾಗಿರುವೆಡೆಗಳಿಂದ: ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದರೆ, ಎರಡನೇ ಮತ್ತು ಮೂರನೇ ಸ್ಥಾನ ಕ್ರಮವಾಗಿ ಉತ್ತರ ಪ್ರದೇಶ ಮತ್ತು ಗುಜರಾತ್‌ಗಳದ್ದು. ನಂತರದ ಸ್ಥಾನಗಳು ದೆಹಲಿ, ಕರ್ನಾಟಕ, ಮಧ್ಯಪ್ರದೇಶ ಇತ್ಯಾದಿಗಳದ್ದು. ಅತಿ ಹೆಚ್ಚು ರಾಜಕೀಯ ಜಾಗೃತಿ ಹೊಂದಿದ ರಾಜ್ಯಗಳೆನಿಸಿದ ಕೇರಳ, ಬಂಗಾಲ ಮತ್ತು ತಮಿಳ್ನಾಡುಗಳು ಇಲ್ಲಿ ಎಲ್ಲೋ ಮೂಲೆ ಸೇರಿವೆ! ಹಾಗಾಗಿಯೇ ಈ ಸಮೀಕ್ಷೆಯಲ್ಲಿ ಅಂಬೇಡ್ಕರ್ ನಂತರದ ಸ್ಥಾನಗಳು ದೊರೆತಿರುವುದು ಅಬ್ದುಲ್ ಕಲಾಂ, ಸರ್ದಾರ್ ಪಟೇಲ್, ವಾಜಪೇಯಿ ಮುಂತಾದ ಸಂಘ ಪರಿವಾರದ ಅಭ್ಯರ್ಥಿಗಳಿಗೇ.

ಇಲ್ಲಿನ ಒಂದು ಸಮಾಧಾನದ ಸಂಗತಿಯೆಂದರೆ ಭಾರತದಲ್ಲಿ ದಲಿತ ಪರಿವಾರದ ಸಂಪರ್ಕ ಜಾಲ ಸಂಘ ಪರಿವಾರದ ಬ್ರಾಹ್ಮಣ-ಬನಿಯಾ ಸಂಪರ್ಕ ಜಾಲವನ್ನು ಹಿಂದಿಕ್ಕಿದೆ ಎಂಬುದು! (ದಲಿತ ಸಂಘಟನೆಗಳಿಂದ ನನಗೂ ಈ ಸಮೀಕ್ಷೆಯಲ್ಲಿ ಅಂಬೇಡ್ಕರ್ ಪರವಾಗಿ ದೂರವಾಣಿ ಕರೆ ಮಾಡಬೇಕೆಂದು ಕೋರಿ ಎರಡು-ಮೂರು ಸಂದೇಶಗಳು ಬಂದಿದ್ದವು.) ಈ ದೃಷ್ಟಿಯಿಂದ ನಮ್ಮ ದಲಿತ ಸಮುದಾಯ ಆಧುನಿಕ ತಂತ್ರಗಳ ವಿಷಯದಲ್ಲಿ ಸಾಕಷ್ಟು ಸಬಲೀಕರಣಗೊಂಡಿದೆ ಎಂದು ಹೇಳಿದರೆ, ಇದು ಮೀಸಲಾತಿ ವಿರೋಧಿ ಹೇಳಿಕೆ ಎಂದು ಯಾರೂ ತಪ್ಪು ತಿಳಿಯಲಾರರು ಎಂದು ಭಾವಿಸುವೆ! ಇರಲಿ, ಈ ದೂರವಾಣಿ ಕರೆಗಳನ್ನಾಧರಿಸಿದ ಸಮೀಕ್ಷೆಯ ಇನ್ನೊಂದು ಗಮನಾರ್ಹ ಸಂಗತಿಯೆಂದರೆ, ಆಧುನಿಕ ಭಾರತದ ನಿರ್ಮಾಪಕ ಎಂದೇ ಅಧಿಕೃತ ಇತಿಹಾಸದಲ್ಲಿ ದಾಖಲಾಗಿರುವ ರಾಷ್ಟ್ರದ ಮೊದಲ ಪ್ರಧಾನಿ ನೆಹ್ರೂ ಕೊನೆಯ ಸ್ಥಾನಕ್ಕೆ ದೂಡಲ್ಪಟ್ಟಿದ್ದಾರಷ್ಟೇ ಅಲ್ಲ, ಆಘಾತಕಾರಿ ಎನ್ನಿಸುವಷ್ಟು ನಿಕೃಷ್ಟ ಸಂಖ್ಯೆಯ 'ಮತ'ಗಳು ಅವರಿಗೆ ಬಿದ್ದಿವೆ.

ಗಾಂಧಿ ವಾರಸುದಾರಿಕೆ V/S ಅಂಬೇಡ್ಕರ್ ವಾರಸುದಾರಿಕೆ

ಈ ಸಮೀಕ್ಷೆಗಳ ಮಿತಿಗಳು ಮತ್ತು ರಾಜಕೀಯ ಉದ್ದೇಶಗಳೇನೇ ಇರಲಿ, ಇದರಿಂದ ಹೊಮ್ಮಿರುವ ಎರಡು ಸಂಗತಿಗಳು ನಮ್ಮ ಗಮನ ಸೆಳೆಯಬಲ್ಲವಾಗಿವೆ. ಒಂದು: ಗಾಂಧಿಯೇನೂ ನಮ್ಮ ಇತಿಹಾಸದ ಮೈಲಿಗಲ್ಲಾಗಬೇಕಿಲ್ಲ ಎಂಬುದಾದರೆ, ಇನ್ನೊಂದು ಸಮಕಾಲೀನ ಭಾರತೀಯ ಜನಾಂಗ ನೆಹ್ರೂಗೆ ಕೊನೆಯ ಸ್ಥಾನ ನೀಡಿರುವ ಮೂಲಕ ಸೂಚಿಸಿರುವ ಇತಿಹಾಸ ಕುರಿತ ತೀವ್ರತರವಾದ ಅವಜ್ಞೆ, ಇದು ಗಾಂಧಿ ಕುರಿತಂತೆಯೂ ಹೇಳಬಹುದಾದ ಮಾತು. ಈ ಸಂಬಂಧವಾಗಿಯೇ ಈ ಸಮೀಕ್ಷೆಯಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ, ಇಲ್ಲಿ ಕೊನೆಯ ಸ್ಥಾನ ಪಡೆದ ನೆಹ್ರೂ ರಾಷ್ಟ್ರ ಮಟ್ಟದ ಚಿಂತಕರ ತಂಡದ ಆಯ್ಕೆ ಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದು, ರಾಷ್ಟ್ರದಲ್ಲಿ ಇಂದು ಉಂಟಾಗಿರುವ ಸಾಮಾನ್ಯ ಜನತೆ ಮತ್ತು ಬುದ್ಧಿಜೀವಿಗಳ ನಡುವಣ ದೊಡ್ಡ ಕಂದಕದ ಆಘಾತಕಾರಿ

ಅಂಬೇಡ್ಕರ್ ಈಗ ಗಾಂಧಿ ಜಾಗವನ್ನು ತುಂಬಿಕೊಂಡು ಅವರಿಗೆ, ಅವರ ತಾತ್ವಿಕತೆಗೆ, ಆ ತಾತ್ವಿಕತೆಯ ತಥಾಕಥಿತ ವೈಫಲ್ಯಕ್ಕೆ ಪರ್ಯಾಯ, ಪರಿಹಾರ ಒದಗಿಸಿದ್ದಾರೆ ಎಂದು ಹೇಳುವುದು ಅನುಚಿತವಾದೀತು. ಇತಿಹಾಸದಲ್ಲಿ ಇಬ್ಬರಿಗೂ ಅವರವರದೇ ಆದ ಜಾಗಗಳಿವೆ. ಒಂದು ವ್ಯತ್ಯಾಸವೆಂದರೆ ಇಂದು ಅಂಬೇಡ್ಕರ್ ಎದುರಾಗುತ್ತಿರುವ ಸನ್ನಿವೇಶಗಳ ಎದುರಲ್ಲಿ ಮತ್ತೆ ಮತ್ತೆ ಸೃಜನಶೀಲ ಪುನರನ್ವೇಷಣೆಗೆ ಒಳಗಾಗುತ್ತಾ, ಹಿಂದೆಂದಿಗಿಂತ ಹೆಚ್ಚೆಚ್ಚು ಪ್ರಸ್ತುತರಾಗುತ್ತಿದ್ದಾರೆ; ಚರ್ಚೆಗೂ ಒಳಗಾಗುತ್ತಿದ್ದಾರೆ. ಇತಿಹಾಸದ ಪುನಾರಚನೆ ನಡೆಯುತ್ತಿರುವ ಇಂತಹ ಸಂದರ್ಭದಲ್ಲಿ ಗಾಂಧಿ ಹಿನ್ನೆಲೆಗೆ ಸರಿದಂತೆ ತೋರುತ್ತಿರುವುದಕ್ಕೆ ಕಾರಣವಿದೆ.



ಸೂಚನೆ ನೀಡುತ್ತಿರುವುದು. ಇವೆಲ್ಲವೂ ಒಟ್ಟಿಗೆ ಸೇರಿ ನೀಡುತ್ತಿರುವ ಸ್ಪಷ್ಟ ಸೂಚನೆ ಎಂದರೆ, ಇತಿಹಾಸ ಜನಪ್ರಿಯ ನೆಲೆಯಲ್ಲಿ ಪುನಾರಚನೆಗೊಳ್ಳುತ್ತಿದ್ದು, ಇದರ ಹಿಂದೆ ನಮ್ಮ ಬದುಕಿನ ಮೂಲ ನಂಬಿಕೆಗಳು ಮತ್ತು ಒಟ್ಟಾರೆ ದೃಷ್ಟಿಕೋನವನ್ನು ನಿರ್ಣಾಯಕವಾಗಿ ಬದಲಿಸುತ್ತಿರುವ ಮತ್ತು ಆ ಮೂಲಕ ನಮ್ಮನ್ನು ನಿಧಾನವಾಗಿ ನಮಗೇ ಅಪರಿಚಿತಗೊಳಿಸುತ್ತಿರುವ ಮೋಡಿ ರಾಜಕಾರಣವೊಂದು ಕ್ರಿಯಾಶೀಲವಾಗಿದೆ ಎಂಬುದು. ಇದೇ ಇಂದು ಮಾಧ್ಯಮಗಳಲ್ಲಿ ಪದೇ ಪದೇ ಪ್ರಸ್ತಾಪವಾಗುತ್ತಿರುವ ಗಾಂಧಿ ವಾರಸುದಾರಿಕೆಯ ಕಾಲ ಮುಗಿದಿದೆಯೇ? ಎಂಬ ಪ್ರಶ್ನೆಗೆ ಕಾರಣವಾಗಿರುವುದು. ಮತ್ತು ಈ ಪ್ರಶ್ನೆ ಅಲ್ಲಿಗೇ ನಿಲ್ಲದೆ ಅಂಬೇಡ್ಕರ್ ವಾರಸುದಾರಿಕೆಯ ಕಾಲ ಆರಂಭವಾಗಿದೆಯೇ? ಎಂಬ ಪ್ರಶ್ನೆಯೊಂದಿಗೆ ಮುಂದುವರೆದು, ಈ ರಾಜಕಾರಣದ ಹಿಂದಿನ ಶಕ್ತಿಗಳು ಮತ್ತು ಉದ್ದೇಶಗಳ ಬಗ್ಗೆ ಭಯ-ಆತಂಕಗಳನ್ನು ಉಂಟು ಮಾಡಿರುವುದು. ಹಾಗೇ ಈ ಸಮೀಕ್ಷೆಯನ್ನು ಸ್ವಲ್ಪ ವಾರೆಗಣ್ಣಿನಲ್ಲಿ ನೋಡುವಂತೆ ಮಾಡಿರುವುದು: ಗಾಂಧಿ ಮತ್ತು ಅಂಬೇಡ್ಕರ್ ನಿಜವಾಗಿ ಪರಸ್ಪರ ರದ್ದುಗೊಳ್ಳುವಂತಹ ವ್ಯಕ್ತಿತ್ವಗಳೇ? ಒಬ್ಬರಿದ್ದೆಡೆ ಇನ್ನೊಬ್ಬರು ಇಲ್ಲದಿರಲಾರದಂತಹ ಐತಿಹಾಸಿಕ ಶಕ್ತಿಗಳೇ?

2

ಗಾಂಧಿ ಕುರಿತ ಈ ಲೇಖನಕ್ಕೆ ಪೀಠಿಕೆಯಾಗಿ ಏಕೆ ಇದನ್ನೆಲ್ಲ ಹೇಳಬೇಕಾಗಿ ಬಂತೆಂದರೆ, ಗಾಂಧಿಯನ್ನು ಇಂದು ನೆನೆಯಲು, ಆ ಬಗ್ಗೆ ಮುಕ್ತವಾಗಿ ಮಾತಾಡಲು, ಬರೆಯಲು ಹೊರಟಾಗಲೆಲ್ಲ ನಮ್ಮ ಮನಸ್ಸು ಮತ್ತು ಬಾಯಿಗಳೆರಡಕ್ಕೂ ಅಡ್ಡವಾಗಿ ಹೇಗೆ ಹಲವು ಅಡೆತಡೆಗಳನ್ನು ಇತ್ತೀಚಿನ ದಿನಗಳಲ್ಲಿ ನಿರ್ಮಿಸಲಾಗಿದೆ ಎಂಬುದನ್ನು ಸೂಚಿಸಲು. ಒಂದು ಕಡೆ ಕಟ್ಟಾ ಅಂಬೇಡ್ಕರ್ ಪಂಥೀಯರು ಗಾಂಧಿಯನ್ನು 'ದಲಿತ ವಂಚಕ' ಎಂದು ಗುರುತಿಸಿ ಎಸೆಯುವ ಚೂಪಾದ ಪ್ರಶ್ನೆಗಳು, ಇನ್ನೊಂದೆಡೆ-ಬಹಳ ಜನರು ಗಮನಿಸದಿರುವ-ಸಂಘ ಪರಿವಾರದವರು ಗಾಂಧಿಯನ್ನು 'ಕ್ಷಮಿಸಿ' ತಮ್ಮ ಪರಿವಾರಕ್ಕೆ ಸೇರಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳ ಹಿಂದಿನ ರಾಜಕಾರಣ ಸೂಚಿಸುತ್ತಿರುವ ಅಪಾಯಗಳು.(ಈ ಪರಿವಾರದ 'ಬುದ್ಧಿಜೀವಿ'ಗಳಾಗಿ ಹೊರಹೊಮ್ಮಿರುವ ಸುಧೀಂದ್ರ ಕುಲಕರ್ಣಿ ಮತ್ತು ಬಲಬೀರ್ ಪೂಂಜಾ ಗಾಂಧಿ ಕುರಿತು ಇತ್ತೀಚೆಗೆ ಪ್ರಕಟಿಸಿರುವ ಪುಸ್ತಕಗಳನ್ನು ಗಮನಿಸಿ.) ಇವೆರಡೇ ಸಾಲದೆಂಬಂತೆ ಗಾಂಧಿ ಮತ್ತು ಅವರ ಮಗ ಹರಿಲಾಲ್ ನಡುವಣ ಸಂಘರ್ಷವನ್ನು ಕುರಿತು ಇತ್ತೀಚೆಗೆ ಒಂದಾದಮೇಲೊಂದರಂತೆ ರಂಗಪ್ರವೇಶಗೈಯುತ್ತಿರುವ ಸಿನಿಮಾ-ನಾಟಕಗಳು ಮತ್ತು ಅವು ಪಡೆಯುತ್ತಿರುವ ಸುಯೋಜಿತ ಪ್ರಚಾರ. ಜೊತೆಗೇ, ಗಾಂಧಿ ಅಧ್ಯಯನದ ಹೆಸರಲ್ಲಿ ವಿದೇಶಿ ಲೇಖಕರು ತಮ್ಮ ಪುಸ್ತಕಗಳ ಮೂಲಕ ಪ್ರಚುರಪಡಿಸುತ್ತಿರುವ ಗಾಂಧೀಜಿಯ ಲೈಂಗಿಕ ಪ್ರಯೋಗಗಳು, ತಥಾಕಥಿತ ಪ್ರೇಮ ಪ್ರಕರಣ ಮತ್ತು ಸಲಿಂಗಕಾಮ ಸಂಬಂಧ ಕುರಿತ ಕಥೆಗಳು. ಇವು ಗಾಂಧಿಯನ್ನು ಇಂದು ನೆನಪಿಸಿಕೊಳ್ಳುವ ಕೆಲಸವನ್ನು ಹೆಚ್ಚು ಕ್ಲಿಷ್ಟ, ಜಟಿಲ ಮತ್ತು ಸಂಕೀರ್ಣಗೊಳಿಸಿವೆ.. ಬೌದ್ಧಿಕವಾಗಿ ಸುಸ್ತು ಮಾಡುವಂತಿವೆ.

ಗೋಡ್ಸೆಯ ನೀತಿ ಪುಸ್ತಕ

ಇದೆಲ್ಲದಕ್ಕೊಂದು ರೂಪಕವಾಗಿ ನನ್ನ ಪತ್ನಿ ಸವಿತಾ ಹೇಳಿದ ಪ್ರಸಂಗವೊಂದನ್ನು ಇಲ್ಲಿ

ದಾಖಲಿಸಬೇಕು. ಸವಿತಾ ನಮ್ಮ ಮನೆಯ ಪಕ್ಕದಲ್ಲೇ ಇಟ್ಟಿರುವ 'ಗಾಂಧಿಗಿರಿ' ಎಂಬ ದೇಸಿ ವಸ್ತು ಮತ್ತು ಪುಸ್ತಕ ಮಾರಾಟ ಮಳಿಗೆಗೆ ಇತ್ತೀಚೆಗೆ ಶಿವಮೊಗ್ಗದ ಪ್ರತಿಷ್ಠಿತ ಶಾಲೆಯೊಂದರಲ್ಲಿ ಪಿಯುಸಿ ಓದುತ್ತಿರುವ 'ಸಾತ್ವಿಕ' ಕಳೆಯ ಹುಡುಗನೊಬ್ಬ ಬಂದು ಯಾವುದಾದರೂ 'ಒಳ್ಳೆಯ ನೀತಿ ಪುಸ್ತಕ' ಕೊಡಲು ಕೇಳಿದ. ಪಂಚತಂತ್ರ, ಈಸೋಪನ ನೀತಿ ಕಥೆಗಳಂತಹ ಪುಸ್ತಕಗಳನ್ನು ಓದುವ ವಯಸ್ಸನ್ನು ಮೀರಿದ ಈ ಹುಡುಗನಿಗೆ ಯಾವ ಪುಸ್ತಕ ಕೊಡುವುದೆಂದು ಯೋಚಿಸಿದ ಸವಿತಾ, ಪರಮಹಂಸ, ವಿವೇಕಾನಂದರ ಪುಸ್ತಕಗಳನ್ನು ತೋರಿಸಿದಾಗ, ಆತ ಇವೆಲ್ಲವನ್ನೂ ಈಗಾಗಲೇ ಓದಿರುವುದಾಗಿ ತಿಳಿಸಿದ. ನನ್ನ ಪತ್ನಿ ಇನ್ನು ಇವನಿಗೆ ಇನ್ನೆಂತಹ ನೀತಿ ಪುಸ್ತಕ ಕೊಡಬಹುದು ಎಂದು ಯೋಚಿಸುತ್ತಿರುವಾಗ ಆತ 'ಗೋಡ್ಸೆ ಪುಸ್ತಕ ಇದ್ದರೆ ಕೊಡಿ' ಎಂದು ಕೇಳಿ ಅವಳನ್ನು ಗಾಬರಿಗೊಳಿಸಿದ. ಗಾಬರಿಯಿಂದ ಸಾವರಿಸಿಕೊಂಡ ಅವಳು, ಆ ಪುಸ್ತಕ ಇಲ್ಲವೆಂದೂ, ಗಾಂಧಿ ಆತ್ಮ ಚರಿತ್ರೆ ಇದೆಯೆಂದೂ ಅದನ್ನು ಕೊಡಲಾ? ಎಂದು ಕೇಳಲಾಗಿ, ಆತ ಅದನ್ನು ಓದಿರುವುದಾಗಿ ಹೇಳಿದನಂತೆ. ಕೊನೆಗೆ ಸವಿತಾ ಆತನಿಗೆ ಎರಡು ಬುದ್ಧಿ ಮಾತು ಹೇಳಿ ಗಾಂಧಿಯ 'ಹಿಂದ್ ಸ್ವರಾಜ್' ಕೊಟ್ಟು ಕಳಿಸಿದಳಂತೆ. ಕೊನೆಯ ಮಾತು ಕೇಳಿ ನಾನು ಸಮಾಧಾನ ಪಟ್ಟೆನಾದರೂ, ಒಟ್ಟು ಇಡೀ ಪ್ರಸಂಗ ನನ್ನನ್ನು ನಿರಂತರವಾಗಿ ಕಾಡುತ್ತಲೇ ಇದೆ. ಕಾಡುತ್ತಿರುವ ಪ್ರಶ್ನೆ: 'ನೀತಿ' ಎನ್ನುವುದು ಹೀಗೆ ವಿಕ್ಷಿಪ್ತವಾಗಲು ಕಾರಣವೇನು?

ಗಾಂಧಿಯನ್ನು ಕೊಂದ 'ಪ್ರಸಂಗ'ದಲ್ಲಿ ನೀತಿಯನ್ನು ಕಾಣುವ ಮನಸ್ಸು ನಿನ್ನೆ-ಮೊನ್ನೆಯದೇನಲ್ಲ. ಅದು ಗಾಂಧಿಯನ್ನು ದೈಹಿಕವಾಗಿ ಕೊಂದ ಕಾಲದಲ್ಲೇ ಹುಟ್ಟಿ ಈಗ ಆತ್ಮತಃ ಕೊಲ್ಲುತ್ತಿರುವ ಈ ಕಾಲಘಟ್ಟದವರೆಗೂ ವಿಸ್ತರಿಸುತ್ತಾ ಬಂದಿದೆ. ಗಾಂಧಿ ಕೊಲೆ ವಿಚಾರಣೆಯ ತೀರ್ಪು ಬರೆದ ನ್ಯಾ॥ ಖೋಸ್ಲಾ ಹೇಳುವಂತೆ, ಗೋಡ್ಸೆಯ ವಾದ ಕೇಳಿ ನ್ಯಾಯಾಲಯದಲ್ಲಿ ಹಾಜರಿದ್ದ ಜನಜಂಗುಳಿ ಸ್ಪಂದಿಸುತ್ತಿದ್ದ ರೀತಿ-ನೀತಿಗಳಿಂದ ನ್ಯಾಯಾಲಯವೇನಾದರೂ ಪ್ರಭಾವಿತವಾಗಿದ್ದರೆ, (ಗಾಂಧಿಯನ್ನು ಮರಣೋತ್ತರವಾಗಿ ಶಿಕ್ಷೆಗೊಳಪಡಿಸಿ?)ಗೋಡ್ಸೆಯನ್ನು ಖುಲಾಸೆ ಮಾಡಬೇಕಿತ್ತು! ಇದಕ್ಕೆ ತಕ್ಕನಾಗೇ, ಕಳೆದ ಎಪ್ಪತ್ತರ ದಶಕದಲ್ಲಿ ನಾನು ದೆಹಲಿಯಲ್ಲಿದ್ದಾಗ ನನ್ನ ಮನೆಯ ಮಾಲೀಕನ ಮಕ್ಕಳು ಆರೆಸ್ಸೆಸ್ ಪ್ರಣೀತ 'ಸರಸ್ವತಿ ವಿದ್ಯಾ ಮಂದಿರ' ಶಾಲೆಗಳಲ್ಲಿ ಓದುತ್ತಿದ್ದು, ಅವರಿಗೆ ಗಾಂಧಿ ಬಗ್ಗೆ ಅವರ 'ಮೇಡಂ'ಗಳು ಹೇಳುತ್ತಿದ್ದ ಕಥೆಗಳು ನನ್ನನ್ನು ಗಾಬರಿಗೊಳಿಸುವಂತಿದ್ದವು. ಒಂದು ಉದಾಹರಣೆ: ಗೋಡ್ಸೆಯ ಗುಂಡು ಎದೆಗೆ ನಾಟಿದಾಗ ಗಾಂಧಿ ಬಾಯಿಂದ ಬಂದ ಮಾತು 'ಹೇ ರಾಂ!' ಅಲ್ಲ, 'ಪಕಡೋ ಪಕಡೋ'(ಹಿಡಿಯಿರಿ ಹಿಡಿಯಿರಿ!) ಎಂದು. ಇದು ಇಂದೂ ಹಲವೆಡೆ ಮಕ್ಕಳ ಮನಸ್ಸಿಗೆ ತುಂಬಲಾಗುತ್ತಿರುವ ಇತಿಹಾಸದ ಪರಿ. ಇದರ ವಿಸ್ತರಣೆಯನ್ನೇ ನಾನು ಇತ್ತೀಚೆಗೆ ಹಾಸನದಲ್ಲಿನ ಒಂದು ಅಧ್ಯಯನ ಶಿಬಿರದಲ್ಲಿ ಎದುರಾದ ಭಗತ್ ಸಿಂಗ್ ನೇಣೇರಲು ಮತ್ತು ಸುಭಾಷ್ ಚಂದ್ರ ಬೋಸರು ಕಾಣೆಯಾಗಲು ಯಾರು ಕಾರಣರೆಂಬ ಪ್ರಶ್ನೆಗಳಲ್ಲಿ ಕಂಡದ್ದು. ಹಾಗೇ, ನಾನು ಈ ಹಿಂದೆ ಭಾಗವಹಿಸುತ್ತಿದ್ದ ದಲಿತ ಸಂಘರ್ಷ ಸಮಿತಿಯ ಅಧ್ಯಯನ ಶಿಬಿರಗಳಲ್ಲಿ ಕೇಳಿಬರುತ್ತಿದ್ದ ಮಾತುಗಳು. ಅದರ ಒಂದು ಮಾದರಿ: ಗಾಂಧಿ ಸತ್ತ ಸುದ್ದಿ ಕೇಳಿ ಅಂಬೇಡ್ಕರ್ ಒಂದು ತಪ್ಪಲೆ ತುಂಬ ಹಾಲು ಕಾಯಿಸಿಕೊಂಡು ಕುಡಿದರು! ಇದು ಅಂಬೇಡ್ಕರ್ ವ್ಯಕ್ತಿತ್ವಕ್ಕೆ ಅವಮಾನ ಮಾಡುವ ಮಾತುಗಳೆಂದು ಆ ದಲಿತ ಗೆಳೆಯರಿಗೆ ಹೇಳೋಣವೆಂದರೆ, ಗಾಂಧಿ ಸಾವಿನ ಸಂದರ್ಭದಲ್ಲಿ ಸ್ವತಃ ಅಂಬೇಡ್ಕರ್ ನೀಡಿದ ಕಟು ಹೇಳಿಕೆ ನಮ್ಮ ಬಾಯನ್ನು ಕಟ್ಟುವಂತಿದೆಯಲ್ಲಾ?

3

ಗಾಂಧಿಯ ಮೂರು ಮಹಾ ತಪ್ಪುಗಳು

ಗಾಂಧಿ ಮರಣದ ನಂತರವಷ್ಟೇ ಅಲ್ಲ, ತಮ್ಮ ಜೀವಿತ ಕಾಲದಲ್ಲೇ ಎಡ-ಬಲಗಳಿಂದಷ್ಟೇ ಅಲ್ಲದೆ, ತಮ್ಮ ಕುಟುಂಬದ ಮಧ್ಯದಿಂದಲೂ ವಿರೋಧ, ಟೀಕೆ, ಅಸಮಾಧಾನ, ಬೈಗುಳ, ಖಂಡನೆಗಳನ್ನು ಎದುರಿಸುತ್ತಾ ಬಂದವರು. ಆದರೂ ಅವರು 'ಮಹಾತ್ಮ'ರೆನಿಸಿಕೊಂಡದ್ದು ಯಾರಿಗಾದರೂ ಸೋಜಿಗದ ಸಂಗತಿ ಎನಿಸಬಹುದು. ಅಥವಾ 'ಮಹಾತ್ಮ'ರೆನಿಸಿಕೊಳ್ಳಲು ಇದೂ ಒಂದು ಕಾರಣವಾಗಿರಬಹುದು: ಸುತ್ತಲ ದೂಷಣೆ-ಪ್ರತಿಕೂಲತೆಗಳ ನಡುವೆಯೂ ಅವರು ತಮ್ಮ ಸಾರ್ವಜನಿಕ ಜೀವನದಲ್ಲಿ ವಿಚಲಿತರಾಗದೆ ಸ್ಥಿರವಾಗಿ ನಿಂತು ತಮ್ಮ ನುಡಿ-ನಡೆಗಳೆರಡರ ಮೂಲಕವೂ ಜಗತ್ತು ಕಿವಿಗೊಟ್ಟು ಕೇಳುವಂತಹ ಸಂದೇಶವೊಂದನ್ನು ಸಾರಿದರೆಂದು. ನಿಜ, ಗಾಂಧಿ ಚಿತ್ರದ ಹೊಳಪು ಅವರ ಕೊನೆಯ ದಿನಗಳ ಹೊತ್ತಿಗೆ ಮಸುಕಾಗಲು ಆರಂಭಿಸಿತ್ತು. ಏಕೆಂದರೆ ರಾಷ್ಟ್ರ ವಿಭಜನೆ ಅವರ ಬದುಕಿನ ಒಂದು ದೊಡ್ಡ ಸೋಲೇ ಆಗಿತ್ತು. ಲೋಹಿಯಾ ಹೇಳಿದಂತೆ, ತಮ್ಮ ಶವದ ಮೇಲಷ್ಟೇ ರಾಷ್ಟ್ರ ವಿಭಜನೆ ನಡೆದೀತು ಎಂಬ ಮಾತನ್ನು ಗಾಂಧಿ ಉಳಿಸಿಕೊಳ್ಳದೆ ತಮ್ಮ ಮಹಾತ್ಮತನದಲ್ಲಿ ಒಂದು ಸಿಬಿರಷ್ಟನ್ನು ಕಳೆದುಕೊಂಡಿದ್ದರು. ಅಥವಾ ದೇವನೂರ ಮಹದೇವ ಹೇಳುವಂತೆ ಅವರ ಎತ್ತರ ಆಕಾಶಕ್ಕಿಂತ ಎರಡು ಗೇಣು ಕಡಿಮೆಯಾಯಿತು. ನನ್ನ ಪ್ರಕಾರ ಗಾಂಧಿ ತಮ್ಮ ಸಾರ್ವಜನಿಕ ಬದುಕಿನಲ್ಲಿ, ಮೇಲಿನ ಒಂದು ಸೇರಿದಂತೆ ಮುಖ್ಯವಾಗಿ ಮೂರು ನಿರ್ಣಾಯಕ ತಪ್ಪುಗಳನ್ನು ಮಾಡಿದರು. ಇತರ ಎರಡೆಂದರೆ, ಅವರು ತಮ್ಮ ರಾಷ್ಟ್ರೀಯ ಆಂದೋಲನದ ಆರಂಭದಲ್ಲೇ, ಜನ ಬೆಂಬಲ ಸಂಘಟಿಸಿಕೊಳ್ಳಲೋ ಏನೋ, ಒಡಲೊಳಗೆ ಕೋಮುವಾದಿ ಕಿಡಿ ಹೊತ್ತಿಸಿಟ್ಟುಕೊಂಡಿದ್ದ 'ಖಿಲಾಫತ್' ಚಳವಳಿಗೆ ಬೆಂಬಲ ಘೋಷಿಸಿದ್ದು ಮತ್ತು ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಅಂಬೇಡ್ಕರ್ ಮಾತುಗಳನ್ನು ಅಗತ್ಯ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು ಯತ್ನಿಸದೆ ಸ್ವಲ್ಪ

'ಪೆದ್ದು' ಎನ್ನಬಹುದಾದ ಆತ್ಮವಿಶ್ವಾಸದಲ್ಲಿ, ತಾವೇ ಅಸ್ಪೃಶ್ಯ ಸಮುದಾಯದ ನಾಯಕನೆಂದು ಹೇಳಿಕೊಳ್ಳುವ ಮೂಲಕ ಅವರನ್ನು ಕೆರಳಿಸಿದ್ದು.

ನಾಲ್ಕನೆಯ ತಪ್ಪೂ ಒಂದಿದೆ, ಅದನ್ನು ಸಂಪೂರ್ಣವಾಗಿ ತಪ್ಪು ಎನ್ನಲಾಗದಾದರೂ. ಅದು ಆದದ್ದು 1939ರ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯಲ್ಲಿ ಗಾಂಧಿಯವರ ಅಭ್ಯರ್ಥಿ ಪಟ್ಟಾಭಿ ಸೀತಾರಾಮಯ್ಯನವರು ಸೋತು, ಸುಭಾಷ್ ಚಂದ್ರ ಬೋಸ್ ಗೆದ್ದಾಗ. ಗಾಂಧಿ ಮುನಿಸಿಕೊಂಡು ಕಾಂಗ್ರೆಸ್‌ನ ಎಲ್ಲ ಕಾರ್ಯಕಲಾಪಗಳಿಂದ ದೂರ ಸರಿದು, ಸುಭಾಷ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವಂತಹ ಒತ್ತಡವನ್ನು ಉಂಟುಮಾಡಿದ್ದು. ಇದು ಸಂಪೂರ್ಣ ತಪ್ಪಲ್ಲವೇಕೆಂದರೆ, ಸುಭಾಷ್ ಗೆದ್ದದ್ದೇ, ಆಗ ತಾನೇ ಅಮೆರಿಕಾದಲ್ಲಿ ಮಾರ್ಕ್ಸ್‌ವಾದ ಕಲಿತು ಬಂದಿದ್ದ ಜಯಪ್ರಕಾಶ್ ನಾರಾಯಣ್ ಮಾಡಿದ್ದ ಒಂದು ತಪ್ಪಿನಿಂದಾಗಿ. ಕಾಂಗ್ರೆಸ್ಸಿನಲ್ಲಿನ ಸರ್ದಾರ್ ಪಟೇಲರ ನೇತೃತ್ವದ ಬಲಪಂಥೀಯ ಗುಂಪಿನ ಬೆನ್ನು ಮುರಿಯುವ ಎಡಪಂಥೀಯ ಆವೇಶದಲ್ಲಿ ಜೆಪಿ ತಾವು ನಾಯಕರಾಗಿದ್ದ ಕಾಂಗ್ರೆಸ್ ಸಮಾಜವಾದಿ ಗುಂಪಿನೊಳಕ್ಕೆ ಗಾಂಧಿ ವಿರೋಧಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರಿಗೆ ದೊಡ್ಡ ಪ್ರಮಾಣದಲ್ಲಿ ಪ್ರವೇಶ ನೀಡಿದ್ದರು. (ತದ ನಂತರದಲ್ಲೇ, ಇದು ಎಲ್ಲ ಕಡೆ ರಾಷ್ಟ್ರೀಯ ಹೋರಾಟಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ರೂಪಿಸಲಾಗಿದ್ದ ಕಮ್ಯೂನಿಸ್ಟರ ಜಾಗತಿಕ ಮಟ್ಟದ ಪಿತೂರಿಯ ಒಂದು ಭಾಗ ಎಂಬುದು ಗೊತ್ತಾಯಿತು. ಆಗ ಸ್ವತಃ ಜೇಪಿಯವರ ಮುಂದಾಳತ್ವದಲ್ಲೇ ಅವರನ್ನೆಲ್ಲ ಪಕ್ಷದಿಂದ ಹೊರಹಾಕಲಾಯಿತೆಂಬುದು ಬೇರೆ ವಿಚಾರ.) ಬಹುಶಃ ಗಾಂಧೀಜಿಗೆ ಈ ಸಂದರ್ಭದಲ್ಲಿ ಕಾಂಗ್ರೆಸ್ ತಮ್ಮ ಕೈತಪ್ಪಿ ಹೋಗಿ ತಮ್ಮ ಇಡೀ ಜೀವನದ 'ಸ್ವರಾಜ್ಯ ಸಾಧನೆ'ಯ ಸಾರ್ವತ್ರಿಕ ಗುರಿಯೇ ಕಳೆದುಹೋಗುತ್ತಿದೆ ಎಂಬ ಆತಂಕ ಉಂಟಾಗಿರಬಹುದು. ಹಾಗಾಗಿ, ಅವರು ಹೊರನೋಟಕ್ಕೆ ಅಪ್ರಜಾಸತ್ತಾತ್ಮಕವಾಗಿ ಕಾಣುವ ಇಂತಹ ನಿರ್ಧಾರ ಕೈಗೊಳ್ಳಲು ಮುಂದಾಗಿದ್ದರೆ ಆಶ್ಚರ್ಯವಿಲ್ಲ. ಈ ಚುನಾವಣೆಯಲ್ಲಿ, ಸಮಾಜವಾದಿ ಗುಂಪಿನ ಪ್ರಮುಖ ನಾಯಕರೊಲ್ಲಬ್ಬರಾಗಿದ್ದ ಸ್ವತಃ ಲೋಹಿಯಾರೇ ದೋಲಾಯಮಾನರಾಗಿ, ಕೊನೆಗೆ ಮತ ಚಲಾಯಿಸದಿರಲು ನಿರ್ಧರಿಸಿದರೆಂದರೆ, ಆಗ ಪರಿಸ್ಥಿತಿ ಎಷ್ಟು ನಾಜೂಕಾಗಿತ್ತು ಎಂಬುದು ಗೊತ್ತಾದೀತು.

ಇಷ್ಟರ ಹೊರತಾಗಿ ಗಾಂಧೀಜಿ ಬದುಕು ಪ್ರಕೃತಿ ಸಹಜ, ಸರಳ, ನೇರವಾಗಿತ್ತೆಂದೇ ನನಗನ್ನಿಸುತ್ತದೆ. ಬರೀ ಸಹಜ, ಸರಳ, ನೇರ ಅಲ್ಲ, ಐನ್‌ಸ್ಟೀನ್ ಹೇಳಿದಂತೆ, ಇಂತಹ ಮನುಷ್ಯನೊಬ್ಬ ಮಾಂಸ-ಮೂಳೆಗಳೊಂದಿಗೆ ಈ ಭೂಮಿಯ ಮೇಲೆ ನಡೆದಾಡಿದ್ದ ಎಂದು ಮುಂದಿನ ಜನಾಂಗ ನಂಬಲು ಸಾಧ್ಯವಾಗದಂತಹ ಪವಾಡ ಸದೃಶ ಬದುಕನ್ನು ಅವರು ನಡೆಸಿದ್ದರು. ಅದು, ಆ ಮಹಾತ್ಮನೇ ತನ್ನ ಬದುಕನ್ನು ವರ್ಣಿಸಿಕೊಂಡ ಮಾತುಗಳಲ್ಲೇ ಹೇಳುವುದಾದರೆ, ಸತ್ಯದೊಡನೆ ನಡೆಸಿದ ಪ್ರಯೋಗ. ಸತ್ಯ ಎಂಬುದಿಲ್ಲಿ ಅಮೂರ್ತ ವಸ್ತುವಲ್ಲ; ಒಣ ಅಧ್ಯಾತ್ಮವೂ ಅಲ್ಲ. ಗಾಂಧಿಯ ಮಾತುಗಳಲ್ಲೇ ಹೇಳುವುದಾದರೆ, "ಸತ್ಯದೊಡನೆ ಮುಖಾಮುಖಿ ಎಂದರೆ ಸೃಷ್ಟಿಯ ಅತಿ ಕ್ಷುದ್ರವನ್ನೂ ಅದು ನಾನೇ ಎಂಬಂತೆ ಅದರೊಂದಿಗೆ ಗುರುತಿಸಿಕೊಂಡು ಪ್ರೀತಿಸುವುದು. ಆದ್ದರಿಂದಲೇ ನಾನು ಬದುಕಿನ ಯಾವ ಕ್ಷೇತ್ರದಿಂದಲೂ ಹೊರಗೆ ಇರಲಾರೆ. ಇಂತಹ ಸತ್ಯ ನಿಷ್ಠೆಯೇ ನನ್ನನ್ನು ರಾಜಕಾರಣಕ್ಕೆ ಎಳೆದಿರುವುದು. ಹಾಗಾಗಿಯೇ ರಾಜಕಾರಣಕ್ಕೂ ಧರ್ಮಕ್ಕೂ ಸಂಬಂಧವಿಲ್ಲ ಎನ್ನುವವರಿಗೆ ಧರ್ಮವೆಂದರೇನು ಎಂದು ಗೊತ್ತಿಲ್ಲ ಎಂದು ಹೇಳಲು ನನಗೆ ಸಂಕೋಚವಿಲ್ಲ."

ಅಸಂಬದ್ಧ, ಅಪ್ರಸ್ತುತ, ಪುರಾತನ?

ಬಹುಶಃ ಇಲ್ಲಿಯೇ ಗಾಂಧಿ ಬಹಳ ಜನರ ಕಣ್ಣಿಗೆ ಅಸಂಬದ್ಧರಂತೆ, ಸಂಪೂರ್ಣ ಅಪ್ರಸ್ತುತರಾಗಿ ಹೋಗಿರುವ ನಾಯಕನಂತೆ, ಹೆಚ್ಚೆಂದರೆ ಕೆಲವರ ಪಾಲಿಗೆ ವರ್ಷಕ್ಕೊಮ್ಮೆ ಪೂಜೆಗಷ್ಟೇ ಅರ್ಹರಾದ ಪುರಾತನರಂತೆ ಕಾಣತೊಡಗಿರುವುದು. ಸತ್ಯ ಎಂದೊಡನೆ ಶ್ಲೋಕಗಳು, ಮಂತ್ರಗಳು, ಸುರಾಗಳು, ಅಧ್ಯಾಯಗಳು ಮತ್ತು ಧರ್ಮ ಎಂದೊಡನೆ ದೇವಸ್ಥಾನ, ಮಸೀದಿ, ಚರ್ಚು, ಪುರೋಹಿತರು, ಮುಲ್ಲಾಗಳು, ಪಾದ್ರಿಗಳು, ವ್ರತಗಳು, ಹಬ್ಬಗಳು ಅಥವಾ ಮತ ಬ್ಯಾಂಕುಗಳು ಎಂದಷ್ಟೇ ಗ್ರಹಿಸುವ ಮಟ್ಟಕ್ಕೆ; ಒಳಗೆ ನಮ್ಮ ಬದುಕಿನ ಅಂತರಾಳ ಮತ್ತು ಹೊರಗೆ ರಾಜಕೀಯ ಸಂಸ್ಕೃತಿ ಅವನತಿಗೊಂಡಿರುವ ಈ ದಿನಗಳಲ್ಲಿ ಸತ್ಯವೇ ದೇವರು, ಆ ದೇವರೇ ಧರ್ಮ, ಆ ಧರ್ಮವೇ ರಾಜಕಾರಣ ಎಂಬ ಗಾಂಧಿಯ ಬದುಕನ್ನು ಕುರಿತ ಹಾಸುಹೊಕ್ಕಾದ ಈ ಮಾತು ಯಾರಿಗೆ ತಾನೇ ತಾಕೀತು? ಇದು ಏಕಾಯಾಮದ ಬದುಕಿನ ದಿನಗಳು. ಇಲ್ಲಿ ಸರಕೇ ದೇವರು, ಧರ್ಮ ಮತ್ತು ರಾಜಕಾರಣ. ಇರುವುದೊಂದೇ ಕಾಲ: ವರ್ತಮಾನ, ಈ ದಿನ, ಈ ಕ್ಷಣ. ಹಾಗಾಗಿ ಇರುವುದೊಂದೇ ಮೌಲ್ಯ: ಸುಖ ಅಥವಾ ನಿಖರವಾಗಿ ಹೇಳುವುದಾದರೆ ಮಜಾ. ಈ ಪರಿಸ್ಥಿತಿಯಲ್ಲಿ ಗಾಂಧಿ ಹೇಳುವ ಸೃಷ್ಟಿಯ ಕ್ಷುದ್ರಗಳನ್ನು ಪ್ರೀತಿಸುವ ಮಾತಿರಲಿ, ಕಾಣುವ ಕಣ್ಣಾದರೂ ಹೇಗೆ ಉಳಿದಿದ್ದೀತು? ಅದೂ ಅಂಬೇಡ್ಕರ್‌ವಾದಿಗಳೆನಿಸಿಕೊಂಡವರು, ಈ ಕ್ಷುದ್ರಗಳ ಒಂದು ನಿರ್ದಿಷ್ಟ ಮಾನವ ರೂಪಗಳನ್ನಾದರೂ ಕಂಡು ಕನಲಿದ ಅಂಬೇಡ್ಕರರನ್ನೂ ಈ ಏಕಾಯಾಮದ ಬದುಕಿನ ವಿಗ್ರಹವನ್ನಾಗಿ ಕೆತ್ತತೊಡಗಿರುವಾಗ? ಹಾಗೇ ಅವರ ವ್ಯಕ್ತಿತ್ವವನ್ನು, ಅದರ ಹೊರಚಾಚುಗಳನ್ನು ಅವರ ಕಾಲ ಸಂದರ್ಭದಿಂದ ಇವೊತ್ತಿನ ಕಾಲ ಸಂದರ್ಭಕ್ಕೆ ವಿಸ್ತರಿಸಲು ನಿರಾಕರಿಸುತ್ತಿರುವಾಗ?

> **ತಮ್ಮನ್ನು ಪಾಷಂಡಿ ಗಾಂಧಿವಾದಿಯೆಂದು ಹೆಮ್ಮೆಯಿಂದ ಕರೆದುಕೊಳ್ಳುವ ಲೋಹಿಯರಂತಹ ಲೋಹಿಯಾ ಕೂಡಾ ರಾಷ್ಟ್ರ ವಿಭಜನೆಗೆ ಹಲವು ಕಾರಣಗಳನ್ನು ನೀಡುತ್ತಾ, ಗಾಂಧೀಜಿಯ ಅಹಿಂಸೆಯೂ ಇವುಗಳಲ್ಲಿ ಒಂದೆಂದು ಹೇಳುತ್ತಾರಲ್ಲದೆ, ಅವರ ಉಪವಾಸ ಸತ್ಯಾಗ್ರಹ ಪರಿಕಲ್ಪನೆಯನ್ನು ಬೆದರಿಕೆಯ ತಂತ್ರವನ್ನಾಗಿ ನೋಡಿ ಟೀಕಿಸುತ್ತಾರೆ. ಗಾಂಧೀಜಿಯ ಅಹಿಂಸೆಯನ್ನು ಹಿಂಸೆಗೆ ವಿರುದ್ಧವಾದ ಪರಿಕಲ್ಪನೆಯನ್ನಾಗಿ ನೋಡುವ ಸೀಮಿತ ಗ್ರಹಿಕೆಯ ಫಲವಿದು**

ಆದರೆ ಮಾನವ ಬದುಕಿಗಿರುವ ಬಹು ಆಯಾಮಗಳನ್ನು ಅನ್ವೇಷಿಸುತ್ತಲೇ ಅವುಗಳ ಉದ್ದಗಲಗಳಿಗೂ ತಮ್ಮ ತಾತ್ವಿಕತೆ ಮತ್ತು ಕ್ರಿಯಾಶೀಲತೆಗಳೆರಡರಲ್ಲೂ ವ್ಯಾಪಿಸಿಕೊಂಡಿದ್ದ ಗಾಂಧಿ, ಇಂದು ಈ ಏಕಾಯಾಮದ ಬದುಕಿಗೆ ದೊಡ್ಡ ಸವಾಲಿನಂತೆ ನಮ್ಮೆದುರು ನಿಂತಿದ್ದಾರೆ. ಅವರನ್ನು ಹಿಂದಿನ ಮತ್ತು ಇಂದಿನ ವ್ಯವಸ್ಥೆಯ ಯಜಮಾನರುಗಳು ಏಕಾಯಾಮಕ್ಕೆ ಒಗ್ಗಿಸುವ ಪ್ರಯತ್ನ ಮಾಡಿದಷ್ಟೂ ಅವರ ಬಹು ಆಯಾಮಗಳ ವ್ಯಕ್ತಿತ್ವ ಉಜ್ವಲಗೊಳ್ಳುತ್ತಾ ಹೋಗುತ್ತಿದೆ. ಆ ಮೂಲಕ ಅವರು ಈ ಏಕಾಯಾಮದ ಬದುಕಿನ ಬಿಕ್ಕಟ್ಟುಗಳನ್ನೂ, ಆತ್ಯಂತಿಕ ದುರಂತವನ್ನೂ ಮುನ್ನೋಡಬಲ್ಲವರಾಗಿದ್ದ ಕಾಲಜ್ಞಾನಿಯ ರೂಪ ತಾಳುತ್ತಿದ್ದಾರೆ. ಇದನ್ನು ನಂಬಲು ಅವರ ಬದುಕನ್ನು-ಅದರ ಈವರೆಗಿನ ಸರಳೀಕರಣಗಳನ್ನು ಮೀರಿ, ಅವು ಹುಟ್ಟಿಸಿದ ಹಲವು ಪ್ರಶ್ನೆಗಳನ್ನು ಎದುರಿಸುತ್ತಾ-ಅದರ ಸಂಕೀರ್ಣತೆಯಲ್ಲಿ ನೋಡಿ, ಇಂದೂ ಅವರು ಜೀವಂತವಾಗಿರುವುದರ ಸಾಕ್ಷಿಯಾಗಿ ಅವರ ಉಸಿರಾಟದ ಹಬೆಯನ್ನು ಅನುಭವಿಸಬೇಕಾಗುತ್ತದೆ.

4

ನೋಟದಲ್ಲಿನ ಒಡಕುಗಳು...

ಗಾಂಧಿ ಕೇವಲ ಸ್ವಾತಂತ್ರ್ಯ ಹೋರಾಟಗಾರನೇ? ಸತ್ಯಾಗ್ರಹಿಯೇ? ಸ್ವರಾಜ್ಯವಾದಿಯೇ? ಅಹಿಂಸಾ ತತ್ವ ಪ್ರತಿಪಾದಕನೇ? ಸನಾತನ ಹಿಂದೂವೇ? ಈ ಪ್ರಶ್ನೆಗಳು ಒಂದರೊಳಗೊಂದು ಹಾಸುಹೊಕ್ಕಾಗಿವೆಯಷ್ಟೇ ಅಲ್ಲ, ಅವರ ಬದುಕಿನ ಬೇರೆ ಅವಿಭಾಜ್ಯ (ಒಂದನ್ನು ಬಿಟ್ಟು ಇನ್ನೊಂದು ಇರಲಾಗದಂತಹ) ಅಂಗಗಳ ಬಗೆಗೂ ನಮ್ಮ ಗಮನ ಸೆಳೆಯುವಂತಹವಾಗಿವೆ: ಅವರು ವಕೀಲರಾಗಿದ್ದರು, ವರ್ಣಭೇದ ನೀತಿ ವಿರೋಧಿ ಹೋರಾಟಗಾರರಾಗಿದ್ದರು. ಯುದ್ಧ ಗಾಯಾಳು ಶುಶ್ರೂಷಕರಾಗಿದ್ದರು, ಕಟ್ಟಡ ಕೆಲಸಗಾರರಾಗಿದ್ದರು, ಬಡಗಿ, ಚಮ್ಮಾರಿಕೆಯಲ್ಲೂ ಪರಿಶ್ರಮ ಹೊಂದಿದ್ದರು, ತೋಟಗಾರರಾಗಿದ್ದರು, ಭಾಷಾ ಶಿಕ್ಷಕರಾಗಿದ್ದರು, ಪತ್ರಕರ್ತರಾಗಿದ್ದರು, ಲೇಖಕರಾಗಿದ್ದರು, ವೈದ್ಯರಾಗಿದ್ದರು, ಆಶ್ರಮ ಮೇಲ್ವಿಚಾರಕರಾಗಿದ್ದರು, ಲೆಕ್ಕಾಧಿಕಾರಿಯಾಗಿದ್ದರು, ಪ್ರಾಣಿ ಪೋಷಕರಾಗಿದ್ದರು, ಅರ್ಥಶಾಸ್ತ್ರ ಮತ್ತು ರಾಜನೀತಿ ಪ್ರವೀಣರಾಗಿದ್ದರು... ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವೆಲ್ಲವನ್ನೂ ಅವರ ವ್ಯಕ್ತಿತ್ವ ಸಮೃದ್ಧಿಯನ್ನು ನಿರೂಪಿಸಲು ಇಲ್ಲಿ ಹೇಳುತ್ತಿಲ್ಲ. ಬದಲಿಗೆ, ಮನುಷ್ಯ ಜೀವನದ ಸಾಧ್ಯಾಸಾಧ್ಯತೆಗಳ ಬಗ್ಗೆ ಅವರಿಗಿದ್ದ

ಕುತೂಹಲ, ಆಸಕ್ತಿ ಮತ್ತು ಪರಿಶ್ರಮಗಳನ್ನು ಸೂಚಿಸಲು ಮತ್ತು ಅವರು ಅದನ್ನು ಅದರ ಸಮಗ್ರತೆಯಲ್ಲಿ ಅರ್ಥ ಮಾಡಿಕೊಂಡು; ಅದರಂತೆ–ಅಂದರೆ ಬದುಕನ್ನು ಅದರ ಸತ್ಯಾರ್ಥ ರೂಪಗಳೊಂದಿಗೆ ನಡೆಸುವ ಪ್ರಯೋಗದಂತೆ–ಬಾಳಲೆತ್ನಿಸಿದ ಪರಿಯನ್ನು ಅರ್ಥ ಮಾಡಿಕೊಳ್ಳುವ ಅಗತ್ಯವನ್ನು ಮನಗಾಣಿಸಲು ಹೇಳುತ್ತಿರುವೆ.

ಇಂತಹ ವೈಯುಕ್ತಿಕ ಪ್ರಯೋಗ–ಸಾಹಸದ ಭಾಗವಷ್ಟೇ ಅವರ ಸ್ವಾತಂತ್ರ್ಯ ಹೋರಾಟ ಹಾಗೂ ಅದರ ಭಾಗವಾಗಿ ಅವರು ಪ್ರತಿಪಾದಿಸಿದ ಅಹಿಂಸೆ, ಧರ್ಮ ಮತ್ತು ಜಾತಿ ಪದ್ಧತಿ ಕುರಿತ ಮೀಮಾಂಸೆಗಳು. ಗಾಂಧಿಯನ್ನು ಈ ವಿಶಾಲ ಚೌಕಟ್ಟಿನಲ್ಲಿರಿಸದೇ, ಆ ಹೋರಾಟ ಮತ್ತು ಮಿಮಾಂಸೆಗಳನ್ನು ಬಿಡಿ ಬಿಡಿಯಾಗಿ ನೋಡತೊಡಗಿದಾಗ, ಅಂತಹ ಈ ನೋಡುವಿಕೆಯಲ್ಲೇ ಒಡಕು ಇರುವುದರಿಂದ ಅವರ ಹೋರಾಟ ಮತ್ತು ಮೀಮಾಂಸೆಗಳಲ್ಲಿ ಸಲ್ಲದ ಒಡಕು ಕಾಣತೊಡಗುವುದು ಸಹಜ. ಜೊತೆಗೆ ಗಾಂಧಿ ನಮ್ಮೆಲ್ಲರ ವ್ಯಕ್ತಿತ್ವಗಳಂತೆಯೇ ಒಂದು ಪ್ರಕ್ರಿಯೆಯಾಗಿ ವಿಕಾಸಗೊಂಡ ವ್ಯಕ್ತಿತ್ವ, ನಮ್ಮ ವ್ಯಕ್ತಿತ್ವಗಳಲ್ಲಿನ ಈ ಗುಣವನ್ನೇ ಗಮನಿಸಲಾಗದಷ್ಟು ಇಂದಿನ ತುರುಸಿನ ಬದುಕಿನಲ್ಲಿ ವ್ಯಸ್ತರಾಗಿರುವ ನಾವು ಗಾಂಧಿ ವ್ಯಕ್ತಿತ್ವವನ್ನು, ಅದರಿಂದ ಮೂಡಿದ ತತ್ವ–ಮೀಮಾಂಸೆಗಳನ್ನು ಆಯಾ ಪರಿಪ್ರೇಕ್ಷ್ಯಗಳಲ್ಲಿ ನೋಡಲಾಗದವರಾಗಿ ಅವರನ್ನು ಇಂದಿನಲ್ಲಿ ನಿಂತು ವಿಮರ್ಶಿಸತೊಡಗಿದ್ದೇವೆ. ಮುಖ್ಯವಾಗಿ ಅಹಿಂಸೆ, ಧರ್ಮ ಮತ್ತು ಜಾತಿ ಪದ್ಧತಿಯನ್ನು ಕುರಿತ ವಿಮರ್ಶೆಯಂತೆಯೇ, ಗಾಂಧಿ ಅಂದರೆ ಪೂರ್ಣವಾಗಿ ಏನು ಎಂಬ ವಿರಾಟ್ ಪ್ರಶ್ನೆಯನ್ನು ಕುರಿತೂ ಈ 'ನಿಂತೆ' ವಿಮರ್ಶೆ ಸಾಗುತ್ತಾ, ಇಂದು ರಾಜ್‌ಘಾಟ್‌ನಲ್ಲಿ ವರ್ಷಕ್ಕೊಮ್ಮೆ ಗಣ್ಯಾತಿಗಣ್ಯರ ಕೈಗಳಲ್ಲಿನ ಪುಷ್ಪಗುಚ್ಛದ ರೂಪದಲ್ಲಿ ಸಾಕಾರಗೊಂಡು ನಿಂತಿದೆ.

ಅಹಿಂಸೆಯೆಂಬ ಪ್ರಾಕೃತಿಕ ಗುಣ

ತಮ್ಮನ್ನು ಪಾಷಂಡಿ ಗಾಂಧಿವಾದಿಯೆಂದು ಹೆಮ್ಮೆಯಿಂದ ಕರೆದುಕೊಳ್ಳುವ ಲೋಹಿಯರಂತಹ ಲೋಹಿಯಾ ಕೂಡಾ ರಾಷ್ಟ್ರ ವಿಭಜನೆಗೆ ಹಲವು ಕಾರಣಗಳನ್ನು ನೀಡುತ್ತಾ, ಗಾಂಧೀಜಿಯ ಅಹಿಂಸೆಯೂ ಇವುಗಳಲ್ಲಿ ಒಂದೆಂದು ಹೇಳುತ್ತಾರಲ್ಲದೆ, ಅವರ ಉಪವಾಸ ಸತ್ಯಾಗ್ರಹ ಪರಿಕಲ್ಪನೆಯನ್ನು ಬೆದರಿಕೆಯ ತಂತ್ರವನ್ನಾಗಿ ನೋಡಿ ಟೀಕಿಸುತ್ತಾರೆ. ಗಾಂಧೀಜಿಯ ಅಹಿಂಸೆಯನ್ನು ಹಿಂಸೆಗೆ ವಿರುದ್ಧವಾದ ಪರಿಕಲ್ಪನೆಯನ್ನಾಗಿ ನೋಡುವ ಸೀಮಿತ ಗ್ರಹಿಕೆಯ ಫಲವಿದು ಎಂದೇ ನಾನು ಭಾವಿಸುತ್ತೇನೆ. ಗಾಂಧಿ ಅಹಿಂಸೆಯನ್ನು ಪರ್ವತಗಳಷ್ಟೇ ಹಳೆಯದೆನ್ನುವ ಮೂಲಕ ಅದನ್ನು ಪ್ರಾಕೃತಿಕ ಗುಣವೆಂದು(ಪ್ರಕೃತಿಯನ್ನು ಸಾಮರಸ್ಯದಲ್ಲಿ ಸುಸ್ಥಿರವಾಗಿ ಇಟ್ಟಿರುವ ಶಕ್ತಿ ಎನ್ನುವ ಅರ್ಥದಲ್ಲಿ) ವರ್ಣಿಸಿರುವುದೂ, ಪ್ರಕೃತಿಯಲ್ಲಿ ಅಡಗಿರುವ 'ಹಿಂಸೆ'ಯನ್ನು ಗ್ರಹಿಸಿಯೇ ಈ ಮಾತನ್ನು ಅವರು ಆಡಿದ್ದಾರೆಂಬುದನ್ನು ಮರೆತದ್ದರ ಫಲವಿದು. ಅವರು ಸಾಕಷ್ಟು ವಾಚ್ಯವಾಗಿಯೂ ಆಡಿರುವ, ಹೇಡಿಯ ಅಹಿಂಸೆಗಿಂತ ಧೀರನ ಹಿಂಸೆ ಮೇಲು ಮತ್ತು ಅಹಿಂಸೆಯಲ್ಲಿ ಆತ್ಮ ಸ್ವಚ್ಛೀಕರಣದದ ಹಿಂಸೆಯೂ ಸೇರಿದೆ ಎಂಬ ಮಾತುಗಳನ್ನೂ ನಾವು ಗಮನಿಸಿದಂತಿಲ್ಲ.

ಭಗತಸಿಂಗ್‌ರ ನೇಣು ಶಿಕ್ಷೆಯನ್ನೂ, ಸ್ವತಃ ತಮ್ಮ ಸಾವನ್ನೂ ಅವರು ಈ ತಾತ್ವಿಕ ಗ್ರಹಿಕೆಯಲ್ಲೇ ಆಹ್ವಾನಿಸಿದ್ದರು ಎಂಬುದನ್ನು ನಾವು ಗಮನಿಸಬೇಕು. ಆದರೆ ಅವರು ಭಗತ್ ಸಿಂಗರನ್ನು ನೇಣಿನಿಂದ ಉಳಿಸಲು ಒಳ್ಳೆಯ ವಕೀಲರನ್ನು ನೇಮಿಸುವಂತೆ ಕಾಂಗ್ರೆಸ್ಸಿಗೆ ಸೂಚಿಸಿದ್ದರು. ಹಾಗೇ, ತಾವು 125 ವರ್ಷ ಬದುಕಿ ಜನಸೇವೆ ಮಾಡಬೇಕೆಂಬ ಹೊರಬಯಕೆಯನ್ನು ವ್ಯಕ್ತಪಡಿಸುತ್ತಿದ್ದುದರ ಮಧ್ಯೆಯೇ ಸ್ವಾತಂತ್ರ್ಯಾನಂತರದ ಘಟನೆಗಳ ಹಿನ್ನೆಲೆಯಲ್ಲಿ ಕೆಲ ಬಾರಿ ಸಾವಿನ ಒಳ ಬಯಕೆಗೂ ಒಳಗಾಗುತ್ತಿದ್ದ ಅವರು ಸಹಜವಾಗಿಯೇ, ಸಾವಿನ ತೊಡೆಯ ಮೇಲೆ ನಿರಾತಂಕವಾಗಿ ಮಲಗಬಲ್ಲವನೇ ಧೀರ ಎಂದು ನಂಬಿದ್ದರು ಎಂಬುದನ್ನು ಮರೆಯಲಾಗದು. ಅಹಿಂಸೆಯನ್ನು ಕುರಿತ ಈ ಆಳವಾದ ನಂಬಿಕೆಯ ಮಾತನ್ನು ಅವರು ವ್ಯಕ್ತಿ ಮಟ್ಟದಲ್ಲಿ ಮಾತ್ರವಲ್ಲ, ಒಂದು ಸಮಾಜ, ಒಂದು ರಾಷ್ಟ್ರ ಹಾಗೂ ಒಂದು ನಾಗರೀಕತೆಯ ಮಟ್ಟಗೂ ಸತ್ಯ ಎಂದು ನಂಬಿದ್ದರು. ಆದರೆ ಈ ನಂಬಿಕೆ ರಾಷ್ಟ್ರ ವಿಭಜನೆ, ಆನಂತರದ ಹಿಂಸೆ–ನರಹತ್ಯೆಯ ಸಂದರ್ಭದಲ್ಲಿ ಅವರಿಗೆ ಕೈಕೊಟ್ಟಿತು ನಿಜ. ಆದರೆ ಅದರ ಹಿಂದೆ ಅವರ ಮೂರು ಮಹಾ ತಪ್ಪುಗಳಲ್ಲಿ ಒಂದು ಎಂದು ನಾನು ಹೇಳಿದ ಖಿಲಾಫತ್ ಆಂದೋಲನಕ್ಕೆ ಅವರು ನೀಡಿದ ಬೆಂಬಲದಲ್ಲಿ ಕಾಣುವ ಅಲ್ಪಕಾಲಿಕ ರಾಜಕಾರಣವಿರುವುದನ್ನು ನಾವು ಗಮನಿಸಬೇಕು.

ಅಧಿಕಾರ ರಾಜಕಾರಣದ ವಾಸನೆಯೇ ಇಲ್ಲದಿದ್ದ ದಕ್ಷಿಣ ಆಫ್ರಿಕಾದ ಹೋರಾಟಗಳಲ್ಲಿ ಕಾಣದೇ ಹೋಗಿದ್ದ ಬಹು ಧರ್ಮಗಳ ಸಂದರ್ಭದ ಸಮಸ್ಯೆ ಭಾರತದಲ್ಲಿನ ಹೋರಾಟದ ನಿರ್ಣಾಯಕ ಹಂತದಲ್ಲಿ ಆರಂಭವಾದ ಅಧಿಕಾರ ರಾಜಕಾರಣದ ಸಂದರ್ಭದಲ್ಲಿ ಹೇಗೆ ಭುಗಿಲೇಳಬಹುದು ಎಂಬುದನ್ನು ಅವರು ಊಹಿಸಿರಲಾರರು. ಇದಕ್ಕೆ ಮುಖ್ಯ ಕಾರಣ, ಅವರು ಇಸ್ಲಾಮನ್ನು ಇತರ ಧರ್ಮಗಳಂತೆ ಮನುಷ್ಯನ ಅಧ್ಯಾತ್ಮಿಕ ಹುಡುಕಾಟದ ಸಾಧನ ಎಂದು ನಂಬಿದ್ದು. ಇತರ ಧರ್ಮಗಳು ರಾಜಕೀಯೀಕರಣಕ್ಕೆ ಒಳಗಾಗಬಲ್ಲವುದಾರೂ, ಇಸ್ಲಾಂ ಹುಟ್ಟಿನಿಂದಲೇ ರಾಜಕೀಯ ಧರ್ಮವಾಗಿದ್ದು; ಆ ಕಾರಣದಿಂದಲೇ ಅದು ಅಹಿಂಸೆಯನ್ನು ಒಂದು ಸಾರ್ವತ್ರಿಕ ತತ್ವವಾಗಿ ಮಾನ್ಯ ಮಾಡಲಾಗದ್ದು ಎಂಬುದನ್ನು ಅವರು ಗ್ರಹಿಸದೇ ಹೋದದ್ದು. ಖಿಲಾಫತ್ ಚಳವಳಿಯ ಮೂಲದಲ್ಲೇ ಈ ಅಂಶ ಎದ್ದು ಕಾಣುವಷ್ಟು ಸ್ಪಷ್ಟವಾಗಿದ್ದರೂ, ಅವರು ತಮ್ಮ ಮಹತ್ವಾಕಾಂಕ್ಷೆಯ ಆಂದೋಲನಕ್ಕೆ ವಿಶಾಲ ಜನ ಬೆಂಬಲ ಸಂಘಟಿಸಿಕೊಳ್ಳುವ ಆತುರದಲ್ಲಿ ಈ ತಪ್ಪು ಮಾಡಿದರು. ಇದರ ಪರಿಣಾಮವಾಗಿ ಆ ಮಹತ್ವಾಕಾಂಕ್ಷೆಯ ಆಂದೋಲನ ಯಶಸ್ಸು ಕಾಣುವ ಘಳಿಗೆಯಲ್ಲಿ ಅದೇ ಅವರಿಗೆ ಕೈಕೊಟ್ಟು ಅದರ ಪ್ರತಿಫಲವನ್ನು ಅವರು ಉಣ್ಣಬೇಕಾಯಿತು: ಹಲವರ ಕಣ್ಣಿಗೆ ಅವರ ಬದುಕಿನ ಸಂದೇಶ ವಿಫಲವಾದಂತೆ ಕಂಡ ದುರಂತವನ್ನು ಅವರು ಎದುರಿಸಬೇಕಾಯಿತು. ನಿಜ, ಅವರು ಕೆಲವು ಮುಸಲ್ಮಾನರನ್ನು–ಖಾನ್ ಅಬ್ದುಲ್ ಗಫಾರ್ ಖಾನ್, ಅಬ್ದುಲ್ ಕಲಾಂ ಆಜಾದ್ ಇತ್ಯಾದಿ–ಪ್ರಭಾವಿಸಿದರು. ಆದರೆ ಭಾರತದ ಸಂದರ್ಭದಲ್ಲಾದರೂ ಇತರ ಧರ್ಮಗಳನ್ನು ಪ್ರಭಾವಿಸಿದಂತೆ ಅವರು ಇಸ್ಲಾಮನ್ನು ಪ್ರಭಾವಿಸಲಾಗಲಿಲ್ಲ. ಪ್ರವಾದಿ ಮೊಹಮ್ಮದ್ ತಮ್ಮ ಧ್ಯಾನಾವಸ್ಥೆಯ ಅಂತಿಮ ಹಂತ ತಲುಪಲಾಗಲಿಲ್ಲ ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ಗಾಂಧಿ ಗಮನಿಸಿರಲಾರರು.

ರಾಷ್ಟ್ರ ವಿಭಜನೆ ಎಂಬ ಶಿಕ್ಷೆ

ಅದರೆ ರಾಷ್ಟ್ರ ವಿಭಜನೆಯನ್ನು ಅವರ ಬದುಕಿನ ಒಟ್ಟು ವೈಫಲ್ಯವೆಂದು ಕಾಣುವುದು ಅವರ ಬದುಕನ್ನು ಬಹು ಸೀಮಿತಗೊಳಿಸಿ ನೋಡುವ ತಪ್ಪಾದೀತು, ಅದು ಅವರು ತಮ್ಮ

ಬದುಕಿನಲ್ಲಿ ಮಾಡಿದ ಒಂದು ತಪ್ಪಿಗೆ ಅನುಭವಿಸಿದ ಶಿಕ್ಷೆ ಎಂದಷ್ಟೇ ಪರಿಗಣಿಸಬಹುದೇನೋ. ಆದರೆ ಅದು ಅವರೊಬ್ಬರೇ ಅನುಭವಿಸಿದ್ದಲ್ಲ; ಲಕ್ಷಾಂತರ ಜನ ಅನುಭವಿಸಿದ ಶಿಕ್ಷೆ ಎಂದು ವಾದಿಸುವವರೂ ಉಂಟು. ಆದರೆ ಅದು ಅವರನ್ನು ಸಂಪೂರ್ಣ ಹೊಣೆಗಾರರನ್ನಾಗಿ ಮಾಡಲಾಗದ ರಾಷ್ಟ್ರ ವಿಭಜನೆಯ ಪರಿಣಾಮ ಎಂಬುದನ್ನು ನಾವು ಅರಿಯಬೇಕು. ರಾಷ್ಟ್ರ ವಿಭಜನೆಗೆ ಲೋಹಿಯಾ ಪಟ್ಟಿ ಮಾಡುವ ಕಾರಣಗಳಲ್ಲಿ ಗಾಂಧೀಜಿಯ ಅಹಿಂಸೆಯೂ ಒಂದಷ್ಟೆ. ಅವುಗಳ ಜೊತೆಗೆ ಅವರು ಬ್ರಿಟಿಷ್ ಆಡಳಿತದ ಕುಟಿಲತೆ, ವಯಸ್ಸಾಗುತ್ತಿದ್ದ ಕಾಂಗ್ರೆಸ್ ನಾಯಕರ ಅಧಿಕಾರಾತುರ, ಒಟ್ಟಾರೆ ಜನತೆಯಲ್ಲಿ ಉಂಟಾಗಿದ್ದ ಮಾನಸಿಕ ಆಯಾಸ, ಮುಸ್ಲಿಂ ಲೀಗ್‌ನ ಪ್ರತ್ಯೇಕತಾವಾದದ ಜೊತೆ ಹಿಂದೂ ಧಿಮಾಕು ಸೇರಿ ಸೃಷ್ಟಿಸಿದ್ದ ಮತೀಯ ಗಲಭೆಗೆ ಫಲವತ್ತಾಗಿದ್ದ ರಾಷ್ಟ್ರೀಯ ವಾತಾವರಣ ಎಂದು ಪಟ್ಟಿ ಮಾಡುತ್ತಾರೆ. ಗಾಂಧೀಜಿಗೆ ಈ ಒತ್ತಡಗಳನ್ನು ಮೀರಿ ರಾಷ್ಟ್ರ ವಿಭಜನೆಯನ್ನು ತಪ್ಪಿಸಲು ಆಗ ತಮಗೆ ಸಾಧ್ಯವಿದ್ದ–ಒಂದನ್ನು ಬಿಟ್ಟು–ಎಲ್ಲ ಪ್ರಯತ್ನಗಳನ್ನೂ ಮಾಡಿದರು. ಆದರೆ ಅದರಲ್ಲಿ ಅವರು ಸೋತರೆಂದರೆ, ಅದು ನಾನು ಈ ಮುನ್ನ ಹೆಸರಿಸಿದ ಅವರ ಮೂರನೇ ಮಹಾ ತಪ್ಪುಗಳಲ್ಲಿ ಒಂದು ಎಂಬುದು ನಿಜವಾದರೂ, ಆ ಸೋಲು ಅದೇ ವೇಳೆಗೆ ಇನ್ನೊಂದು ಸತ್ಯವನ್ನು ನಮಗೆ ಮನಗಾಣಿಸುತ್ತದೆ ಎಂಬುದನ್ನೂ ಗಮನಿಸಬೇಕು. ಅದೆಂದರೆ, ನಾವು

ಇಷ್ಟು ಕಾಲ ಮತ್ತು ಭಾವ ದೂರಗಳಲ್ಲಿ ನಿಂತು ಸರಳ ಪಠ್ಯಗಳ ಓದಿನಲ್ಲಿ ಗ್ರಹಿಸಿರುವಂತೆ ಸ್ವಾತಂತ್ರ್ಯ ಹೋರಾಟವೆನ್ನುವುದು, ಅದರ ಕೇಂದ್ರ ಬಿಂದು ಗಾಂಧಿಯಾಗಿದ್ದರೂ, ಒಂದು ಏಕರೂಪಿ ಪ್ರವಾಹವಾಗಿರಲಿಲ್ಲ ಎಂಬುದು. ಅದು ಹಲವು ವಿಭಿನ್ನ ದೃಷ್ಟಿಕೋನಗಳ ಒತ್ತಡ ಗುಂಪುಗಳ ಸಂಕೀರ್ಣ ವಿದ್ಯಮಾನವಾಗಿದ್ದು, ಗಾಂಧಿ ಅಲ್ಲಿ 'ವಿಟೋ' ಚಲಾಯಿಸುವ ಸ್ಥಿತಿ ಇರಲಿಲ್ಲ. ಬದಲಿಗೆ ಅವರು ಒಟ್ಟಾರೆ ಆಂದೋಲನದ ಸಂಘಟಿತ ದನಿಗೆ ಕಿವಿಗೊಡಲೇಬೇಕಾದ ಅನಿವಾರ್ಯತೆಗೂ ಒಳಗಾಗಿದ್ದರು. ಈ ಮಾತನ್ನು ಸರಿಯಾದ ನೆಲೆಯಲ್ಲಿ ಅರ್ಥ ಮಾಡಿಕೊಳ್ಳಲು ರಾಷ್ಟ್ರ ವಿಭಜನೆಯ ಸಲಹೆಯನ್ನು ಚರ್ಚಿಸಲು ನಡೆದ ಕಾಂಗ್ರೆಸ್ ಕಾರ್ಯಕಾರಿ ಸಭೆಯಲ್ಲಿನ ನಡಾವಳಿಯ ಜೀವಂತ ವಿವರಗಳನ್ನೊಳಗೊಂಡ ವಿವಿಧ ನಿರೂಪಣೆಗಳನ್ನು ಗಮನಿಸಬೇಕು. (ಹಾಗೇ, ಶೂದ್ರರ ಮತ್ತು ಹೆಣ್ಣು ಮಕ್ಕಳ ಶಿಕ್ಷಣ ಸಮಾಜ ವಿರೋಧಿ ಕೃತ್ಯ ಎಂದು ನಂಬಿ ಅದರ ವಿರುದ್ಧ ದೊಡ್ಡ ಸಮರವನ್ನೇ ನಡೆಸಿದ ಕಟ್ಟಾ ಸಂಪ್ರದಾಯವಾದಿ ಬಾಲಗಂಗಾಧರ ತಿಲಕರ ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ಗಾಂಧಿ ಸಾಕಷ್ಟು ಸೂಕ್ಷ್ಮವಾಗಿ ಮತ್ತು ಗೌರವಪೂರ್ಣವಾಗಿಯೇ ಎದುರಿಸಿದರೂ, ಅದರ ರೀತಿ ನೀತಿಗಳು ಈಗಲೂ ಕೆಲವು ವಲಯಗಳಿಂದ ಟೀಕೆಗೆ ಒಳಗಾಗುತ್ತಿದೆ ಎಂಬುದನ್ನು ನಾವು ಗಮನಿಸಬೇಕು)

ನನ್ನ ಪ್ರಕಾರ ಆಗ ಗಾಂಧಿ ಮುಂದೆ ಎರಡು ಆಯ್ಕೆಗಳಿದ್ದವು. ಒಂದು, ವೈಯುಕ್ತಿಕವಾಗಿ ರಾಷ್ಟ್ರ ವಿಭಜನೆಯ ಪ್ರಕ್ರಿಯೆಯಿಂದ ದೂರ ಉಳಿಯುವುದು. ಎರಡು, ಉಪವಾಸ ಕೂತು ತಮ್ಮ ಆತ್ಮಬಲದ ಒತ್ತಡದಿಂದ ಎಲ್ಲ ಪಕ್ಷಗಳ ಅತಿಗಳನ್ನು ತಹಬಂದಿಗೆ ತರುವುದು. ಅವರು ಎರಡನೇ ಆಯ್ಕೆ ಮಾಡದೆ, ಮೊದಲನೆಯದರ ಆಯ್ಕೆ ಮಾಡಿದ್ದು; ಅದನ್ನೂ ಕೂಡಾ ಪ್ರತಿಭಟನೆಯಾಗಿ ಮಾಡದೆ ತಮ್ಮ ಅಧ್ಯಾತ್ಮಿಕ ರಾಜಕಾರಣದ('ದೀರ್ಘಾವಧಿ ರಾಜಕಾರಣವೇ ಧರ್ಮ; ಅಲ್ಪಾವಧಿ ಧರ್ಮವೇ ರಾಜಕಾರಣ') ಸಹಜ ಮುಂದುವರಿಕೆಯೆಂಬಂತೆ–ರುದ್ರ ಭೀಕರವೆನ್ನಿಸುವ ನೌಖಾಲಿ ಯಾತ್ರೆ ಮತ್ತು ಪಾಕಿಸ್ತಾನಕ್ಕೆ ಮಾತು ಕೊಟ್ಟಂತೆ ನಗದು ಪಾಲನ್ನು ಕೊಡಬೇಕೆಂಬ ಜನ–ಅಪ್ರಿಯ ಆಗ್ರಹಗಳ ರೂಪದಲ್ಲಿ–ಮಾಡಿದ್ದು ನನ್ನಂತಹವರಿಗೆ ಈಗ ಅವರ ಬದುಕಿನ ಒಂದು ನಿರ್ಣಾಯಕ ಬಿರುಕಾಗಿ, ಹಾಗೇ ಒಂದು ಮಹಾ ತಪ್ಪಾಗಿ ಕಾಣುತ್ತಿದೆ, ನಿಜ. ಆದರೆ ಇಂತಹ ರಾಜಕಾರಣದ ನಿರಂತರತೆಯನ್ನು ಕಾಪಾಡಿಕೊಂಡದ್ದು ತಮ್ಮ ತಪ್ಪಿನ ಪ್ರಾಯಶ್ಚಿತ್ತವಾಗಿಯೇ, ತಾವು ಕಂಡುಕೊಂಡ ಸತ್ಯ ದರ್ಶನದ ಸಮಗ್ರತೆಯ ಪ್ರಯತ್ನವಾವಾಗಿಯೇ ಎಂದು ಗ್ರಹಿಸಲೂ ಇಲ್ಲಿ ಅವಕಾಶವಿದೆಯಲ್ಲವೇ?

ಹೋರಾಟ ಮತ್ತು ಮಿಮಾಂಸೆಗಳನ್ನು ಬಿಡಿ ಬಿಡಿಯಾಗಿ ನೋಡತೊಡಗಿದಾಗ, ಅಂತಹ ಈ ನೋಡುವಿಕೆಯಲ್ಲೇ ಒಡಕು ಇರುವುದರಿಂದ ಗಾಂಧೀಜಿಯವರ ಹೋರಾಟ ಮತ್ತು ಮೀಮಾಂಸೆಗಳಲ್ಲಿ ಸಲ್ಲದ ಒಡಕು ಕಾಣತೊಡಗುವುದು ಸಹಜ.

ಇತಿಹಾಸದ ಸೇಡು?

ಇದಾವುದನ್ನೂ ಗಾಂಧಿ ಮಾಡದೆ, ಗಾಂಧಿ ಮೇಲೆ ಸೂಚಿಸಿದಂತೆ ಎರಡನೇ ಆಯ್ಕೆಯನ್ನು ಮಾಡಿಕೊಂಡಿದ್ದರೆ ಅದು ಲೋಹಿಯಾರಂತಹವರ ದೃಷ್ಟಿಯಿಂದ ಕೇವಲ ಬೆದರಿಕೆಯ ತಂತ್ರವಾಗುತ್ತಿತ್ತಲ್ಲವೇ? ಈ ಆಯ್ಕೆ ಮಾಡಿಕೊಳ್ಳದಿರಲು ಅವರಿಗೆ ಅವರದ್ದೇ ಆದ–ಬಹುಶಃ ತಮ್ಮ ಆತ್ಮಬಲವನ್ನು ಮೀರಿದ ಬಲಗಳು ಹೊರಗಡೆ ಕ್ರಿಯಾಶೀಲವಾಗಿದ್ದು, ರಾಷ್ಟ್ರ ವಿಭಜನೆ ಅನಿವಾರ್ಯ ಎಂಬ ಅರಿವಿನಲ್ಲಿ ಅವರಿಗಷ್ಟೇ ಮನವರಿಕೆಯಾಗಿದ್ದ–ಕಾರಣಗಳೂ ಇರಬಹುದಲ್ಲವೆ? ಆದರೆ ಗಾಂಧಿ ವಿಕ್ಷಿಪ್ತ ಮನಸ್ಸಿನ ಹಿಂದೂವೊಬ್ಬನ ಗುಂಡಿಗೆ ಬಲಿಯಾಗಿ ಅಸು ನೀಗುವ ಬದಲು ರಾಷ್ಟ್ರ ವಿಭಜನೆಯನ್ನು ಪ್ರತಿಭಟಿಸಲು ಉಪವಾಸ ಕೂತು ಅಸು ನೀಗಿದ್ದರೆ ಅವರ ಬದುಕಿಗೆ ಅವರೇ ಹುಡುಕುತ್ತಿದ್ದ ಪೂರ್ಣತೆಯ ಪ್ರಭೆ ಪೂರ್ಣವಾಗಿ ದೊರಕುತ್ತಿತ್ತೋ ಏನೋ! ಇದು ಇತಿಹಾಸವನ್ನು ಧಿಕ್ಕರಿಸಲೆತ್ನಿಸಿದ ಗಾಂಧಿಯ ಮೇಲೆ ಇತಿಹಾಸ ತೀರಿಸಿಕೊಂಡ ಸೇಡೂ ಇರಬಹುದೇನೋ ಯಾರಿಗೆ ಗೊತ್ತು? ಆದರೆ ಇಂತಹ ನಿರ್ದಯ ಇತಿಹಾಸದೆದುರಿನಲ್ಲಿ ಗಾಂಧಿಯಂತಹ ವ್ಯಕ್ತಿತ್ವದ ಪೂರ್ಣತೆಯ ಸಾಧ್ಯಾಸಾಧ್ಯತೆಗಳ ಬಗ್ಗೆ ಮಾತಾಡಲು ನಾವು ಎಷ್ಟರವರು ಎಂಬ ಅಳುಕೂ ನನ್ನಂತಹವರನ್ನು ಕಾಡುತ್ತದೆ.

ಆದರೆ ಆ ಸಾಹಸವನ್ನು ಬಹಳ ಜನ ಮಾಡಿದ್ದಾರೆ. ರಾಜಕಾರಣದ ಈ ನೆಲೆಯಲ್ಲಲ್ಲದಿದ್ದರೂ, ಕೌಟುಂಬಿಕ ಮತ್ತು ಸಾಮಾಜಿಕ ನೆಲೆಯಲ್ಲಿ. ಉದಾಹರಣೆಗೆ, ಮಗ ಹರಿಲಾಲ್, ಗಾಂಧಿ ಬದುಕಿನ ಆದರ್ಶಗಳಿಗೆ ಹಾಕಿದ ಸವಾಲುಗಳು ಮತ್ತು ಅದು ಇಂದು ಉತ್ಪಾದಿಸುತ್ತಿರುವ ಸಾಹಿತ್ಯ–ನಾಟಕ ಮತ್ತು ಸಿನಿಮಾಗಳು. ಇಂದು–ಗಾಂಧಿ ಕುರಿತಂತೆ ಇತಿಹಾಸ ದೂರದಲ್ಲಿ ನಿಂತು ಪಕ್ಕಾ ಆಧುನಿಕ ಸಂಸಾರಸ್ಥರಾಗಿ ಶಾಸ್ತ್ರೀಯ ವಿಶ್ಲೇಷಣೆ ಮಾಡಬಲ್ಲ ಸೌಲಭ್ಯ ಹೊಂದಿದವರಾಗಿರುವ ಸಂದರ್ಭದಲ್ಲಿ–ಈ ಸವಾಲುಗಳು ಬಹು ಗಂಭೀರವಾಗಿ, ವಿಶೇಷವಾಗಿ ಹರಿಲಾಲನ ಬದುಕಿನ ನಾಟಕೀಯವೆನ್ನಿಸುವ ಕರುಣಾಜನಕ ದುರಂತದ ಹಿನ್ನೆಲೆಯಲ್ಲಿ ನ್ಯಾಯಯುತವಾಗಿಯೇ ಕಂಡಾವು. ಆದರೆ ಗಾಂಧಿ ತಾವು ಕಂಡುಕೊಂಡ ದರ್ಶನದಂತೆ ವಿಶ್ವ ಕುಟುಂಬಿಯಾಗಿದ್ದರು. ಹಾಗಾಗಿ, ಅದರ ಚೌಕಟ್ಟಿನಲ್ಲಷ್ಟೇ ಅವರು ವೈಯುಕ್ತಿಕ ಕುಟುಂಬದ ಹಿತವನ್ನು ಕಾಣಲೆತ್ನಿಸುತ್ತಿದ್ದರು. ಈ ಆದರ್ಶ, ಗಾಂಧೀಜಿಯ ಒಟ್ಟು ದರ್ಶನದ, ಅಧ್ಯಾತ್ಮಿಕತೆಯ ಭಾಗವಾಗಿ ಐತಿಹಾಸಿಕ ಮಹತ್ವ ಮತ್ತು ಅನಿವಾರ್ಯತೆಗಳನ್ನೂ ಹೊಂದಿತ್ತು. ಇದನ್ನು ಅರಿಯಲು ನಿರಾಕರಿಸುವವರಿಗೆ ಗಾಂಧಿ ಹರಿಲಾಲನ ವಾದಕ್ಕೆ ಮಣಿದಿದ್ದರೆ ಅವರು ಗಾಂಧಿಯಾಗಿ ಉಳಿಯುತ್ತಿರಲಿಲ್ಲ ಎಂದು ಹೇಳಿದರೆ ಅರ್ಥವಾಗುವುದಾದರೂ ಹೇಗೆ? ಇನ್ನು ಗಾಂಧಿಯ ಪ್ರೇಮ, ಕಾಮಗಳ ಬಗ್ಗೆ ರೋಚಕವಾಗಿ ಚರ್ಚಿಸುವವರ ಬಗ್ಗೆ ಹೆಚ್ಚು ಏನೂ ಹೇಳದಿರುವುದು ಒಳ್ಳೆಯದು. ಆಧುನಿಕ ನಾಗರೀಕತೆಯ ಮನಸ್ಸು, ತನ್ನನ್ನು ಒಂದು ರೋಗವೆಂದು ಕರೆದುದಲ್ಲದೆ ತನ್ನ ವಿರುದ್ಧದ ಹೋರಾಟಕ್ಕಾಗಿ ಬದುಕನ್ನೇ ಮುಡುಪಾಗಿಟ್ಟವನ ಮೇಲೆ ತನ್ನ ಹುಟ್ಟುಗುಣಕ್ಕನುಸಾರವಾಗಿ ಆ ಬದುಕನ್ನೇ ಗ್ರಾಹಕ ವಸ್ತುವಿನಂತೆ ಬಳಸುತ್ತಾ ಹಲ್ಲೆ ಮಾಡುತ್ತಿದೆ ಎಂಬುದರ ಹೊರತಾಗಿ? ಇಲ್ಲಿ ಬಯಲಾಗುತ್ತಿರುವವರಾದರೂ ಯಾರು?

5

ಅಂಬೇಡ್ಕರ್–ಅಂಬೇಡ್ಕರ್‌ವಾದಿಗಳ ಸವಾಲು

ಆದರೆ ಗಾಂಧಿಯನ್ನು ಇಂದು ಹೆಚ್ಚು ಸಮಸ್ಯಾತ್ಮಕವಾಗಿ ಪ್ರಸ್ತುತಪಡಿಸಿರುವುದು ಅವರಿಗೆ ಅಂಬೇಡ್ಕರ್ ಹಾಕಿದ್ದ ಸವಾಲು. ಅದಕ್ಕಿಂತ ಹೆಚ್ಚಾಗಿ ಅಂಬೇಡ್ಕರ್ ಹೆಸರಲ್ಲಿ ಇಂದು ಅಂಬೇಡ್ಕರ್‌ವಾದಿಗಳೆನಿಸಿಕೊಂಡವರು ಹಾಕುತ್ತಿರುವ ಸವಾಲುಗಳು. ಇವುಗಳ ಪರಿಣಾಮವಾಗಿಯೋ ಎಂಬಂತೆ ಮಾಧ್ಯಮಗಳು ಎತ್ತುತ್ತಿರುವ, 'ಈ ರಾಷ್ಟ್ರದಲ್ಲಿ ಗಾಂಧಿಯ ವಾರಸುದಾರಿಕೆ ಕೊನೆಗೊಂಡು ಅಂಬೇಡ್ಕರರ ವಾರಸುದಾರಿಕೆ ಆರಂಭವಾಗಿದೆಯೇ?' ಎಂಬ ಪ್ರಶ್ನೆ. ಇದನ್ನು ವಿವೇಚಿಸುವ ಮೊದಲು ಗಾಂಧಿ–ಅಂಬೇಡ್ಕರ್ ಸಂಬಂಧ ಸಂದರ್ಭದ ಬಗ್ಗೆ ಎರಡು ಮುಖ್ಯ ಸಂಗತಿಗಳನ್ನು ನಾವು ಗಮನಿಸಬೇಕು. ಒಂದು, ಅಂಬೇಡ್ಕರರ ಬಿಂಬ ಸಾರ್ವಜನಿಕವಾಗಿ ದೊಡ್ಡದಾಗಿ ಕಾಣತೊಡಗಿದ್ದು ಇತ್ತೀಚಿನ ಎರಡು ದಶಕಗಳಿಂದೀಚೆಗೆ–ಸಾಮಾಜಿಕ ನ್ಯಾಯವೆನ್ನುವುದು ವಿಶ್ವಾಸಾರ್ಹತೆ ಕಳೆದುಕೊಂಡ ಸಮಾಜವಾದಿ ರಾಜಕಾರಣದಿಂದ ಕಳಚಿಕೊಂಡು, ಅದರ ಪರಿಣಾಮವಾಗಿ ಮೂಡಿದ ಪ್ರತೀಕಾರಾತ್ಮಕ ರಾಜಕಾರಣದ ಭಾಗವಾಗಿ ಸರ್ಕಾರ ಬೃಹತ್ ಪ್ರಮಾಣದಲ್ಲಿ ಪ್ರಾಯೋಜಿಸಿದ ಅಂಬೇಡ್ಕರ್ ಶತಮಾನೋತ್ಸವದ ನಂತರ–ಎಂಬುದು. ಎರಡು, ಗಾಂಧಿ ವಾರಸುದಾರರು(ಇದರಲ್ಲಿ ಗಾಂಧಿವಾದಿಗಳು, ಕಾಂಗ್ರೆಸ್ಸಿಗರು, ಸಮಾಜವಾದಿಗಳು ಎಲ್ಲರೂ ಸೇರುತ್ತಾರೆ) ಗಾಂಧಿಯನ್ನು ಕ್ರಮೇಣ ಮತ್ತು ಈಗ ಇತಿಹಾಸ ಮರೆತ ಹೊಸ ತಲೆಮಾರುಗಳಿಗೆ ಸಂಪೂರ್ಣವಾಗಿ ಅನುಮಾನಾಸ್ಪದ ಮತ್ತು ಅಪ್ರಸ್ತುತ ಎಂಬಂತೆ ಮಾಡಿದ ಮೇಲೆ ಆ ಜಾಗದಲ್ಲಿ ಅಂಬೇಡ್ಕರ್ ಬಿಂಬವನ್ನು ತುಂಬುವ ಕಾರ್ಯ ನಡೆದಿದೆ ಎಂಬುದು.

ಇದಕ್ಕೆ ಮುನ್ನ ಅಂಬೇಡ್ಕರ್ ದಲಿತಪರ ಹೋರಾಟಗಾರರಾಗಿ, ಬಹುಶ್ರುತ ವಿದ್ವಾಂಸರಾಗಿ, ಸಂವಿಧಾನ ನಿರ್ಮಾತೃಗಳಲ್ಲಿ ಒಬ್ಬರಾಗಿ; ಆದರೆ, ಇತಿಹಾಸದಲ್ಲಿ ಅಸಾಧಾರಣವೆಂದೇನೂ ಅನ್ನಲಾಗದ ಒಂದು ಸಾಮಾನ್ಯ ಸ್ಥಾನವನ್ನಷ್ಟೆ ಪಡೆದಿದ್ದರು ಎಂಬುದನ್ನು ನಾವು ಮರೆಯಲಾಗದು. (ಅಥವಾ, ಎಪ್ಪತರ ದಶಕದಲ್ಲಿ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿ ಅಂಬೇಡ್ಕರ್‌ರ ಪುನರನ್ವೇಷಣೆಯನ್ನು ಆರಂಭಿಸುವವರೆಗೂ. ಈಗ ಕೆಲವರು ವಾದಿಸುತ್ತಿರುವಂತೆ ಅವರ ನೆನಪು ರಾಷ್ಟ್ರ ಜೀವನದ ಸ್ಮೃತಿಯಲ್ಲಿ ಉದ್ದೇಶಪೂರ್ವಕವಾಗಿ ದಮನಗೊಂಡಿತ್ತೆಂದು ಹೇಳಬಹುದೇ?) ಜೊತೆಗೆ, ಅಸ್ಪೃಶ್ಯರ ಅವಮಾನ ಮತ್ತು ಶೋಷಣೆಗಳಿಗೆ ಹಿಂದೂ ಧರ್ಮವನ್ನೂ, ಅದರ ತಾತ್ವಿಕತೆಯನ್ನೂ, ಕಾಲಾನುಕಾಲದ ಅದರ ಸವರ್ಣೀಯ ನಾಯಕತ್ವವನ್ನೂ ಮತ್ತು ಅದರ ಸಮಕಾಲೀನ ಪ್ರತಿನಿಧಿಯಾಗಿ ಗಾಂಧಿಯನ್ನು ಗುರುತಿಸಿ ಅವರನ್ನೂ ಸಾರಾಸಗಟಾಗಿ ದೂಷಿಸುತ್ತಾ, ಅದಕ್ಕೆ ಅಗತ್ಯವಾದ ವಿದ್ವತ್ಪೂರ್ಣ ವಾದಗಳನ್ನೂ ಮಂಡಿಸುತ್ತಾ, ಇದರ ಭಾಗವಾಗಿ ಅನಿವಾರ್ಯವೆಂಬಂತೆ ಹಲವು ಬಾರಿ ವಸಾಹತು ಆಳ್ವಿಕೆಯೊಂದಿಗೆ ಗುರುತಿಸಿಕೊಂಡ ಅರೋಪಗಳಿಗೆ ತುತ್ತಾಗುತ್ತಾ ಬಂದ ಅಂಬೇಡ್ಕರ್, ಅಸ್ಪೃಶ್ಯ ಬೆಂಬಲಿಗರನ್ನಷ್ಟೇ

ಗಾಂಧಿ ವಿಕ್ಷಿಪ್ತ ಮನಸ್ಸಿನ ಹಿಂದೂವೊಬ್ಬನ ಗುಂಡಿಗೆ ಬಲಿಯಾಗಿ ಅಸು ನೀಗುವ ಬದಲು ರಾಷ್ಟ್ರ ವಿಭಜನೆಯನ್ನು ಪ್ರತಿಭಟಿಸಲು ಉಪವಾಸ ಕೂತು ಅಸು ನೀಗಿದ್ದರೆ ಅವರ ಬದುಕಿಗೆ ಅವರೇ ಹುಡುಕುತ್ತಿದ್ದ ಪೂರ್ಣತೆಯ ಪ್ರಭೆ ಪೂರ್ಣವಾಗಿ ದೊರಕುತ್ತಿತ್ತೋ ಏನೋ! ಇದು ಇತಿಹಾಸವನ್ನು ಧಿಕ್ಕರಿಸಲೆತ್ನಿಸಿದ ಗಾಂಧಿಯ ಮೇಲೆ ಇತಿಹಾಸ ತೀರಿಸಿಕೊಂಡ ಸೇಡೂ ಇರಬಹುದೇನೋ ಯಾರಿಗೆ ಗೊತ್ತು?

ನೆಚ್ಚಿಕೊಂಡು ಮೀಸಲು ಸ್ಥಾನಗಳಲ್ಲಿ ಕೂಡಾ ಚುನಾವಣೆಗಳಲ್ಲಿ ಗೆಲ್ಲಲು ಆಗಲೇ ಇಲ್ಲ ಎಂಬುದನ್ನು ಕೂಡ ಅವರು ಜಯಶಾಲಿಯಾದ ಮೂರು ಚುನಾವಣೆಗಳಲ್ಲಿ ಮೊದಲನೆಯದನ್ನು ಕಾಂಗ್ರೆಸ್ಸೇತರ ಉದಾರವಾದಿ ಸವರ್ಣೀಯ ಹಿಂದೂ ನಾಯಕರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಗೆದ್ದರೆ, ಮಿಕ್ಕೆರಡರ ಪೈಕಿ ಒಂದರಲ್ಲಿ ಅವರು ಮುಸ್ಲಿಂ ಲೀಗ್ ಪ್ರಾಯೋಜಿತ ಅಭ್ಯರ್ಥಿಯಾಗಿದ್ದರು ಮತ್ತು ಇನ್ನೊಂದರಲ್ಲಿ ಕಾಂಗ್ರೆಸ್ ಪ್ರಾಯೋಜಿತ ಅಭ್ಯರ್ಥಿಯಾಗಿದ್ದರು. (ನನ್ನ ಈ ಮಾಹಿತಿ ತಪ್ಪಿದ್ದರೆ, ದಯವಿಟ್ಟು ತಿದ್ದಲು ಕೋರುವೆ.) ಅವರು ಸಂವಿಧಾನದ ಮುಖ್ಯ ಚಾಲಕ ಶಕ್ತಿಯಾಗಲು ಸಾಧ್ಯವಾದದ್ದೂ, ನಂತರ ಕಾಂಗ್ರೆಸ್ ನೇತೃತ್ವದ ಮಧ್ಯಂತರ ಸರ್ಕಾರದಲ್ಲಿ ಕಾನೂನು ಮಂತ್ರಿಯಾದದ್ದೂ ಕಾಂಗ್ರೆಸ್ಸಿನ ಪ್ರಾಯೋಜಕತ್ವದಲ್ಲೇ. ಇತ್ತೀಚೆಗೆ ದಲಿತ ಸಮುದಾಯದ ಇನ್ನೋರ್ವ ಕಣ್ಮಣಿಯಾಗಿ ಥುತ್ತನೆ ಮೂಡಿರುವ ಜಗಜೀವನರಾಂ ಅವರ ಪತ್ನಿ ಇಂದ್ರಾಣಿದೇವಿಯವರ ನೆನಪುಗಳ ಪುಸ್ತಕದ ಪ್ರಕಾರ ಅಂಬೇಡ್ಕರ್ ತಮ್ಮನ್ನು ಮಂತ್ರಿ ಮಾಡಲು ನೆಹ್ರೂಗೆ ಒಂದು ಮಾತು ಹೇಳುವಂತೆ ಜಗಜೀವನರಾಂ ಅವರನ್ನು ಕೋರಿದ್ದರಂತೆ.

ಗಾಂಧೀಜಿಯ ಪ್ರಾಯಶ್ಚಿತ್ತ?

ಈ ಅಂತೆ ಕಂತೆಗಳು ಏನೇ ಇರಲಿ, ಅಂಬೇಡ್ಕರ್ ಈ ಎರಡೂ ಮಹತ್ವದ ಸ್ಥಾನಗಳನ್ನಲಂಕರಿಸಲು ಅಂದು ಇತರೆಲ್ಲ ಭಾರತೀಯರಿಗಿಂತ ಹೆಚ್ಚು ಸಮರ್ಥರೂ, ಅರ್ಹರೂ ಆಗಿದ್ದರು ಮತ್ತು ಅದನ್ನು ಗಾಂಧಿ ಮಾರ್ಗದರ್ಶನದ ಕಾಂಗ್ರೆಸ್ ತಡವಾಗಿಯಾದರೂ, ಆದರೆ ಅತಿ ಸೂಕ್ತ ಕಾಲದಲ್ಲಿ ಗುರುತಿಸಿ ಮಾನ್ಯ ಮಾಡಿತು ಎಂಬುದನ್ನು ಗಮನಿಸದಿರಲಾಗದು. ಇದಕ್ಕೆ ಆ ಹೊತ್ತಿಗೆ ಅಂಬೇಡ್ಕರ್ ಕೂಡಾ ಅಂದು ತಮಗೆದುರಾದ ಪರಿಸ್ಥಿತಿಯಲ್ಲಿ ಒಂಟಿಯಾಗಿಹೋದ ಅಸಹಾಯಕತೆಯಲ್ಲಿ ಕಾಂಗ್ರೆಸ್, ಸವರ್ಣೀಯ ಹಿಂದೂ ಸಮುದಾಯ ಮತ್ತು ಗಾಂಧಿ ಬಗ್ಗೆ ತಮ್ಮ ನಿಲುವಿನಲ್ಲಿ ಉದಾರವಾದುದೂ ಕಾರಣವಾಗಿತ್ತು. ಹಾಗೇ, ಇದು ಒಂದು ರೀತಿಯಲ್ಲಿ ಗಾಂಧಿ ಅಂಬೇಡ್ಕರ್ ಬಗ್ಗೆ ಆರಂಭದಲ್ಲಿ– ಎರಡನೇ ದುಂಡು ಮೇಜಿನ ಪರಿಷತ್ತಿನ ಸಂದರ್ಭದಲ್ಲಿ–ತೋರಿದ್ದ ಶಠತ್ವಕ್ಕಾಗಿ ಮತ್ತು ಕಾಂಗ್ರೆಸ್ ಸ್ವಾತಂತ್ರ್ಯಾಂದೋಲನದುದ್ದಕ್ಕೂ– ಅವರ ವಾದಗಳು ಎಷ್ಟೇ ಏಕಪಕ್ಷೀಯ ಮತ್ತು ಕಟುವಾಗಿದ್ದರೂ– ಅವರು ಪ್ರತಿನಿಧಿಸುತ್ತಿದ್ದ ಸಮುದಾಯದ ಅವಮಾನ ಮತ್ತು ಶೋಷಣೆಗಳ ದೀರ್ಘ ಇತಿಹಾಸದ ದೃಷ್ಟಿಯಿಂದಲಾದರೂ ಅಗತ್ಯ ಸಹಾನುಭೂತಿಯಿಂದ ಅರ್ಥ ಮಾಡಿಕೊಳ್ಳಲು, ಬಹುಶಃ ತಾನು ಹಾಕಿಕೊಂಡಿದ್ದ ರಾಜಕೀಯ ಚೌಕಟ್ಟು ಹೇರಿದ್ದ ಒತ್ತಾಯಗಳಿಂದಾಗಿ ವಿಫಲವಾಗಿದ್ದುದಕ್ಕಾಗಿ ಮಾಡಿಕೊಂಡ ಪ್ರಾಯಶ್ಚಿತ್ತವೂ ಆಗಿತ್ತು.



ಈ ಎಲ್ಲ ಹಿನ್ನೆಲೆಯಲ್ಲಿ ಅಂಬೇಡ್ಕರ್ ಈಗ ಗಾಂಧಿ ಜಾಗವನ್ನು ತುಂಬಿಕೊಂಡು ಅವರಿಗೆ, ಅವರ ತಾತ್ವಿಕತೆಗೆ, ಆ ತಾತ್ವಿಕತೆಯ ತಥಾಕಥಿತ ವೈಫಲ್ಯಕ್ಕೆ ಪರ್ಯಾಯ, ಪರಿಹಾರ ಒದಗಿಸಿದ್ದಾರೆ ಎಂದು ಹೇಳುವುದು ಅನುಚಿತವಾದೀತು. ಇತಿಹಾಸದಲ್ಲಿ ಇಬ್ಬರಿಗೂ ಅವರವರದೇ ಆದ ಜಾಗಗಳಿವೆ. ಒಂದು ವ್ಯತ್ಯಾಸವೆಂದರೆ ಅಂಬೇಡ್ಕರ್ ಇಂದು ಎದುರಾಗುತ್ತಿರುವ ಸನ್ನಿವೇಶಗಳ ಎದುರಲ್ಲಿ ಮತ್ತೆ ಮತ್ತೆ ಸೃಜನಶೀಲ ಪುನರನ್ವೇಷಣೆಗೆ ಒಳಗಾಗುತ್ತಾ, ಹಿಂದೆಂದಿಗಿಂತ ಹೆಚ್ಚೆಚ್ಚು ಪ್ರಸ್ತುತರಾಗುತ್ತಿದ್ದಾರೆ; ಚರ್ಚೆಗೂ ಒಳಗಾಗುತ್ತಿದ್ದಾರೆ. ಇತಿಹಾಸದ ಪುನಾರಚನೆ ನಡೆಯುತ್ತಿರುವ ಇಂತಹ ಸಂದರ್ಭದಲ್ಲಿ ಗಾಂಧಿ ಹಿನ್ನೆಲೆಗೆ ಸರಿದಂತೆ ತೋರುತ್ತಿರುವುದಕ್ಕೆ ಕಾರಣವಿದೆ. ಅದೆಂದರೆ, ಅವರು ಸ್ವಾತಂತ್ರ್ಯ ನಂತರದಲ್ಲೇ ಜನಾಂದೋಲನ ರೂಪದ ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವಾಗಿ ಪರಿವರ್ತಿಸದೆ ವಿಸರ್ಜಿಸಬೇಕೆಂದು ಹೇಳಿದ್ದರೂ ಅದು ನೆರವೇರದೇ ಹೋಗಿ ಗಾಂಧಿ ಚಿತ್ರದ ಚೌಕಟ್ಟು ಕಾಲದೂರಕ್ಕೆ ಸಿಕ್ಕಿ ಜನಪ್ರಿಯ ನೆಲೆಯಲ್ಲಿ ಕಾಂಗ್ರೆಸ್ ರಾಜಕಾರಣದ ಮಟ್ಟಕ್ಕೆ(ಈ ಮಧ್ಯೆ ಇಂದಿರಾ, ರಾಜೀವ್, ಸೋನಿಯಾ, ರಾಹುಲ್, ಪ್ರಿಯಾಂಕ ಇತ್ಯಾದಿ ಗಾಂಧಿಗಳ ಗೊಂದಲ ಬೇರೆ!) ಸಂಕುಚಿತಗೊಂಡಿರುವುದು. ಗಾಂಧೀಜಿಯ ಈ ಬಯಕೆ ನೆರವೇರದಿರಲು ಪರೋಕ್ಷ ಕಾರಣ, ಸಮಾಜವಾದಿಗಳು ತಮ್ಮ ಅತಿ ಬುದ್ಧಿವಂತಿಕೆಯ ಮೇಲಾಟಗಳಲ್ಲಿ ಸಮತೋಲನ ಕಳೆದುಕೊಂಡು ಸೃಷ್ಟಿಸಿದ ವಿಘಟನಾತ್ಮಕ ರಾಜಕಾರಣದಿಂದಾಗಿ ತಾವು ಕಾಂಗ್ರೆಸ್ಸಿಗೆ ರಾಜಕೀಯ ಪರ್ಯಾಯವಾಗಲು ವಿಫಲರಾದದ್ದು ಎಂಬುದನ್ನೂ ಇಲ್ಲಿ ಹೇಳಬೇಕಾಗಿದೆ.

ಅದೇನೇ ಇರಲಿ, ಗಾಂಧೀಜಿಯ ಪ್ರಸ್ತುತತೆ ಅಥವಾ ಅರ್ಥಪೂರ್ಣತೆ ಇರುವುದು ಸ್ವಾತಂತ್ರ್ಯ ಹೋರಾಟದ ನೇತೃತ್ವ ವಹಿಸಿ ರೂಪಿಸಿದ ಕಾಂಗ್ರೆಸ್ ರಾಜಕಾರಣದಲ್ಲಷ್ಟೇ ಅಲ್ಲ. ಹಾಗಿದ್ದಲ್ಲಿ ಅವರು ತಮ್ಮ ಬದುಕಿನ ಸಾಹಸ ಯಾತ್ರೆಯನ್ನು ಪೂರ್ಣಗೊಳಿಸುವ ಮುನ್ನವೇ ಅಥವಾ ಅದರ ಭಾಗವಾಗಿಯೇ ಕಾಂಗ್ರೆಸ್‌ನ ವಿಸರ್ಜನೆಗೆ ಸೂಚಿಸುತ್ತಿರಲಿಲ್ಲ. ಗಾಂಧೀಜಿ ಸ್ವಾತಂತ್ರ್ಯ ಹೋರಾಟವನ್ನು ಗ್ರಹಿಸಿದ್ದು, ರೂಪಿಸಿದ್ದು, ನಡೆಸಿದ್ದು ಮನುಷ್ಯನನ್ನು(ಸಾರ್ವತ್ರಿಕವಾಗಿ ಹೇಳುವುದಾದರೆ ಜಗತ್ತನ್ನು) ಪಶ್ಚಿಮದ ನಾಗರೀಕತೆಯ ವ್ಯಾಮೋಹದಿಂದ ಬಿಡುಗಡೆಗೊಳಿಸುವ ತಮ್ಮ ಜೀವನ ಸಾರ್ಥಕತೆಯ ಮಹಾಸಾಹಸದ ಭಾಗವಾಗಿ. ಅವರು ಅದನ್ನು ಕಂಡುಕೊಂಡದ್ದು ಇಂಗ್ಲೆಂಡಿನಲ್ಲಿ, ದಕ್ಷಿಣ ಆಫ್ರಿಕಾದಲ್ಲಿ. ಪ್ರಯೋಗ ನಡೆಸಿದ್ದು ಭಾರತದಲ್ಲಿ. ಇದನ್ನು ಅರಿಯಲಾಗದ ಅಂಬೇಡ್ಕರ್‌ವಾದಿಗಳೆನಿಸಿಕೊಂಡವರು, ಅವರಲ್ಲಿ 'ಸನಾತನ ಹಿಂದೂ'ವನ್ನು ಮಾತ್ರ ಕಂಡು–'ಸನಾತನ' ಎಂಬ ಶಬ್ದದ ಅರ್ಥವನ್ನು ತಪ್ಪಾಗಿ ಗ್ರಹಿಸಿದ್ದೇವೆ ಎಂಬುದರ ನೆದರೂ ಇಲ್ಲದೆ– ಅವರ ಮೇಲೆ ಬೆಂಕಿಯುಗುಳುತ್ತಿದ್ದಾರೆ. (ಸನಾತನ ಎಂದರೆ ಆದಿ–ಅಂತ್ಯಗಳಿಲ್ಲದೆ ನಿರಂತರ ಸತ್ಯಾನ್ವೇಷಣೆಯಲ್ಲಿರುವ ನಿತ್ಯ ನೂತನತೆ ಎಂದು.) ಗಾಂಧಿ–ಅಂಬೇಡ್ಕರ್ ಕಾಲದಲ್ಲಿ ದಲಿತ ಸಮೂಹಕ್ಕೆ ಅಂಬೇಡ್ಕರ್ ಭಾಷೆಗಿಂತ ಗಾಂಧೀಜಿ ಭಾಷೆ ಹೆಚ್ಚು ತಲುಪುತ್ತಿತ್ತು ಮತ್ತು ಅಂಬೇಡ್ಕರ್ ಜೊತೆಗಿಂತ ಗಾಂಧಿ ಸನಿಹದಲ್ಲೇ ಹೆಚ್ಚು ದಲಿತರಿದ್ದರು ಎಂಬುದನ್ನು ಮರೆತು.

ಆದರೆ ಇಂದು ಒಟ್ಟು ಸಮಾಜದ ವಿಷಯದಲ್ಲೂ ಆಗಿರುವಂತೆ ಗಾಂಧಿ ಹಿಂದೆ ಸರಿದು, ಬಹುಪಾಲು ದಲಿತರ ದೃಷ್ಟಿಯಲ್ಲಿ ಅಂಬೇಡ್ಕರ್ ಮುನ್ನೆಲೆಗೆ ಬಂದು ಅವರ ಬಹುಮುಖ ವಿದ್ವತ್ತು ಮುಂತಾದ ಇತರ ಅನೇಕ ಕಾರಣಗಳಿಂದಾಗಿ ಎಲ್ಲರ ಗಮನ ಸೆಳೆಯುವಂತಾಗಿದ್ದರೆ, ಅದಕ್ಕೆ ಕಾರಣಗಳು ಎರಡು. ಒಂದು, ಮೊದಲೇ ಹೇಳಿದಂತೆ ಗಾಂಧಿ ವಾರಸುದಾರಿಕೆಯನ್ನು ಅವರ ವ್ಯಕ್ತಿತ್ವದ ಸರಳೀಕರಣದ ಮೂಲಕ ಅಪಮೌಲ್ಯಗೊಳಿಸಲಾಗಿರುವುದು. ಎರಡು, ಇಡೀ ಸಮಾಜದ ಭಾಗವಾಗಿ ದಲಿತರು ಉಳಿದ ಸಮಾಜದಂತೆಯೇ ಆಧುನಿಕ ನಾಗರೀಕತೆಯ ಸಕ್ರಿಯ ಭಾಗೀದಾರರಾಗಿರುವುದು. ಈ ನಾಗರೀಕತೆಯ ನಿರ್ದಯ ಸ್ಪರ್ಧೆಯಲ್ಲಿ ಜಯಶಾಲಿಗಳಾಗಲು ಅವರಿಗೆ ಆಧುನಿಕ ನಾಗರೀಕತೆಯ ಟೀಕಾಕಾರರಾಗಿದ್ದ ಸಾತ್ವಿಕ ಗಾಂಧಿಯ ಕರ್ತವ್ಯಪಾರಾಯಣತೆಯ ಸಾಮಾಜಿಕ ಮಾರ್ಗಕ್ಕಿಂತ, ಅದರ ಅಭಿಮಾನಿಯಾಗಿ ಅದೇ ದಲಿತರ ವಿಮೋಚನೆಗೆ ಪರಿಹಾರವೆಂದು ನಂಬಿದ್ದ ರಾಜಸಿಕ ಅಂಬೇಡ್ಕರ್‌ರ ಹಕ್ಕೊತ್ತಾಯದ ರಾಜಕೀಯ ಮಾರ್ಗವೇ ಹೆಚ್ಚು ಸ್ಫೂರ್ತಿದಾಯಕವಾಗಿ ಕಂಡಿರುವುದರಲ್ಲಿ ಆಶ್ಚರ್ಯವೇನಿಲ್ಲ.

6

ಅಂಬೇಡ್ಕರ್‌ರ ಭೌತವಾದ

ಅಂಬೇಡ್ಕರ್ ಪಶ್ಚಿಮದ ಆಧುನಿಕ ನಾಗರೀಕತೆಯ ಅವಿಮರ್ಶಾತ್ಮಕ ಬೆಂಬಲಿಗರಾಗಿದ್ದರು. ಅವರ ರಾಜಕೀಯ ಮತ್ತು ಆರ್ಥಿಕ ನೀತಿ–ಅವರು ಪ್ರತಿಪಾದಿಸಿದ ಸರ್ಕಾರಿ ಸಮಾಜವಾದವೂ ಸೇರಿದಂತೆ–ಪಶ್ಚಿಮದ ಸಗಟು ಪ್ರಜಾಪ್ರಭುತ್ವ ಮಾದರಿಗಳಿಂದ ಸ್ಫೂರ್ತಿ ಪಡೆದಿತ್ತು. ಕೃಷಿ, ಕೈಗಾರಿಕೆ, ಯಂತ್ರ, ಆಡಳಿತ, ಅಭಿವೃದ್ಧಿ ಯೋಜನೆ, ಈ ಎಲ್ಲ ಕ್ಷೇತ್ರಗಳಲ್ಲೂ ಅವರು ವಿಕೇಂದ್ರೀಕರಣದ ಪರಮ ವಿರೋಧಿಯಾಗಿದ್ದರು. ಹಳ್ಳಿ, ದಲಿತರ ಪಾಲಿನ ನರಕವೆಂದು ದೃಢವಾಗಿ ನಂಬಿದ್ದ ಅವರು ನಗರೀಕರಣದ ಪ್ರತಿಪಾದಕರಾಗಿದ್ದರು. ಅವರು ಕಬೀರ್ ಪಂಥದ ಕೌಟುಂಬಿಕ ಹಿನ್ನೆಲೆಯಿಂದ ಬಂದವರಾಗಿದ್ದರೂ, ಪಶ್ಚಿಮದ ಪ್ರಭಾವದಲ್ಲಿ ಭೌತವಾದಿಯಾಗಿ ಪರಿವರ್ತಿತರಾಗಿದ್ದರು. ಹಾಗಾಗಿಯೇ ಅವರು ಬೌದ್ಧ ಧರ್ಮವನ್ನು ಮಾರ್ಕ್ಸ್‌ವಾದಿ ಪರಿಭಾಷೆಗೆ ಸಮಾನಾಂತರವಾಗಿ ನಿರೂಪಿಸುವ ಪ್ರಯತ್ನ

ಮಾಡಿದರು. (ಬೌದ್ಧ ವಿದ್ವಾಂಸರು ಇದನ್ನು ಒಪ್ಪಲಿಲ್ಲ ಎಂಬುದು ಬೇರೆ ಮಾತು.) ಮೂಲತಃ ಗಾಂಧಿಯಂತೆಯೇ ಧಾರ್ಮಿಕ ಮನಸ್ಸಿನವರಾಗಿದ್ದ ಅಂಬೇಡ್ಕರ್ ಬಹುಶಃ ತಾವು ತಮ್ಮ ಬದುಕಿನ ಸಾರ್ಥಕತೆಯ ಅನ್ವೇಷಣೆಯ ಮಹಾ ಪ್ರಯಾಣದಲ್ಲಿ ಅನಿವಾರ್ಯವಾಗಿ ಆರಿಸಿಕೊಳ್ಳಬೇಕಾಗಿ ಬಂದ ಗಾಂಧಿ ವಿರೋಧಿ ಸಂಘರ್ಷಾತ್ಮಕ ರಾಜಕಾರಣದ ಒತ್ತಡಗಳಿಂದಾಗಿ ಭೌತವಾದವನ್ನು ಆವಾಹಿಸಿಕೊಳ್ಳಬೇಕಾಯಿತು. ಇದರ ವಿರೋಧಾಭಾಸಗಳಿಂದ ಹುಟ್ಟಿದ ಆಂತರಿಕ ವಿಪ್ಲವವನ್ನು ಮೀರಲೆಂದೇ ಅವರು ತಮ್ಮ ಬದುಕಿನ ಕೊನೆ ಘಳಿಗೆಯಲ್ಲಿ ನಾಟಕೀಯ ರೀತಿಯಲ್ಲಿ ಬೌದ್ಧ ಸಂನ್ಯಾಸಿ ವಸ್ತ್ರ ಮತ್ತು ದಂಡ ಧಾರಣೆ ಮಾಡುವ ತೀರ್ಮಾನ ಕೈಗೊಂಡರೇನೋ ಎಂಬ ಅನುಮಾನ ನನ್ನದು. ಇದನ್ನು ನೋಡಲು ಗಾಂಧಿ ಇರಬೇಕಿತ್ತು ಮತ್ತು ಮುಂದಿನ ಪರಿಣಾಮಗಳು ಕುತೂಹಲಕಾರಿಯಾಗಿರುತ್ತಿತ್ತೆಂದು ನನಗೆ ಅನೇಕ ಬಾರಿ ಅನ್ನಿಸಿದೆ. ಅದೇನೇ ಇರಲಿ, ಇಂದಿನ ನನ್ನ ಕೆಲವು ದಲಿತ ನಾಯಕ ಮಿತ್ರರು ಸಭೆಗಳಲ್ಲಿ ಬುದ್ಧ ಬುದ್ಧ ಎನ್ನುತ್ತಲೇ ಬೆಂಕಿಯ ಕಿಡಿಗಳನ್ನು ಉಗುಳುವುದನ್ನು ನೋಡಿದಾಗಲೆಲ್ಲ ಅಂಬೇಡ್ಕರರನ್ನು ಕಾಡಿದ ಈ ದ್ವಂದ್ವದ ತೀವ್ರತೆ ನನ್ನ ಅನುಭವಕ್ಕೆ ಬರುತ್ತದೆ.

ಆದರೆ ಪಶ್ಚಿಮದ ಆಧುನಿಕ ನಾಗರೀಕತೆಯನ್ನೇ ಮುಖಾಮುಖಿ ಮಾಡಿಕೊಂಡು ಅದಕ್ಕೆ ಪರ್ಯಾಯ ರೂಪಿಸುವ ಯುಗಸಾಹಸವೆನ್ನಬಹುದಾದ ಪ್ರಯೋಗದಲ್ಲಿ ತೊಡಗಿದ್ದ ಗಾಂಧೀಜಿಯ ಬದುಕಿನಲ್ಲಿ ಮೊದಲು ನಾವು ಗಮನಿಸಬೇಕಾದದ್ದು, ಅವರು ಮೂಲತಃ ಯಾವ ಮತ್ತು ಎಂತಹ ಸಂದರ್ಭದಲ್ಲೂ 'ವರ್ತಮಾನ'ಕ್ಕಷ್ಟೇ ಬಂಧಿತವಾದ ವ್ಯಕ್ತಿತ್ವವಾಗಿ ಕಾಣುವಂತಹವರಲ್ಲ ಎಂಬುದನ್ನು. ಆದರೆ ಗಾಂಧಿಯೊಂದಿಗೆ ಅಂಬೇಡ್ಕರ್ ನಡೆಸಿದ ಘರ್ಷಣೆ ಪೂರಾ ವರ್ತಮಾನಕ್ಕೆ ಸಂಬಂಧಿಸಿದ್ದಷ್ಟೇ ಆಗಿತ್ತು. ಅದು ಮೇಲೆ ತಿಳಿಸಿದಂತೆ ಜಾತಿ ಪದ್ಧತಿ ಕುರಿತ ನಿಲುವೇ ಆಗಿರಲಿ, ಹಳ್ಳಿಗಳನ್ನು ಕುರಿತ ನಿಲುವೇ ಆಗಿರಲಿ; ಅಥವಾ ಪ್ರಜಾಪ್ರಭುತ್ವದ ಸ್ವರೂಪವನ್ನು ಕುರಿತದ್ದೇ ಆಗಿರಲಿ, ಅಭಿವೃದ್ಧಿ ತಂತ್ರ, ಮಾದರಿಗಳನ್ನು ಕುರಿತದ್ದೇ ಆಗಿರಲಿ, ಇಬ್ಬರ ನಿಲುವುಗಳು–ಕೆಲವು ಘರ್ಷಣಾತ್ಮಕವಾಗುವಷ್ಟು ಮತ್ತೆ ಕೆಲವು ಘರ್ಷಣಾತ್ಮಕವೆನ್ನಿಸುವಷ್ಟು–ವಿಭಿನ್ನವಾಗಿರಲು ಇದೇ ಮೂಲ ಕಾರಣವಾಗಿತ್ತು. ಗಾಂಧಿ ಈ ಕ್ಷಣವನ್ನು ಮನುಷ್ಯನು ಸೃಷ್ಟಿಯ ಭಾಗವಾಗಿ ಮುಳುಗೆದ್ದು ತೇಲುತ್ತಾ ಬಂದಿರುವ ಅನಂತ ಕಾಲ ಪ್ರವಾಹದ ಒಂದು ಬಿಂದುವಾಗಿ ನೋಡುತ್ತಿದ್ದರು. ಆದರೆ ಅಂಬೇಡ್ಕರ್‌ಗೆ ಕಾಲ ಪ್ರವಾಹವು ನಿಯತ ಇತಿಹಾಸವಾಗಿ ಘನೀಭವಿಸಿದ ರೂಪದಲ್ಲಷ್ಟೇ ಕಾಣುತ್ತಿದ್ದು, ಈ ಕ್ಷಣವೆಂಬುದು ಆ ಇತಿಹಾಸದ ಭಾಗವಾಗಿತ್ತು. ಗಾಂಧಿ ನಾಗರೀಕತೆಯ ಅಳತೆಯಲ್ಲಿದ್ದರೆ, ಅಂಬೇಡ್ಕರ್ ಇತಿಹಾಸದ ಅಳತೆಯಲ್ಲಿದ್ದರು. ಹಾಗಾಗಿಯೇ, ಅಂಬೇಡ್ಕರ್ ಮಹಾತ್ಮರು ಮಹಾತ್ಮರ ಭಾಷೆಯಲ್ಲಿ ಮತಾಡದೆ ಸಾಮಾನ್ಯ ಮನುಷ್ಯನ ಭಾಷೆಯಲ್ಲಿ ಮಾತಾಡುವಂತೆ ಗಾಂಧಿಯನ್ನು ಕೆಣಕುತ್ತಿದ್ದುದು. ಈ ಹಿನ್ನೆಲೆಯಲ್ಲಿ ಇವರಿಬ್ಬರ ನಡುವಣ ಘರ್ಷಣೆಗೆ ಮುಖ್ಯ ಕಾರಣವಾದ ಜಾತಿಪದ್ಧತಿಯನ್ನು ಕುರಿತ ನಿಲುವುಗಳನ್ನೇ ನೋಡೋಣ.

ಗಾಂಧಿಯ ಜಾತಿ ಮೀಮಾಂಸೆ

ಗಾಂಧಿ ಜಾತಿಪದ್ಧತಿಯ ಮೂಲವನ್ನು ವರ್ಣ ಧರ್ಮದಲ್ಲಿ, ಆನಂತರ ವರ್ಣ ಪದ್ಧತಿಯಲ್ಲಿ ನೋಡಿ, ಅದು ಈಗ ಶ್ರೇಣೀಕರಣ ಮತ್ತು ಶೋಷಣೆಯ ಸಾಧನವಾಗಿರುವುದನ್ನು ಕಂಡರು. ಹಾಗಾಗಿ ಜಾತಿಪದ್ಧತಿಯ ಕೆಡಕುಗಳನ್ನು ನಿವಾರಿಸಲು ಅವರು ಕಂಡುಕೊಂಡ ಮಾರ್ಗವು, ಜಾತಿಪದ್ಧತಿಯನ್ನು ಇತಿಹಾಸದ, ಹಾಗಾಗಿ ಅದರ ರಾಜಕಾರಣದ ಭಾಗವಾಗಿ ಕಂಡ ಅಂಬೇಡ್ಕರ್ ಅದರ ನಿವಾರಣೆಗಾಗಿ ಕಂಡುಕೊಂಡ ಮಾರ್ಗಕ್ಕಿಂತ ಬೇರೆಯಾಗಿತ್ತು. ಮುಖ್ಯವಾಗಿ ಅದರ ವೇಗ ಮತ್ತು ತೀವ್ರತೆಗಳಲ್ಲಿ. ಸಾಧನ ಮತ್ತು ಸಾಧ್ಯಗಳಲ್ಲಲ್ಲ. ಗಾಂಧಿಯ ಮಾರ್ಗ, ಜಾತಿಪದ್ಧತಿಯನ್ನು ಮೂಲತಃ ಕಾಲಾನುಕಾಲದಲ್ಲಿ ಮನುಷ್ಯ ತನ್ನ ಸಂಸ್ಕೃತಿ–ನಾಗರೀಕತೆಗಳನ್ನು ಕಟ್ಟಿಕೊಳ್ಳುವಲ್ಲಿ ನಡೆಸುತ್ತಾ ಬಂದ ಸಾಮಾಜಿಕ ವ್ಯವಸ್ಥೆಯ ಪ್ರಯೋಗದ ಒಂದು ಉತ್ಪನ್ನವಾಗಿ ಕಂಡಿತ್ತು. ಹಾಗಾಗಿ ಅದು ಅದನ್ನು ಮನುಷ್ಯನೊಳಗಿನ ಅಪರಿಹಾರ್ಯ ದುಷ್ಟತನದ ಪ್ರತೀಕದಂತೆ ಪರಿಗಣಿಸದೆ ಅದನ್ನೊಂದು ತತ್ಕಾಲೀನ ರೋಗವೊಂದಕ್ಕೆ ಮದ್ದು ಅರೆಯುವ ವಿಧಾನವಾಗಿ ವಿನ್ಯಾಸಗೊಳಿಸಿಕೊಂಡಿತ್ತು. ಆದರೆ ಅಂಬೇಡ್ಕರ್‌ಗೆ ಜಾತಿ ಪದ್ಧತಿ, ಅದರ ಓರ್ವ ಕ್ರೂರ ಬಲಿಯಾಗಿ ಅನುಭವಿಸಿದ ನೋವು–ನರಳಾಟಗಳಲ್ಲಿ ಒಂದು ಕ್ಷಿಪ್ರ ಶಸ್ತ್ರ ಚಿಕಿತ್ಸೆಯ ಮೂಲಕ ತಕ್ಷಣ ಕತ್ತರಿಸಿ ಹಾಕಬೇಕಾದ ನಮ್ಮ ಸಾಮಾಜಿಕ ದೇಹದ ಒಂದು ವ್ರಣಭಾಗವಾಗಿ ಕಂಡಿತ್ತು.

ಆದರೆ ಗಾಂಧಿಗೆ ಈ ಶಸ್ತ್ರ ಚಿಕಿತ್ಸೆ ವಿಧಾನ, ಅದು ಯಾವುದರ ಪರಿಹಾರವಾಗುವುದೆಂದು ಅಂಬೇಡ್ಕರ್ ನಂಬಿದ್ದರೋ ಅದರ ಉಲ್ಬಣತೆಗೆ ಕಾರಣವಾಗುವಂತೆ ಕಂಡಿತು. ಏಕೆಂದರೆ ಅವರ ಪ್ರಕಾರ ಜಾತಿ ಪದ್ಧತಿಯ ತರ್ಕ ನಮ್ಮ ಸಾಮಾಜಿಕ ದೇಹದ ಒಂದು ಭಾಗದ ವ್ರಣರೂಪ ಮಾತ್ರವಾಗಿರದೆ ಅದಕ್ಕೆ ಇಡಿಯಾಗಿ ಹತ್ತಿರುವ ಒಂದು ಕುಸಂಸ್ಕೃತಿ–ನಾಗರೀಕತೆಯೆಂಬ ವಿಷದ ರೂಪದಲ್ಲಿಯೂ ಕ್ರಿಯಾಶೀಲವಾಗಿತ್ತು. ಹಾಗಾಗಿಯೇ ಗಾಂಧಿ ಅಸ್ಪೃಶ್ಯರನ್ನು ಹಿಂದೂ ಸಮುದಾಯದ ಮುಖ್ಯ ವಾಹಿನಿಯ ಅವಿಭಾಜ್ಯವಾಗಿಯೇ ಕಾಣುವ ಮತ್ತು ಅವರಿಗೆ ಪ್ರತ್ಯೇಕ ಮತಕ್ಷೇತ್ರಗಳ ಸಲಹೆಗೆ ಒಪ್ಪದ ನಿಷ್ಠುರ ನಿಲುವುಗಳನ್ನು ತಾಳಬೇಕಾಯಿತು. ಹಾಗೇ ಅಸ್ಪೃಶ್ಯತಾ ನಿವಾರಣೆಯ ಕಾರ್ಯಕ್ರಮವನ್ನು ಅವರು, ನಿಜವಾಗಿ 'ಸ್ವರಾಜ್ಯ ಆಂದೋಲನ' ಎಂದೇ ಇಂದು ಗುರುತಿಸಬೇಕಾದ ತಮ್ಮ ಸ್ವಾತಂತ್ರ್ಯ ಆಂದೋಲನದ ರಚನಾತ್ಮಕ ಭಾಗವಾಗಿ ಸಂಯೋಜಿಸಿದರು. ಆದರೆ ಗಾಂಧಿಯ ಈ ಆಲೋಚನಾ ಕ್ರಮವನ್ನು ಹಿಂದೂ ರಾಜಕಾರಣದ ಭಾಗವಾಗಿ ಮಾತ್ರ ಕಾಣುವಷ್ಟು ವರ್ತಮಾನದ ರಾಜಕಾರಣದಲ್ಲಿ ವ್ಯಸ್ತರಾಗುವ ಸ್ಥಿತಿಗೆ ಸಿಕ್ಕಿದ್ದ ಅಂಬೇಡ್ಕರ್‌ಗೆ ಗಾಂಧಿ ಅಸ್ಪೃಶ್ಯರ ಆಜನ್ಮ ಶತ್ರುವಿನಂತೆ ಕಂಡಿದ್ದರೆ ಆಶ್ಚರ್ಯವಿಲ್ಲ. (ಹಾಗೇ ಇಲ್ಲಿ ಅಸ್ಪೃಶ್ಯತೆಯ ಸಮಸ್ಯೆ ಗಾಂಧಿಯನ್ನು ಅಂಬೇಡ್ಕರ್‌ರೊಡನೆ ಆರಂಭವಾದ ಮುಖಮುಖಿಯ ಕಾಲಕ್ಕಿಂತ ಬಹು ಮುಂಚೆಯೇ–ಅವರ ಶಾಲಾ ದಿನಗಳು, ದಕ್ಷಿಣ ಆಫ್ರಿಕಾದಲ್ಲಿನ ಹೋರಾಟದ ದಿನಗಳೂ ಮತ್ತು ಸಾಬರ್ಮತಿ ಆಶ್ರಮದ ಬದುಕಿನ ದಿನಗಳಲ್ಲೂ–ಕಾಡುತ್ತಿತ್ತು ಎಂಬುದನ್ನೂ ಇಲ್ಲಿ ಗಮನಿಸಬೇಕು.)

ಆದರೂ ಅಂದು ಅಸ್ಪೃಶ್ಯರೂ ಸೇರಿದಂತೆ ಸಾಮಾನ್ಯ ಜನತೆಯಿಂದ ಗಾಂಧಿ ಮಾರ್ಗಕ್ಕೇ ಮಾನ್ಯತೆ ದೊರೆಯಿತೆಂಬುದನ್ನು ನಾವು ಗಮನಿಸದಿರಲಾಗದು. ಇಂದು ಅಂಬೇಡ್ಕರ್ ಮಾರ್ಗಕ್ಕೆ ಒಟ್ಟಾರೆ ಸಾಮಾನ್ಯ ಜನತೆಯಿಂದಲ್ಲದಿದ್ದರೂ ತತ್ಕಾಲೀನ ರಾಜಕೀಯ ಹಿತಾಸಕ್ತಿಗಳ ಕಾರಣದಿಂದಾಗಿ ಆಳುವ ವ್ಯವಸ್ಥೆಯಿಂದ ಮಾನ್ಯತೆ ದೊರಕಿದ್ದರೆ, ಅದು ದಲಿತ ಸಮುದಾಯ ಮತ್ತು ಒಟ್ಟಾರೆ ಸಮಾಜದ ನಡುವಣ ಸಂಬಂಧಗಳ ಮೇಲೆ ಯಾವ ಪರಿಣಾಮ ಉಂಟು ಮಾಡಿದೆ ಮತ್ತು ಇದರ ದೀರ್ಘಕಾಲಿಕ ಪರಿಣಾಮಗಳೇನು ಎಂಬುದನ್ನು ನಾವು ತತ್ಕಾಲೀನ ರಾಜಕೀಯ ಆವೇಶಗಳನ್ನು ಮೀರಿ ನಿಂತು ಪರಿಶೀಲಿಸಬೇಕಾಗಿದೆ. ನಿಜ, ಇಂದು ಎದುರಾಗಿರುವ ಜಾಗತೀಕರಣದ ಸಂದರ್ಭದಲ್ಲಿ ಅಂಬೇಡ್ಕರ್‌ರ ಮಾರ್ಗಕ್ಕೆ ಸಂಪೂರ್ಣ ವಿದಾಯ ಹೇಳಿದರೆ ದಲಿತರು 'ವರ್ತಮಾನ'ದ ಅವಕಾಶಗಳನ್ನು ಕಳೆದುಕೊಳ್ಳುವ ಅಪಾಯವಿದೆ ಎಂಬ ವಾದದಲ್ಲಿ ಹುರುಳಿಲ್ಲದಿಲ್ಲ. ಆದರೆ ಈ ಜಾಗತೀಕರಣದ ಮುಂದಿನ ಪರಿಣಾಮಗಳೇನು ಮತ್ತು ಅದಕ್ಕಿಂತ ಮುಖ್ಯವಾಗಿ ಈ ಆತಂಕಕಾರಿ ಪರಿಣಾಮಗಳ ಜಾಗತೀಕರಣವಾದರೂ ಏಕೆ ನಮಗೆ ಎದುರಾಯಿತು ಎಂಬುದನ್ನು ಸ್ವಲ್ಪ ಸಾವಧಾನದಲ್ಲಿ ಯೋಚಿಸಿದಾಗ ಅಂಬೇಡ್ಕರ್ ತಮ್ಮ ಕಾಲದಲ್ಲಿ ಗಾಂಧಿ ಮಾರ್ಗ ಕುರಿತಂತೆ ತಳೆದ ಸಂಪೂರ್ಣ ನಿಷೇಧಾತ್ಮಕ ಮತ್ತು ಕಟುವಾದ ನಿಲುವನ್ನು ಈಗ ತಳೆಯಲಾಗದು ಎಂಬುದರ ಅರಿವಾದೀತು. ಈ ದೃಷ್ಟಿಯಿಂದ ಇವೊತ್ತಿನ ಅಂಬೇಡ್ಕರ್‌ವಾದಿಗಳಲ್ಲಿ ಅತಿ ಹೆಚ್ಚು ಸ್ಪಷ್ಟತೆ ಮತ್ತು ಸಮತೋಲನ ಹೊಂದಿರುವವರೆಂದು ನಾನು ಭಾವಿಸಿರುವ ಆನಂದ್ ತೇಲ್ತುಂಬ್ಡೆ ಅವರಂತಹವರೂ ತಮ್ಮ ಸಂದರ್ಶನವೊಂದರಲ್ಲಿ(ನೋಡಿ: ಸಂವಾದ, ಸೆಪ್ಟಂಬರ್, 2012) ಅಂಬೇಡ್ಕರ್‌ವಾದಿಗಳು ಮೊದಲು ಅಂಬೇಡ್ಕರ್‌ರನ್ನು ಅರಿತುಕೊಳ್ಳಬೇಕೆಂದು ಹೇಳಿರುವುದರ ಜೊತೆಗೇ ದಲಿತರು ಗಾಂಧಿಯಿಂದ ಪಡೆಯಬಹುದಾದದ್ದು ಏನೂ ಇಲ್ಲ ಎಂದು ಹೇಳಿರುವುದು ನನಗೆ ಆಶ್ಚರ್ಯವನ್ನೂ, ವಿಷಾದವನ್ನೂ ಉಂಟು ಮಾಡಿದೆ.

7

ಆಧುನೀಕರಣ ಮತ್ತು ಜಾತಿ ವಿನಾಶ

ಹೌದು, ಜಾಗತೀಕರಣ ಎಂದೆ. ಅದು ಸೃಷ್ಟಿ ಮಾಡುತ್ತಿರುವ ಅವಕಾಶಗಳು ಮತ್ತು ಅವುಗಳಿಂದ ದಲಿತರು ವಂಚಿತರಾಗುವ ಅಪಾಯವಿಲ್ಲದಿಲ್ಲ ಎಂದೆ. ಆದರೆ ಈ ಜಾಗತೀಕರಣವೆಂಬುದು ಅಂಬೇಡ್ಕರ್ ಅವಿಮರ್ಶಾತ್ಮಕವಾಗಿ ಒಪ್ಪಿಕೊಂಡಂತೆ ಕಾಣುವ ಪಶ್ಚಿಮದ ಆಧುನಿಕತೆಯ ಇತ್ತೀಚಿನ ಅವತಾರ ಎಂಬ ಅಂಶದ ಹಿನ್ನೆಲೆಯಲ್ಲಿ ಈ ಮಾತನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಹಾಗೇ, ಅವರ ಗ್ರಾಮ ವಿರೋಧಿ, ಕೈಗಾರಿಕೀಕರಣ ಪರವಾದ



ಆರ್ಥಿಕ ನೀತಿಯ ಹಿಂದಿದ್ದ ಈ ಆಧುನೀಕರಣ ಪ್ರಕ್ರಿಯೆ ಜಾತಿಯನ್ನು ಹಿನ್ನೆಲೆಗೆ ಸರಿಸಿ ಕ್ರಮೇಣ ಇಲ್ಲವಾಗಿಸುತ್ತದೆಂಬ ನಂಬಿಕೆ ಮತ್ತು ತರ್ಕ ಎಷ್ಟರಮಟ್ಟಿಗೆ ನಿಜವಾಗಿದೆ ಎಂದೂ ಕೇಳಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ಹಾಗೇನೂ ನಂಬಿರಲಿಲ್ಲ, ತರ್ಕಿಸಿರಲಿಲ್ಲ ಎಂದು ವಾದಿಸುವವರು ಅಂಬೇಡ್ಕರ್ ನಮ್ಮ ಸಂವಿಧಾನದ ಮುಖ್ಯ ಚಾಲಕ ಶಕ್ತಿಯಾಗಿ, ವಕ್ತಾರರಾಗಿ ಮೀಸಲಾತಿ ತತ್ವವನ್ನು ಅಳವಡಿಸುವುದರ ಜೊತೆಗೇ (ಜನಪ್ರಿಯ ನಂಬಿಕೆಗೆ ವಿರುದ್ಧವಾಗಿ, ಇದಕ್ಕೆ ಮೊದಮೊದಲು ಅಂಬೇಡ್ಕರರ ವಿರೋಧವಿತ್ತೆಂದೂ, ನಂತರ ರಾಜಕೀಯ ಮೀಸಲಾತಿಯನ್ನು ಹತ್ತು ವರ್ಷಗಳಿಗೆ ಮತ್ತು ಸರ್ಕಾರಿ ಸೇವಾ ಮೀಸಲಾತಿಯನ್ನು ಹೆಚ್ಚೆಂದರೆ ನಲವತ್ತು ವರ್ಷಗಳಿಗೆ ಕಟ್ಟುನಿಟ್ಟಾಗಿ ಸೀಮಿತಗೊಳಿಸಬೇಕೆಂದು ಹೇಳಿದ್ದನ್ನು, ತಾವು ಸಂವಿಧಾನ ಸಭೆಯಲ್ಲಿ ಅದರ ಕಿರಿಯ ಸದಸ್ಯನಾಗಿ ಆಲಿಸಿದ್ದಾಗಿ ಲೋಕಸಭೆಯ ಮಾಜಿ ಕಾರ್ಯದರ್ಶಿಯೂ, ಹಿರಿಯ ಸಂವಿಧಾನ ತಜ್ಞರೂ ಆದ ಸುಭಾಷ್ ಕಶ್ಯಪ್ ಇತ್ತೀಚೆಗೆ ಟಿ.ವಿ. ಚರ್ಚೆಯೊಂದರಲ್ಲಿ ದಾಖಲಿಸಿದ್ದಾರೆ.) ಜಾತಿ ವಿನಾಶದ ಉದ್ದೇಶ ಮತ್ತು ಅದನ್ನು ಖಚಿತಪಡಿಸಿಕೊಳ್ಳುವ ಕಾರ್ಯಕ್ರಮವೊಂದನ್ನು ಸಂವಿಧಾನದ ಆಯಕಟ್ಟಿನ ಜಾಗದಲ್ಲಿ ಏಕೆ ಅಳವಡಿಸಲಿಲ್ಲ ಎಂದು ಕೇಳಬೇಕಾಗುತ್ತದೆ.

ಇದಕ್ಕೆ ಇತರರ ವಿರೋಧವಿತ್ತು ಎನ್ನುವುದಾದರೆ, ಮುಂದೆ ಕಾನೂನು ಮಂತ್ರಿಯಾಗಿ ಹಿಂದೂ ವೈಯುಕ್ತಿಕ ಕಾನೂನು ತಿದ್ದುಪಡಿ ಮಸೂದೆ ವಿಷಯದಲ್ಲಿ ಪಟ್ಟು ಬಿಡದವರಾಗಿ ರಾಜೀನಾಮೆ ನೀಡಿದಂತೆ ಈ ವಿಷಯದಲ್ಲೂ ಅವರು ಪಟ್ಟು ಬಿಡದೆ ಏಕೆ ಹೋರಾಡಲಿಲ್ಲ ಎಂದು ಕೇಳಬೇಕಾಗುತ್ತದೆ. ಹಾಗೇ, ಕೇಂದ್ರೀಕೃತ ಅಥವಾ ಏಕಾತ್ಮಕ ರಾಷ್ಟ್ರ ಕಲ್ಪನೆ ಸಹಿತವಾದ ಸಂಸದೀಯ ಪ್ರಜಾಪ್ರಭುತ್ವ ರೂಪದ ಪ್ರಾತಿನಿಧಿಕ ರಾಜಕಾರಣ ಮತ್ತು ಮೀಸಲಾತಿ ಎರಡೂ ಸೇರಿ ತಮ್ಮ ಇಡೀ ಬದುಕಿನ ಹೋರಾಟದ ಪರಮ ಗುರಿಯಾಗಿದ್ದ ಜಾತಿ ವಿನಾಶವನ್ನು ಸಾಧಿಸುತ್ತದೆ ಎಂದು ಅಂಬೇಡ್ಕರ್ ನಂಬಿದ್ದರೇ? ಎಂದೂ ಕೇಳಬೇಕಾಗುತ್ತದೆ. ಅವರು ಹಾಗೆ ನಂಬಿದ್ದರೆ ಅವರ ನಂಬಿಕೆ ಇಂದು ಹುಸಿಯಾಗಿದೆ ಎಂದೂ ಹೇಳಬೇಕಾಗುತ್ತದೆ.

ಅಂಬೇಡ್ಕರ್‌ವಾದಿಗಳ ಹಳೆಯ ರಾಗ

ಇಂದು ಗಾಂಧಿ ತೀವ್ರವಾಗಿ ನೆನಪಿಗೆ ಬರುತ್ತಿರುವುದು ಇಲ್ಲೇ. ನಿರ್ದಿಷ್ಟವಾಗಿ ಜಾತಿ ಸಮಸ್ಯೆಯ, ವಿಶೇಷವಾಗಿ ಅಸ್ಪೃಶ್ಯತಾ ಅಚರಣೆಯ ನಿವಾರಣೆಗಾಗಿ ಗಾಂಧಿ ಬದ್ಧರಾಗಿ ತಮ್ಮ ಜಾತಿ ಮೀಮಾಂಸೆಯನ್ನು ಪದೇ ಪದೇ ಪುನರಾವಲೋಕನಕ್ಕೆ ಒಳಪಡಿಸುತ್ತಾ ಕೊನೆಗೆ ತಮ್ಮ ವೈಯುಕ್ತಿಕ ಮಿತಿಯಲ್ಲೇ ಆದರೂ ಅಂಬೇಡ್ಕರ್ ನಿರೀಕ್ಷೆಗಿಂತ ಒಂದು ಹೆಜ್ಜೆ ಮುಂದೆ ಹೋದರು ಎಂದು ಹೇಳಬಹುದಾದ ನಿರ್ಧಾರಕ್ಕೆ ಬಂದರು ಎನ್ನುವುದರಲ್ಲಿ. ಅಂತರ್ಜಾತಿಯಲ್ಲದ ಯಾವುದೇ ಮದುವೆಗೂ ತಾವು ಬರುವುದಿಲ್ಲವೆಂದೂ, ದಂಪತಿಗಳಲ್ಲಿ ಒಬ್ಬರಾದರೂ ಅಸ್ಪೃಶ್ಯರಾಗಿರದಿದ್ದಲ್ಲಿ ತಮ್ಮ ಆಶ್ರಮದಲ್ಲಿ ಅವರ ಮದುವೆಗೆ ಅವಕಾಶ ನೀಡುವುದಿಲ್ಲವೆಂದೂ ಅವರು ಘೋಷಿಸಿದರು. ಆದರೂ ಹಲವು ಅಂಬೇಡ್ಕರ್‌ವಾದಿಗಳು ಗಾಂಧಿ ಜಾತಿ ಪದ್ಧತಿ ಪರವಾಗಿದ್ದರು ಎಂಬ ತಮ್ಮ ಹಳೇ ರಾಗವನ್ನು ಹಾಡುತ್ತಲೇ ಇದ್ದಾರೆ ಎಂದರೆ ಏನು ಹೇಳೋಣ? ನಮ್ಮ ಸಂವಿಧಾನ ಎತ್ತಿ ಹಿಡಿಯುವ ಆಧುನಿಕ ಪ್ರಜಾಪ್ರಭುತ್ವ ಪದ್ಧತಿಯು ಸಾಮಾನ್ಯ ಮನುಷ್ಯನನ್ನು, ನಿರ್ದಿಷ್ಟವಾಗಿ ಭಾರತೀಯನನ್ನು ಜಾತಿ ಮತ್ತು ವರ್ಗ ಪದ್ಧತಿಯೂ ಸೇರಿದಂತೆ ಯಾವುದೇ ಶೋಷಣಾ ಪದ್ಧತಿಯಿಂದ ನಿಜಾರ್ಥದಲ್ಲಿ ಬಿಡುಗಡೆಗೊಳಿಸಲಾರದು ಎಂದು ಗಾಂಧಿ ನಂಬಿದ್ದರು. ಇದನ್ನು ಮನುಷ್ಯನ ದುರಂತವನ್ನು ಜಾತಿ ಚೌಕಟ್ಟಿನಲ್ಲಷ್ಟೇ ಗ್ರಹಿಸುವ ಒತ್ತಾಯಕ್ಕೆ ಸಿಕ್ಕಿರುವವರು ಮತ್ತು ಅದರಿಂದ ಬಿಡುಗಡೆಗೊಳ್ಳಬಯಸದವರು ಅರ್ಥ ಮಾಡಿಕೊಳ್ಳುವುದಾದರೂ ಹೇಗೆ? ಗಾಂಧೀಜಿ ಪ್ರಕಾರ ಮನುಷ್ಯನ ದೇಹಾತ್ಮಗಳ ನಡುವೆ ಒಡಕು ಉಂಟು ಮಾಡುವ ಸಂಕೀರ್ಣ ಯಂತ್ರಗಳನ್ನಾಧರಿಸಿದ ಕೈಗಾರಿಕೀಕರಣ, ಕಣ್ಣಾಸರೆಯಿಂದ ದೂರಕ್ಕೆ ಹಬ್ಬಿಹೋಗಿರುವ ಆಡಳಿತ ವ್ಯವಸ್ಥೆ, ವ್ಯಾಜ್ಯಗಳಿಗೆ ಸಂಬಂಧವೇ ಇಲ್ಲದಿರುವವರಿಂದ ನಿರ್ವಹಿಸಲ್ಪಡುವ ಜಡ ನ್ಯಾಯದಾನ ಪದ್ಧತಿ ಮತ್ತು ಇವನ್ನೆಲ್ಲ ಸಮರ್ಥಿಸಲೆಂದೇ ಹುಟ್ಟಿಕೊಂಡ ಇತಿಹಾಸ ರಚನೆ –ಇವು ಮುಖ್ಯವಾಗಿ ಪಶ್ಚಿಮದ ಆಧುನಿಕ ನಾಗರೀಕತೆಯ ಹತಾರಗಳಾಗಿದ್ದು, ಈ ಹತಾರಗಳಿಂದಲೇ ಭಾರತವನ್ನು ಗುಲಾಮ ದೇಶವನ್ನಾಗಿ ಮಾಡಲಾಗಿದೆ. ಇಂತಹ ನಾಗರೀಕತೆಯ ಮೌಲ್ಯಗಳು ಮತ್ತು ಮಾದರಿಗಳಿಂದ ಸಜ್ಜಾದ ಈ ಆಧುನಿಕ ಸಂಸದೀಯ ಪ್ರಜಾಪ್ರಭುತ್ವ ಪದ್ಧತಿಯು ಭಾರತೀಯ ನಾಗರೀಕತೆಯ ಮೂಲ ಮಾತೃಕೆಗಳಿಗೇ ಆಘಾತ ಉಂಟುಮಾಡುವಂತಹದ್ದಾಗಿದೆ. ಇದು ಅವನನ್ನು ಗುರುತು ಕಳೆದುಕೊಂಡ ಎಡಬಿಡಂಗಿಯನ್ನಾಗಿಸಿ ಅವನ ದೇಶದಲ್ಲೇ ಅವನನ್ನು ನಿರಾಶ್ರಿತನನ್ನಾಗಿ ಪರಿವರ್ತಿಸಿಬಿಡುತ್ತದೆ ಹಾಗೂ ಇದರ ಮೊದಲ ಬಲಿ ಸಹಜವಾಗಿ ದಲಿತರೇ ಆಗಿರುತ್ತಾರೆ ಎಂಬುದು ಗಾಂಧೀಜಿಯ ವಾದವಾಗಿತ್ತು. ಇದನ್ನೇ ಲೋಹಿಯಾ ಮುಂದುವರೆಸಿ, ತಮ್ಮ ಸಮಾಜವಾದದ ಜಾತಿ ವಿನಾಶ, ವಿಕೇಂದ್ರೀಕೃತ ತಂತ್ರಜ್ಞಾನ ಮತ್ತು ಆಡಳಿತ ಹಾಗೂ ಭಾಷಾ ನೀತಿಯನ್ನು ರೂಪಿಸಿಕೊಂಡದ್ದು. ಆದರೆ ಇವುಗಳ ಕಾರ್ಯಕ್ರಮ ರೂಪಗಳಲ್ಲಿ ಸಮಕಾಲೀನ ರಾಜಕಾರಣದ ಏಳುಬೀಳುಗಳನ್ನು ಮೀರಲಾಗದ ಅಸಹಾಯಕತೆಯಲ್ಲಿ ಹುಟ್ಟಿದ ಕಹಿ–ಕ್ರೋಧಗಳು ಸೇರಿಕೊಂಡಿದ್ದರಿಂದ ಅವರ ರಾಜಕಾರಣ ದಾರಿ ತಪ್ಪಿತು.

ಗಾಂಧಿಯ ಮುನ್ನೋಟ

ಅದೇನೇ ಇರಲಿ, ಗಾಂಧೀಜಿಯ ಈ ಮುನ್ನೋಟ ಕೇವಲ ಅಮೂರ್ತ ವಾದವಾಗಲೀ ಅಥವಾ ಯಥಾಸ್ಥಿತಿವಾದಿಯೊಬ್ಬನ ಹುಸಿ ಆತಂಕವಾಗಲೀ ಆಗಿರಲಿಲ್ಲ ಎಂಬುದು ಇಂದು ದಿನೇ ದಿನೇ ರಾಷ್ಟ್ರಾದ್ಯಂತ ಹೊಸ ಹೊಸ ಹೆಸರುಗಳಲ್ಲಿ ಹೊಮ್ಮುತ್ತಿರುವ ಲಕ್ಷಾಂತರ ಸಂಖ್ಯೆಯ ನಿರಾಶ್ರತರೇ ಸಾಕ್ಷಿಯಾಗಿದ್ದಾರೆ. ಸಾಂಪ್ರದಾಯಿಕ ಜಾತಿ ಮತ್ತು ಕೋಮು ಗಲಭೆಗಳ ನಿರಾಶ್ರಿತರ ಜೊತೆಗೀಗ ಅಣೆಕಟ್ಟೆ ನಿರಾಶ್ರಿತರು, ಕೈಗಾರಿಕಾ ನಿರಾಶ್ರಿತರು, ಕೈಗಾರಿಕಾ ದುರಂತ ನಿರಾಶ್ರಿತರು, ಗಣಿಗಾರಿಕೆ ನಿರಾಶ್ರಿತರು, ಆತ್ಮಹತ್ಯೆ ಸರಣಿಗೆ ಸಿಲುಕಿರುವ ರೈತರ ಕುಟುಂಬಗಳ ಹಸಿರು ಕ್ರಾಂತಿ ನಿರಾಶ್ರಿತರು ಇತ್ಯಾದಿ. ವಲಸೆಯೆಂಬ ಬುಡ ಕಡಿದುಕೊಳ್ಳುವ ಅತಿ ಕಠೋರ ಶಿಕ್ಷೆಗೆ ಒಳಗಾಗಿರುವ ಇವರನ್ನೆಲ್ಲ ಸ್ಥೂಲವಾಗಿ ಒಂದೇ ಹೆಸರಿನಲ್ಲಿ ಕರೆಯುವುದಾದರೆ, 'ರಾಷ್ಟ್ರ ನಿರ್ಮಾಣ' ಕಾರ್ಯದ ನಿರಾಶ್ರಿತರು ಎಂದು ಕರೆಯಬಹುದಾಗಿದೆ ಎಂಬುದೇ ಇಂದಿನ ಒಂದು ಕ್ರೂರ ವ್ಯಂಗ್ಯವಾಗಿದೆ. ಇವರನ್ನು ಬಿಟ್ಟರೆ ಮಿಕ್ಕವರೆಲ್ಲ ರಾಷ್ಟ್ರ ಜೀವನದಲ್ಲಿ ನೆಮ್ಮದಿಯಿಂದಿದ್ದಾರೆ ಎಂದೇನಲ್ಲ. ಅವರಲ್ಲಿ ಬಹುಪಾಲು ಜನರು (ಹೊಸ ಮಧ್ಯಮ ವರ್ಗದವರು) ಜಾಗತೀಕರಣ ಎಂದು ಕರೆಯಲಾಗುವ ಆಧುನೀಕರಣದ ತರ್ಕದ ಮುಂದಿನ ಹೆಜ್ಜೆಯ ಬಗ್ಗೆ ನಿಶ್ಚಯವಿಲ್ಲದವರಾಗಿ ತಾವು ಒಂದಲ್ಲ ಒಂದು ದಿನ ಒಂದಲ್ಲ ಒಂದು ರೀತಿಯ

ನಿರಾಶ್ರಿತರಾಗುವ ಸುಪ್ತಭೀತಿಗೆ ಸಿಕ್ಕಿ ಕೋಟಿ ಕೋಟಿ ಕೋಟಿ ಕೋಟಿ... ರೂಪಾಯಿಗಳಷ್ಟು ಬಾಜಿ ಬೆಲೆ ಕಟ್ಟಲ್ಪಡುತ್ತಿರುವ ಬದುಕಿನ ಭದ್ರತೆ ಎಂಬ ಮರೀಚಿಕೆಗಳನ್ನು ಹುಡುಕಿಕೊಂಡು ನಿಲುಗಡೆಯಿಲ್ಲದ ಓಟ-ಅಲೆದಾಟಗಳಲ್ಲಿ ನಿರತರಾಗಿದ್ದಾರೆ. ಇದರ ಪರಿಣಾಮವಾಗಿ ಇಡೀ ರಾಷ್ಟ್ರಜೀವನವೇ ಇಂದು ಆತಂಕಕಾರಿ ಅಸ್ಥಿರತೆಗೆ ಈಡಾಗಿದೆ.

ಪ್ರಜಾಪ್ರಭುತ್ವದ ಹೆಸರಿನಲ್ಲಿ ನಾವಿಂದು ಎಂಥೆಂಥವರನ್ನು ನಮ್ಮ ಪ್ರತಿನಿಧಿಗಳಾಗಿ ಆಳಲು ಆರಿಸಿ ಕಳಿಸುತ್ತಿದ್ದೇವೆ ಮತ್ತು ಅದಕ್ಕೂ ಮುಖ್ಯವಾಗಿ ಅಂಥವರನ್ನು ಪದೇ ಪದೇ ಆರಿಸಿ ಕಳಿಸುವ ಅಸಹಾಯಕ ಸ್ಥಿತಿ ನಮಗೇಕೆ ಒದಗಿದೆ? ಯೋಚಿಸುವ ಕಾಲ ಬಂದಿದೆ. ಏಕೆಂದರೆ, ಇದೆಲ್ಲದರ ಪರಿಣಾಮವನ್ನು ನೋಡಿರಿ: ಭಾರತವಿಂದು ನಿರ್ಭೀತ ಮತ್ತು ನಿರ್ಲಜ್ಜ ಹಗಲು ದರೋಡೆಗಳ, ಬೀದಿ ಅತ್ಯಾಚಾರಗಳ, ವೈವಿಧ್ಯಮಯ ಹಿಂಸೆ-ಕೊಲೆ ಪಾತಕಗಳ, ಅಸಹಾಯಕ ಕೌಟುಂಬಿಕ ಆತ್ಮಹತ್ಯೆಗಳ, ನ್ಯಾಯ ಕಾಣದ ಅನಾಥರ ಆಕ್ರಂದನಗಳ, ಹಕ್ಕು ಕಳೆದುಕೊಂಡವರ ಪ್ರತಿಭಟನೆಗಳಿಗೆ ಸಿಕ್ಕಿ ಅಶಾಂತಿಯ ಗೂಡಾಗಿದೆ. ಈ ವ್ಯಾಪಕ ಅಶಾಂತಿಯ ಮೂಲ ಯಾವುದು ಎಂದು ಗುರುತಿಸಲಾಗದಷ್ಟು ಜಟಿಲವಾಗಿ ಬೆಳೆದಿರುವ ಈ ರಾಷ್ಟ್ರ ವ್ಯವಸ್ಥೆಯೆಂಬ ಸಂಕೀರ್ಣ ಜಾಲದ ಯಜಮಾನರುಗಳು ದಿಕ್ಕೇ ತೋಚದೆ ಕಂಡಕಂಡವರ ಮೇಲೆ ಕಂಡ ಕಂಡ ಕಾರಣಗಳ ಮೇಲೆ ದೇಶದ್ರೋಹದ ಮೊಕದ್ದಮೆಗಳನ್ನು ಹೂಡತೊಡಗಿದ್ದಾರೆ! ದೇಶದ ಪ್ರಜೆಗಳೇ ದೇಶದ್ರೋಹಿಗಳಾಗಿ ಕಾಣುತ್ತಿರುವ ಈ ಪರಿಸ್ಥಿತಿಯನ್ನು ಏನೆಂದು ಕರೆಯೋಣ? ಇದು ರಾಷ್ಟ್ರ ಕಲ್ಪನೆಯ ವಿಕ್ಷಿಪ್ತೀಕರಣವೇ ಅಲ್ಲವೆ? ಆದರೆ ನಮ್ಮ ರಾಷ್ಟ್ರ ಪಾಲಕರು ಇದನ್ನು ದೇಶ ಜಾಗತಿಕ ಶಕ್ತಿಯಾಗುವೆಡೆಗೆ ದಾಪುಗಾಲು ಹಾಕುತ್ತಿರುವುದರಿಂದಾಗಿ ಏಳುತ್ತಿರುವ ಧೂಳಿನ ತಾತ್ಕಾಲಿಕ ಪರಿಣಾಮ ಮಾತ್ರವೆಂದೂ, ಇನ್ನೊಂದಿಷ್ಟು ವಿದೇಶಿ ಬಂಡವಾಳದ ನೇರ ಹೂಡಿಕೆ ಸಾಧ್ಯವಾಗಿಬಿಟ್ಟರೆ ಜಾಗತಿಕ ಶಕ್ತಿಯ ಗುರಿ ಮುಟ್ಟಿ ಈ ಧೂಳೆಲ್ಲ ಕರಗಿ ಹೋಗುವುದೆಂದೂ ಹೇಳುತ್ತಾ ದೇಶದ ಕಿವಿಗೆ ಒಂದಾದರಮೇಲೊಂದು ಹೂವಿಡುವ ಕಾಯಕವನ್ನು ಮುಂದುವರೆಸಿದ್ದಾರೆ.

ಜಾಗತೀಕರಣ ಮತ್ತು ಪಶುಬದುಕು

ಜಾಗತೀಕರಣವನ್ನು ಈ ನೆಲೆಯಿಂದ, ಈ ತೀವ್ರತೆಯಲ್ಲಿ ನೋಡಲಾಗದವರು ಇಂದಿಗೆ ಮಾತ್ರ ಬದುಕಲೆನಿಸುವ ಒಂದು ರೀತಿಯ ಪಶು ಸಮಾನ ಜೀವಿಗಳೆಂದೇ ಹೇಳಬೇಕಾಗುತ್ತದೆ. ಗಾಂಧಿ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಪಶ್ಚಿಮದ ಆಧುನಿಕ ನಾಗರೀಕತೆ ಮನುಷ್ಯನನ್ನು ಪಶುವನ್ನಾಗಿ ಮಾಡುತ್ತದೆ ಎಂಬರ್ಥದಲ್ಲೇ ಅದನ್ನು ಬರಿಯ ದೇಹಸುಖ ವರ್ಧಕವಾದ ಸೈತಾನಿ ನಾಗರೀಕತೆಯೆಂದೂ ಕರೆದು ಅದೊಂದು ರೋಗ ಎಂದು ಗುರುತಿಸಿದ್ದರು. ಜಗತ್ತನ್ನು, ನಿರ್ದಿಷ್ಟವಾಗಿ ಭಾರತವನ್ನು ಬ್ರಿಟಿಷ್ ದಾಸ್ಯದಿಂದ ಬಿಡುಗಡೆಗೊಳಿಸುವುದು ಎಂದರೆ ಈ ದಾಸ್ಯಕ್ಕೆ ಕಾರಣವಾದ ಆಧುನಿಕ ನಾಗರೀಕತೆಯ ಮೋಹದಿಂದ, ಮನುಷ್ಯನನ್ನು ಮೈಮರೆಸಿ ಸೃಷ್ಟಿಯ ಅಖಂಡತೆಯಿಂದ ಬೇರ್ಪಡಿಸುವ ಮಿತಿಯಿಲ್ಲದ ಸುಖದ ಆಮಿಷದಿಂದ ಬಿಡುಗಡೆಗೊಳಿಸುವುದೆಂದು ಅವರು ನಂಬಿದ್ದರು. ಹಾಗಾಗಿ ನಿಜವಾದ ಮತ್ತು ಪೂರ್ಣವಾದ ಬಿಡುಗಡೆ ಅಥವ ಸ್ವಾತಂತ್ರ್ಯ, ಸ್ವರಾಜ್ಯ ಸ್ಥಾಪನೆಯಲ್ಲಿ ಮಾತ್ರ ಸಾಧ್ಯ ಎಂದು ಅವರು ಪ್ರತಿಪಾದಿಸಿದರು. ಅವರ ಪ್ರಕಾರ ಸ್ವರಾಜ್ಯ ಆರಂಭವಾಗುವುದು ವ್ಯಕ್ತಿ ಸ್ವಾಯತ್ತತೆ, ಅಂದರೆ ತನ್ನ ಬದುಕನ್ನು ಅನ್ಯವೆನಿಸುವುದರ ಕನಿಷ್ಠ ಹಸ್ತಕ್ಷೇಪವಿರುವ ಹಾಗೆ ಆದಷ್ಟೂ ತಾನೇ ನಿಯಂತ್ರಿಸಿಕೊಳ್ಳಬಲ್ಲ ಸ್ಥಿತಿಯ ಮನವರಿಕೆ ಮತ್ತು ನಿರ್ಮಾಣದೊಂದಿಗೆ. ಅದಕ್ಕೇ ಅವರು ಅದನ್ನು ಅಹಿಂಸೆಯನ್ನಾಧರಿಸಿದ ಸ್ವಯಂಪೂರ್ಣ ಗ್ರಾಮ ಕಲ್ಪನೆಯನ್ನು ರೂಪಿಸಿ 'ಗ್ರಾಮ ಸ್ವರಾಜ್ಯ'ವೆಂದೂ ಕರೆದರು. ಅವರ ಪ್ರಕಾರ, 'ಗ್ರಾಮ ಸ್ವರಾಜ್ಯ'ಕ್ಕೆ ಒಗ್ಗದ ಬಗ್ಗದ ಎಲ್ಲವೂ ಭಾರವೇ, ಬಂಧನವೇ.

ಇದು ಇಂದು ಅತಿಯೆನಿಸುವ, ಅವ್ಯಾವಹಾರಿಕವೆನ್ನಿಸುವ, ಬರೀ ಭೋಳೆ ಆದರ್ಶಮಯ ವಿಚಾರವೆನ್ನಿಸುವುದು ನಿಜ. ಆದರೆ ಆಧುನಿಕ ರಾಷ್ಟ್ರ ವ್ಯವಸ್ಥೆ ಜಾಗತೀಕರಣದ ಮೂಲಕ ಹೊರಿಸಿರುವ ಭಾರ, ಬಂಧನ ಮತ್ತು ನಿರೀಕ್ಷೆ-ಅಪೇಕ್ಷೆಗಳು ನಮ್ಮನ್ನು ಇಂದು ಸೃಷ್ಟಿಯ ಭಾಗವಾದ ಮನುಷ್ಯ ಜೀವಿಯಾಗಿ ಮತ್ತು ಒಂದು ಸಮಾಜವಾಗಿ ಎಂತಹ ಬಿಕ್ಕಟ್ಟಿನಲ್ಲಿ, ಇಕಟ್ಟಿನಲ್ಲಿ ತಂದು ನಿಲ್ಲಿಸಿದೆ ಎಂದು ಯೋಚಿಸಿದಾಗ ಗಾಂಧಿಯ 'ಗ್ರಾಮ ಸ್ವರಾಜ್ಯ'ವಲ್ಲದಿದ್ದರೂ, ಇಂದಿಗೆ ವ್ಯಾವಹಾರಿಕವೆನ್ನಿಸುವ ನಮ್ಮದೇ 'ಗ್ರಾಮ ಸ್ವರಾಜ್ಯ'ದ ಕಲ್ಪನೆಯನ್ನು ರೂಪಿಸಿಕೊಳ್ಳುವುದರ ಹೊರತಾಗಿ ನಾವು ಒಂದು ರಾಷ್ಟ್ರವಾಗಿ, ಸಮಾಜವಾಗಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮನುಷ್ಯರಾಗಿ ಬದುಕುಳಿಯುವುದು ಕಷ್ಟ ಎಂದೇ ನನಗನ್ನಿಸುತ್ತದೆ. ಇದೇ ಇಂದು ಗಾಂಧಿ ಜೀವಂತವಾಗಿರುವ ಪರಿ. ಹಾಗೇ ಇದು ಗಾಂಧಿ ಆಧುನಿಕ-ಅತ್ಯಾಧುನಿಕರೆನಿಸಿಕೊಂಡವರಿಗಿಂತಲೂ ಹೆಚ್ಚು ಆಧುನಿಕರಾಗಿ ಕಾಣುವ ಪರಿ. ಗಾಂಧಿಯವರ ಈ ಆಧುನಿಕತೆಯಲ್ಲಿನ ಸೃಜನಶೀಲತೆಯನ್ನು, ಮನುಷ್ಯ ಸ್ಪಂದನವನ್ನು ಗ್ರಹಿಸಲಾಗದಷ್ಟು ಇತಿಹಾಸದ ಸಿದ್ಧ ಎರಕಗಳಲ್ಲಿ ಸಿಕ್ಕಿಹಾಕಿಕೊಂಡ ಮನಸ್ಸು ಮಾತ್ರ ದಲಿತರು ಇಂದು ಗಾಂಧಿಯಿಂದ ಪಡೆಯುವುದೇನೂ ಇಲ್ಲವೆಂದು ಹೇಳಬಲ್ಲುದು. ಇಂಥವರ ಪ್ರಕಾರ ದಲಿತರು ಎಂದರೆ ಸಾರ್ವತ್ರಿಕ ಮನುಷ್ಯ ಭಾವನೆಗಳಿಂದ ಹೊರಗಿರುವವರೇ ಆಗಿರಬೇಕು... ಹೊಸ ಕಾಲದ, ಹೊಸ ರೀತಿಯ, ಸ್ವಯಂ ಘೋಷಿತ ಅಸ್ಪೃಶ್ಯತೆ?

ಮೊಲೆವಾಲು ನಂಜಾಗಿ...

ನಿಜ, ಇದು ತಾಯ ಮೊಲೆವಾಲು ನಂಜಾಗಿ ಕಾಡುತ್ತಿರುವ ಮಾಯೆಯ ಕಾಲ. ಆ ಮಾಯೆಗೆ ಸಿಕ್ಕವರು ಸಿಂಹಿಣಿಯ ಹಾಲನ್ನು ಹುಡುಕಿಕೊಂಡು ಕಾಡಿಗೆ ಹೊರಟಿದ್ದಾರೆ. ಅವರು ಕಾಡಿನಲ್ಲಿ ಕಳೆದುಹೋಗದೆ ಸುಕ್ಷೇಮವಾಗಿ ಊರಿಗೆ ಹಿಂದಿರುಗಿ ಬರುವರೆಂದು ಆಶಿಸೋಣ! ಹಾಗೆ ಬಂದಾಗಲಾದರೂ ಗಾಂಧಿ ಒಂದು ಕೈಯನ್ನು ಲೋಹಿಯಾರ ಹೆಗಲ ಮೇಲೂ, ಇನ್ನೊಂದು ಕೈಯನ್ನು ಅಂಬೇಡ್ಕರ್‌ರ ಹೆಗಲ ಮೇಲೂ ಇಟ್ಟು ಗಂಭೀರ ಚರ್ಚೆಯಲ್ಲಿ ತೊಡಗಿಕೊಂಡು ನಡೆಯುತ್ತಿರುವುದನ್ನು ಕಂಡಾರು. ಈ ನಡಿಗೆ ಗಾಂಧಿ ಸಾವಿನ ಎರಡು ದಿನಗಳ ಮುನ್ನ ಬಿರ್ಲಾ ಭವನದ ಸನಿಹದಲ್ಲಿ ಲೋಹಿಯಾರೊಂದಿಗೆ 'ವರ್ತಮಾನ'ದಲ್ಲೇ ಆರಂಭವಾಗಿತ್ತಾದರೂ, ಅವರಿಗೆ ಅಂಬೇಡ್ಕರ ಜೊತೆ ಸಿಕ್ಕಿದ್ದು 'ಭವಿಷ್ಯ'ದಲ್ಲೇ, ಅದೂ ಲೋಹಿಯಾರ ಸಾವಿನ ನಂತರ ಎಂದು ಕಾಣುತ್ತದೆ... ■

ಗಾಂಧಿ ಹತ್ಯೆ

ಗೋಡ್ಸೆ, ಸಾವರ್ಕರ್ ಮತ್ತು ಆರೆಸ್ಸೆಸ್...

ಸುರೇಶ್ ಭಟ್ ಬಾಕ್ರಬೈಲು

"ನೀವು ಹೇಳುವ ಸುಳ್ಳನ್ನು ಸಾಕಷ್ಟು ದೊಡ್ಡದಾಗಿಟ್ಟುಕೊಂಡು ಮತ್ತೆಮತ್ತೆ ಹೇಳುತ್ತಿದ್ದರೆ ಕೊನೆಗೊಂದು ದಿನ ಜನ ಅದನ್ನು ನಂಬುತ್ತಾರೆ."

–ಜೋಸೆಫ್ ಗೊಬೆಲ್ಸ್ (ಹಿಟ್ಲರ್‌ನ ಪ್ರಚಾರ ಸಚಿವ)

ಕಾಂಗ್ರೆಸ್ ಪಕ್ಷದ 125ನೆ ವಾರ್ಷಿಕೋತ್ಸವದ ಅಂಗವಾಗಿ ಬಿಡುಗಡೆಗೊಳಿಸಲಾಗಿರುವ ಸ್ಮರಣಗ್ರಂಥದಲ್ಲಿ ಗಾಂಧಿ ಹಂತಕ ನಾಥೂರಾಮ್ ಗೋಡ್ಸೆ, ಆರೆಸ್ಸೆಸ್ ಮತ್ತು ಹಿಂದೂ ಮಹಾಸಭಾದ ಸದಸ್ಯನಾಗಿದ್ದನೆಂದು ಉಲ್ಲೇಖಿಸಿರುವುದಕ್ಕೆ ಆರೆಸ್ಸೆಸ್ ಆಕ್ಷೇಪಿಸಿದೆಯೆನ್ನಲಾಗಿದೆ. ಯಾರೇ ಇರಲಿ, ಸತ್ಯಾಂಶಗಳನ್ನು ಅಲಕ್ಷಿಸುವುದು ಅಥವಾ ಮರೆಮಾಚುವುದು ತಪ್ಪಾಗುತ್ತದಲ್ಲವೇ? ಐತಿಹಾಸಿಕ ದಾಖಲೆಗಳು ಏನನ್ನುತ್ತವೆ ನೋಡಬೇಕಲ್ಲವೇ? ಮೊತ್ತಮೊದಲಿಗೆ, ನಾಥೂರಾಮ್ ಗೋಡ್ಸೆ ಮತ್ತು ವಿನಾಯಕ ದಾಮೋದರ ಸಾವರ್ಕರ್ ನಡುವೆ ಸಂಬಂಧಗಳಿದ್ದುವೇ, ಇಲ್ಲವೇ ಎನ್ನುವ ಪ್ರಶ್ನೆಯನ್ನು ಎತ್ತಿಕೊಳ್ಳೋಣ.

ಗುರುಶಿಷ್ಯ ಜೋಡಿ

ಗೋಡ್ಸೆ ಫೆಬ್ರವರಿ 28, 1938ರಂದು ಬರೆದಿದ್ದ ಪತ್ರವೊಂದನ್ನು "ಔಟ್‌ಲುಕ್" ನಿಯತಕಾಲಿಕ ಪ್ರಕಟಿಸಿದೆ. 1938ರಿಂದ 1946ರ ವರೆಗಿನ ಕಾಲಾವಧಿಯಲ್ಲಿ ಗೋಡ್ಸೆ ಸಾವರ್ಕರ್‌ಗೆ ಬರೆದಿದ್ದ ಐದು ಪತ್ರಗಳ ಪ್ರತಿಗಳು "ದ ಹಿಂದು" ಪತ್ರಿಕೆಗೆ ದೊರೆತಿವೆ. ಸದರಿ ಪತ್ರಗಳು ಇದುವರೆಗೆ ಅಲಭ್ಯವಾಗಿದ್ದ ಕಾರಣ ಅವುಗಳೊಳಗೆ ಹುದುಗಿರುವ ವಿಷಯಗಳ ಬಗ್ಗೆ ಯಾರಿಗೂ ತಿಳಿದಿರಲಿಲ್ಲ.

ಸಾವರ್ಕರ್ ಮತ್ತು ಗೋಡ್ಸೆ ಮಧ್ಯೆ ಹಲವು ವರ್ಷಗಳಿಂದ ಗುರು, ಶಿಷ್ಯರ ಸಂಬಂಧವಿತ್ತೆಂಬ ಅತ್ಯಂತ ಮಹತ್ವದ ಮಾಹಿತಿಯನ್ನು ಗೋಡ್ಸೆಯ ಪತ್ರಗಳು ಹೊರಹಾಕುತ್ತವೆ. ಕೆಲವೊಮ್ಮೆ ಯಾಚನಾಪೂರಿತವೂ ಕೆಲವೊಮ್ಮೆ ಛೀಮಾರಿಯುತವೂ ಆಗಿರುವ ಈ ಪತ್ರಗಳು ಆತ ಹಿಂದೂ ಮಹಾಸಭಾವನ್ನು ಒಂದು ಸದೃಢ ಹಾಗೂ ಸಮರ್ಥ ರಾಜಕೀಯ ಸಂಸ್ಥೆಯಾಗಿ ಕಟ್ಟಲು ಎಷ್ಟೊಂದು ಆತುರತೆಯಿಂದಿದ್ದ ಎಂಬುದಕ್ಕೆ ಸಾಕ್ಷಿಯಾಗಿವೆ. ಆದರೆ ಸಾವರ್ಕರ್ ಮಾತ್ರ ಈ ವಿಷಯದಲ್ಲಿ ಸಾಕಷ್ಟು ಕ್ರಿಯಾಶೀಲತೆ ತೋರುತ್ತಿಲ್ಲವೆನ್ನುವುದು ಗೋಡ್ಸೆಯ ಅಭಿಪ್ರಾಯವಾಗಿತ್ತು. ಹಿಂದೂರಾಷ್ಟ್ರ ನಿರ್ಮಾಣದ ಸಕಲ ಪ್ರಯತ್ನಗಳನ್ನು ಕ್ರೋಢೀಕರಿಸುವ ಸಲುವಾಗಿ ಆರೆಸ್ಸೆಸ್ ಸಂಸ್ಥಾಪಕ ಡಾ॥ ಹೆಗಡೆವಾರ್ ಮತ್ತು ಸಾವರ್ಕರ್ ಇಬ್ಬರೂ ಒಟ್ಟುಸೇರಬೇಕು ಮತ್ತು ಅದನ್ನೊಂದು ಸಮಾನ ಧ್ಯೇಯವಾಗಿಸಬೇಕು ಎಂದಾತ ಬಲವಾಗಿ ಪ್ರತಿಪಾದಿಸುತ್ತಾನೆ.

ಏಪ್ರಿಲ್ 2, 1944ರ ಪತ್ರ ಬಹಳಷ್ಟು ಮಾಹಿತಿಗಳನ್ನು ಹೊರಗೆಡವುತ್ತದೆ. ಗೋಡ್ಸೆ ಹೊರತರುತ್ತಿದ್ದ ಮರಾಠಿ ದೈನಿಕ "ಅಗ್ರಣಿ" ಏನೆಲ್ಲ ಸಾಧಿಸಿದೆ ಎಂಬುದರ ವಿವರಣೆಯೊಂದಿಗೆ ಪತ್ರ ಆರಂಭವಾಗುತ್ತದೆ. (ಸರಕಾರ "ಅಗ್ರಣಿ"ಯನ್ನು ನಿಷೇಧಿಸಿದ ನಂತರ ಅದು "ಹಿಂದೂರಾಷ್ಟ್ರ" ಎಂದಾಯಿತು). ಕಸ್ತೂರಿಬಾ ಗಾಂಧಿ ಸ್ಮಾರಕ ನಿಧಿ ಕುರಿತ ಲೇಖನವೊಂದನ್ನು ಮುಂದಿನ ಮಂಗಳವಾರದ ಪತ್ರಿಕೆಯಲ್ಲಿ ಪ್ರಕಟಿಸುವೆನೆಂದು ಗೋಡ್ಸೆ ಸಾವರ್ಕರ್‌ಗೆ ಮಾತುಕೊಡುತ್ತಾನೆ. ತರುವಾಯ ಮೇ 14, 1944ರಂದು ಹೇಳಿಕೆಯೊಂದನ್ನು ಹೊರಡಿಸುವ ಸಾವರ್ಕರ್, ಹಿಂದೂ ಸಂಘಟನಾವಾದಿಗಳು ಕಸ್ತೂರಿಬಾ ನಿಧಿಗೆ ದೇಣಿಗೆ ನೀಡಬಾರದೆನ್ನುತ್ತಾರೆ (ಎ.ಜಿ.ನೂರಾನಿಯವರ "ಸಾವರ್ಕರ್ ಮತ್ತು ಹಿಂದೂತ್ವ" ಕೃತಿಯಲ್ಲೂ ಇದರ ಉಲ್ಲೇಖವಿದೆ). ಇವನ್ನೆಲ್ಲ ಕಾಕತಾಳೀಯ ಘಟನೆಗಳೆನ್ನಬಹುದೇ?

ಇದೇ ಪತ್ರದಲ್ಲಿ ಇನ್ನೊಂದು ಸ್ವಾರಸ್ಯಕರ ಸಂಗತಿ ಇದೆ. ಕೆಲವು "ವಿಷಯಗಳ" ಬಗ್ಗೆ ಚರ್ಚಿಸಲಿರುವುದರಿಂದ ತಾನು ಸಾವರ್ಕರ್ ಜೊತೆ ಶಿವಮೊಗ್ಗೆಗೆ ಪ್ರಯಾಣ ಮಾಡಲಿಚ್ಛಿಸುತ್ತೇನೆಂದು ಗೋಡ್ಸೆ ಬರೆಯುತ್ತಾನೆ. "ನಿಮ್ಮ ಸಲಹೆ ಪಡೆಯಬೇಕಾಗಿದೆ. ಅಲ್ಲದೆ ಕೆಲವು ನಿರ್ದಿಷ್ಟ ದತ್ತಾಂಶಗಳನ್ನು ನಮಗೆ ಅರುಹಬೇಕಾಗಿದೆ" ಎಂಬ ಕಾರಣಗಳನ್ನೊಡ್ಡಿ ಸಾವರ್ಕರ್‌ರ ಬೋಗಿಯಲ್ಲಿ ತನಗೂ ಒಂದು ಬರ್ತ್ ಕಾದಿರಿಸಬೇಕೆಂದು ಹೇಳುತ್ತಾನೆ. ತೃತೀಯ ದರ್ಜೆ ಟಿಕೆಟಿನ ದರವನ್ನು ತನ್ನ ಕಿಸೆಯಿಂದಲೆ ಭರಿಸುವೆ, "ಅಗ್ರಣಿ"ಯ ಖಾತೆಯಿಂದಲ್ಲ ಎನ್ನುತ್ತಾನೆ. ಟಿಕೆಟಿನ ದರದಲ್ಲಿ ವ್ಯತ್ಯಾಸವೇನಾದರೂ ಇದ್ದಲ್ಲಿ ಅದನ್ನು ಭರಿಸುವಂತೆ ಸಾವರ್ಕರ್‌ರಲ್ಲಿ ಕೇಳಿಕೊಳ್ಳುತ್ತಾನೆ.

ಮುಂದೆ, ಅಸ್ವಸ್ಥರಾಗಿರುವ ರಾಜ್ಯಭಾವು ರಾಜವಾಡೆಯವರಿಗಾಗಿ ದುಡ್ಡು ಸಂಗ್ರಹಿಸುವುದರಲ್ಲಿ ತೊಡಗಿರುವೆನೆಂದು ಬರೆಯುತ್ತ ವಂತಿಗೆ ನೀಡುವಂತೆ ಸಾವರ್ಕರ್‌ರಲ್ಲಿ ವಿನಂತಿಸುತ್ತಾನೆ.

ಅತ್ಯಂತ ಮಾರ್ಮಿಕವಾದ ಇನ್ನೊಂದು ಪತ್ರದಲ್ಲಿ ದಿನಾಂಕವನ್ನು ನಮೂದಿಸಲಾಗಿಲ್ಲ. ಆದರೆ ಅದರಲ್ಲಿ ಮುಂದಿನ ಮಾರ್ಚ್ ತಿಂಗಳಲ್ಲಿ ಜರುಗಲಿರುವ "ಅಗ್ರಣಿ"ಯ ದ್ವಿತೀಯ ವಾರ್ಷಿಕೋತ್ಸವದ ಪ್ರಸ್ತಾಪ ಇದೆ. "ಅಗ್ರಣಿ"ಯನ್ನು ಮಾರ್ಚ್ 28, 1944ರಂದು ಆರಂಭಿಸಲಾಗಿತ್ತು. ಹೀಗಾಗಿ ಈ ಪತ್ರವನ್ನು 1946ರಲ್ಲಿ ಬರೆಯಲಾಗಿದೆಯೆಂದು ಖಚಿತವಾಗಿ ಹೇಳಬಹುದು. ಪತ್ರದ ಕೊನೆಯಲ್ಲಿ ಪತ್ರಿಕೆಯ ಭವಿಷ್ಯದ ಬಗ್ಗೆ ಬರೆಯುತ್ತ, "ನಿಮ್ಮ ಉತ್ತರ ಹೌದೆಂದಿರಲಿ, ಇಲ್ಲವೆಂದಿರಲಿ, ನಿಮ್ಮ ಶಿಷ್ಯನ ಮೇಲೆ ಕೋಪಿಸಿಕೊಳ್ಳಬೇಡಿ; ಆತನ ಅಪರಾಧವೆಂದು ಪರಿಗಣಿಸಬೇಡಿ. ಇದು ನಿಮ್ಮಲ್ಲಿ ನನ್ನ ಪ್ರಾರ್ಥನೆ" ಎನ್ನುತ್ತಾನೆ ಗೋಡ್ಸೆ.

ಪತ್ರದ ಆರಂಭದಲ್ಲಿ "ಅಗ್ರಣಿ" ಯಾವೆಲ್ಲ ಹಣಕಾಸಿನ ಇತಿಮಿತಿಗಳಡಿ ಕಾರ್ಯಾಚರಿಸುತ್ತಿದೆ ಎಂಬುದನ್ನು ಪಟ್ಟಿಮಾಡಲಾಗಿದೆ. ಸಾವರ್ಕರ್ ನೀಡಿದ ಉದಾರ ಕೊಡುಗೆಯ ಕುರಿತು ಪ್ರಸ್ತಾಪಿಸುತ್ತ "ಆ ಉದ್ದೇಶಕ್ಕಾಗಿ ನೀವು ನನಗೆ 15,000 ರೂಪಾಯಿ ದೇಣಿಗೆ ನೀಡಿರುತ್ತೀರಿ. ನೀವು ಈ ಧ್ಯೇಯವನ್ನು ಎಷ್ಟೊಂದು ಮೆಚ್ಚುತ್ತೀರಿ ಎಂಬುದನ್ನು ಇದು ತೋರಿಸುತ್ತದೆ." ನಂತರ "ಅಗ್ರಣಿ" ಪತ್ರಿಕೆ ಕಾಗದದ ಅಭಾವ, ನಿಷೇಧ, ಮತ್ತು ಹಣಕಾಸಿನ ಕೊರತೆಗಳನ್ನು ಎದುರಿಸುತ್ತಿದ್ದರೂ ಅದು ಹೇಗೆ ಬದುಕುಳಿಯಿತು ಎಂಬುದ್ದರ ಸವಿಸ್ತಾರ ವಿವರಣೆಯಿದೆ. ಹಿಂದೂ ಮಹಾಸಭಾದ ಕೆಲವು ವಿರೋಧಿ ನಾಯಕರು ಪತ್ರಿಕೆಯ ಸರ್ವನಾಶಕ್ಕಾಗಿ ಯತ್ನಿಸುತ್ತಿರುವ ವಿಷಯವನ್ನೂ ಪ್ರಸ್ತಾಪಿಸಲಾಗಿದೆ. ತನಗೆ ಇನ್ನೂ 10,000 ರೂಪಾಯಿ "ಸಾಲ" ಬೇಕಾಗಿದ್ದು, ಅದನ್ನು ತಿಂಗಳಿಗೆ ಶೇಕಡಾ 3ರ ಬಡ್ಡಿ ಸಮೇತ ಹಿಂದಿರುಗಿಸುವೆನೆಂದು ಆಶ್ವಾಸನೆ ನೀಡುತ್ತಾನೆ ಗೋಡ್ಸೆ. ಇದು, "ಅಗ್ರಣಿ" ಪತ್ರಿಕೆ ಸಾವರ್ಕರ್‌ರ ಬೌದ್ಧಿಕ ಆಸ್ತಿಯನ್ನು ಪುಕ್ಕಟೆಯಾಗಿ ಉಪಯೋಗಿಸಲು ಬಯಸುತ್ತಿಲ್ಲವೆಂಬುದನ್ನು ಸೂಚಿಸುತ್ತದೆ ಎನ್ನುತ್ತಾನೆ.

"ಪ್ರಸಕ್ತವಾಗಿ ಮಹಾರಾಷ್ಟ್ರದಲ್ಲಿ ನಿಮ್ಮ ವಿಚಾರಗಳನ್ನು ಪ್ರಚುರಪಡಿಸುತ್ತಿರುವ ಏಕಮಾತ್ರ ಪತ್ರಿಕೆಯೆಂದರೆ "ಅಗ್ರಣಿ". ನೀವು ಇದರ ಜೊತೆ ಇಟ್ಟುಕೊಂಡಿರುವ ಸಂಬಂಧಗಳಿಗೆ ಸಾಕ್ಷಿಯಾಗಿರುವುದು ನೀವು ಈಗಾಗಲೆ ಕೊಟ್ಟಿರುವ 15,000 ರೂಪಾಯಿಗಳು. ಇದು ಸಾಮಾನ್ಯವಾಗಿ ಗೊತ್ತಿರುವ ಸಂಗತಿ. ಇದಕ್ಕೆ ಪುರಾವೆಯ ಅಗತ್ಯವಿಲ್ಲ" ಎಂದು ಬರೆಯುತ್ತಾನೆ. ಹೀಗೆ "ಅಗ್ರಣಿ" ಮಹಾರಾಷ್ಟ್ರದಾದ್ಯಂತ ಸಾವರ್ಕರ್ ಚಿಂತನೆಗಳನ್ನು ಬಿತ್ತುತ್ತಿರುವ ಏಕೈಕ ಪತ್ರಿಕೆ ಎಂಬುದನ್ನು ದೃಢಪಡಿಸುತ್ತಾನೆ.

ಗಾಂಧಿ "ಹರಿಜನ್"ದಲ್ಲಿ ಕನಿಷ್ಠ 10 ಲೇಖನಗಳನ್ನು ಬರೆಯುತ್ತಿರುವಾಗ ಸಾವರ್ಕರ್ "ಅಗ್ರಣಿ"ಗೆ ಸಾಕಷ್ಟು ಲೇಖನಗಳನ್ನು ನಿಯಮಿತವಾಗಿ ಕಳುಹಿಸದಿರುವುದಕ್ಕೆ ಗೋಡ್ಸೆ ಆಕ್ಷೇಪಿಸುತ್ತಾನೆ. ಗಾಂಧಿ ಮತ್ತು ಬಾಲಗಂಗಾಧರ ತಿಲಕರು "ಹರಿಜನ್" ಮತ್ತು "ಕೇಸರಿ"ಯಲ್ಲಿ ಬರೆಯುವಂತೆಯೆ ಸಾವರ್ಕರ್ "ಅಗ್ರಣಿ"ಯಲ್ಲಿ ಬರೆಯಬೇಕೆನ್ನುತ್ತಾನೆ. ಕೇವಲ ರಾಜಕಾರಣದ ವಿಷಯಕ್ಕೆ ಸೀಮಿತವಾಗದೆ ಹಿಂದೂತ್ವ, ಕ್ರಾಂತಿ, ತಂತ್ರಜ್ಞಾನ, ಸಾಹಿತ್ಯ, ಇತಿಹಾಸ, ತತ್ವಜ್ಞಾನ ಮತ್ತು ಕಾವ್ಯಕ್ಕೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಕೂಡ ಬರೆಯಬೇಕೆಂದು

ಸಾವರ್ಕರ್ ಮತ್ತು ಗೋಡ್ಸೆ ಮಧ್ಯೆ ಹಲವು ವರ್ಷಗಳಿಂದ ಗುರು, ಶಿಷ್ಯರ ಸಂಬಂಧವಿತ್ತೆಂಬ ಅತ್ಯಂತ ಮಹತ್ವದ ಮಾಹಿತಿಯನ್ನು ಗೋಡ್ಸೆಯ ಪತ್ರಗಳು ಹೊರಹಾಕುತ್ತವೆ. ಕೆಲವೊಮ್ಮೆ ಯಾಚನಾಪೂರಿತವೂ ಕೆಲವೊಮ್ಮೆ ಛೀಮಾರಿಯುತವೂ ಆಗಿರುವ ಈ ಪತ್ರಗಳು ಆತ ಹಿಂದೂ ಮಹಾಸಭಾವನ್ನು ಒಂದು ಸದೃಢ ಹಾಗೂ ಸಮರ್ಥ ರಾಜಕೀಯ ಸಂಸ್ಥೆಯಾಗಿ ಕಟ್ಟಲು ಎಷ್ಟೊಂದು ಆತುರತೆಯಿಂದಿದ್ದ ಎಂಬುದಕ್ಕೆ ಸಾಕ್ಷಿಯಾಗಿವೆ. ಆದರೆ ಸಾವರ್ಕರ್ ಮಾತ್ರ ಈ ವಿಷಯದಲ್ಲಿ ಸಾಕಷ್ಟು ಕ್ರಿಯಾಶೀಲತೆ ತೋರುತ್ತಿಲ್ಲವೆನ್ನುವುದು ಗೋಡ್ಸೆಯ ಅಭಿಪ್ರಾಯವಾಗಿತ್ತು. ಹಿಂದೂರಾಷ್ಟ್ರ ನಿರ್ಮಾಣದ ಸಕಲ ಪ್ರಯತ್ನಗಳನ್ನು ಕ್ರೋಢೀಕರಿಸುವ ಸಲುವಾಗಿ ಆರೆಸ್ಸೆಸ್ ಸಂಸ್ಥಾಪಕ ಡಾ॥ ಹೆಗಡೆವಾರ್ ಮತ್ತು ಸಾವರ್ಕರ್ ಇಬ್ಬರೂ ಒಟ್ಟುಸೇರಬೇಕು ಮತ್ತು ಅದನ್ನೊಂದು ಸಮಾನ ಧ್ಯೇಯವಾಗಿಸಬೇಕು ಎಂದಾತ ಬಲವಾಗಿ ಪ್ರತಿಪಾದಿಸುತ್ತಾನೆ.



ಒತ್ತಾಯಿಸುತ್ತಾನೆ. ಇಂತಹ ಲೇಖನಗಳು "ಯುವ ಪೀಳಿಗೆ"ಗೆ ಪ್ರಯೋಜನಕಾರಿಯಾಗಲಿವೆ ಮಾತ್ರವಲ್ಲ ಸಾವರ್ಕರ್‌ರ "ವೈಚಾರಿಕ ಸಂಪತ್ತ"ನ್ನು ವಿಶ್ವವ್ಯಾಪಿಯಾಗಿಸುವಲ್ಲಿ ಸಹಕಾರಿಯಾಗಲಿವೆಯೆಂದು ಗೋಡ್ಸೆ ಅಭಿಪ್ರಾಯಿಸುತ್ತಾನೆ.

"ಅಗ್ರಣಿ" ಮತ್ತು ಇತರ ವಿಷಯಗಳ ಬಗ್ಗೆ ಮುಖತಃ ಚರ್ಚಿಸಬೇಕಾಗಿದೆಯೆಂದು ಸ್ಪಷ್ಟಪಡಿಸುವ ಗೋಡ್ಸೆ "ಆದರೆ ನಿಮ್ಮ ಆರೋಗ್ಯ ಅಷ್ಟೊಂದು ಚೆನ್ನಾಗಿರದಿರುವುದರಿಂದ ಹಾಗೆ ಮಾಡಿಲ್ಲ" ಎನ್ನುತ್ತಾನೆ. ಈ ಬಗ್ಗೆ ಮಾತುಕತೆ ನಡೆಯದಿದ್ದರೆ ತಮ್ಮಿಬ್ಬರ ಮಧ್ಯೆ "ಅಂತರ" ಏರ್ಪಡಬಹುದೆಂದು ಆತಂಕಪಡುತ್ತಾನೆ. ಗುರುಗಳು ತನ್ನ ಪತ್ರವನ್ನು ಎಚ್ಚರಿಕೆಯಿಂದ ಓದಬೇಕೆಂದು ಕೇಳಿಕೊಳ್ಳುತ್ತಾನೆ. ಈ ಎಲ್ಲಾ ವಿಷಯಗಳ ಕುರಿತು ಚರ್ಚಿಸಲು ಆಪ್ಟೆ ಮತ್ತು ತಾನು ಸಾವರ್ಕರ್‌ರನ್ನು ಮುಂದಿನ ವಾರ ವಾಲ್‌ಚಂದ್‌ನಗರದಲ್ಲಿ ಭೇಟಿ ಮಾಡಲು ಉದ್ದೇಶಿಸಿದ್ದೇವೆ ಎಂದು ತಿಳಿಸುತ್ತಾನೆ.

ಹೀಗೆ ಗುರು ಸಾವರ್ಕರ್ ಮತ್ತು ಶಿಷ್ಯ ಗೋಡ್ಸೆ ಮಧ್ಯದ ನಿಕಟ ಬಾಂಧವ್ಯದ ಸ್ವರೂಪವನ್ನು ಪತ್ರಗಳು ಬಿಚ್ಚಿಡುತ್ತವೆ. ಆದರೆ ಗಾಂಧಿ ಹತ್ಯಾ ಮೊಕದ್ದಮೆಯ ಸಮಯದಲ್ಲಿ ಏನು ಹೇಳಲಾಯಿತು?

ಗಾಂಧಿ ಹತ್ಯೆ ಮೊಕದ್ದಮೆ ಮತ್ತು ಸಾವರ್ಕರ್

ಮೊಕದ್ದಮೆಯ ವೇಳೆ ಗೋಡ್ಸೆಗೆ ಹಾಕಲಾಗಿದ್ದ ಪ್ರಶ್ನೆಯೊಂದು ಹೀಗಿದೆ: 'ಗೋಡ್ಸೆ ಮುಂಬಯಿನ ಸಾವರ್ಕರ್ ಸದನಕ್ಕೆ ಪದೇಪದೇ ಭೇಟಿ ನೀಡಲು ಕಾರಣವೇನು?' ಅದಕ್ಕುತ್ತರವಾಗಿ ಆತ, 'ಹಿಂದೂ ಸಂಘಟನ್ ಸಂಸ್ಥೆಯ ಕಚೇರಿ ಅದೇ ಸಾವರ್ಕರ್ ಮನೆಯ ತಳಮಾಳಿಗೆಯಲ್ಲಿದ್ದ ಕಾರಣ ತಾನು ಅಲ್ಲಿಗೆ ಆಗಾಗ ಹೋಗುತ್ತಿದ್ದೆ'ನೆಂದು ನ್ಯಾಯಾಲಯಕ್ಕೆ ತಿಳಿಸಿದ್ದ. ಅದೇ ರೀತಿ ಸಾವರ್ಕರ್ ಕೂಡಾ 'ಗೋಡ್ಸೆಗೂ ತನಗೂ ಯಾವ ಸಂಬಂಧವೂ ಇರಲಿಲ್ಲ; ಗೋಡ್ಸೆ ಮತ್ತು ಆಪ್ಟೆಯನ್ನು ಹಿಂದೂ ಮಹಾಸಭಾದ ಕಾರ್ಯಕರ್ತರೆಂದು ತನಗೆ ಪರಿಚಯಿಸಲಾಗಿತ್ತೆ'ಂದು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದರು (ನವಂಬರ್ 20, 1948).

ಗಾಂಧಿ ಹತ್ಯೆ ಪ್ರಕರಣದಲ್ಲಿ ಸಾವರ್ಕರ್ ಸ್ವಲ್ಪದರಲ್ಲೆ ಬಚಾವಾದ ಪರಿ ಇದು. ತದನಂತರ ಇದೇ ಸಾವರ್ಕರ್ 1952ರಲ್ಲಿ ಆರೆಸ್ಸೆಸ್ ವರಿಷ್ಠ ಎಂ.ಎಸ್. ಗೋಲ್ವಲ್ಕರ್ ಜೊತೆ ಪುಣೆಯಲ್ಲಿ ಒಂದೇ ವೇದಿಕೆಯನ್ನು ಹಂಚಿಕೊಂಡಿದ್ದ ಛಾಯಾಚಿತ್ರಗಳು ಲಭ್ಯವಿವೆ.

ಆರೆಸ್ಸೆಸ್ ಮತ್ತು ಗಾಂಧಿ

ಗಾಂಧಿಯ ಏಪ್ರಿಲ್ 3, 1947ರ ಪ್ರಾರ್ಥನಾ ಸಭೆಗೆ ಆರೆಸ್ಸೆಸ್ ಮಂದಿ ಅಡ್ಡಿಪಡಿಸಿದಾಗ ಆರೆಸ್ಸೆಸ್ "ಒಂದು ದೊಡ್ಡ ಸಂಘಟನೆ"ಯೆಂದಿದ್ದರು ಗಾಂಧಿ. ಆರೆಸ್ಸೆಸ್ ಕೂಡಲೆ ಪತ್ರವೊಂದನ್ನು ರವಾನಿಸಿ ಅವರೆಲ್ಲರೂ ತಮ್ಮವರಲ್ಲವೆಂದು ಹೇಳಿಕೊಂಡಿತ್ತು ('The Collec ted Works of Mahatma Gandhi', 87: 195, 202).

ಮುಂದೆ ಸಪ್ಟಂಬರ್ 12ರ ಪ್ರಾರ್ಥನಾ ಸಭೆಯ ವೇಳೆ ಗಾಂಧಿ "ಈ ಸಂಘಟನೆಯ ಕೈಗಳೂ ರಕ್ತಸಿಕ್ತವಾಗಿವೆಯೆಂದು ನನಗೆ ತಿಳಿಸಲಾಗಿದೆ. ಇದು

ಸತ್ಯವಲ್ಲವೆಂದು ಗುರೂಜಿ ಖಾತ್ರಿ ಪಡಿಸಿದ್ದರು. ...ಆರೆಸ್ಸೆಸ್ ಶಾಂತಿಯನ್ನು ಎತ್ತಿ ಹಿಡಿಯುತ್ತದೆಂದು ತಿಳಿಸಿದ್ದರು. ....'ಗೋಲ್ವಲ್ಕರ್ ಬಗೆಗಿನ ನಿಲುವುಗಳನ್ನು ಸಾರ್ವಜನಿಕವಾಗಿ ಹೇಳಬೇಕೆ'ಂದು ತನ್ನಲ್ಲಿ ಕೇಳಿಕೊಂಡಿದ್ದರು" ಎಂದಿದ್ದರು (ಅದೇ ಕೃತಿ 89: 177).

ಗಾಂಧಿಯ ನಿಕಟವರ್ತಿಗಳಾದ ಜವಹರ್‌ಲಾಲ್ ನೆಹರೂ ಮತ್ತು ಪ್ಯಾರೇಲಾಲ್‌ರ ಹೇಳಿಕೆಗಳೂ ಮಹತ್ವದ್ದಾಗಿವೆ. ನೆಹರೂ ಅಕ್ಟೋಬರ್ 27, 1948ರಂದು ಸರ್ದಾರ್ ಪಟೇಲರಿಗೆ ಬರೆದ ಪತ್ರದ ಒಕ್ಕಣೆ ಹೀಗಿದೆ:

"ಗೋಲ್ವಲ್ಕರ್ ಜೊತೆ ನಡೆಸಿದ ಮೊದಲ ಭೇಟಿಯ ಕುರಿತು ಗಾಂಧಿ ಹೇಳಿರುವುದು ನನಗೆ ಜ್ಞಾಪಕವಿದೆ. ಆ ವೇಳೆ ತಾನು ಗೋಲ್ವಲ್ಕರ್‌ನಿಂದ ಸ್ವಲ್ಪ ಮಟ್ಟಿಗೆ ಪ್ರಭಾವಿತನಾದರೂ ಆತನನ್ನು ನಂಬಿರಲಿಲ್ಲ ಎಂದಿದ್ದರು ಗಾಂಧಿ. ಎರಡನೆ ಅಥವಾ ಮೂರನೆ ಬಾರಿಯ ಭೇಟಿಯ ನಂತರ ಗೋಲ್ವಲ್ಕರ್ ಮತ್ತು ಆರೆಸ್ಸೆಸ್ ವಿರುದ್ಧ ಬಹಳ ಕಟುವಾದ ಅಭಿಪ್ರಾಯ ವ್ಯಕ್ತಪಡಿಸುತ್ತಾ ಅವರ ಮಾತುಗಳ ಮೇಲೆ ನಂಬಿಕೆ ಇರಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದರು. ಅವರುಗಳು ಮಾತುಕತೆಯ ಸಮಯದಲ್ಲಿ ಬಹಳ ವಿವೇಕಿಗಳಂತೆ ಕಂಡುಬಂದರೂ ತಾವು ಹೇಳಿರುವುದಕ್ಕೆ ತೀರಾ ವಿರುದ್ಧವಾಗಿ ನಡೆದುಕೊಳ್ಳಲು ಅವರಿಗೆ ಯಾವ ಅಳುಕೂ ಇಲ್ಲವೆಂದಿದ್ದರು. ನನ್ನ ಸ್ವಂತ ಅನಿಸಿಕೆಯೂ ಇದೇ ಆಗಿದೆ."

ಆರೆಸ್ಸೆಸ್‌ನ್ನು "ಸರ್ವಾಧಿಕಾರಿ ದೃಷ್ಟಿಕೋನವುಳ್ಳ ಒಂದು ಕೋಮುವಾದಿ ಸಂಘಟನೆ"ಯೆಂದು ಬಣ್ಣಿಸಿರುವ ಪ್ಯಾರೇಲಾಲ್ ಪ್ರಕಾರ "ನಗರದಲ್ಲಿ [ದೆಹಲಿಯಲ್ಲಿ] ಮತ್ತು ಭಾರತದ ವಿವಿಧ ಜಾಗಗಳಲ್ಲಿ ನಡೆದಿರುವ ಹೆಚ್ಚಿನ ಹತ್ಯೆಗಳ ಹಿಂದೆ ಆರೆಸ್ಸೆಸ್ ಪಾತ್ರವಿದ್ದ ವಿಷಯ ಎಲ್ಲರಿಗೂ ತಿಳಿದಿತ್ತು. .....ಗಾಂಧೀಜಿ ಕಡೆಯವರೊಬ್ಬರು ಮಧ್ಯಪ್ರವೇಶಿಸಿ, ಆರೆಸ್ಸೆಸ್ ಮಂದಿ ವಾಹ್ ನಿರಾಶ್ರಿತರ ಶಿಬಿರದಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ; ತಮ್ಮ ಧೈರ್ಯ, ಶಿಸ್ತು ಮತ್ತು ಪರಿಶ್ರಮದ ಸಾಮರ್ಥ್ಯವನ್ನು ತೋರಿದ್ದಾರೆಂದು ಹೇಳಿದರು. ಆಗ ಗಾಂಧೀಜಿ 'ಆದರೆ ಹಿಟ್ಲರ್‌ನ ನಾಝಿಗಳೂ ಮುಸ್ಸೊಲಿನಿಯ ಫ್ಯಾಶಿಸ್ಟರೂ ಹೀಗೇ ಮಾಡಿದ್ದರೆನ್ನುವುದನ್ನು ಮರೆಯಬೇಡಿ' ಎಂದು ಉತ್ತರಿಸಿದರು".

ಆದರೆ ಗೋಲ್ವಲ್ಕರ್ ಮಾತುಗಳಿಂದ ಗಾಂಧಿಗೆ ಖಾತ್ರಿಯಾಗಿರಲಿಲ್ಲವೆನ್ನುವುದು ಸುಸ್ಪಷ್ಟವಿತ್ತು. ಏಕೆಂದರೆ ನವಂಬರ್ 15, 1947ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಗಾಂಧಿ ತಿಳಿಸಿದ ಪ್ರಕಾರ: "ಈ ಎಲ್ಲಾ ಅನಿಷ್ಟಗಳಿಗೆ ಸಂಘವೇ ಮೂಲಕಾರಣವೆಂದು ಹೇಳುವುದನ್ನು ಕೇಳಿದ್ದೇನೆ. ......ಹತ್ಯಾಕಾಂಡಗಳಲ್ಲಿ ತೊಡಗುವುದರಿಂದ ಹಿಂದೂ ಧರ್ಮವನ್ನು ಉಳಿಸಲಾಗದು" ('The Collected Works of Mahatma Gandhi', 90: 43). ನವಂಬರ್ 16ರಂದು ಗಾಂಧಿ "ಭಾರತದ ಎಲ್ಲಾ ಮುಸ್ಲಿಮರನ್ನು ಭಾರತ ಒಕ್ಕೂಟದಿಂದ ಹೊರದಬ್ಬಲು ಬಯಸುತ್ತಿರುವ ಹಿಂದೂ ಮಹಾಸಭಾ ಮತ್ತು ಅದನ್ನು ಬೆಂಬಲಿಸುತ್ತಿರುವ ಆರೆಸ್ಸೆಸ್ ಸದಸ್ಯರ" ಬಗ್ಗೆ ಮಾತನಾಡಿದರು (ಅದೇ ಕೃತಿ 90: 50). ರಾಜಕೋಟ್‌ನಲ್ಲಿ ಅವರು ವರ್ತಿಸಿದ ಕುರಿತಾಗಿಯೂ ತನಗೆ ದೂರುಗಳು ಬಂದಿವೆಯೆಂದು ತಿಳಿಸಿದರು. "ಅವರು ಮುಸ್ಲಿಮರಿಗೆ ಕಿರುಕುಳ ಕೊಟ್ಟಿರುವುದು ನಿಜವೇ? ಅವರಲ್ಲವೆಂದಾದರೆ ಇನ್ಯಾರು?" ಎಂದು ಕೇಳಿದರು (ಅದೇ ಕೃತಿ 90: 143).

ಜನವರಿ 13, 1948ರಿಂದ ಗಾಂಧಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಜನವರಿ 18ರಂದು ಉಪವಾಸ ನಿಲ್ಲಿಸುವಂತೆ ಅವರನ್ನು ಪ್ರೇರೇಪಿಸಿದ್ದು ಮುಸ್ಲಿಮರಿಗೆ ಭರವಸೆ ನೀಡುವ ಲಿಖಿತ ಒಪ್ಪಂದ. ಅದಕ್ಕೆ ಆರೆಸ್ಸೆಸ್ ಕೂಡಾ ಸಹಿ ಹಾಕಿತ್ತು (ಅದೇ ಕೃತಿ 90: 444). ಆದರೂ ಗಾಂಧಿಗೆ ಸಂಪೂರ್ಣ ನಂಬಿಕೆ ಹುಟ್ಟಿರಲಿಲ್ಲ. "ಇತರ ಜಾಗಗಳಲ್ಲಿ ಭರವಸೆಗಳನ್ನು ಮುರಿದರೆ ಅದು ವಿಶ್ವಾಸದ್ರೋಹವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಈ ತೆರನಾದ ತಂತ್ರಗಳನ್ನು ದೊಡ್ಡ ಪ್ರಮಾಣದಲ್ಲಿ ನಡೆಸಲಾಗುತ್ತಿರುವುದನ್ನು ಗಮನಿಸಿದ್ದೇನೆ" (ಅದೇ ಕೃತಿ 90: 445).

ಗಾಂಧಿ ತನ್ನ ಉಪವಾಸ ನಿಲ್ಲಿಸಿದ ಎರಡು ದಿನಗಳ ಬಳಿಕ, ಅಂದರೆ ಜನವರಿ 20ರಂದು, ಮದನ್‌ಲಾಲ್ ಪಹ್ವಾ ಎಂಬಾತ ಎಸೆದ ಬಾಂಬ್ ಒಂದು ಗಾಂಧಿ ಕುಳಿತಿದ್ದಲ್ಲಿಂದ 20 ಮೀಟರ್ ದೂರದಲ್ಲಿ ಸ್ಫೋಟಿಸಿತು. ಅದು ಬೇಜವಾಬ್ದಾರಿ ಯುವಕನೊಬ್ಬನ ಕುಚೇಷ್ಟೆಯ ಕೃತ್ಯವೆಂದು ಯಾರೋ ಹೇಳಿದರು. ಇದರ ಕುರಿತು ಪ್ಯಾರೇಲಾಲ್ "ಗಾಂಧೀಜಿ ನಕ್ಕು 'ಮೂರ್ಖ: ಇದರ ಹಿಂದೆ ಒಂದು ಭಯಂಕರ ಹಾಗೂ ವ್ಯಾಪಕ ಷಡ್ಯಂತ್ರವಿರುವುದು ಕಾಣಿಸುತ್ತಿಲ್ಲವೇ?' ಎಂದು ಉದ್ಗರಿಸಿದರು" ಎಂದು ಬರೆದಿದ್ದಾರೆ. ಆ ಷಡ್ಯಂತ್ರ ಹತ್ತು ದಿನಗಳಲ್ಲಿ ತನ್ನ ಉದ್ದೇಶವನ್ನು ಸಾಧಿಸಿಕೊಂಡಿತು. ಇತರರೊಂದಿಗೆ ಒಳಸಂಚು ನಡೆಸಿದ ಗೋಡ್ಸೆ ಗಾಂಧಿ ಮೇಲೆ ಗುಂಡು ಹಾರಿಸಿದ.

ಹತ್ಯೆಯ ನಂತರದಲ್ಲಿ ತಿಳಿದುಬಂದ ಮಾಹಿತಿಗಳ ಬಗ್ಗೆ ಪ್ಯಾರೇಲಾಲ್ ಬರೆದಿರುವುದು ಅತ್ಯಂತ ಪ್ರಸ್ತುತವಾಗಿದೆ ಮಾತ್ರವಲ್ಲ ಪೂರ್ತಿಯಾಗಿ ಉಲ್ಲೇಖಿಸಲೂ ಯೋಗ್ಯವಿದೆ:

"ಹತ್ಯೆಯ ಬಳಿಕ ಸರ್ದಾರ್ ಪಟೇಲ್‌ರಿಗೆ ಪತ್ರ ಬರೆದಿದ್ದ ಯುವಕನೊಬ್ಬ, ತನ್ನನ್ನು ಮೋಸಗೊಳಿಸಿ ಆರೆಸ್ಸೆಸ್ ಸಂಘಟನೆಗೆ ಸೇರುವಂತೆ ಮಾಡಲಾಗಿತ್ತು; ಬಳಿಕ ತಾನು ಭ್ರಮನಿರಸನಗೊಂಡೆನೆಂದು ಹೇಳಿಕೊಂಡಿದ್ದ. ಆ ನಿರ್ಣಾಯಕ ಶುಕ್ರವಾರದಂದು 'ಒಳ್ಳೆಯ ಸುದ್ದಿ'ಗಾಗಿ ರೇಡಿಯೊಗಳನ್ನು ಚಾಲೂಸ್ಥಿತಿಯಲ್ಲಿ ಇರಿಸಿಕೊಳ್ಳುವಂತೆ ಕೆಲವೆಡೆಗಳ ಆರೆಸ್ಸೆಸ್ ಸದಸ್ಯರಿಗೆ ಮೊದಲೇ ಸೂಚಿಸಲಾಗಿತ್ತೆಂದು ಯುವಕ ಬರೆದಿದ್ದ. ಆ ಸುದ್ದಿ ಬಿತ್ತರವಾಗುತ್ತಲೆ ದೆಹಲಿ ಸೇರಿದಂತೆ ಹಲವಾರೆಡೆಗಳಲ್ಲಿನ ಆರೆಸ್ಸೆಸ್ ವರ್ತುಲಗಳಲ್ಲಿ ಸಿಹಿ ಹಂಚಲಾಯಿತು.

ಹತ್ಯೆಯ ನಂತರ ಸರಕಾರ ಒಂದು ಅಧಿಸೂಚನೆ ಹೊರಡಿಸಿ ಆರೆಸ್ಸೆಸ್‌ನ್ನು ನಿಷೇಧಿಸಿತು. ಆಗ ಭಾರತದ ರಾಜ್ಯವೊಂದರ ಪೊಲೀಸ್ ಮುಖ್ಯಸ್ಥನಿಂದ ಆರೆಸ್ಸೆಸ್ ಸಂಘಟಕರಿಗೆ ಒಂದು ಸಂದೇಶ ರವಾನೆಯಾಗಿತ್ತು. ಅವರುಗಳು ಸಂತಾಪಸೂಚಕವಾಗಿ 'ಹದಿಮೂರು ದಿನಗಳ ಕಾಲ' ತಮ್ಮ ಕಚೇರಿಯನ್ನು ಮುಚ್ಚಿ ಚದುರಿಕೊಳ್ಳಬೇಕು, ಆದರೆ ಸಂಘಟನೆಯನ್ನು ವಿಸರ್ಜಿಸಬಾರದೆಂದು ಸಂದೇಶದಲ್ಲಿ ತಿಳಿಸಲಾಗಿತ್ತು. ಯಾರಿಗೂ ಕಾಣದ ರೀತಿಯಲ್ಲಿ ಒಳಗಿಂದೊಳಗೆ ಆದ ಕೊಳೆತ ಎಷ್ಟೊಂದು ವ್ಯಾಪಕವಾಗಿತ್ತೆಂದರೆ ಅದನ್ನು ತಡೆಯುವುದು ಅಥವಾ ತೊಡೆದುಹಾಕುವುದು ಕೇವಲ ಪರಮತ್ಯಾಗದಿಂದಲೆ ಶಕ್ಯವಿತ್ತು."

ನಿಷೇಧಾಜ್ಞೆ ಕುರಿತಂತೆ ಕೆಲವು ಸತ್ಯಾಂಶಗಳು

ಆರೆಸ್ಸೆಸ್‌ನ ರಾಷ್ಟ್ರವಿರೋಧಿ ಚಟುವಟಿಕೆಗಳಿಗಾಗಿ ಅದನ್ನು ಫೆಬ್ರವರಿ 4, 1948ರಂದು ನಿಷೇಧಿಸಲಾಯಿತು. ಆ ಸಂದರ್ಭದಲ್ಲಿ ಸರಕಾರ ಹೊರಡಿಸಿದ ಪ್ರಕಟಣೆಯನ್ನು ಓದಿದರೆ ಸಾಕು, ಬೇರೇನೂ ವಿವರಣೆಗಳ ಅಗತ್ಯವಿಲ್ಲ:

"ಈ ರಾಷ್ಟ್ರದ ಸ್ವಾತಂತ್ರ್ಯವನ್ನು ಗಂಡಾಂತರಕ್ಕೀಡುಮಾಡಿ ಅದರ ಒಳ್ಳೆಯ ಹೆಸರಿಗೆ ಕಳಂಕ ತರುವ ರೀತಿಯಲ್ಲಿ ಕಾರ್ಯಾಚರಿಸುತ್ತಿರುವ ದ್ವೇಷ ಹಾಗೂ ಹಿಂಸೆಯ ಶಕ್ತಿಗಳನ್ನು ಬೇರುಸಮೇತ ಕಿತ್ತುಹಾಕುವ ಸಂಕಲ್ಪವನ್ನು ಭಾರತ ಸರಕಾರ ತನ್ನ ಫೆಬ್ರವರಿ 2, 1948ರ ಠರಾವಿನಲ್ಲಿ ಘೋಷಿಸಿದೆ. ಈ ಕಾರ್ಯನೀತಿಗೆ ಅನುಸಾರವಾಗಿ ಸರಕಾರ ಆರೆಸ್ಸೆಸ್‌ನ್ನು ಕಾನೂನು ಬಾಹಿರವೆಂದು ಘೋಷಿಸಲು ನಿರ್ಧರಿಸಿದೆ." (ಎಂ.ಎಸ್. ಗೋಲ್ವಲ್ಕರ್, 'ಶ್ರೀ ಗುರೂಜಿ ಸಮಗ್ರ ದರ್ಶನ್'ನಲ್ಲಿ ಉಲ್ಲೇಖಿಸಿದಂತೆ, ಸಂಪುಟ 2, ಪುಟ 9–10)

ಆರೆಸ್ಸೆಸ್‌ನ್ನು ನಿಷೇಧಿಸುವುದರ ಹಿಂದಿನ ಕಾರಣಗಳನ್ನು ವಿವರಿಸುತ್ತ ಪ್ರಕಟಣೆ ಹೇಳುತ್ತದೆ, "ಆರೆಸ್ಸೆಸ್ ಸದಸ್ಯರು ಅನಪೇಕ್ಷಣೀಯ ಮತ್ತು ಅಪಾಯಕಾರಿ ಚಟುವಟಿಕೆಗಳನ್ನು ಕೂಡ ನಡೆಸುತ್ತಿದ್ದಾರೆ. ಅವರು ಕಿಚ್ಚಿಡುವಿಕೆ, ದರೋಡೆ, ಡಕಾಯಿತಿ ಮತ್ತು ಕೊಲೆಗಳನ್ನೊಳಗೊಂಡ ಹಿಂಸಾಚಾರದ ಕೃತ್ಯಗಳನ್ನು ವೈಯುಕ್ತಿಕವಾಗಿ ದೇಶದ ವಿವಿಧೆಡೆಗಳಲ್ಲಿ ನಡೆಸಿದ್ದಾರೆ ಮತ್ತು ಅಕ್ರಮವಾಗಿ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಶೇಖರಿಸಿದ್ದಾರೆಂದು ಕಂಡುಕೊಳ್ಳಲಾಗಿದೆ. ಜನರು ಭಯೋತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು, ಬಂದೂಕುಗಳನ್ನು ಸಂಗ್ರಹಿಸಬೇಕು, ಸರಕಾರದ ವಿರುದ್ಧ ಅತೃಪ್ತಿ ಸೃಷ್ಟಿಸಬೇಕು ಮತ್ತು ಪೊಲೀಸ್ ಹಾಗೂ ಸೇನೆಗಳನ್ನು ದುಷ್ಕೃತ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸಬೇಕು ಎನ್ನುವ ಕರಪತ್ರಗಳನ್ನು ಅವರು ವಿತರಿಸುತ್ತಿರುವುದಾಗಿ ಕಂಡುಬಂದಿದೆ." (ಪುಟ 9–10)

ಅಂದಿನ ಗೃಹ ಸಚಿವ ಸರ್ದಾರ್

ನಾಥೂರಾಮ್ ಗೋಡ್ಸೆ

ಸಾವರ್ಕರ್

ಗಾಂಧಿ ತನ್ನ ಉಪವಾಸ ನಿಲ್ಲಿಸಿದ ಎರಡು ದಿನಗಳ ಬಳಿಕ, ಅಂದರೆ ಜನವರಿ 20ರಂದು, ಮದನ್‌ಲಾಲ್ ಪಹ್ವಾ ಎಂಬಾತ ಎಸೆದ ಬಾಂಬ್ ಒಂದು ಗಾಂಧಿ ಕುಳಿತಿದ್ದಲ್ಲಿಂದ 20 ಮೀಟರ್ ದೂರದಲ್ಲಿ ಸ್ಫೋಟಿಸಿತು. ಅದು ಬೇಜವಾಬ್ದಾರಿ ಯುವಕನೊಬ್ಬನ ಕುಚೇಷ್ಟೆಯ ಕೃತ್ಯವೆಂದು ಯಾರೋ ಹೇಳಿದರು. ಇದರ ಕುರಿತು ಪ್ಯಾರೇಲಾಲ್ "ಗಾಂಧೀಜಿ ನಕ್ಕು 'ಮೂರ್ಖ: ಇದರ ಹಿಂದೆ ಒಂದು ಭಯಂಕರ ಹಾಗೂ ವ್ಯಾಪಕ ಷಡ್ಯಂತ್ರವಿರುವುದು ಕಾಣಿಸುತ್ತಿಲ್ಲವೇ?' ಎಂದು ಉದ್ಗರಿಸಿದರು"

ವಲ್ಲಭಭಾಯಿ ಪಟೇಲ್ **ಆರೆಸ್ಸೆಸ್ ಬಗ್ಗೆ** ಮೃದು ನಿಲುವು ತಳೆದಿದ್ದರೆನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದರೆ ಗಾಂಧಿ ಕೊಲೆಯಾದಾಗ ಆರೆಸ್ಸೆಸ್‌ನ ರಕ್ಷಣೆಗೆ ನಿಲ್ಲುವುದು ಕಷ್ಟಕರವೆಂದು ಸರ್ದಾರ್ ಪಟೇಲರಿಗೆ ಕೂಡ ಅನಿಸಿತು. ಸೆಪ್ಟೆಂಬರ್ 11, 1948ರಂದು ಗೋಲ್ವಲ್ಕರ್‌ಗೆ ಬರೆದ ಪತ್ರವೊಂದರಲ್ಲಿ ಸರ್ದಾರ್ ಹೇಳಿದರು, "ಹಿಂದೂಗಳನ್ನು ಒಂದುಗೂಡಿಸಿ ಅವರಿಗೆ ಸಹಾಯ ಮಾಡುವುದು ಒಂದು ವಿಷಯ, ಆದರೆ ಅವರ ಪಡಿಪಾಟಲುಗಳಿಗಾಗಿ ನಿರಪರಾಧಿ, ಅಸಹಾಯಕ ಪುರುಷರ ಮೇಲೆ, ಸ್ತ್ರೀಯರ ಮೇಲೆ ಮತ್ತು ಮಕ್ಕಳ ಮೇಲೆ ಸೇಡು ತೀರಿಸಲು ಹೊರಡುವುದು ಬೇರೆಯೇ ವಿಷಯ. .....ಭಾಷಣಗಳೆಲ್ಲವೂ ಕೋಮು ವಿಷದಿಂದ ಕೂಡಿವೆ. ಹಿಂದೂಗಳಲ್ಲಿ ಹುಮ್ಮಸ್ಸು ಮೂಡಿಸಿ ಆತ್ಮರಕ್ಷಣೆಗಾಗಿ ಅವರನ್ನು ಸಂಘಟಿಸುವುದಕ್ಕೋಸ್ಕರ ವಿಷ ಹರಡುವ ಅವಶ್ಯಕತೆಯಿರಲಿಲ್ಲ. ಆ ವಿಷದ ಅಂತಿಮ ಪರಿಣಾಮಕ್ಕೆ ಗಾಂಧೀಜಿಯ ಅಮೂಲ್ಯ ಜೀವ ಬಲಿಯಾದುದನ್ನು ದೇಶ ಅನುಭವಿಸಬೇಕಾಯಿತು. ಸರಕಾರಕ್ಕಾಗಲಿ ಜನರಿಗಾಗಲಿ ಆರೆಸ್ಸೆಸ್ ಬಗ್ಗೆ ಎಳ್ಳಷ್ಟೂ ಅನುಕಂಪ ಉಳಿದಿಲ್ಲ. ವಾಸ್ತವದಲ್ಲಿ ವಿರೋಧ ಬೆಳೆದಿದೆ. ಗಾಂಧೀಜಿ ಸಾವಿಗೀಡಾಗುತ್ತಲೆ ಆರೆಸ್ಸೆಸ್ ಮಂದಿ ಆನಂದತುಂದಿಲರಾಗಿ ಸಿಹಿ ಹಂಚಿದುದರ ಪರಿಣಾಮವಾಗಿ ಪ್ರತಿರೋಧ ಇನ್ನಷ್ಟು ತೀವ್ರಗೊಂಡಿತು. ಈ ಪರಿಸ್ಥಿತಿಗಳಲ್ಲಿ ಸರಕಾರ ಆರೆಸ್ಸೆಸ್ ವಿರುದ್ಧ ಕ್ರಮ ಕೈಗೊಳ್ಳುವುದು ಅನಿವಾರ್ಯವಾಯಿತು. .....ಇದಾಗಿ ಆರು ತಿಂಗಳಿಗೂ ಅಧಿಕ ಸಮಯ ಕಳೆದಿದೆ. .....ಆದರೆ ನನಗೆ ಬರುತ್ತಿರುವ ವರದಿಗಳು ನಿಚ್ಚಳವಾಗಿ ತಿಳಿಸುವ ಪ್ರಕಾರ ಅವರು ತಮ್ಮ ಹಳೆ ಚಟುವಟಿಕೆಗಳಿಗೆ ಮರಳಿ ಜೀವ ತುಂಬುವ ಯತ್ನಗಳನ್ನು ಜಾರಿಯಲ್ಲಿಟ್ಟಿದ್ದಾರೆ." (Justice On Trial: Historic Documents of Guruji-Government Correspondence, ದೆಹಲಿ, ಪುಟ 26–28)

ಇನ್ನಷ್ಟು ಪುರಾವೆಗಳು

ಗಾಂಧಿ ಹತ್ಯೆಗೂ 'ಆರೆಸ್ಸೆಸ್‌ಗೂ ನಂಟುಗಳಿರುವ' ಕುರಿತು ಅಲ್ಲಗಳೆಯಲಾಗದಂತಹ ಪುರಾವೆಗಳು 90ರ ದಶಕದಲ್ಲಿ ಹೊರಬಿದ್ದಿವೆ. ಗಾಂಧಿ ಹಂತಕ ಗೋಡ್ಸೆಯ ಸೋದರ ಗೋಪಾಲ್ ಗೋಡ್ಸೆ ಬರೆದಿರುವ 'ನಾನೇಕೆ ಮಹಾತ್ಮಾ ಗಾಂಧಿಯನ್ನು ಕೊಂದೆ' (Why I Assassi nated Mahatma Gandhi) ಪುಸ್ತಕ ಡಿಸೆಂಬರ್ 1993ರಲ್ಲಿ ಪ್ರಕಟಗೊಂಡಿದೆ. ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಮಾತನಾಡಿದ ಗೋಪಾಲ್ ಗೋಡ್ಸೆ, 'ತಾವಿಬ್ಬರೂ ಆರೆಸ್ಸೆಸ್‌ನ ಸಕ್ರಿಯ ಸದಸ್ಯರಾಗಿದ್ದೆವು' ಎಂಬ ಸತ್ಯವನ್ನು ಅನಾವರಣಗೊಳಿಸಿದ್ದಾರೆ. ನಂತರ ಫ್ರಂಟ್‌ಲೈನ್ (ಜನವರಿ 28, 1994)ಗೆ ನೀಡಿದ ಸಂದರ್ಶನವೊಂದರಲ್ಲಿ ಇನ್ನಷ್ಟು ವಿವರಗಳನ್ನು ಕೊಟ್ಟಿದ್ದಾರೆ.

ನಾಥೂರಾಮ್, ದತ್ತಾತ್ರೇಯ, ನಾನು ಮತ್ತು ಗೋವಿಂದ ಸಹೋದರರು. ನಾವು ನಾಲ್ವರೂ ಆರೆಸ್ಸೆಸ್‌ನಲ್ಲಿದ್ದೆವು. ನಾವು ಬೆಳೆದದ್ದೇ ಆರೆಸ್ಸೆಸ್‌ನಲ್ಲಿ, ನಮ್ಮ ಮನೆಯಲ್ಲಲ್ಲ ಎನ್ನಬಹುದು. ನಮ್ಮ ಪಾಲಿಗೆ ಅದು ಕುಟುಂಬದಂತಿತ್ತು. ನಾಥೂರಾಮ್ ಆರೆಸ್ಸೆಸ್‌ನ ಬೌದ್ಧಿಕ್ ಕಾರ್ಯವಾಹ್ (ಬೌದ್ಧಿಕ ಕಾರ್ಯಕರ್ತ) ಆಗಿದ್ದ. ಆತ ತಾನು ಆರೆಸ್ಸೆಸ್ ತ್ಯಜಿಸಿದ್ದೆನೆಂದು ಹೇಳಿಕೆ ಕೊಟ್ಟಿದ್ದಾನೆ. ಗಾಂಧಿ ಕೊಲೆ ಬಳಿಕ ಗೋಳ್ವಲ್ಕರ್ ಮತ್ತು ಆರೆಸ್ಸೆಸ್ ತುಂಬಾ ಸಂಕಷ್ಟಕ್ಕೀಡಾದುದರಿಂದ ಆತ ಹಾಗೆ ಹೇಳಿದ. ಆದರೆ ಆತ ಆರೆಸ್ಸೆಸ್ ತ್ಯಜಿಸಿರಲಿಲ್ಲ.

'ನಾಥೂರಾಮ್ ಗೋಡ್ಸೆ 1930ರ ದಶಕದ ಮಧ್ಯ ಭಾಗದಲ್ಲಿ ಆರೆಸ್ಸೆಸ್ ತ್ಯಜಿಸಿದ್ದ; ನಂತರ ಆತನಿಗೂ ಆರೆಸ್ಸೆಸ್‌ಗೂ ಏನೂ ಸಂಬಂಧವಿರಲಿಲ್ಲ'ವೆಂದು ಅಂದು ಅಡ್ವಾನಿ ಕೂಡಾ ಸಾಧಿಸಲೆತ್ನಿಸುತ್ತಿದ್ದರು. ಇದರ ಬಗ್ಗೆ ಗೋಪಾಲ್‌ರನ್ನು ಪ್ರಶ್ನಿಸಿದಾಗ "ಹಾಗೆ ಹೇಳುವುದು ಪುಕ್ಕಲುತನವಾಗುತ್ತದೆಂದು ಅಡ್ವಾನಿಗೆ ತಿರುಗೇಟು ನೀಡಿದ್ದೇನೆ. 'ಹೋಗಿ ಗಾಂಧಿಯನ್ನು ಕೊಲ್ಲು' ಎನ್ನುವ ಠರಾವೊಂದನ್ನು ಆರೆಸ್ಸೆಸ್ ಅಂಗೀಕರಿಸಿರಲಿಲ್ಲವೆಂದು ಹೇಳಬಹುದು. ಆದರೆ ಆತ ತಮ್ಮವನಲ್ಲವೆಂದು ಹೇಳುವುದಲ್ಲ. ಹಿಂದೂ ಮಹಾಸಭಾ ಆತನನ್ನು ದೂರಮಾಡಿಲ್ಲ. ನಾಥೂರಾಮ್ ಆರೆಸ್ಸೆಸ್‌ನ ಬೌದ್ಧಿಕ್ ಕಾರ್ಯವಾಹ್ (ಬೌದ್ಧಿಕ ಕಾರ್ಯಕರ್ತ) ಆಗಿದ್ದಾಗಲೆ 1944ರಲ್ಲಿ ಹಿಂದೂ ಮಹಾಸಭಾದ ಕೆಲಸ ಮಾಡಲಾರಂಭಿಸಿದ" ಎಂದು ಉತ್ತರಿಸಿದ್ದಾರೆ.

ಆರೆಸ್ಸೆಸ್ ವಕ್ತಾರ ರಾಮ್ ಮಾಧವರಿಗೂ ಇದೇ ಉತ್ತರ ಸಾಕಲ್ಲವೇ?

ಆಧಾರ: ಜ್ಯೋತಿರ್ಮಯ ಶರ್ಮ, (ರಾಜಕೀಯ ವಿಜ್ಞಾನ ಪ್ರೊಫೆಸರ್, ಹೈದರಾಬಾದ್ ವಿಶ್ವವಿದ್ಯಾನಿಲಯ), "ದ ಹಿಂದು", 20.9.2004
: ಎ.ಜಿ.ನೂರಾನಿಯವರ ಕೃತಿ 'RSS and BJP – A Division of Labour'

ಮಹಾತ್ಮಾ ಗಾಂಧಿ ಸ್ವಾತಂತ್ರ್ಯ ಚಳವಳಿಯ ನೇತಾರರಾಗಿ ಗೌರವಿಸಲೇಬೇಕಾದ ವ್ಯಕ್ತಿತ್ವದವರು, ಗೌರವಕ್ಕೆ ಅರ್ಹರೂ ಹೌದು, ಆದರೆ ಅಸ್ಪೃಶ್ಯರ ವಿಷಯ ಬಂದಾಗ ಗಾಂಧೀಜಿಯವರು ಹಿಂದೂವಾದದ ರಕ್ಷಕರಾಗಿ ವೀರ ಯೋಧರಾಗಿ ಕಂಡುಬರುತ್ತಾರೆ. ಹಿಂದೂವಾದವೆಂದರೆ ಅವರ ಜೀವ. ತಮ್ಮ ಜೀವ ಪಣಕ್ಕಿಟ್ಟು ತನ್ನವರನ್ನು ತನ್ನ ವರ್ಣಾಶ್ರಮ ಧರ್ಮವನ್ನು ರಕ್ಷಿಸುವ ಸಲುವಾಗಿ ಕೋಟಿ ಕೋಟಿ ದಲಿತರ ಬದುಕನ್ನು ಕರಾಳ ಕೂಪಕ್ಕೆ ತಳ್ಳಿದ ಅಪಕೀರ್ತಿ ಗಾಂಧೀಜಿಯವರಿಗೆ ಸಲ್ಲುತ್ತದೆ. ಹೀಗಾಗಿ ಈ ವಿಷಯವಾಗಿ ಗಾಂಧೀಜಿಯವರು ಅಪವಾದಕ್ಕೆ ಗುರಿಯಾಗಿದ್ದಾರೆ. ಅದೇ ಸಂದರ್ಭದಲ್ಲಿ, ರಾಷ್ಟ್ರದ ಹಿತದ ದೃಷ್ಟಿಯಿಂದ ಅಂಬೇಡ್ಕರ್ ಪೂನಾ ಒಡಂಬಡಿಕೆಗೆ ಸಹಿ ಹಾಕಬೇಕಾಯಿತು. ದಲಿತರ ದ್ವಿಮತದಾನದ ಹಕ್ಕನ್ನು ಉಳಿಸಿಕೊಳ್ಳುವಲ್ಲಿ ಅಂಬೇಡ್ಕರ್ ಹಟ ಹಿಡಿದಿದ್ದರೆ ಗಾಂಧೀಜಿಯವರು ಜೀವಂತ ಉಳಿಯುವುದು ಕಷ್ಟವಾಗುತ್ತಿತ್ತು.

ಅಂಬೇಡ್ಕರ್–ಗಾಂಧಿ ಮುಖಾಮುಖಿ

■ ಎಚ್.ಟಿ ಪೋತೆ



ದಲಿತರ ಮಹಾಚೇತನ ಡಾ. ಅಂಬೇಡ್ಕರ್ 1935ರಲ್ಲಿ ಮತಾಂತರ ಆಂದೋಲನವನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಆಡಿದ ಮಾತು ಹೀಗಿದೆ. "ನನ್ನ ದುರಾದೃಷ್ಟವೆಂದರೆ ನಾನು ಹಿಂದುವಾಗಿ ಹುಟ್ಟಿದ್ದು. ಏಕೆಂದರೆ ಅದನ್ನು ತಡೆಯುವುದು ನನ್ನ ಹಿಡಿತದಲ್ಲಿರಲಿಲ್ಲ. ಆದರೆ ಇಂದು ನಾನು ಪ್ರಮಾಣ ಮಾಡಿ ಹೇಳುವುದೇನೆಂದರೆ, ಸಾಯುವುದು ನನ್ನ ಹಿಡಿತದಲ್ಲಿರುವುದರಿಂದ ಹಿಂದುವಾಗಿ ಮಾತ್ರ ಸಾಯಲಾರೆ ಎಂದು ಅಭಿಪ್ರಾಯ ಪಟ್ಟಿದ್ದರು. ನುಡಿದಂತೆ ನಡೆದರು. ಇದು ಅಪಾರ ನೋವಿನಿಂದ ಹೊರ ಹೊಮ್ಮಿದ ಮಾತು. 1936ರಲ್ಲಿ ಅವರು ಬರೆದಿರುವ 'ಮುಕ್ತಿ ಮಾರ್ಗ' ಎಂಬ ಲೇಖನ ಓದಿದರೆ ದಲಿತರು ಏಕೆ ಮತಾಂತರಗೊಳ್ಳಬೇಕು ಎಂಬ ಬಗ್ಗೆ ದೀರ್ಘವಾದ ವಿವರಣೆ ನೀಡಿದ್ದಾರೆ. ಈ ಅವಮಾನಿತ ಜಗತ್ತಿನಿಂದ ದಲಿತರು ಹಿಂದೂಗಳ ಅಸಂವಿಧಾನಿಕ ಬದುಕಿನಿಂದ ದಿನ ನಿತ್ಯದ ವ್ಯವಹಾರದಲ್ಲಿ ನಿತ್ಯಸಾಯುವುದರಿಂದ ಪ್ರಯೋಜನವಿಲ್ಲ. ಬದುಕು ಪ್ರಯೋಜನಕಾರಿಯಾದುದು. ಆ ಬದುಕಿಗೊಂದು ಅರ್ಥ ಬರಬೇಕಾದರೆ, ಹಿಂದೂ ಧರ್ಮದ ಕಪಿಮುಷ್ಠಿಯಿಂದ ಹೊರಬರಬೇಕಾದ ಅನಿವಾರ್ಯತೆ, ಹಿಂದೆಂದಿಗಿಂತಲೂ ಇಂದಿನ ಜಾಗತೀಕರಣ, ಖಾಸಗೀಕರಣ ಹಾಗೂ ದೇಗುಲೀಕರಣದ ಸಂದರ್ಭದಲ್ಲಿ ತೀರ ಅವಶ್ಯವೆನಿಸುತ್ತದೆ.

ಡಾ. ಅಂಬೇಡ್ಕರ್ ಅವರು ಅಂದು ವ್ಯಕ್ತಪಡಿಸಿದ ವಿಚಾರಗಳನ್ನು ಎತ್ತಿಕೊಳ್ಳುವುದರ ಮೂಲಕ ಗಾಂಧಿ–ಅಂಬೇಡ್ಕರ್ ಅವರವರ ಚಿಂತನೆಗಳನ್ನು ಮುಖಾಮುಖಿ ಗೊಳಿಸುವುದು ಪ್ರಸ್ತುತ ಲೇಖನದ ಉದ್ದೇಶವಾಗಿದೆ. 1936ರಲ್ಲಿ ಮುಕ್ತಿಮಾರ್ಗ ಲೇಖನದಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ. 'ಬಂಧುಗಳೇ ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ನೀವು ಅತ್ಯಂತ ದೈನ್ಯಾವಸ್ಥೆಯಲ್ಲಿ ಇದ್ದೀರಿ. ಬಾವಿಯಿಂದ ನೀರು ಸೇದಿದ ಕಾರಣಕ್ಕೆ, ಬಾವಿ ನೀರು ಕುಡಿದಿದ್ದಕ್ಕೆ ನಿಮ್ಮನ್ನು ಬಡಿಯಲಾಗಿದೆ. ಒಳ್ಳೆಯ ಬಟ್ಟೆಯನ್ನು ಧರಿಸಿದ್ದಕ್ಕೆ, ಒಳ್ಳೆಯ ಪಾತ್ರೆಗಳಲ್ಲಿ ನೀರು ತುಂಬಿಟ್ಟುಕೊಂಡಿದ್ದಕ್ಕೆ, ವಠಾರದಲ್ಲಿ ಮನೆಯನ್ನು ಬಾಡಿಗೆಗೆ ಪಡೆದಿದ್ದಕ್ಕೆ ಬಡಿಯಲಾಗಿದೆ. ಸತ್ತ ದನಗಳನ್ನು ಊರಿನಿಂದ ಹೊರಗೆ ಎಳೆದು ಹಾಕದಿದ್ದುದಕ್ಕೆ, ಸತ್ತ ದನದ ಮಾಂಸವನ್ನು ತಿನ್ನದಿದ್ದುದಕ್ಕೆ, ಮೇಲು ಜಾತಿಯವರಿಗೆ ನಮಸ್ಕಾರ ಮಾಡದಿದ್ದುದಕ್ಕೆ ನೀವು ಮತ್ತು ನಿಮ್ಮ ಮಕ್ಕಳು ಅವರ ಜೀತ ಮಾಡದಿದ್ದುದಕ್ಕೆ ಹೀಗೆ ಹಲವು ಹತ್ತು ಕಾರಣಗಳಿಗೆ ನಿಮ್ಮನ್ನು ಅಮಾನುಷವಾಗಿ ಹಿಂಸಿಸಿದ್ದಲ್ಲದೆ, ನಿಮಗೆ ಸಾಮಾಜಿಕ ಬಹಿಷ್ಕಾರ ಕೂಡ ಹಾಕಲಾಗಿದೆ.

ಇದು ಒಂದು ಜನಾಂಗ ಮತ್ತೊಂದು ಜನಾಂಗದವರ ಮೇಲೆ ನಡೆಸುತ್ತಿರುವ ಬರ್ಬರ ದಬ್ಬಾಳಿಕೆಯಾಗಿದೆ. ಈ ಹೊಡೆದಾಟ ಬಡೆದಾಟಗಳಿಗೆಲ್ಲ ಕಾರಣ ಅಸ್ಪೃಶ್ಯತೆಯ ಪ್ರಶ್ನೆ, ಮುಟ್ಟಿಸಿಕೊಳ್ಳಬಹುದಾದ, ಮುಟ್ಟಿಸಿಕೊಳ್ಳಲಾರದ ಎರಡು ಗುಂಪುಗಳ ನಡುವಿನ ಅಮಾನವೀಯವಾದ ಸಂಗತಿಯಾಗಿದೆ. ನೀವು ದೇವಸ್ಥಾನ ಪ್ರವೇಶಿಸಿದ್ದಕ್ಕೆ, ದೇವಸ್ಥಾನದಲ್ಲಿ ಪೂಜೆ ಮಾಡಿಸಲು ಪ್ರಯತ್ನ ಪಟ್ಟಿದ್ದಕ್ಕೆ, ಜನಿವಾರ ತೊಟ್ಟುಕೊಂಡಿದ್ದಕ್ಕೆ, ಹಿಂದೂ ಧಾರ್ಮಿಕ ವಿಧಿ ವಿಧಾನಗಳನ್ನು ಆಚರಿಸಿದ್ದಕ್ಕೆ, ನಿಮ್ಮ ಮೇಲೆ ಹಲ್ಲೆ ಮಾಡಲಾಗಿದೆ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸ್ಪೃಶ್ಯರು ಹಂದಿ ನಾಯಿಗಳಿಗಿಂತಲೂ ಕೀಳಾಗಿದ್ದಾರೆ. ನೀವು ಇತರೆ ಜಾತಿಯವರೊಡನೆ ವ್ಯವಹರಿಸುವಾಗ ಅವರನ್ನು ಸರಿಸಮಾನರಂತೆ ಪರಿಗಣಿಸಿ ವರ್ತಿಸುವುದೇ ಆಗಿದೆ. ನೀವು ಅವರಿಗಿಂತ ಕೀಳು ಎಂದು ಒಪ್ಪಿಕೊಂಡರೆ, ಯಾವುದೇ ರೀತಿಯ ಪ್ರತಿಭಟನೆ ಮಾಡದಿದ್ದರೆ, ಯಾವುದೇ ರೀತಿಯ ಜಗಳವಿರುವುದಿಲ್ಲ.

ಸಮಾಜದಲ್ಲಿ ಯಾವಾಗ್ಲಲೂ ನೀವು ಅಸ್ಪೃಶ್ಯರಾಗಿ, ಚಂಡಾಲರಾಗಿ, ಸೇವಕರಾಗಿ, ಗುಲಾಮರಾಗಿ ಇರಬೇಕೆಂದು ಹಿಂದೂಗಳು ಭಾವಿಸುತ್ತಾರೆ. ನಿರಂತರವಾಗಿ ನೀವು ಹಿಂದೂಗಳ ಗುಲಾಮರಾಗಿರಲು ಬಯಸುತ್ತೀರೇನು? ಬಯಸದಿದ್ದರೆ ನೀವೇನು ಮಾಡಬೇಕು?2 ಎಂದು ಅವರಿಂದ ಬಿಡುಗಡೆಗೊಳ್ಳಲು ತೆಗೆದುಕೊಳ್ಳಬೇಕಾದ ಅನಿವಾರ್ಯ ನಿರ್ಧಾರದ ಕುರಿತು ಸ್ಪಷ್ಟವಾದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ದಬ್ಬಾಳಿಕೆಯಿಂದ ಬಿಡುಗಡೆಯಾಗಲು ನಾವು ಜನ, ಧನ ಬಲದಲ್ಲಿ ಬಲಿಷ್ಠವಾಗಿರಬೇಕು. ಆದರೆ ಅಸ್ಪೃಶ್ಯರು ಜನ ಧನ ಬಲದಲ್ಲಿ ಬಲಿಷ್ಠರಿಲ್ಲ. ಅನೇಕ ಒಳಪಂಗಡಗಳಲ್ಲಿ ಚದುರಿಹೋಗಿದ್ದಾರೆ. ಮೇಲಾಗಿ ಆರ್ಥಿಕವಾಗಿ ಕನಿಷ್ಠ ಮಟ್ಟದಲ್ಲಿದ್ದು ಸಂಘಟನೆಯ ಅಭಾವದಿಂದಾಗಿ ಎಲ್ಲ ಹಂತದಲ್ಲೂ ಇತರರಿಂದ ತುಳಿತಕ್ಕೊಳಪಟ್ಟಿದ್ದೀರಿ. ಹಾಗೊಂದು ವೇಳೆ ನ್ಯಾಯಾಲಯದಲ್ಲಿ ವ್ಯಾಜ್ಯ ಹೂಡಿ ನ್ಯಾಯ ಪಡೆಯಲು ನಿಮ್ಮ ಆರ್ಥಿಕ ಸ್ಥಿತಿ ಏತಕ್ಕೂ ಸಾಲದು.3 ಆದ್ದರಿಂದ ನೀವು ನಿಸ್ತೇಜರಾಗಿ ಹೇಡಿಗಳಾಗಿ ಅವಮಾನ, ಹಿಂಸೆಗಳನ್ನು ಮೂಕ ಪ್ರಾಣಿಗಳಂತೆ ಮೌನವಾಗಿ ಸಹಿಸುತ್ತಿದ್ದೀರಿ. ಸಂಘಟಿತ ಶಕ್ತಿ ಪಡೆದುಕೊಳ್ಳಬೇಕಾದರೆ, ಬದಲಾವಣೆ ಅನಿವಾರ್ಯ. ಬದಲಾವಣೆ ವಿಷಯವಾಗಿ ಮಾತನಾಡುತ್ತಾ. ಆರ್ಥಿಕ ಬದಲಾವಣೆಯೋ ಧಾರ್ಮಿಕ ಬದಲಾವಣೆಯೋ ಯಾವುದು ಮೊದಲು ಎಂದು ಹೇಳುವುದು ಕಷ್ಟವಾದರೂ' ಎಂದೆನ್ನುತ್ತ ಅವರು ಧಾರ್ಮಿಕ ಬದಲಾವಣೆಗೆ ಮಹತ್ವ ಕೊಡುತ್ತಾರೆ. ನೀವು ಎಲ್ಲಿಯವರೆಗೆ ಅಸ್ಪೃಶ್ಯರಾಗಿರುತ್ತೀರೋ ಅಲ್ಲಿಯವರೆಗೆ ದಾರಿದ್ರ್ಯ ಬಡತನ ನಿಮ್ಮಿಂದ ದೂರಾಗುವುದಿಲ್ಲ. ಅಸ್ಪೃಶ್ಯತೆ ಎನ್ನುವುದು ನಿಮ್ಮ ದಾರಿಯಲ್ಲಿಯ ಬಂಡೆಗಲ್ಲು, ಮುಳ್ಳುಗಳಿದ್ದಂತೆ ಧರ್ಮಾಂತರದಿಂದ ಇವೆಲ್ಲವುಗಳನ್ನು ಎದುರಿಸುವುದು ಸಾಧ್ಯ. ನಿಮ್ಮ ಬಿಡುಗಡೆ ನಿಮ್ಮಿಂದಲೇ ಹೊರತು ಬೇರೆಯವರಿಂದಲ್ಲ. ಬದಲಾವಣೆಯಿಂದ ಮಾತ್ರ ಮಾನವನ ಅಭಿವೃದ್ಧಿಯಾಗುತ್ತದೆ ನಿಮ್ಮ ಅಭಿವೃದ್ಧಿಗೆ ಧರ್ಮಾಂತರದ ಅಗತ್ಯವಿದೆ.

'ಹಿಂದೂಗಳು ಇರುವೆಗೆ ಸಕ್ಕರೆ ನೀಡುವ, ಮನುಷ್ಯರಿಗೆ ನೀರು ಕೊಡದೆ ಕೊಲ್ಲುವ ಜನ, ಇವರು ಡಾಂಭಿಕರು' ಹಿಂದೂ ಧರ್ಮ ಹೆಸರಿಗೆ ಮಾತ್ರ ಸಹನೆ ತೋರುತ್ತೆ. ಅಂತರಾಳದಲ್ಲಿ ಅದು ಕ್ರೂರಿಯೂ, ಅಸಹ್ಯಕರವೂ ಆಗಿದೆ. ಇಷ್ಟೆಲ್ಲಾ ಕೊಳಕುಗಳಿದ್ದರೂ ತಮ್ಮ ಧರ್ಮ ಕೀಳು ಧರ್ಮ ಎಂದು ಹಿಂದೂಗಳು ಒಪ್ಪಿಕೊಳ್ಳುವುದಿಲ್ಲ. ಬದಲಾಗಿ ಅದು ದೇವರಿಂದ ಸೃಷ್ಟಿಯಾದ ಧರ್ಮವೆಂದು ಹೇಳುತ್ತಾರೆ.4

ನಿಮ್ಮ ಹಾಗೂ ನಿಮ್ಮ ಮಕ್ಕಳ, ಅಲ್ಲದೆ ನಿಮ್ಮ ಸಂಸಾರದ ಸುಖವನ್ನು ಕಿತ್ತುಕೊಳ್ಳುವ ಧರ್ಮದಲ್ಲೇಕೆ ಇದ್ದೀರಿ, ನಿಮ್ಮ ವಿದ್ಯೆಯನ್ನು ಆಸ್ತಿಯನ್ನು ಕಿತ್ತುಕೊಳ್ಳುವ ಧರ್ಮದಲ್ಲೇಕೆ ಇದ್ದೀರಿ, ಹಂದಿಯನ್ನು ವಿಷ್ಣುವಿನ ಅವತಾರ, ಕಕ್ಕಸು ತಿನ್ನುವ ನಾಯಿಯನ್ನು ನಾರಾಯಣಸ್ವಾಮಿ ಎನ್ನುತ್ತ ಅನ್ನ ತಿನ್ನುವ ಮಾನವನನ್ನು ಕೀಳಾಗಿ ಕಾಣುವ ಧರ್ಮದಲ್ಲಿ ನೀವೇಕೆ ಇದ್ದೀರಿ ಎಂದು ದಲಿತ ವರ್ಗದವರನ್ನು ಪ್ರಶ್ನಿಸಿದ್ದಾರೆ. ಆದ್ದರಿಂದ ಪ್ರಜ್ಞಾವಂತ ದಲಿತರು ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ. ಮೇಲಾಗಿ ಸ್ವಾತಂತ್ರ್ಯ ಸಮಾನತೆ ಪಡೆಯಬೇಕಾದರೆ, ಸ್ವಾಭಿಮಾನದಿಂದ ಬದುಕಬೇಕಾದರೆ ಧರ್ಮಾಂತರದ ಅಗತ್ಯವಾಗಿದೆ ಎಂಬುದು ಅಂಬೇಡ್ಕರ್ ಅವರ ದೃಢ ನಿಲುವಾಗಿತ್ತು. ಅದನ್ನು ಅವರು ಸಾಧಿಸಿ ತೋರಿಸಿದ್ದಾರೆ.

ದಲಿತರ ಧರ್ಮಾಂತರದ ಹಿಂದೆ ಈ ನೆಲದ ಸಾಂಪ್ರದಾಯಿಕ ವರ್ಣ ವ್ಯವಸ್ಥೆಯಂತಹ ಪದ್ಧತಿ, ಮೌಢ್ಯತೆಗಳು ಒಂದೆಡೆ ಕಾರಣವಾದರೆ, 1932ರ ಪೂನಾ ಒಡಂಬಡಿಕೆ ಸಂದರ್ಭದಲ್ಲಿ ಹಿಂದೂವಾದಿಗಳೆಲ್ಲ ಒಂದಾಗಿ ಗಾಂಧಿಯವರ ಮೂಲಕ ದಲಿತರು ಹಕ್ಕನ್ನು ವಿಶೇಷವಾಗಿ ದ್ವಿಮತದಾನದ ಹಕ್ಕನ್ನು ಕಿತ್ತುಕೊಂಡದ್ದು ಒಂದು ಪ್ರಮುಖ ಕಾರಣವಾಗಿದೆ. ಆಂಗ್ಲ ಆಡಳಿತದ ಮೂಲಕ ದಲಿತರ ಏಳಿಗೆಯ ಸಲುವಾಗಿ ಅನೇಕ ಸೌಲಭ್ಯಗಳನ್ನು ಅಂಬೇಡ್ಕರ್ ಪಡೆದಿದ್ದರು. ಆ ಹಕ್ಕುಗಳನ್ನು ಸನಾತನವಾದಿಗಳು ಹಾಡುಹಗಲೇ ದೋಚಿದವರು. ಈ ನೆಲೆಯಲ್ಲಿ ಅಂಬೇಡ್ಕರ್ ಅವರ ಹೋರಾಟಕ್ಕೆ ಮನುವಾದಿಗಳ ಕುತಂತ್ರದಿಂದಾಗಿ ಸೋಲಿನ ಕರಿ ನೆರಳು ಆವರಿಸಿತು. ಭಾರತದ ಸಮಾಜೋಧಾರ್ಮಿಕ, ರಾಜಕೀಯ, ಆರ್ಥಿಕ ಅಸಮಾನತೆಯನ್ನು ರಾಜಕೀಯ ಸ್ವಾತಂತ್ರ್ಯ ಪಡೆಯುವುದ್ಧರ ಮೂಲಕ ಹೋಗಲಾಡಿಸಬೇಕೆಂಬುದು ಅಂಬೇಡ್ಕರ್ ಅವರ ಗುರಿಯಾಗಿತ್ತು. ದಲಿತರಿಗೆ ಪ್ರತ್ಯೇಕ ಮತದಾನದ ಹಕ್ಕು ದೊರೆತಿದ್ದರೆ, ಸುಧಾರಣೆ ನಿರೀಕ್ಷಿತ ನೆಲೆಯಲ್ಲಿ ಆಗಲು ಸಾಧ್ಯವಿತ್ತು. ಯಾಕೆಂದರೆ ಪ್ರಜಾಪ್ರಭುತ್ವದ ಅಧಿಕಾರದಲ್ಲಿ ಒಂದಾದ ರಾಜಕೀಯ ಅಧಿಕಾರ ಸಶಕ್ತವಾದ ಹಾಗೂ ಅತೀ ಬಲಾಢ್ಯವಾದ ಶಕ್ತಿ ಆಗಿದೆ. ರಾಜಕೀಯ ಅಧಿಕಾರ ಅವರಿಗೆ ದೊರೆತಲ್ಲಿ ತೀವ್ರ ಬದಲಾವಣೆ ಸಾಧ್ಯವಿತ್ತು.

ಹಾಗಾಗದಂತೆ ಹಿಂದೂಗಳು ಮುತುವರ್ಜಿ ವಹಿಸಿ ಅಂಬೇಡ್ಕರ್ ಮನಸ್ಸನ್ನು ಘಾಸಿಗೊಳಿಸಿದರು. ಉಜ್ವಲವಾಗಬೇಕಿದ್ದ ದಲಿತರ ಭವಿಷ್ಯವನ್ನು ಹಾಳುಗೆಡವಿದರು. ಪ್ರತ್ಯೇಕ ಮತದಾನದ ಹಕ್ಕನ್ನು ವಿರೋಧಿಸಿ ಮೀಸಲಾತಿ ಕ್ಷೇತ್ರವನ್ನು ಕೊಡಮಾಡಿದರೂ, ಅಪೇಕ್ಷಿತ ರೀತಿಯ ಸಾಮಾಜಿಕ ನ್ಯಾಯದ ನೆಲೆಯ ಬದಲಾವಣೆ ದಲಿತರಲ್ಲಿ ಬರಲಿಲ್ಲ. ಇದಕ್ಕೆಲ್ಲ ಕಾರಣ ಜಾತೀಯತೆ, ಅಲ್ಲದೆ ಮೂಲಭೂತವಾದಿಗಳ ರಾಜಕೀಯ ಇಚ್ಛಾಶಕ್ತಿ ಕೊರತೆಯೇ ಕಾರಣ ಎಂದು ಹೇಳಬಹುದು.

ಜಾತೀಯತೆ ಕುರಿತಂತೆ ಮಾಜಿ ಪ್ರಧಾನಿ ದಿ. ಬಾಬು ಜಗಜೀವನರಾಮ್ ಅವರು ಹೀಗೆ ಅಭಿಪ್ರಾಯಪಟ್ಟಿದ್ದಾರೆ. 'ಜಾತೀಯತೆ ಭಾರತೀಯ ರಾಜಕಾರಣದಲ್ಲಿ ಎಂದಿನಿಂದಲೂ ನಡೆದುಕೊಂಡು' ಬಂದಿದೆ. 1937ರಿಂದ ಅದರ ಕರಾಳ ಕೃತ್ಯವನ್ನು ನಾನು ಚೆನ್ನಾಗಿ ಬಲ್ಲವನಾಗಿದ್ದೇನೆ. ಜನತಾ ಪಕ್ಷದ ಕಾಲದಲ್ಲಿ ಮಾತ್ರ ಅದು ಜೀವಂತವಾಗಿದೆ ಎಂದು ಹೇಳಲಿಕ್ಕಾಗದು. ಭಾರತದ ರಾಜಕೀಯ ಪಕ್ಷಗಳೆಲ್ಲವುಗಳಲ್ಲಿ ಜಾತೀಯತೆ ಜೀವಂತವಾಗಿದೆ. ವಿಶೇಷವಾಗಿ ಕಮ್ಯುನಿಷ್ಟ ಪಕ್ಷವನ್ನೊಳಗೊಂಡಂತೆ ಎಲ್ಲರೂ ಚುನಾವಣೆ ಸಂದರ್ಭದಲ್ಲಿ ಜಾತೀಯತೆ ಮಾಡುತ್ತಾರೆ. ಮಾಡಲೇಬೇಕಾಗುತ್ತದೆ ಎಂದು ಖಾಸಗಿಯಾಗಿ ನನ್ನಲ್ಲಿ ಹೇಳಿಕೊಂಡಿದ್ದಾರೆ. ಇದಕ್ಕೆಲ್ಲ ಬ್ರಾಹ್ಮಣವಾದವೇ ತಾಯಿ ಬೇರು. ಇದು ಬ್ರಾಹ್ಮಣರಿಂದಲೇ ಹುಟ್ಟಿರೋದಾದರೂ ಕ್ರಮೇಣ ಈ ವಿಷ ಇತರೆ ಜಾತಿಗಳಿಗೂ ಹಬ್ಬಿದೆ. ಈ ರೀತಿಯ ಪ್ರತಿಯೊಂದು ಕ್ಷೇತ್ರದ ಜಾತಿ ರಾಜಕೀಯದಿಂದಾಗಿ ದಲಿತರು ಬೆಳೆದು ನಿಲ್ಲಲಾಗದೆ ಎಲ್ಲೆಡೆ ಮೋಸ ವಂಚನೆ ಅವಮಾನಗಳಿಗೆ ಬಲಿಯಾದದ್ದೇ ಹೆಚ್ಚು. ಈ ಕ್ರೂರ ವ್ಯವಸ್ಥೆಯ ವಿರುದ್ಧ ಅನೇಕ ಮಹನೀಯರು ದುಡಿದಿದ್ದಾರೆ. ಫುಲೆ, ಶಾಹು ಮಹಾರಾಜ್ ಅಂಬೇಡ್ಕರ್, ಗಾಂಧಿ, ಪೆರಿಯಾರ್ ಮುಂತಾದ ಮಹನೀಯರನ್ನು

ಹೆಸರಿಸಬಹುದು.

ಮಹಾತ್ಮಾ ಗಾಂಧಿ ಸ್ವಾತಂತ್ರ್ಯ ಚಳವಳಿಯ ನೇತಾರರಾಗಿ ಗೌರವಿಸಲೇಬೇಕಾದ ವ್ಯಕ್ತಿತ್ವದವರು, ಗೌರವಕ್ಕೆ ಅರ್ಹರೂ ಹೌದು, ಆದರೆ ಅಸ್ಪೃಶ್ಯರ ವಿಷಯ ಬಂದಾಗ ಗಾಂಧೀಜಿಯವರು ಹಿಂದೂವಾದದ ರಕ್ಷಕರಾಗಿ ವೀರ ಯೋಧರಾಗಿ ಕಂಡುಬರುತ್ತಾರೆ. ಹಿಂದೂವಾದವೆಂದರೆ ಅವರ ಜೀವ. ತಮ್ಮ ಜೀವ ಪಣಕ್ಕಿಟ್ಟು ತನ್ನವರನ್ನು ತನ್ನ ವರ್ಣಾಶ್ರಮ ಧರ್ಮವನ್ನು ರಕ್ಷಿಸುವ ಸಲುವಾಗಿ ಕೋಟಿ ಕೋಟಿ ದಲಿತರ ಬದುಕನ್ನು ಕರಾಳ ಕೂಪಕ್ಕೆ ತಳ್ಳಿದ ಅಪಕೀರ್ತಿ ಗಾಂಧೀಜಿಯವರಿಗೆ ಸಲ್ಲುತ್ತದೆ. ಹೀಗಾಗಿ ಈ ವಿಷಯವಾಗಿ ಗಾಂಧೀಜಿಯವರು ಅಪವಾದಕ್ಕೆ ಗುರಿಯಾಗಿದ್ದಾರೆ. ಅದೇ ಸಂದರ್ಭದಲ್ಲಿ, ರಾಷ್ಟ್ರದ ಹಿತದ ದೃಷ್ಟಿಯಿಂದ ಅಂಬೇಡ್ಕರ್ ಪೂನಾ ಒಡಂಬಡಿಕೆಗೆ ಸಹಿ ಹಾಕಬೇಕಾಯಿತು. ದಲಿತರ ದ್ವಿಮತದಾನದ ಹಕ್ಕನ್ನು ಉಳಿಸಿಕೊಳ್ಳುವಲ್ಲಿ ಅಂಬೇಡ್ಕರ್ ಹಟ ಹಿಡಿದಿದ್ದರೆ ಗಾಂಧೀಜಿಯವರು ಜೀವಂತ ಉಳಿಯುವುದು ಕಷ್ಟವಾಗುತ್ತಿತ್ತು. ದಲಿತರ ಹಕ್ಕನ್ನು ವಿರೋಧಿಸಿದ ಮನುವಾದಿಗಳು ಆ ಸಂದರ್ಭದಲ್ಲಿ ಅಂಬೇಡ್ಕರ್ ಅವರನ್ನು ದೇಶದ್ರೋಹಿ ಎಂದು ಕರೆದರು. ಅಷ್ಟೇ ಅಲ್ಲ ಹಲ್ಲೆಗೂ ಮುಂದಾದರು. ಯಾವುದಕ್ಕೂ ಅಂಜದೇ ಅಳುಕದೇ ದೇಶದ ಹಿತದ ದೃಷ್ಟಿಯಿಂದಲ್ಲದೆ ಉಪವಾಸ

ಸತ್ಯಾಗ್ರಹ ಮುಂದುವರೆದು ಗಾಂಧೀಜಿ ತೀರಿ ಹೋದಲ್ಲಿ ತಲೆತಲಾಂತರದವರೆಗೆ ನನ್ನ ಸಮುದಾಯಕ್ಕೆ ಅಪವಾದ ತಪ್ಪಿದ್ದಲ್ಲ ಎಂದು ಭಾವಿಸಿ ಒಪ್ಪಂದಕ್ಕೆ ಸಹಿ ಹಾಕಿದರು. ಸಾಮಾಜಿಕ ನೆಲೆಯಲ್ಲಿ ಒಳ್ಳೆಯದಾಗಲೆಂದು ಹರಸುವ ವ್ಯಕ್ತಿಗಿಂತ ಒಳ್ಳೆಯದು ಮಾಡುವವರು ಗೌರವಕ್ಕೆ ಅರ್ಹರಾಗುತ್ತಾರೆ. ಅಂತಹ ವ್ಯಕ್ತಿತ್ವವುಳ್ಳ ಅಂಬೇಡ್ಕರ್ ಅವರು ಅಸತ್ಯದ ವಿರುದ್ಧ ಹೋರಾಟ ಮಾಡಿ ಸತ್ಯವನ್ನು ಗೆಲ್ಲಿಸಿದ ಮಹಾಚೇತನ. ಅವರು ನಂಬಿದ್ದು ಸತ್ಯವನ್ನು, ಹೋರಾಟ ಮಾಡಿದ್ದು ನ್ಯಾಯಕ್ಕಾಗಿ, ದುಡಿದದ್ದು ಸಮಾನತೆಗಾಗಿ.

ಜಾತಿ ಪದ್ಧತಿ ಕುರಿತು ಗಾಂಧೀಜಿಯವರ ನಂಬಿಕೆ

ಜಾತಿ ಪದ್ಧತಿ ಕೆಟ್ಟ ಪದ್ಧತಿಯೆಂದು ತಿಳಿಯಬೇಕಾಗಿಲ್ಲ. ವರ್ಣಾಶ್ರಮ ಧರ್ಮದ ವಿರುದ್ಧ ಹೋರಾಡುವಂತಹದ್ದು ಏನಿಲ್ಲ. ನನ್ನ ಪ್ರಕಾರ ವರ್ಣಾಶ್ರಮ ಧರ್ಮವು ಜೀವನ ವಿಧಾನವಾಗಿದೆ. ಅದರಲ್ಲಿ ಶಕ್ತಿಯನ್ನು ನೀಡುವ ತಾಕತ್ತಿದೆ. ನಾನು ಕಸ ಹೊಡೆಯುವವನಿದ್ದರೆ, ನನ್ನ ಮಗನು ಏಕೆ ಕಸ ಹೊಡೆಯಬಾರದು ಎಂಬುದು ಗಾಂಧೀಜಿಯವರ ನಿಲುವಾಗಿತ್ತು.

ಗಾಂಧೀಜಿಯವರು ಪಾಶ್ಚಾತ್ಯ ವಿಮರ್ಶಕರೊಂದಿಗೆ ಮಾಡಿದ ಸಂಭಾಷಣೆಯ ತುಣುಕೊಂದನ್ನು ಇಲ್ಲಿ ಗಮನಿಸಬಹುದು.

ಪ್ರಶ್ನೆ: ಶೂದ್ರನೊಬ್ಬನು ಬ್ರಾಹ್ಮಣನೊಬ್ಬನ ಅರ್ಹತೆಯನ್ನು ಪಡೆದಿದ್ದರೆ ಆತನನ್ನು ಬ್ರಾಹ್ಮಣನೆಂದು ಕರೆಯಬಹುದೆ?

ಉತ್ತರ: ಈ ಜನ್ಮದಲ್ಲಿ ಅವನು ಬ್ರಾಹ್ಮಣನೆಂದು ಕರೆಯಿಸಿಕೊಳ್ಳಲಾರ. ಆತ ಇನ್ನೊಂದು ವರ್ಣಕ್ಕೆ ಸೇರುವ ಹಠವನ್ನು ಹಿಡಿಯಬಾರದು.

ವರದಿಗಾರನೊಬ್ಬ ಗಾಂಧೀಜಿಯವರನ್ನು ಅವರ ಹರಿಜನ ಚಳವಳಿ, ಅಂತರ್ಜಾತೀಯ ಸಹ ಭೋಜನ ಮತ್ತು ಮದುವೆಗಳಿಗೆ ಅನುವು ಮಾಡಿಕೊಡುವುದೇ? ಎಂದು ಕೇಳಿದಾಗ ಪೂನಾದ ಯರ್ವಾಡ ಜೇಲಿನಿಂದ 1932ರಲ್ಲಿ ಉತ್ತರಿಸಿದ ಅವರು ಅದು ಕಷ್ಟ ಸಾಧ್ಯವೆಂದರು.

ಪ್ರಶ್ನೆ: ಒಬ್ಬ ಮನುಷ್ಯ ಬೇರೊಂದು ವೃತ್ತಿಯನ್ನು ಅನುಸರಿಸಿದರೆ ಆಗ ಆತನ ಜಾತಿ ಬದಲಾಗುವುದೇ? ಎಂಬ ಪ್ರಶ್ನೆಗೆ ಉತ್ತರಿಸಿದ್ದು ಹೀಗೆ;

ವರ್ಣಾಶ್ರಮ ಧರ್ಮದ ಪ್ರಕಾರ ಒಬ್ಬ ಮನುಷ್ಯ ಯಾವ ವೃತ್ತಿಯನ್ನು ಅನುಸರಿಸಿದರೂ ಆತ ತನ್ನದೇ ಆದ ಜಾತಿಗೆ ಸೇರುತ್ತಾನೆ. ಇದಕ್ಕೆ ವಿರೋಧವಾಗಿ ಬದುಕಿದರೆ ಹಾಳಾಗುತ್ತಾನೆ. (ಯಂಗ್ ಇಂಡಿಯಾ 24-11-1937 ಪುಟ. 391)

ಈ ಎಲ್ಲ ಕಾರಣಗಳಿಂದಾಗಿ ಗಾಂಧೀಜಿಯವರು ವರ್ಣಾಶ್ರಮದ ದಾಸರಾಗಿದ್ದರು ಎಂಬುದು ಖಚಿತವೆನಿಸುತ್ತದೆ. ದಲಿತರ ಹಿತಚಿಂತಕರಾಗಿ ಕಾಣದೆ ಶೋಷಣೆಗೆ ಅನುವು ಮಾಡಿಕೊಟ್ಟರು. ಆ ಮೂಲಕ ದಲಿತರು ಹಿಂದೂ ಧರ್ಮ ತ್ಯಜಿಸುವುದಕ್ಕೆ ಕಾರಣರಾದರು. ಪ್ರತ್ಯೇಕ ರಾಜಕೀಯ ಹಕ್ಕು ದೊರೆತಿದ್ದರೆ, ಈಗಿರುವ ರೀತಿಯಲ್ಲಿ ದಲಿತರು ತೊಳಲಾಡುತ್ತಿರಲಿಲ್ಲ. ಸ್ವಾತಂತ್ರ್ಯ ಸಂದರ್ಭದಲ್ಲಿ ದಲಿತರ ಸಮಾನತೆಗಾಗಿ ನಡೆದ ಅನೇಕ ಹೋರಾಟಗಳಿಗೆ ಗಾಂಧೀಜಿಯವರು ವಿರೋಧಿಸಿದ ಉದಾಹರಣೆಗಳು ನಮಗೆ ಸಿಗುತ್ತವೆ.

ಸನಾತನ ವಾತಾವರಣದಲ್ಲಿ ಬೆಳೆದ ಗಾಂಧೀಜಿಗೆ ಹನ್ನೆರಡನೆಯ ವಯಸ್ಸಿನಲ್ಲಿಯೇ ಅಸ್ಪೃಶ್ಯತೆ ಎಂಬುದು ಒಂದು ಸಾಮಾಜಿಕ ಕಳಂಕವೆಂದು ಗೊತ್ತಿತ್ತು. ಹಾಗಿದ್ದೂ ಸುಮ್ಮನಿದ್ದ ಗಾಂಧೀಜಿಯವರು ಅಂಬೇಡ್ಕರ್ ಅವರ ದಲಿತಪರ ಹೋರಾಟದ ಗಾಳಿ ಬೀಸುತ್ತಿದ್ದಂತೆ 1932ರ ಪೂನಾ ಒಪ್ಪಂದದ ನಂತರ ಅಸ್ಪೃಶ್ಯರ ಬಗ್ಗೆ ವಿಶೇಷ ಆಸಕ್ತಿ ತೋರಿಸಿದ್ದು ಕಾಣುತ್ತೇವೆ. ಅಸ್ಪೃಶ್ಯತೆ ಕುರಿತು ಪ್ರಜಾಂದೋಲನ, ಹರಿಜನ ಸೇವಕ ಸಂಘ ಸ್ಥಾಪನೆಯನ್ನು ಮಾಡಿದರು. ಅವು ಅವರು ನಿರೀಕ್ಷಿಸಿದಷ್ಟು ಫಲ ನೀಡಲಿಲ್ಲ.

ಕೇರಳ ರಾಜ್ಯದ ಗುರುವಾಯೂರು ದೇವಾಲಯ ಪ್ರವೇಶ ಸತ್ಯಾಗ್ರಹವನ್ನು ಅಸ್ಪೃಶ್ಯರೇ ಹಮ್ಮಿಕೊಂಡಿದ್ದರು. ದೇವಾಲಯ ಪ್ರವೇಶ ಸಂದರ್ಭದಲ್ಲಿ ಅಸ್ಪೃಶ್ಯರಿಗೆ ಪ್ರವೇಶ ನಿರಾಕರಿಸಿದಾಗ, ಗಾಂಧೀಜಿಯವರು ಸವರ್ಣೀಯರ ಮನವೊಲಿಸಬೇಕೆಂದರೆ ಹೊರತು, ಅವರಿಗೆ ನೈತಿಕ ಬೆಂಬಲ ನೀಡಿ ಹೇಳಿಕೆ ನೀಡಲಿಲ್ಲ. ಅಲ್ಲದೆ ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಲಾದ ಅಸ್ಪೃಶ್ಯತೆ ಆಚರಣೆ ನಿಷೇಧ ಮಸೂದೆಯನ್ನು ಅಂಗೀಕರಿಸುವಂತೆ ಸರಕಾರದ ಮೇಲೆ ಒತ್ತಡ ಹಾಕಲಿಲ್ಲ. ಬಲು ನೋವಿನ ಹಾಗೂ ಹಾಸ್ಯಾಸ್ಪದ ಸಂಗತಿಯೆಂದರೆ ಸೇವಕ ಸಂಘದಲ್ಲಿ ಅಸ್ಪೃಶ್ಯರೇ ಇರಲಿಲ್ಲ. 'ಕವಿತಾ' ಎಂಬ ಗ್ರಾಮದ ಶಾಲೆಯಲ್ಲಿ ಸವರ್ಣೀಯರ ಮಕ್ಕಳ ಜೊತೆಗೆ ಅಸ್ಪೃಶ್ಯರ ಮಕ್ಕಳನ್ನು ಕೂಡಿಸುವುದಿಲ್ಲವೆಂಬ ತಕರಾರು ಬಂದಾಗ ಗಾಂಧೀಜಿಯವರು ಅಸ್ಪೃಶ್ಯರ ಮಕ್ಕಳು ಬೇರೆ ಶಾಲೆಗೆ ಹೋಗಿ ಸೇರಿಕೊಳ್ಳಲಿ ಎಂಬ ನಿರ್ಣಯಕ್ಕೆ ಬಂದರು.

ಗಾಂಧೀಜಿಯವರು ಅಸ್ಪೃಶ್ಯರ ಸಲುವಾಗಿ ಒಂದೇ ಒಂದು ಸಲವಾದರೂ ತಮ್ಮ ರಾಜಕೀಯ ಬ್ರಹ್ಮಾಸ್ತ್ರಗಳಾದ ಉಪವಾಸ ವ್ರತವನ್ನಾಗಲಿ, ಸತ್ಯಾಗ್ರಹವನ್ನಾಗಲಿ ಮಾಡಿದ ದಾಖಲೆಗಳಿಲ್ಲ. ಮಹಾತ್ಮಾ ಗಾಂಧೀಜಿಯವರ ವರ್ತನೆ ಹೇಗಿತ್ತೆಂದರೆ, ಹಟಮಾರಿ ಮಗು ತನಗೆ ಬೇಕಾದ ವಸ್ತು ಪಡೆದ ಮೇಲೆ ಶಾಂತವಾದಂತೆ ಪೂನಾ ಒಪ್ಪಂದ ತಮ್ಮಂತೆ ಒಪ್ಪಿಗೆ ಆದ ಕ್ಷಣ ಗಾಂಧೀಜಿಯವರು ಉಪವಾಸ ಸತ್ಯಾಗ್ರಹ ನಿಲ್ಲಿಸಿದರು. ಹಟವನ್ನು ತೊರೆದರು. ಗಾಂಧೀಜಿವರು ಸ್ವಧರ್ಮದ ಉಳುವಿಗಾಗಿ, ಸ್ವಜನಹಿತಕ್ಕಾಗಿ ಸುಮಾರು ಇಪ್ಪತ್ತೊಂದು ಬಾರಿ ಉಪವಾಸ ಸತ್ಯಾಗ್ರಹವನ್ನು ಹೂಡಿ ತಮ್ಮ ಇಷ್ಟ ಕಾರ್ಯಗಳನ್ನು ಸಾಧಿಸಿಕೊಂಡ ಉದಾಹರಣೆಗಳೇ ಹೆಚ್ಚಾಗಿ ಕಾಣುತ್ತವೆ.[5]

ಅಸ್ಪೃಶ್ಯತೆ ಅವಮಾನ ಎಂತಹದು ಮತ್ತು ಅವರ ಸಂಕಟ ಏನು ಎನ್ನುವುದನ್ನು ಅರಿತ ಗಾಂಧೀಜಿ ದಲಿತ, ಶೋಷಿತರ ಪರವಾಗಿ ಎಂದೂ ಉದಾರವಾದಿಗಳಾಗಿರಲಿಲ್ಲ. ಹಿಂದೂವಾದಿಗಳಿಗೆ ಮಾತ್ರ ಉದಾರವಾದಿಗಳಾಗಿದ್ದರು. ದುಂಡು ಮೇಜಿನ ಪರಿಷತ್ತಿನಲ್ಲಿ ದಲಿತರ ನಿಜವಾದ ವಾರಸುದಾರ ನಾನೇ ಎಂದು ವಾದಿಸಿದ ಗಾಂಧೀಜಿ ಅದೇ ದಲಿತರಿಗೆ ಅಂಬೇಡ್ಕರ್ ಅವರ ಪ್ರಯತ್ನದ ಫಲವಾಗಿ (ಕಮ್ಯೂನಲ್ ಅವಾರ್ಡ್) ದ್ವಿಮತದಾನದ ಹಕ್ಕು ದೊರೆತಾಗ ಸುಮ್ಮನಿರದೆ, ದಲಿತರ ಏಳಿಗೆಯನ್ನು ಲೆಕ್ಕಿಸದೆ ಪೂನಾದ ಯರ್ವಾಡ ಜೇಲಿನಲ್ಲಿ ದಲಿತರ ಹಕ್ಕುಗಳ ವಿರುದ್ಧ ಉಪವಾಸ ಕೈಗೊಂಡಿದ್ದು ಅದರಲ್ಲಿ ಯಶಸ್ವಿಯಾದದ್ದು, ವಿಪರ್ಯಾಸವಲ್ಲವೇ?

ಆದರೆ ಅಂಬೇಡ್ಕರ್ ದಲಿತ ಜನಾಂಗದ ವಿಮೋಚಕರಾಗಿ, ಶೋಷಕ ಸಮುದಾಯಕ್ಕೆ ಸಿಂಹಸ್ವಪ್ನರಾಗಿ, ಸಂವಿಧಾನ ಶಿಲ್ಪಿಯಾಗಿ ರಾಜಕೀಯ ಚಿಂತಕರಾಗಿ ಮತ್ತು ಸಮಾಜ ವಿಜ್ಞಾನಿಯಾಗಿ ಇಪ್ಪತ್ತನೆಯ ಶತಮಾನದ ಭಾರತ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಭದ್ರವಾದ ಅಡಿಪಾಯವನ್ನು ಹಾಕಿ ಜಾತ್ಯಾತೀತ ಬದುಕಿಗೆ ಪ್ರೇರಕ ಶಕ್ತಿಯನ್ನೊದಗಿಸಿದ್ದಾರೆ. ಅಸ್ಪೃಶ್ಯತೆ ಎಂಬುದು ಭಾರತೀಯ ಸಮಾಜಕ್ಕೆ ಅಂಟಿದ ಬಹುದೊಡ್ಡ ಕಳಂಕ. ಇಡೀ ನಾಡಿನ ಜನಸಂಖ್ಯೆಯ 1/5 ಭಾಗದಷ್ಟು ಜನರು ಶತಮಾನಗಳಿಂದ ಸಮಾಜದ ಮೇಲುಸ್ತರದವರು ವಿಧಿಸಿದ ನಿರ್ಬಂಧ ಅವಮಾನವನ್ನು ಸಹಿಸಿಕೊಂಡು ಬಾಳಬೇಕಾಗಿ ಬಂದದ್ದು ದುರದೃಷ್ಟಕರವಾದರೂ, ಅದೊಂದು ಚಾರಿತ್ರಿಕ ಸಂಗತಿ. ಅಂತ್ಯಜರು, ಅವರ್ಣೀಯರು, ಶೂದ್ರರು, ಪಂಚಮರೆಂದು ಭಾರತದ ಬೇರೆ ಬೇರೆ ಜಾಗಗಳಲ್ಲಿ ಕರೆಯಲ್ಪಡುತ್ತಿದ್ದ ಇವರನ್ನು ಊರಿನ ಹೊರಭಾಗದಲ್ಲಿ ಪ್ರತ್ಯೇಕವಾಗಿ ಇಡಲಾಗುತ್ತಿತ್ತು.[6] ನೈಸರ್ಗಿಕವಾದ ನೀರು ಮನಸಿಚ್ಛೆಯಂತೆ ಮುಟ್ಟುವಂತಿರಲಿಲ್ಲ. ಸಾರ್ವಜನಿಕ ಕೆರೆ, ಹಳ್ಳ ಕೊಳ್ಳಗಳಲ್ಲಿಯ ನೀರು ಸೇದುವಂತಿರಲಿಲ್ಲ. ಕುಡಿಯುವಂತೆಯೂ ಇರಲಿಲ್ಲ.

'ಹೆರಿಗೆಯ ಬೇನೆ ಹೆತ್ತವಳಿಗೆ ಗೊತ್ತು' ಎನ್ನುವಂತೆ ಹುಟ್ಟಿನಿಂದಲೇ ಅಸ್ಪೃಶ್ಯತೆಯ ಕಹಿ ಅನುಭವವನ್ನು ಉಂಡ ಅಂಬೇಡ್ಕರ್ ಅದರ ವಿರುದ್ಧ ಹೋರಾಡಲು ಕಾರಣವಾಯಿತು. ಗಾಂಧೀಜಿಯವರು ಉಪವಾಸ ಕೈಕೊಂಡು ದಲಿತರ ಹಕ್ಕುಗಳನ್ನು ವಿರೋಧಿಸಿದರು. ಆಗ ಗಾಂಧೀಜಿಯವರಿಗೆ ವರ್ಣಾಶ್ರಮ ಧರ್ಮದ ಹಿತವೇ

ಮುಖ್ಯವಾಗಿತ್ತು. ಅಂಬೇಡ್ಕರ್ ದೇಶದ ಹಿತದ ದೃಷ್ಟಿಯಿಂದ ದಲಿತರ ಹಕ್ಕುಗಳನ್ನು ತ್ಯಾಗ ಮಾಡಿದರು. ಗಾಂಧೀಜಿ ನಾನು ದಲಿತರ ವಾರಸುದಾರನೆಂದು ಹೇಳುತ್ತಲೇ ಹೋದರೂ ಪ್ರಯೋಜನವಾಗಲಿಲ್ಲ. ಮಹಾಡ್ ಕೆರೆ, ಕಾಳಾರಾಮ ಗುಡಿ ಪ್ರವೇಶಕ್ಕಾಗಿ ಹೋರಾಡಿದ ಅಂಬೇಡ್ಕರ್ ದಲಿತ ಸ್ವಾತಂತ್ರ್ಯಕ್ಕಾಗಿ ಪರಿತಪಿಸಿದರು. ಅಂಬೇಡ್ಕರ್ ದೇಶದ ಹಿತಕ್ಕಾಗಿ ತನ್ನವರ ಹಿತ ಬಲಿಕೊಟ್ಟು ದೊಡ್ಡ ವ್ಯಕ್ತಿತ್ವ ಪ್ರದರ್ಶಿಸಿದರೆ, ಗಾಂಧೀಜಿಯವರು ಈ ತರಹದ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ. ದಲಿತರ ಮಹಿಳೆಯರ ವಿಮೋಚನೆಗಾಗಿ ಗಾಂಧೀಜಿಯವರು ಪ್ರಾಮಾಣಿಕ ಪ್ರಯತ್ನ ಮಾಡಿದ ಉದಾಹರಣೆಗಳಿಲ್ಲ. ಆದರೆ ಸಂವಿಧಾನದ ಮೂಲಕ ಅಂಬೇಡ್ಕರ್ ಅವರು ಸಮಗ್ರ ಶೋಷಿತ ಸಮುದಾಯಕ್ಕೆ, ಮಹಿಳೆಯರಿಗೆ ಸಂವಿಧಾನದತ್ತ ಹಕ್ಕುಗಳನ್ನು ಕೊಡಿಸುವಲ್ಲಿ ಶ್ರಮಿಸಿದರು. ಶೋಷಿತ ವರ್ಗದ ಸಮುದಾಯದ ಹಿತದ ಸಂದರ್ಭ ಬಂದಾಗ ಮಂತ್ರಿ ಪದವಿಯನ್ನು ಲೆಕ್ಕಿಸಲಿಲ್ಲ.

ಗಾಂಧೀಜಿ ಮತ್ತು ಡಾ. ಅಂಬೇಡ್ಕರ್ ಅವರು ಒಂದೇ ನಾಣ್ಯದ ಎರಡು ಮುಖಗಳು ಎನ್ನುವವರಿದ್ದಾರೆ. ಗಾಂಧೀಜಿಯವರು ಹರಿಜನೋದ್ಧಾರಕರು ಎಂಬ ಮಾತಿದೆ. ಎಲ್ಲವನ್ನು ಅರಿತಿದ್ದ ಅಂಬೇಡ್ಕರ್ ಗಾಂಧೀಜಿ ಮತ್ತು ಅವರ ಅನುಯಾಯಿಗಳು ಹರಿಜನೋದ್ಧಾರದ ಮತ್ತು ಅಸ್ಪೃಶ್ಯತೆ ನಿವಾರಣೆಯ ಮುಖವಾಡ ಧರಿಸಿದ್ದನ್ನು ತಮ್ಮ ಬರಹ ಭಾಷಣದಲ್ಲಿ ತೆರೆದಿಟ್ಟಿದ್ದಾರೆ. ಗಾಂಧಿ ಮತ್ತು ಅವರ ಅನುಯಾಯಿಗಳು ಅಸ್ಪೃಶ್ಯರಿಗೆ ಮಾಡಿದ್ದೇನು? ಸವರ್ಣೀಯರ ಔದಾರ್ಯದ, ಬಣ್ಣದ ಮಾತುಗಳಿಗೆ ಮರುಳಾಗಿ ಉರುಳಿಗೆ ಕೊರಳು ಕೊಡದಿರಿ ಎಂದು ದಲಿತರನ್ನು ಅಂಬೇಡ್ಕರ್ ಎಚ್ಚರಿಸಿದ್ದಾರೆ. ನೀವು ನೀಡುವ ಸ್ವಾತಂತ್ರ್ಯದಿಂದ ಸವರ್ಣಿಯರು ಸರ್ವಾಧಿಕಾರಿಯಾಗುತ್ತಾರೆ ಎಂದು ಖಂಡ ತುಂಡವಾಗಿ ಇಂಗ್ಲಿಷರಿಗೆ ಸವಾಲೆಸೆದವರು. ಗಾಂಧೀಜಿಯವರಿಗೆ ಗುಲಾಮಗಿರಿಯಿಂದ ಮುಕ್ತವಾಗಬೇಕೆಂಬ ಆತುರವಿದ್ದರೆ, ಅಂಬೇಡ್ಕರ್ ಅವರಿಗೆ ಶತ ಶತಮಾನಗಳ ಅವಮಾನ, ದಾಸ್ಯದಿಂದ ಹೊರಬರಬೇಕೆಂಬ ಆಗಾಧವಾದ ನೋವಿತ್ತು. ಹೀಗಾಗಿ ಈ ಇಬ್ಬರು ನಾಯಕರು ಒಂದೇ ನಾಣ್ಯದ ಎರಡು ಮುಖಗಳು ಎಂದೂ ಆಗಿರಲಿಲ್ಲ. ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಸಾಗಿದವರು. ದಲಿತರ ಅಭಿವೃದ್ಧಿ, ವಿಮೋಚನೆ ಸಮಾಜೋಧಾರ್ಮಿಕ ನೆಲೆಯಲ್ಲಿ ಸ್ವಾತಂತ್ರ್ಯ ದೊರಕಿಸಿಕೊಡುವಲ್ಲಿ ಅಂಬೇಡ್ಕರ್ ಸಾಗಿದರೆ, ಗಾಂಧೀಜಿಯವರು ದಲಿತರಿಗೆ ಸಿಗಬೇಕಾದ ಸಾಮಾಜಿಕ ರಾಜಕೀಯ ಸ್ವಾತಂತ್ರ್ಯವನ್ನು ನಿರಾಕರಿಸುತ್ತಲೇ ನಡೆದವರು. ವಿಪರ್ಯಾಸವೆಂದರೆ ಯಾವ ಧರ್ಮದ ಉಳಿವಿಗಾಗಿ, ಜನರಿಗಾಗಿ ಗಾಂಧೀಜಿಯವರು ಬದುಕೆಲ್ಲ ಸವೆಸಿದರೊ, ಅವರೇ ಅವರ ಸಾವಿಗೆ ಕಾರಣರಾದರು.

ಗಾಂಧೀಜಿಯವರು ನಂಬಿದ ವೈದಿಕವೆಂಬ ಮಿಥ್‌ಅನ್ನು ಒಡೆಯುವುದರ ಮೂಲಕ ಮಾನವೀಕರಣಗೊಳಿಸುತ್ತ ಈ ದೇಶದ ದಲಿತರಿಗೆ ಸಾಮಾಜಿಕ, ರಾಜಕೀಯ ಧಾರ್ಮಿಕ ವಾದ ಸ್ವಾತಂತ್ರ್ಯ ಕಲ್ಪಿಸಿಕೊಡುವುದು ಅಂಬೇಡ್ಕರ್ ಅವರ ಮಹದುದ್ದೇಶವಾಗಿತ್ತು. ಅವೈದಿಕ ನೆಲೆಯ (ಮಾನವೀಕರಣ) ರಾಜಕೀಯ ಸ್ವಾತಂತ್ರ್ಯಕ್ಕೆ ಗಾಂಧೀಜಿಯವರು ವಿರೋಧಿಸಿದರು. ಆ ವಿರೋಧವು ಅಂಬೇಡ್ಕರ್ ಅವರು ಧರ್ಮಾಂತರಗೊಳ್ಳುವುದಕ್ಕೆ ಒಂದು ಕಾರಣವಾಗಿರಲು ಸಾಧ್ಯವಿದೆ ಕೊನೆಪಕ್ಷ ಧಾರ್ಮಿಕ ಸ್ವಾತಂತ್ರ್ಯ ನನ್ನ ಸಮುದಾಯಕ್ಕೆ ದೊರೆತಲ್ಲಿ ಅವರು ಅಪಮಾನ, ಹಿಂಸೆ, ತಳಮಳಗಳಿಂದ ಮುಕ್ತರಾಗಲು ಸಾಧ್ಯವಾದೀತೆಂದು ಭಾವಿಸಿರಬಹುದಲ್ಲವೇ?

ಆಧಾರ
1. 'ಧರ್ಮಾಂತರ ಕುರಿತು ಅಂಬೇಡ್ಕರ್' ಮುಕ್ತಸಮಾಜವಾದಿ ಮಾತುಕತೆ ಮೇ 2003, ಪುಟ 7.
2. 'ಧರ್ಮಾಂತರ ಕುರಿತು ಅಂಬೇಡ್ಕರ್' ಮುಕ್ತಸಮಾಜವಾದಿ ಮಾತುಕತೆ ಮೇ 2003, ಪುಟ 8.
3. ಅದೇ ಪುಟ.
4. 'ಧರ್ಮಾಂತರ ಕುರಿತು ಅಂಬೇಡ್ಕರ್' ಮುಕ್ತಸಮಾಜವಾದಿ ಮಾತುಕತೆ ಮೇ 2003, ಪುಟ 10.
5. 'ಸಂವಾದ' ಏಪ್ರಿಲ್ 2004, ಗಾಂಧಿ ಮತ್ತು ಅಸ್ಪೃಶ್ಯರು. ಲೇಖಕರು ಪ್ರೊ. ಶಿವರಾಮಯ್ಯ
6. ಬಸವಣ್ಣ ಮತ್ತು ಅಂಬೇಡ್ಕರ್ ತೌಲನಿಕ ವಿವೇಚನೆ 'ಬಸವಪಥ' 2005, ಪುಟ 19.

ಅಕ್ಟೋಬರ್ ತಿಂಗಳಿಗಾಗಿ ಗಾಂಧಿ ಕುರಿತು ಬರೆಯಬೇಕಾದ ಒತ್ತಡದಲ್ಲಿರುವಾಗ ಜೀವದನಿ ಹೇಳುತ್ತಿದೆ: ಪ್ರಥಮ ಪುರುಷದಿಂದ ಬರಹ ಶುರುಮಾಡು. ಆಮೇಲೆ ಮಿಕ್ಕೆಲ್ಲ ಮಾತು ಎಂದು. ಆಗಲಿ. ನನ್ನ ಬಾಲ್ಯದಲ್ಲಿ ಹಾಸುಹೊಕ್ಕಾಗಿದ್ದ ಗಾಂಧಿಯೆಂಬ ವ್ಯಕ್ತಿ ಏಕೆ ದೂರ ಸಾಗುತ್ತ ಹೋದರು? ದೂರವಾಗುವ, ಮತ್ತೆ ಹತ್ತಿರವಾಗುವ ಕ್ರಿಯೆ ಅನೂಚಾನವಾಗಿರಲು ಕಾರಣವೇನು ಎಂಬ ಪ್ರಶ್ನೆಗೆ ಉತ್ತರ ಕೊಟ್ಟುಕೊಳ್ಳುತ್ತೇನೆ. ಆಗ ನಾಯಕರನ್ನು ಎಲ್ಲಿಟ್ಟು ನೋಡಬೇಕೆಂಬ ಅಂಬೇಡ್ಕರ್ ದೃಷ್ಟಿಕೋನವನ್ನು ಪ್ರತಿಪಾದಿಸಿದಂತಾಗುತ್ತದೆ.

ಹಿಂತಿರುಗಿ ನೋಡಿದಾಗ ಎಲ್ಲ ಬಾಲಿಶ ವರ್ತನೆಗಳಂತೆ ಕಾಣಿಸುತ್ತವೆ, ಇದೆಲ್ಲ ಹದಿವಯಸ್ಸಿನ ಗೊಂದಲದ, ಅಸ್ಪಷ್ಟ ನಡಿಗೆಗಳು. ಏಕೆಂದು ಗೊತ್ತಿಲ್ಲದೇ ಕುರುಡಾಗಿ ಥೇಟ್ ನಮ್ಮಜ್ಜನಂತೇ ಕಾಣುತ್ತಿದ್ದ ಗಾಂಧಿಯನ್ನು ಪ್ರೀತಿಸಲು ಕಾರಣಗಳು ಬೇಕಿರಲಿಲ್ಲ. ಅವರ ಎಲ್ಲ ನಡೆಗಳಿಗೂ ಹಿರಿದಾದ ಅರ್ಥ ಹೊಳೆಯುತ್ತಿದ್ದ, ಅನುಮಾನವೇ ಇಲ್ಲದೇ ಗಾಂಧಿಯ ಕುರಿತು ಆರಾಧನೆಗಳಿದ್ದ ಕಾಲ ಅದು. ಆತನ ಬಗ್ಗೆ ಮೊದಲಿನಿಂದ ಕೇಳಿಕೊಂಡು ಬಂದ ದಂತಕಥೆಗಳು ನೂರಿದ್ದವು. ಭಾಷಣಪ್ರಿಯತೆ ಮತ್ತಷ್ಟು ಉತ್ಪ್ರೇಕ್ಷಿಭರಿತ ಕಥೆಗಳನ್ನು ಮನದಂಗಳಕ್ಕೆ ತಂದು ಒಟ್ಟಿತ್ತು.

ಪ್ರಾಯ ಬರುತ್ತಿದ್ದ ದಿನಗಳಲ್ಲಿ ಹಸಿವಿನ ಅನುಭವವಾಗಲೆಂದು ವಾರಕ್ಕೆ ಮೂರುದಿನ ಬೆಳಗಿನ ತಿಂಡಿ ಬಿಡುತ್ತಿದ್ದೆ. ಹಾಸ್ಟೆಲಿನಲ್ಲಿ ನನ್ನಿಷ್ಟದ ತಿಂಡಿಯಿರುವ ದಿನಗಳಲ್ಲೇ ಅದನ್ನು ಹಸಿದು ಬರುವವರಿಗೆ ಕೊಟ್ಟುಬಿಡಬೇಕೆಂದು ಕುಕ್ ಗಂಗಮ್ಮನ ಬಳಿ ಹೇಳಿದ್ದೆ. ಆತ್ಮಶುದ್ಧಿ ವಗೈರೆ ದೊಡ್ಡ ಪದಗಳ ಅರ್ಥ ತಿಳಿದಿರಲಿಲ್ಲ, ಗಾಂಧಿತತ್ವ ನನ್ನ ಬೆಂಬಲಕ್ಕಿತ್ತೋ ಗೊತ್ತಿಲ್ಲ, ಅಂತೂ ಆ ಕ್ರಿಯೆ ಮೂಡಿಸುತ್ತಿದ್ದ ಪುನೀತ ಭಾವದಲ್ಲಿ ಮೀಯುತ್ತಿದ್ದೆ. ದಿನ ಕಳೆದಂತೆ ನನ್ನ ಪಾಲಿನ ತಿಂಡಿ ಪಡೆವವರ ಯಾದಿ ದೊಡ್ಡದಾಯಿತು. ಆ ಕಣ್ಣುಗಳಲ್ಲಿ ನಿರೀಕ್ಷೆ ಇರುತ್ತಿತ್ತು. ವಾರಕ್ಕೆ ಮೂರು ದಿನ ತಿಂಡಿ ಬಿಡುವವಳು ಒಬ್ಬಳು, ಆ ಪಾಲು ತೆಗೆದುಕೊಳ್ಳಲು ಬರುವವರು ಏಳೆಂಟು ಜನರಾಗಿ ಗಂಗಮ್ಮನಿಗೆ ಕಿರಿಕಿರಿಯಾಗತೊಡಗಿತು. 'ಇಂಗ್ ಊಟ ತಿಂಡಿ ಪುಕ್ಕಟೆ ಕೊಡ್ತೀಯಂತ ಗೊತ್ತಾದ್ರೆ ನೀನ್ ಹಾಸ್ಟೆಲ್ ಬಿಟ್ಮೇಲೂ ನಿನ್ ಹಿಂದೇ ಬತ್ತಾರೆ ಇವ್ರು. ಆಗೇನ್ ಮಾಡ್ತೀ?' ಎಂದು ಅಸಮಾಧಾನ ವ್ಯಕ್ತಪಡಿಸಿದಳು. ಬರಬರುತ್ತ ಅನಿಸಿತು – ತಿಂಡಿ ಬಿಡುವುದರಿಂದ ನನಗೆ ಹಸಿದವರ ಕುರಿತು ಅನುಭೂತಿ ಉಂಟಾಗಬಹುದು, ಆದರೆ ಅನುಭವ ದಕ್ಕುವುದಿಲ್ಲ; ಈ ಸಹಾನುಭೂತಿ ಅವರ ಹಸಿವಿಗೆ ಪರಿಹಾರವೂ ಅಲ್ಲ ಎಂದು. ನನ್ನ ಉಪವಾಸ ಸುಸ್ಥಿತಿಯ ಸಂಕೇತವಾಗಿದ್ದರೆ ಅವರ ಹಸಿವು ದುಸ್ಥಿತಿಯ ಮಾಪಕವಾಗಿತ್ತು. ಇಂಥ 'ಕೊಡುವಿಕೆ'ಯಿಂದ ಕೊಟ್ಟವನಿಗೆ ಹೆಮ್ಮೆಯೋ, ಆತ್ಮತೃಪ್ತಿಯೋ ಸಿಕ್ಕಿದ್ದು ಬಿಟ್ಟರೆ ತೆಗೆದುಕೊಂಡವನಿಗೇನು ಉಪಯೋಗವಿದೆ? ಕೊಡುವುದರಿಂದ ಪಡೆವವನ ಸ್ಥಿತಿ ಬದಲಾಗದೇ ಹೋದರೆ ಅವನ ಆತ್ಮಗೌರವ ನಾಶಮಾಡಿದಂತಲ್ಲವೆ? ಕೊಡುವಿಕೆಯೂ ಅನಾಹುತಕಾರಿಯಾಗಬಲ್ಲದು ಎನಿಸಿದ ಕಾಲದಲ್ಲೇ ಗಾಂಧಿ ಹೊರಸರಿಯತೊಡಗಿದರು.

ಡಾ॥ ಎಚ್. ಎಸ್. ಅನುಪಮಾ

11

ಹೀಗೆ ಗಾಂಧಿ ಸರಿಯುತ್ತ ಹೋದ, ಅಂಬೇಡ್ಕರ್ ಇಳಿಯುತ್ತ ಬಂದ ಕಾಲ ಯಾವುದು? ದಿನ ನೆನಪಿಲ್ಲ. ಎಂದರೆ ಆಗಲೇ ಅಂಬೇಡ್ಕರ್ ವಾಲ್ಯೂಮುಗಳನ್ನು ಓದತೊಡಗಿದೆನೆಂದಲ್ಲ. ಡಿಎಸ್‌ಎಸ್ ಸಂಪರ್ಕವಿದ್ದ ಒಡನಾಡಿಗಳ ದಲಿತ ಪ್ರಜ್ಞೆಯ ಮೂಲಕ ಸ್ಫೋಟಕ ಪ್ರಶ್ನೆಗಳಾಗಿ ಅಂಬೇಡ್ಕರ್ ಅರಿವಿಗೆ ಬಂದರು. ಕುರುಡು ಭಕ್ತಿಯನ್ನು, ಅನುಯಾಯಿತ್ವವನ್ನು ಉದ್ದೀಪಿಸುವಂತಿದ್ದ ಗಾಂಧಿ ನನ್ನಲ್ಲಿ ಪ್ರಶ್ನೆ ಹುಟ್ಟಿಸಿರಲಿಲ್ಲ. ಆದರೆ ಅವರಿಗಿಂತ ಪೂರಾ ಭಿನ್ನ ಚಿಂತನೆಗಳ, ನೇರಾನೇರ ಮಾತಿನ ಅಂಬೇಡ್ಕರ್ ಪ್ರಶ್ನೆಗಳ ಸುರಿಮಳೆ ಸುರಿಸುತ್ತಿದ್ದರು. ಇಂಥ ಅಂಬೇಡ್ಕರರನ್ನು ನನ್ನ ಸುತ್ತಮುತ್ತಲಿರುವವರು ಏಕೆ ಇಷ್ಟಪಡುವುದಿಲ್ಲ ಎಂಬ ಕಾರಣ ಹುಡುಕಬೇಕಾಯಿತು. ಹಾಗೆ ಹುಡುಕಹೊರಟ ದಾರಿಯಲ್ಲಿ ಕಂಡಿದ್ದು ಅಪಾರ ದೂರದೃಷ್ಟಿ-ಒಳನೋಟಗಳಿರುವ, ನ್ಯಾಯಬದ್ಧ ಆಕ್ರೋಶದ, ಪ್ರಶ್ನಿಸುವ ದಿಟ್ಟ ಚೇತನ. ಅವರ ಕಟು ವಾಸ್ತವದ ಮಾತುಗಳೆಲ್ಲ ಉರಿವ ಸತ್ಯಗಳಾಗಿದ್ದವು. ನಮ್ಮ ಗಮನಕ್ಕೇ ಬಂದಿರದ ಗುಡ್ಡಪ್ಪ, ಹನುಮಿ, ಕ್ಯಾಸ, ಕರಿಯರ ಕಷ್ಟ-ಅವಮಾನಗಳ ದುಸ್ತರ ಬದುಕಿನ ಕುರಿತು **ಯೋಚಿಸಲು ಹಚ್ಚಿದವು.**

ಆದರೆ ಆ ನೊಂದ ಜೀವಗಳ ಎದುರು ಗಾಂಧಿಯ ಚಿಂತನೆಗಳು ಪೊಳ್ಳು ಉಪದೇಶಗಳಂತೆ ಕಾಣತೊಡಗಿದವು. ಬೀದಿ ಕಸಗುಡಿಸುವುದರಲ್ಲೇ ಜೀವನ ಕಳೆದು ಅಸ್ತಮಾ ರೋಗಿಯಾಗಿರುವ ನಾಗಮ್ಮನಿಗೆ ಅವಳ ಕೆಲಸದ ಘನತೆಯ ಬಗ್ಗೆ ವಿಶ್ವಾಸ ಹೇಳಿ ಅವಳ ಮಕ್ಕಳೂ ಅದನ್ನೇ ಮುಂದುವರೆಸಲಿ ಎಂದು ಹೇಳಬಹುದೇ? ಜಾತಿ ಕಾರಣಕ್ಕೇ ದೇವಸ್ಥಾನದ ಹೊರಗೆ ನಿಂತಿದ್ದ ಸಹಪಾಠಿ ಕವಿತ ಬಳಿ ಚಾತುರ್ವರ್ಣ್ಯ ಸಮರ್ಥನೀಯ ಎನ್ನಲಾದೀತೇ? ಬೌದ್ಧ ಧರ್ಮೀಯ ಎಂದದ್ದಕ್ಕೆ ಮನೆ ಸಿಗದ ಗೆಳತಿಗೆ ಹಿಂದೂ ಧರ್ಮದ ಉದಾತ್ತ ಅಂಶಗಳನ್ನು ಮನದಟ್ಟು ಮಾಡಿಕೊಡಬೇಕೆ? ಹರಿದ ದಟ್ಟಿ ತೊಟ್ಟು ಗಡಗಡ ನಡುಗುವ ಕರಿಯನಿಗೆ ಅರೆಬೆತ್ತಲೆ, ಸರಳ ದಿರಿಸು ಮೌಲ್ಯವೆಂದು ಹೇಳುವುದು ಹೇಗೆ? ಅವೆಲ್ಲ ಅವರ ಆಯ್ಕೆಯಾಗಿರಲಿಲ್ಲ, ಅನಿವಾರ್ಯವಾಗಿತ್ತು. ಗಾಂಧಿ ಚಿಂತನೆಗಳು ಅಲ್ಲಿ ಸ್ವಮರುಕ ಹುಟ್ಟಿಸುವ ಅಪಾಯವಿತ್ತು. ಆತ್ಮಶುದ್ಧಿ ಮಾಡಿಕೊಳ್ಳುವವರ ಸಹಾಯ ದೊರಕಿದ್ದರೆ ಅವರು ಕೃತಜ್ಞತೆಯಲ್ಲಿ ಮುಳುಗಿ ಹೋಗಬಹುದಿತ್ತು. ಗಾಂಧಿ ಮಾರ್ಗದಲ್ಲಿ ಅವರ ಚೇತನ ಜಾಗೃತಗೊಂಡು ಬೆಳಗಬಹುದಾದ ಸಾಧ್ಯತೆ ಕಡಿಮೆಯಿತ್ತು.

ಹೀಗೆನಿಸಿದ ಹೊತ್ತಲ್ಲಿ ಗಾಂಧಿ ಹಿನ್ನೆಲೆಗೆ ಸರಿದರು. ಅಂಬೇಡ್ಕರ್ ಬೆಳೆಯತೊಡಗಿದರು. ಜೊತೆಜೊತೆಗೆ ಚೆ, ಲೋಹಿಯಾ, ಮಾರ್ಕ್ಸ್..

ಅರಿವು ಅರಳುವ ಮುನ್ನ ಒಪ್ಪಿತವಾದ ಗಾಂಧಿ ಲೋಕಕ್ಕೆ ತೆರೆದುಕೊಳ್ಳುತ್ತ ಹೋದಂತೆ ಹೊರಸರಿಯತೊಡಗಿದ್ದು ಕಾಲದ ಅವಶ್ಯಕತೆಗೆ ಅವರ ನೀತಿ ಸಫಿಶಿಯೆಂಟ್ ಅಲ್ಲ ಎಂಬ ಕಾರಣದಿಂದ ಮಾತ್ರವೋ ಅಥವಾ ಅವರ ಚಿಂತನೆಗಳಲ್ಲೇ ಕೊರತೆ ಕಾಣಿಸಿತೇ ಎಂಬ ಪ್ರಶ್ನೆ ಈಗ ಹುಟ್ಟುತ್ತಿದೆ. ಒಡೆಯುವ, ಮತ್ತೆ ಕಟ್ಟುವ ಹುಮ್ಮಸದ ಬಿಸಿರಕ್ತದ ಕಾಲದಲ್ಲಿ ಅಂಬೇಡ್ಕರ್, ಚೆ, ಮಾರ್ಕ್ಸ್‌ರಂತೆ ಗಾಂಧಿ ಸೆಳೆಯುವುದಿಲ್ಲ. ಗಾಂಧಿ ವ್ಯವಸ್ಥೆಯ ವಿರುದ್ಧ ಸಿಡಿದು ನಿಲ್ಲುವ ತಾತ್ವಿಕತೆ ರೂಪಿಸಲಿಲ್ಲ. ಬದಲಾಗಿ ಜಾತಿಪದ್ಧತಿಯಿರಲಿ, ವರ್ಣಾಶ್ರಮವಿರಲಿ, ಊಳಿಗಮಾನ್ಯವಿರಲಿ – ವ್ಯವಸ್ಥೆಯ ಒಳಗಿದ್ದುಕೊಂಡೇ ಅದು ತಂತಾನೇ ತಿದ್ದಿಕೊಳ್ಳುವಂತೆ ಸಾಕ್ಷಿಪ್ರಜ್ಞೆ ರೂಪಿಸುವ ಪ್ರಯತ್ನ ಮಾಡಿದರು. ಕಾಲಾನಂತರ ಅಂತಹ ಚಿಂತನೆಗಳು ವ್ಯವಸ್ಥೆಯ ಭಾಗವೇ ಆಗಿಹೋಗಿದ್ದು ಮತ್ತೆಮತ್ತೆ ಪುನರಾವರ್ತನೆಯಾಗುವ ಇತಿಹಾಸದ ದುರಂತವಾಗಿದೆ.

* * *

ಗಾಂಧಿವಾದದ ಜೊತೆಗೆ ಶೋಷಿತರಿಗಿರುವ ತಕರಾರು ಆವಾಗೀವಾಗ ಮುನ್ನೆಲೆಗೆ ಬರುತ್ತಿರುತ್ತದೆ. ಮನುಷ್ಯನ ಕಷ್ಟಗಳ, ಅವುಗಳ ಪರಿಹಾರದ ಕುರಿತು ಗಾಂಧೀವಾದ ಹೋಲಿಸ್ಟಿಕ್ ದೃಷ್ಟಿಕೋನ ಹೊಂದಿದ್ದರೂ ಶೋಷಣೆಯನ್ನು ಶೋಷಿತನ ದೃಷ್ಟಿಕೋನದಿಂದ ನೋಡಲಿಲ್ಲ. ಅದು ವ್ಯಕ್ತಿಗೆ ಉಂಟುಮಾಡುವ ಘನತೆ ನಾಶದ ಕುರಿತು ಹಾಗೂ ಜಾಗೃತಿ ಶೋಷಿತ ನೆಲೆಯಿಂದಲೇ ಎದ್ದುಬರಬೇಕಾದ ಅವಶ್ಯಕತೆಯ ಕುರಿತು ಗಮನ ಕೊಡಲಿಲ್ಲ. ವ್ಯವಸ್ಥೆ ಕರುಣಾಪೂರಿತವಾಗಿ ಶೋಷಿತನೆಡೆ ನೋಡುವುದಕ್ಕೂ, ಶೋಷಿತರ ನಡುವಿನಿಂದ ಬಂದಾತನೊಬ್ಬ ವ್ಯವಸ್ಥೆಯನ್ನು ಪ್ರಶ್ನಿಸುವುದಕ್ಕೂ ಇರುವ ತಾತ್ವಿಕ ವ್ಯತ್ಯಾಸವೇ ಗಾಂಧಿ-ಅಂಬೇಡ್ಕರ್ ಚಿಂತನೆಗಳ ನಡುವಿನ ವ್ಯತ್ಯಾಸ ಕೂಡಾ. ಪೂನಾ ಒಪ್ಪಂದ ಸಮಯದಲ್ಲಿ ಇದು ಮತ್ತಷ್ಟು ಸ್ಪಷ್ಟವಾಯಿತು. ಆಗ ಮುನ್ನೆಲೆಗೆ ಬಂದ ಅವರಿಬ್ಬರ ನಡುವಿನ ತಾತ್ವಿಕ ಭಿನ್ನಾಭಿಪ್ರಾಯ ಇಂದಿಗೂ ಮುಂದುವರೆದುಕೊಂಡು ಬಂದಿದೆ.

ಗಾಂಧಿ ಎಂಬ ಅತಿ ವರ್ಣಿತ ವ್ಯಕ್ತಿತ್ವದ ಕುರಿತು ಹೊಗಳುತ್ತ ಹೋಗುವುದು ಸುಲಭ. ಅದು ಕೊಲಾಜ್ ಚಿತ್ರಕ್ಕೆ ಮತ್ತಷ್ಟು ತುಂಡುಗಳ ಸೇರಿಸಿ ಹಿಗ್ಗಿಸುತ್ತ ಹೋದ ಹಾಗೆ. ಆದರೆ ವಿವಾದಾಸ್ಪದ ಗಾಂಧಿಯನ್ನು ಪರಿಶೀಲಿಸುವುದೇ ಹೆಚ್ಚು ಪ್ರಸ್ತುತ. ಈ ಕಾಲಮಾನಕ್ಕೆ ಅವರ ಚಿಂತನೆಗಳ ಔಚಿತ್ಯ ಏನೆಂದು ತಿಳಿಯಬೇಕಿದ್ದರೆ ಸಮಕಾಲೀನ ವ್ಯಕ್ತಿತ್ವಗಳಾದ ಗಾಂಧಿ-ಅಂಬೇಡ್ಕರ್ ನಡುವಿನ ಸಂಬಂಧ ಹಾಗೂ ಗಾಂಧಿಯ ವಿವಾದಿತ



ಅಭಿವಂದಿಸಿ ಬೀಳ್ಕೊಡುತ್ತಾ...

ಗಾಂಧಿ ಅಂಬೇಡ್ಕರರನ್ನು ಎದುರಾ ಎದುರು ನಿಲ್ಲಿಸಿ ನೋಡುವ ತುರ್ತು ಕದನ ಕುತೂಹಲವಲ್ಲ, ಅದು ಇತಿಹಾಸ ಸೃಷ್ಟಿಸಿದ ಅನಿವಾರ್ಯ. ತಮ್ಮ ಕೋಟ್ಯಂತರ ಅನುಯಾಯಿಗಳಿಂದ 'ಬಾಪು', 'ಬಾಬಾ' ಎಂದು ಕರೆಸಿಕೊಂಡ ಗಾಂಧಿ ಮತ್ತು ಅಂಬೇಡ್ಕರ್ ಸಮಾಜ ಸುಧಾರಣೆಯ ಎರಡು ನೆಲೆಗಳನ್ನು ಪ್ರತಿನಿಧಿಸುತ್ತಾರೆ. ವೈಯಕ್ತಿಕ ನೆಲೆಯಲ್ಲಿ ಸುಧಾರಣೆ ಬಯಸುವ ಗಾಂಧಿ, ಕಾನೂನುಬದ್ಧ ಸುಧಾರಣೆಗಾಗಿ ಹಕ್ಕು ಪ್ರತಿಪಾದಿಸುವ ಅಂಬೇಡ್ಕರ್ – ಇಬ್ಬರೂ ತಮ್ಮಿಡೀ ಬದುಕನ್ನು ಸಾರ್ವಜನಿಕ ಹೋರಾಟಕ್ಕಾಗಿ ತೆತ್ತುಕೊಂಡವರು. ಗಾಂಧಿ ವೈಯಕ್ತಿಕ ಬದುಕಿನ, ಆತ್ಮಶುದ್ಧತೆಯ ದಾರಿ ಹೇಳಿದರೆ; ಅಂಬೇಡ್ಕರ್ ತನ್ನಿರವು–ನೋವು–ಸ್ಥಿತಿಗಳ ಅರಿವೆಯೇ ಇಲ್ಲದೆ ಕಗ್ಗತ್ತಲಲ್ಲಿದ್ದ ಚೇತನಗಳ ಆತ್ಮಗೌರವ ಉದ್ದೀಪಿಸಿದರು.

ತತ್ವಗಳನ್ನು ಪರಿಶೀಲಿಸಬೇಕಿದೆ.

ಗಾಂಧಿ ಹತ್ಯೆಯಾದಾಗ ಅಂಬೇಡ್ಕರ್ ಭಾವೀ ಪತ್ನಿಗೆ ಬರೆದ ಪತ್ರ ಗಾಂಧಿ ವ್ಯಕ್ತಿತ್ವ ಮತ್ತು ಚಿಂತನೆಗಳನ್ನು ಅಂಬೇಡ್ಕರ್ ಹೇಗೆ ಗ್ರಹಿಸಿದರೆಂದು ತಿಳಿಯಪಡಿಸುತ್ತದೆ.

'ಮಹತ್ವದ ವ್ಯಕ್ತಿಗಳು ಅವರ ದೇಶಕ್ಕೆ ಮಹತ್ವದ ಸೇವೆಯನ್ನೇ ಮಾಡಿರುತ್ತಾರೆ. ಆದರೆ ಅದೇ ವೇಳೆಗೆ ಅವರ ದೇಶಗಳ ಮುನ್ನಡೆಗೆ ಅಡ್ಡಗಾಲೂ ಆಗಿರುತ್ತಾರೆ. ಗಾಂಧಿ ಈ ದೇಶಕ್ಕೆ ನಿಶ್ಚಿತವಾದ ಅಪಾಯವಾಗಿ ಪರಿಣಮಿಸಿದ್ದರು. ಎಲ್ಲ ಮುಕ್ತ ಚಿಂತನೆಗಳ ಗಂಟಲು ಕಟ್ಟಿಸಿದ್ದರು. ಗಾಂಧಿಯನ್ನು ಹೊಗಳಿ, ಪೂಜಿಸುವುದನ್ನು ಬಿಟ್ಟು ಮತ್ಯಾವುದೇ ಸಾಮಾಜಿಕ, ನೈತಿಕ ಜವಾಬ್ದಾರಿ ಗೊತ್ತಿಲ್ಲದ ಹಾಗೂ ಸ್ವಾರ್ಥಿಗಳಿಂದ ತುಂಬಿದ ಕಾಂಗ್ರೆಸ್ ಅನ್ನು ಅವರು ಒಂದುಗೂಡಿಸಿ ಇಟ್ಟಿದ್ದರು. ಅಂತಹ ಸಂಘಟನೆಯೊಂದು ದೇಶ ಆಳಲು ಸಂಪೂರ್ಣ ಅನರ್ಹ. ಕೆಲವು ಬಾರಿ ಕೆಟ್ಟದ್ದರಿಂದ ಒಳ್ಳೆಯದು ಹೊಮ್ಮುತ್ತದೆ ಎಂದು ಬೈಬಲ್ ಹೇಳುತ್ತದೆ. ಹಾಗೆಯೇ ಗಾಂಧಿ ಮರಣದಿಂದಲೂ ಏನಾದರೂ ಒಳ್ಳೆಯದು ಸಂಭವಿಸಬಹುದು. ಸೂಪರ್‌ಮ್ಯಾನ್ ಒಬ್ಬನ ಬಂಧನದಿಂದ ಜನರನ್ನು ಅದು ಬಿಡುಗಡೆಗೊಳಿಸಬಹುದು. ತಮ್ಮಷ್ಟಕ್ಕೆ ತಾವೇ ಯೋಚಿಸುವಂತೆ, ತಮ್ಮ ಅರ್ಹತೆಯ ಆಧಾರದ ಮೇಲೇ ನಿಲ್ಲುವಂತೆ ಒತ್ತಾಯಿಸಬಹುದು..'



ಗಾಂಧಿ ಅಂಬೇಡ್ಕರರನ್ನು ಎದುರಾ ಎದುರು ನಿಲ್ಲಿಸಿ ನೋಡುವ ತುರ್ತು ಕದನ ಕುತೂಹಲವಲ್ಲ, ಅದು ಇತಿಹಾಸ ಸೃಷ್ಟಿಸಿದ ಅನಿವಾರ್ಯ. ತಮ್ಮ ಕೋಟ್ಯಂತರ ಅನುಯಾಯಿಗಳಿಂದ 'ಬಾಪು', 'ಬಾಬಾ' ಎಂದು ಕರೆಸಿಕೊಂಡ ಗಾಂಧಿ ಮತ್ತು ಅಂಬೇಡ್ಕರ್ ಸಮಾಜ ಸುಧಾರಣೆಯ ಎರಡು ನೆಲೆಗಳನ್ನು ಪ್ರತಿನಿಧಿಸುತ್ತಾರೆ. ವೈಯಕ್ತಿಕ ನೆಲೆಯಲ್ಲಿ ಸುಧಾರಣೆ ಬಯಸುವ ಗಾಂಧಿ, ಕಾನೂನುಬದ್ಧ ಸುಧಾರಣೆಗಾಗಿ ಹಕ್ಕು ಪ್ರತಿಪಾದಿಸುವ ಅಂಬೇಡ್ಕರ್ – ಇಬ್ಬರೂ ತಮ್ಮಿಡೀ ಬದುಕನ್ನು ಸಾರ್ವಜನಿಕ ಹೋರಾಟಕ್ಕಾಗಿ ತೆತ್ತುಕೊಂಡವರು. ಗಾಂಧಿ ವೈಯಕ್ತಿಕ ಬದುಕಿನ, ಆತ್ಮಶುದ್ಧತೆಯ ದಾರಿ ಹೇಳಿದರೆ; ಅಂಬೇಡ್ಕರ್ ತನ್ನಿರವು–ನೋವು–ಸ್ಥಿತಿಗಳ ಅರಿವೆಯೇ ಇಲ್ಲದೆ ಕಗ್ಗತ್ತಲಲ್ಲಿದ್ದ ಚೇತನಗಳ ಆತ್ಮಗೌರವ ಉದ್ದೀಪಿಸಿದರು. ಯಾವ ಶಸ್ತ್ರವಿಲ್ಲದೇ, ಬಲವಿಲ್ಲದೆ, ಏಕಾಂಗಿಯಾಗಿ ಆದರೆ ಹೇಡಿಯಾಗದೇ ಹೋರಾಡುವುದು ಹೇಗೆಂದು ಗಾಂಧಿ ಹೇಳಿದರೆ; ಶೋಷಿತರೆಲ್ಲರೂ ಒಂದಾಗಿ ಸಂಘಟಿತ ಹೋರಾಟ ನಡೆಸಬೇಕೆಂದು ಅಂಬೇಡ್ಕರ್ ಹೇಳಿದರು. 'ಗ್ರಾಮಗಳು ಸ್ವಯಂಪೂರ್ಣವಾಗಬೇಕು, ಹಳ್ಳಿಗರು ಸ್ವಾವಲಂಬನೆ ಸಾಧಿಸಬೇಕು' ಎನ್ನುವುದು ಗಾಂಧಿಯ ಸ್ವರಾಜ್ಯದ ಕನಸಾದರೆ; ಅಂಬೇಡ್ಕರ್ 'ಹಳ್ಳಿಗಳು ಜಾತಿಬಿಲಗಳು. ನಿಮ್ಮ ಪಾರಂಪರಿಕ ನೆಲೆ, ಉದ್ಯೋಗ ತೊರೆದು ನಗರಗಳಿಗೆ ವಲಸೆ ಬನ್ನಿ' ಎಂದು ಸಲಹೆ ಇತ್ತರು.

ಇಬ್ಬರೂ ಅಹಿಂಸಾವಾದಿಗಳು. ಇಬ್ಬರೂ ಆತ್ಮಸ್ವರಾಜ್ಯ ಮತ್ತು ಆತ್ಮಾಭಿಮಾನವೆಂಬ ವೈಯಕ್ತಿಕ ನೆಲೆಯ ಗುರಿಯಿಟ್ಟುಕೊಂಡು ಮನುಷ್ಯನ ಬಿಡುಗಡೆಗಾಗಿ ಹೋರಾಡಿದ್ದರೂ ಅವರ ದಾರಿ ಮತ್ತು ಶೈಲಿಗಳು ಸಂಪೂರ್ಣ ಭಿನ್ನವಾಗಿದ್ದವು. ಗಾಂಧಿ ಪ್ರತಿಪಾದಿಸುತ್ತಿದ್ದ ಜೈನ ಅಹಿಂಸೆ ಎದುರಾಳಿಯನ್ನು ಪ್ರೀತಿಯಿಂದ ನಾಶಮಾಡಿಬಿಡಬಲ್ಲ ರಾಜಕಾರಣಿಯನ್ನು ಸೃಷ್ಟಿಸಿತು. ಆದರೆ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರಿಗೆ ಭಾರತೀಯರು ಸಹಾಯ ಮಾಡಬೇಕೆಂಬ ಕರೆ ನೀಡಲು ಗಾಂಧಿ ಹಿಂಜರಿಯಲಿಲ್ಲ. ಅಂಬೇಡ್ಕರರದು ಶರಣಾಗತಿಯನ್ನೊಲ್ಲದ, ದುಷ್ಟತನವನ್ನು ನಾಶ ಮಾಡಬೇಕೆನ್ನುವ ಬೌದ್ಧ ಅಹಿಂಸೆ. ಸಶಸ್ತ್ರ ಹೋರಾಟವನ್ನು ಬೆಂಬಲಿಸದ ಅಂಬೇಡ್ಕರ್ ಕಾನೂನುಬದ್ಧ ಹೋರಾಟವೇ ನಿಜವಾದ ಹೋರಾಟವೆಂದು ಭಾವಿಸಿದ್ದರು. ಗಾಂಧಿ ಮತ್ತು ಅಂಬೇಡ್ಕರ್ 30–35 ವರ್ಷ ಸಮಕಾಲೀನರಾಗಿ ಸಾರ್ವಜನಿಕ ಜೀವನದಲ್ಲಿದ್ದರೂ ಪರಸ್ಪರ ಭೇಟಿಯಾಗಿದ್ದು 3–4 ಬಾರಿ ಮಾತ್ರ. ಗಾಂಧಿಯನ್ನು ಹತ್ತಿರದಿಂದ ನೋಡಿದ್ದ, ವ್ಯಕ್ತಿತ್ವ ಚಿಂತನೆಗಳನ್ನು ಸಮಗ್ರವಾಗಿ ಗ್ರಹಿಸಿದ್ದ ಅಂಬೇಡ್ಕರ್‌ಗೆ ಗಾಂಧಿಯ ವ್ಯಕ್ತಿತ್ವದ ಅರೆಕೊರೆಗಳೆಲ್ಲ ಅರ್ಥವಾಗಿದ್ದವು. ಗಾಂಧಿಯನ್ನು ಮಹಾತ್ಮನನ್ನಾಗಿಸಿದ ಕಾಂಗ್ರೆಸ್ ಬಗ್ಗೆ, ಮಹಾತ್ಮ ಬಿರುದನ್ನು ನೇರಾನೇರ ತಿರಸ್ಕರಿಸದ ಗಾಂಧಿಯ ಬಗ್ಗೆ ಸಿಟ್ಟಿತ್ತು. ಸನಾತನ ಹಿಂದೂ ಧರ್ಮದ ಚೌಕಟ್ಟಿನಲ್ಲೇ ಅಸ್ಪೃಶ್ಯರನ್ನು ಹಿಡಿದಿಡಲು ನಡೆಸಿದ ಪ್ರಯತ್ನಗಳು ದುರುದ್ದೇಶಪೂರಿತ ಹುನ್ನಾರದಂತೆ ಕಾಣಿಸಿತು. ಗಾಂಧಿಯ ಹರಿಜನೋದ್ಧಾರ ಕಾರ್ಯಕ್ರಮ ಕುರಿತು ಕಟು ಟೀಕೆ ಮಾಡಿದರು. ತಮ್ಮ ಜೀವಿತಕಾಲದಲ್ಲಿ ಗಾಂಧಿ ವಿರೋಧವನ್ನು ಅಂಬೇಡ್ಕರ್ ಮುಚ್ಚಿಡಲಿಲ್ಲ, ಬದಲಾಗಿ ಅದನ್ನು ಪೋಷಿಸಿದರು. ಮೇಲ್ಜಾತಿಯವರಿಂದ ತುಂಬಿ ಗಾಂಧಿ ಅಣತಿಯಂತೆ ನಡೆಯುತ್ತಿದ್ದ ಕಾಂಗ್ರೆಸ್ ಪಕ್ಷದ ವಿರೋಧ ಅವರಿಗೆ ಅನಿವಾರ್ಯವಾಗಿತ್ತು. ಸ್ವಾತಂತ್ರ್ಯ ಗಳಿಸುವುದೇ ಮುಖ್ಯ ಗುರಿಯಾದ ಕಾಂಗ್ರೆಸ್ ಅಸ್ಪೃಶ್ಯತೆ ಸಮಸ್ಯೆ ನಿವಾರಣೆಗಾಗಿ ಕೈಗೊಳ್ಳುವ ಕ್ರಮಗಳು ಸಾಂಕೇತಿಕವೆಂದು ಅವರಿಗನಿಸಿತು. ದೇಶದ ಸ್ವಾತಂತ್ರ್ಯ ಮುಖ್ಯವಾದರೂ ಕೋಟ್ಯಂತರ ಜನರ ಬದುಕಿನಲ್ಲಿ ಬದಲಾವಣೆಯಾಗದೇ ಸ್ವಾತಂತ್ರ್ಯಕ್ಕೆ ಅರ್ಥವಿರಲಿಲ್ಲ. ಕಾಂಗ್ರೆಸ್ ಹೊರತಾದ ಶೋಷಿತರ ಸಂಘಟನೆ ಕಟ್ಟಿ, ಅದರ ರಾಜಕೀಯ ಪ್ರವೇಶದ ಅನಿವಾರ್ಯತೆಯನ್ನು ಅವರು ಮನಗಂಡರು.

ಅಂಬೇಡ್ಕರ್ ನಡೆಗಳಿಂದ ಗಾಂಧಿ ಇರುಸುಮುರುಸುಗೊಂಡರೂ ಆ ಟೀಕೆಗಳು ಸತತ ಬದಲಾವಣೆಗೊಡ್ಡಿಕೊಳ್ಳುವಂತೆ ಮಾಡಿದ್ದು ಸತ್ಯ. ಜಾತಿ ಕುರಿತು ಅವರ ನಿಲುವುಗಳು ಕ್ರಮೇಣ ಬದಲಾಗುತ್ತ ಹೋದವು. ಆದರೂ ಅಸ್ಪೃಶ್ಯತೆ ತೊಡೆದು ಹಾಕಲು ಸವರ್ಣೀಯ ಹಿಂದೂಗಳ ಆತ್ಮಶುದ್ಧಿ ಮುಖ್ಯ ಎಂದು ಭಾವಿಸಿದ ಗಾಂಧಿ ಅದರತ್ತ ಹೆಚ್ಚು ಗಮನ ಹರಿಸಿದರು. ಪೂನಾ ಒಪ್ಪಂದದ ಮುನ್ನ ಹಾಗೂ ನಂತರ ಅವರ ಸಂದೇಶಗಳಲ್ಲಿ ಈ ಧ್ವನಿ ಸ್ಪಷ್ಟಗೊಂಡಿದೆ. ಆದರೆ ಗಾಂಧಿ ಅನುಕಂಪದ ಅಲೆ ಸೃಷ್ಟಿಸುವಲ್ಲಿ ಸಫಲರಾದರೇ ಹೊರತು ಶೋಷಿತರ ನಾಗರಿಕ ಹಕ್ಕುಗಳನ್ನು ಸವರ್ಣೀಯರು ಒಪ್ಪಿಕೊಳ್ಳುವಂತೆ ಮಾಡಲು ಸಾಧ್ಯವಾಗಲಿಲ್ಲ. ಹರಿಜನರ ಪರವಾಗಿ ಅವರ ಕಾಳಜಿ ಎಷ್ಟೇ ಇದ್ದರೂ ಅದರಲ್ಲಿ ರಾಜಕೀಯ ಉದ್ದೇಶವಿರುವುದನ್ನು ಅಂಬೇಡ್ಕರರ ಸೂಕ್ಷ್ಮ ಮನಸ್ಸು ಗುರುತಿಸಿತ್ತು. ಅದನ್ನು ನೇರಾನೇರ ಟೀಕಿಸಿದ್ದರು. ಹೀಗಾಗಿ ಗಾಂಧಿ ಕೃಪಾಪೋಷಿತ ಅಸ್ಪೃಶ್ಯತಾ ನಿವಾರಣೆಯಂತಹ ಕಾರ್ಯಕ್ರಮಗಳು ಅಂಬೇಡ್ಕರ್ ಪ್ರಯತ್ನಗಳಿಗೆ ಪೂರಕವಾಗಿ ಮುಂದುವರೆಯುವುದು ಸಾಧ್ಯವಾಗಲಿಲ್ಲ.

* * *

ಗಾಂಧಿ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಕೆಲವು ವಿವಾದಾಸ್ಪದ ಅಂಶಗಳ ಬಗೆಗೆ ಹೇಳಬೇಕು.

* ಬಹಳಷ್ಟು ರಾಜಕೀಯ ನಾಯಕರು ಮನುಷ್ಯನ ದೈನಂದಿನ ಕಷ್ಟ–ನೋವು, ಬದುಕಿನ ತೊಡಕುಗಳ ಬಗೆಗೆ ಮಾತನಾಡುವುದಿಲ್ಲ. ಅದರಲ್ಲೂ ಲೈಂಗಿಕತೆಯ ಕುರಿತಂತೂ ಮಾತನಾಡಿದ್ದೇ ಇಲ್ಲ. ಯಯಾತಿ ಹಂಬಲದ ಚೇರ್ಮನ್ ಮಾವೋನಿಂದ ಕೆನಡಿ, ನೆಹರೂ, ಹಿಟ್ಲರ್ ತನಕ ಹಲವರು ವರ್ಣರಂಜಿತ ಖಾಸಗಿ ಬದುಕಿನ ಹೊರತಾಗಿಯೂ ಲೈಂಗಿಕತೆ ಕುರಿತ ಅಭಿಪ್ರಾಯಗಳನ್ನು ಖಾಸಗಿಯಾಗೇ ಇಟ್ಟುಕೊಂಡಿದ್ದರು. ಅಂಥವರ ನಡುವೆ ಬ್ರಹ್ಮಚರ್ಯ, ಲೈಂಗಿಕತೆ ಕುರಿತು ಮುಕ್ತವಾಗಿ ಮಾತನಾಡಿದ ಗಾಂಧಿ ವಿಶಿಷ್ಟವೆನಿಸುತ್ತಾರೆ. 'ಪರ್ಫಾರ್ಮೆನ್ಸ್' ಹೊರತಾಗಿ ಗಂಡಸಿಗೆ ಒಂದು ಸೌಂದರ್ಯವಿದೆ ಎಂದು ಪ್ರತಿಪಾದಿಸಿದ ಗಾಂಧಿ, 'ದಿಸ್ ಬಾಡಿ ಈಸ್ ಎ ಹಿಂಡ್ರನ್ಸ್, ದೇಹದ ಹಂಗು ತೊರೆದ ದಿನ ಪ್ರೇಮಕ್ಕೆ ಯಾವ ಅಡಚಣೆಯಿಲ್ಲ' ಎಂದರು. ಬ್ರಹ್ಮಚರ್ಯ ಕುರಿತ ಅವರ ಪ್ರತಿಪಾದನೆಗಳು ಅಪ್ರಾಯೋಗಿಕವಿರಬಹುದು, ಆದರೆ ಕುಟುಂಬ ಯೋಜನೆ ಲಭ್ಯವಿರದಿದ್ದ ಕಾಲದಲ್ಲಿ ಲೈಂಗಿಕತೆ ಮಿತವಾಗಿರಲಿ ಎಂದು ಬೋಧಿಸುವ ಗಾಂಧಿ ಅಮ್ಮನಂತೆ ಕಂಡರೆ ಅಚ್ಚರಿಯಿಲ್ಲ.

ಆದರೆ ಈ ಆತ್ಮಾನುಸಂಧಾನ, ಬ್ರಹ್ಮಚರ್ಯ ಪರೀಕ್ಷೆ ಅತಿಗೆ ಹೋಗದೆಯೂ ಇಲ್ಲ. ಹರಿಲಾಲನ ಹೆಂಡತಿ ತೀರಿಕೊಂಡ ಬಳಿಕ ಎರಡನೆಯ ಮದುವೆಗೆ ಉತ್ತೇಜನ ನೀಡಲಿಲ್ಲ. ಬಳಿಕ ಹರಿಲಾಲ ಹಿಡಿದ ದಾರಿ ಎಲ್ಲರಿಗೂ ತಿಳಿದಿದ್ದೇ. ಶಿವರಾಮ ಕಾರಂತರು ಬಸರೂರಿನ ವೇಶ್ಯೆಯರಿಗೆ ಮದುವೆ ಮಾಡಿಸಿ ಬಾಳು ಕೊಡಲು ಯತ್ನಿಸಿ ಮದುವೆಯಾಗುವವರು ಸಿಗದೇ ನಿರಾಶರಾಗಿ ಗಾಂಧಿಗೆ ಪತ್ರ ಬರೆದಾಗ ಗಾಂಧಿ, 'ವೇಶ್ಯೆಯರು ಯಾವಜ್ಜೀವ ಬ್ರಹ್ಮಚರ್ಯ ಪಾಲಿಸುವಂತೆ ಮನವೊಲಿಸಿ' ಎಂದು ಉತ್ತರಿಸಿದ್ದರು! 'ನೀನು ನನ್ನ ಆಧ್ಯಾತ್ಮಿಕ ಪತ್ನಿ ಆಗುವೆಯಾ?' ಎಂದು ಅವರು ಪತ್ರ ಬರೆದು ಕೇಳಿದ ಮಹಿಳೆ ಅಥವಾ ತಮ್ಮ ಬ್ರಹ್ಮಚರ್ಯ ಪರೀಕ್ಷಿಸಲು ಒಂದೇ ಕೋಣೆಯಲ್ಲಿ ಜೊತೆ ಮಲಗಿದ ಹುಡುಗಿಯರ ಮನಸ್ಥಿತಿ ಏನಾಗಿತ್ತು? ಈ ಕುರಿತು ಗಾಂಧಿ ಯೋಚಿಸಲಿಲ್ಲವೇ? ಇವರ ಬ್ರಹ್ಮಚರ್ಯ ಕಸ್ತೂರಬಾಗೆ ಹೇಗೆನಿಸಿರಬಹುದು? ಗಾಂಧಿ ಎಂಬ ಭಾವಪ್ರವಾಹದಲ್ಲಿ ಈ ಪ್ರಶ್ನೆಗಳು ಸಣ್ಣ ನಾವೆಗಳಂತೆ ಕೊಚ್ಚಿಹೋಗಿವೆ.

* ಗಾಂಧಿ ಶ್ರಮ ಒಂದು ಮೌಲ್ಯವೆಂದು ಪರಿಗಣಿಸಿದವರು. ಅವರ

ಅಂಬೇಡ್ಕರ್ ನಡೆಗಳಿಂದ ಗಾಂಧಿ ಇರುಸುಮುರುಸುಗೊಂಡರೂ ಆ ಟೀಕೆಗಳು ಸತತ ಬದಲಾವಣೆಗೊಡ್ಡಿಕೊಳ್ಳುವಂತೆ ಮಾಡಿದ್ದು ಸತ್ಯ. ಜಾತಿ ಕುರಿತು ಅವರ ನಿಲುವುಗಳು ಕ್ರಮೇಣ ಬದಲಾಗುತ್ತ ಹೋದವು. ಆದರೂ ಅಸ್ಪೃಶ್ಯತೆ ತೊಡೆದು ಹಾಕಲು ಸವರ್ಣೀಯ ಹಿಂದೂಗಳ ಆತ್ಮಶುದ್ಧಿ ಮುಖ್ಯ ಎಂದು ಭಾವಿಸಿದ ಗಾಂಧಿ ಅದರತ್ತ ಹೆಚ್ಚು ಗಮನ ಹರಿಸಿದರು. ಪೂನಾ ಒಪ್ಪಂದದ ಮುನ್ನ ಹಾಗೂ ನಂತರ ಅವರ ಸಂದೇಶಗಳಲ್ಲಿ ಈ ಧ್ವನಿ ಸ್ಪಷ್ಟಗೊಂಡಿದೆ. ಆದರೆ ಗಾಂಧಿ ಅನುಕಂಪದ ಅಲೆ ಸೃಷ್ಟಿಸುವಲ್ಲಿ ಸಫಲರಾದರೇ ಹೊರತು ಶೋಷಿತರ ನಾಗರಿಕ ಹಕ್ಕುಗಳನ್ನು ಸವರ್ಣೀಯರು ಒಪ್ಪಿಕೊಳ್ಳುವಂತೆ ಮಾಡಲು ಸಾಧ್ಯವಾಗಲಿಲ್ಲ.

ಆಶ್ರಮವಾಸಿಗಳು ಅವರವರ ಕೆಲಸ ಹಾಗೂ ಆಶ್ರಮದ ಎಲ್ಲ ಕೆಲಸಗಳನ್ನು ಮಾಡಬೇಕಿತ್ತು. ಈ ಕುರಿತು ಒಂದು ಪ್ರಸಂಗ ನೆನಪಿಸಿಕೊಳ್ಳುವುದು ಉಪಯುಕ್ತ. ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮದಿಂದ ಗಾಂಧಿ ತಮ್ಮ ಆಶ್ರಮವಾಸಿಗಳೊಂದಿಗೆ ಭಾರತಕ್ಕೆ ಬಂದರು. ಕಾಂಗ್ರೆಸ್ ಸೇರುವ ಮುನ್ನ 3 ತಿಂಗಳು ರೈಲಿನಲ್ಲಿ ಸುತ್ತಿ ಬರಲು ಹೊರಟಾಗ ಆಶ್ರಮವಾಸಿಗಳನ್ನೆಲ್ಲ ಕಲಕತ್ತೆಯ ಶಾಂತಿ ನಿಕೇತನದಲ್ಲಿ ಬಿಟ್ಟರು. ವಾಪಸು ಹಿಂದಿರುಗಿದವರು ನೋಡುತ್ತಾರೆ, ಏನಾಶ್ಚರ್ಯ! ಕೃಶದೇಹಿಗಳಾಗಿದ್ದವರು ಮೈಕೈ ತುಂಬಿಕೊಂಡು ನಳನಳಿಸುತ್ತಿದ್ದಾರೆ! ಕೆಲದಿನ ಶಾಂತಿನಿಕೇತನದಲ್ಲಿದ್ದು ವಾಪಸಾಗುವಾಗ ಟ್ಯಾಗೋರರಿಗೆ ಹೇಳಿದರು: 'ನೀವು ಆಶ್ರಮವಾಸಿಗಳಿಗೆ ಶ್ರಮ ಕಲಿಸಿಲ್ಲ. ಅವರವರ ಅನ್ನ ಅವರವರೇ ಉತ್ಪಾದಿಸಿಕೊಳ್ಳುವಂತಹ ವ್ಯವಸ್ಥೆ ಮಾಡಿ. ಇಲ್ಲದಿದ್ದರೆ ಈ ಆಶ್ರಮ ಹೆಚ್ಚು ದಿನ ನಡೆಯುವುದು ಸಾಧ್ಯವಿಲ್ಲ.' ಇದರ ಜೊತೆಗೇ ಆಶ್ರಮದಲ್ಲಿ ಸಹಪಂಕ್ತಿ ಭೋಜನ ಶುರುಮಾಡುವಂತೆಯೂ ಅವರು ಸೂಚಿಸಿದರು.

ಗಾಂಧಿ ಶ್ರಮ ಒಂದು ಮೌಲ್ಯವೆಂದು ನಂಬಿದರು. ಆದರೆ ಶ್ರಮ ಪಡುವವನು ಹಾಗೆಂದು ಭಾವಿಸಬೇಡವೆ? ಅವನ ಕೀಳರಿಮೆ ಹೋಗಲಾಡಿಸದೇ ಶ್ರಮ ಮೌಲ್ಯವೆಂದು ಪ್ರತಿಪಾದಿಸುವುದು ವ್ಯರ್ಥ. ಶ್ರಮ ಕಡಿಮೆ ಮಾಡುವ ಯಂತ್ರಗಳಿದ್ದಾಗ್ಯೂ ಅದನ್ನು ಬಳಸದೇ ಇರುವುದರಿಂದ ಶ್ರಮಿಕನನ್ನು ಯಾಂತ್ರಿಕಗೊಳಿಸಿದಂತಲ್ಲವೇ? ಪಕ್ಷದ ನಿಧಿ ಅಥವಾ ಇನ್ನಿತರ ಸಾಮಾಜಿಕ ಉದ್ದೇಶಗಳಿಗೆ ಬಂಡವಾಳಶಾಹಿಗಳನ್ನೇ ಅವಲಂಬಿಸಿ ಅವರಲ್ಲೂ ಸಾಮಾಜಿಕ ಬದ್ಧತೆ ಹುಟ್ಟಿಸಬಯಸಿದ್ದ ಗಾಂಧಿ ಶ್ರಮಿಕರನ್ನೂ, ಬಂಡವಾಳಿಗರನ್ನೂ ಹೇಗೆ ಒಟ್ಟೊಟ್ಟು ಕೊಂಡೊಯ್ಯಬಯಸಿದ್ದರು? ಗಾಂಧೀವಾದ ಸಾಂಕೇತಿಕತೆಯ ಅಪಾಯ ಒಡ್ಡತೊಡಗಿದ್ದು ಹೀಗೆ. ಗ್ರಾಮಗಳನ್ನು ದತ್ತು ತೆಗೆದುಕೊಂಡೋ, ಕುಷ್ಠ ರೋಗಿಗಳ ಚಿಕಿತ್ಸೆಗೆ ನೆರವಾಗಿಯೋ, ಖಾದಿ ಖರೀದಿಸಿಯೋ ಸಾಂಕೇತಿಕವಾಗಿ ಅವರ ಬಂಡವಾಳ ಪವಿತ್ರೀಕರಿಸಲಾಗುತ್ತದೆ. ಅವರಿಗೆ 'ಪಾಪ' ತೊಳೆದುಕೊಳ್ಳುವ ಅವಕಾಶ ಕೊಡುತ್ತದೆ. ಆದರೆ ಅಂಬೇಡ್ಕರ್‌ವಾದ ಮತ್ತು ಮಾರ್ಕ್ಸ್‌ವಾದ ಇಂಥ ಒಳದಾರಿಗಳಿಗೆ ಆಸ್ಪದ ಕೊಡುವುದಿಲ್ಲ. ಗಾಂಧಿ ತತ್ವ ಕೆಲವೊಮ್ಮೆ ಗೊಂದಲಗೊಳಿಸುವುದು ಇಂಥ ಕಡೆಯೇ.

* ಗಾಂಧಿಗೆ ಚರಕದಲ್ಲಿ ತುಂಬ ನಂಬಿಕೆ. ದಿನಕ್ಕೆ ಒಂದು ಗಂಟೆ ಪ್ರತಿಯೊಬ್ಬನೂ ಚರಕದಲ್ಲಿ ನೂತರೆ ದೇಶದ ಬಡತನ ಕಡಿಮೆಯಾಗುತ್ತದೆ ಎನ್ನುವುದು ಅವರ ಗಾಢ ನಂಬಿಕೆ. ಅವರು ಹೋದಲ್ಲೆಲ್ಲ ಚರಕವೂ ಪ್ರವಾಸ ಹೋಗುತ್ತಿತ್ತು. ಇದಕ್ಕೆ ಕಟುಟೀಕೆ ಬಂದಿದ್ದು ಟ್ಯಾಗೋರರಿಂದ. 'ಅಕ್ಕಿ ತೊಳೆದ ನೀರು ಕುಡಿಟ್ಟರೆ ಆಹಾರ ಸಮಸ್ಯೆ ನೀಗುತ್ತದೆ ಎನ್ನುವುದೂ ಒಂದೇ, ಚರಕದಿಂದ ಬಡತನ ಹೋಗಲಾಡಿಸುವುದು ಸಾಧ್ಯ ಎನ್ನುವುದೂ ಒಂದೇ' ಎಂದು ಬರೆದರು.

ವಿಶ್ವ ಮಾರುಕಟ್ಟೆ ಭಾರತವನ್ನು ಪ್ರವೇಶಿಸಿದೆ. ಗಾಂಧಿ ಕನಸಿನ ಗ್ರಾಮೀಣ ಭಾರತದ ಕುಶಲಕರ್ಮಿಗಳು ಥಳುಕು ಬಳುಕಿನ ಅತಿ ಸ್ಪರ್ಧಾತ್ಮಕ ಮಾರುಕಟ್ಟೆ ಎದುರು ಬಲಹೀನರಾಗಿ ತೋರುತ್ತಿದ್ದಾರೆ. ಇಂದಿನ ಪೀಳಿಗೆ ಪಾರಂಪರಿಕ ಕಸುಬು ತೊರೆದು ದಿಗಂತ ವಿಸ್ತರಿಸಿಕೊಳ್ಳತೊಡಗಿದ್ದಾರೆ. ಗಿರಣಿ ಬಟ್ಟೆಗಿಂತ ಖಾದಿಬಟ್ಟೆಯೇ ತುಟ್ಟಿಯಾಗಿ ಈಗದು ಫ್ಯಾಷನ್ ಪ್ರಿಯರ, ರಾಜಕಾರಣಿಗಳ ಫೇವರಿಟ್ ಆಗಿದೆ. ಚರಕಾ ಉದ್ಯಮ ಹೋಗಲಿ, ಬಟ್ಟೆ ಗಿರಣಿ ಉದ್ಯಮವೇ ನೆಲ ಕಚ್ಚಿ ಹೋಗಿರುವಾಗ ಗಾಂಧಿ ಕನಸಿನ ಚರಕದಲ್ಲಿ ನೂಲು ತೆಗೆಯುವುದು ಸಾಂಕೇತಿಕವಾಗಿಯೂ ಸ್ವಾವಲಂಬನೆಯನ್ನು ಬಿಂಬಿಸುವುದಿಲ್ಲ.

ಇಷ್ಟೆಲ್ಲ ಟೀಕೆಗಳ ಹೊರತಾಗಿಯೂ:

ಧರ್ಮ ಅದರಲ್ಲಿ ನಂಬಿಕೆಯೇ ಇಲ್ಲದವರ ಬಳಿ ಸಿಲುಕಿ ದುರುದ್ದೇಶಗಳಿಗೆ ಬಳಕೆಯಾಗುತ್ತಿರುವಾಗ; ವಿದ್ಯಾವಂತ-ಅವಿದ್ಯಾವಂತ, ಸಿರಿವಂತ-ಬಡವನೆನ್ನದೇ ಕೋಮುದ್ವೇಷ ಕ್ಯಾನ್ಸರ್‌ವ್ಯಾಧಿಯಂತೆ ಹಬ್ಬುತ್ತಿರುವಾಗ ಸಹಿಷ್ಣುತೆ ಬೋಧಿಸಿದ, ಅದರಂತೇ ಬದುಕಿ ತೋರಿಸಿದ ಗಾಂಧಿ ಮತ್ತೆ ಮುಖ್ಯವೆನಿಸುತ್ತಾರೆ. ಸಾಲುಸಾಲಾಗಿ ದುರ್ಬಲರ ಪರ ಕಾಯಿದೆ-ಕಾನೂನು, ಸವಲತ್ತುಗಳು ಬಂದರೂ, ಇಂದಿಗೂ ಅಸ್ಪೃಶ್ಯತೆ ಮತ್ತಿತರ ಸಮಸ್ಯೆಗಳು ಹಾಗೇ ಉಳಿದಿರುವಾಗ ಕಾನೂನುಕ್ರಮಗಳ ಜೊತೆಗೆ ಸವರ್ಣೀಯರ ಆತ್ಮಶುದ್ಧಿಯೂ ಅವಶ್ಯವಲ್ಲವೇ ಎಂಬ ಗುಮಾನಿ ಮೂಡುತ್ತದೆ. ದೈಹಿಕ ಶ್ರಮ ಒಂದು ಮೌಲ್ಯವಲ್ಲದ ಕಾಲದಲ್ಲಿ ಶೌಚಾಲಯ ಸ್ವಚ್ಛಗೊಳಿಸುತ್ತಿದ್ದ, ಹಾಗೆಯೇ ತಮ್ಮ ಆಶ್ರಮವಾಸಿಗಳಿಗೂ ಕೆಲಸವನ್ನು ಪಾಳಿಯಲ್ಲಿ ಮಾಡಬೇಕೆಂದು ಷರತ್ತು ವಿಧಿಸುತ್ತಿದ್ದ ಗಾಂಧಿ ಅಚ್ಚರಿ ಹುಟ್ಟಿಸುತ್ತಾರೆ. ಕೊಳ್ಳುಬಾಕ ಸಂಸ್ಕೃತಿಯ ಭಾಗ ನಾವಾಗಿ ಹೋಗಲು ನಮ್ಮೊಳಗಿನ ಗಾಂಧಿ ಮರೆಯಾಗುತ್ತಿರುವುದೂ ಕಾರಣವೆ ಎಂದು ಮುಟ್ಟಿ ನೋಡಿಕೊಳ್ಳುವಂತೆ ಮಾಡುತ್ತಾರೆ. ತಾವು ನಂಬಿರುವುದೇ ಪರಮಸತ್ಯವೆಂದು ಮೂಲಭೂತವಾದ ಹರಡುವ ಅಸಹಿಷ್ಣು ಮನಸ್ಸುಗಳ ನಡುವೆ ತನ್ನ ನಿಲುವು-ಚಿಂತನೆಗಳನ್ನು ಸದಾ ಬದಲಿಸಿಕೊಳ್ಳುತ್ತಿದ್ದ, ಸಾಮೂಹಿಕ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಬೋಧಿಸುತ್ತಿದ್ದ ಗಾಂಧಿ ಗಮನ ಸೆಳೆಯುತ್ತಾರೆ.

ವ್ಯಕ್ತಿಯೊಬ್ಬನ ಮಾತು ಮತ್ತು ಕ್ರಿಯೆಗಳು ಜೀವಿತಕಾಲದಲ್ಲಿಯೇ ಪರಸ್ಪರ ಮುಖಾಮುಖಿಯಾದರೆ ಅವನ ಸುತ್ತ ಹುಟ್ಟಬಹುದಾದ ತಿಕ್ಕಾಟಗಳಿಗೆ ಗಾಂಧಿ ಬದುಕು ಉತ್ತಮ ಉದಾಹರಣೆ. ಹೀಗಾಗಿಯೇ ಗಾಂಧಿ ನಿರಂತರವಾಗಿ ಹತ್ಯೆಯಾಗುತ್ತಲೇ ಇದ್ದಾರೆ, ಮತ್ತೆ ಹುಟ್ಟಿ ಬರುತ್ತಲೇ ಇದ್ದಾರೆ, ಇತಿಹಾಸದ ಎಲ್ಲ ಪ್ರಮುಖ ವ್ಯಕ್ತಿಗಳಂತೆಯೇ..

* * *

ಈಗ,

ಸ್ವತಂತ್ರವೆಂಬ ಕೂಸಿಗೆ 65 ವರ್ಷಗಳಾಗಿವೆ. ಪ್ರಜಾಪ್ರಭುತ್ವವೆಂಬ ಗಂಗಾನದಿ ಕಲುಷಿತಗೊಂಡು ಸಾಕಷ್ಟು ಹೊಸನೀರು, ರಾಡಿನೀರು ಹರಿಯತೊಡಗಿದೆ. ವ್ಯವಸ್ಥೆ ಹೇಗೆ ತನ್ನ ವಿರುದ್ಧ ದನಿಯೆತ್ತಿದವರನ್ನು ಒಡೆಯಲು, ಸಡಿಲ ಬಂಧಗಳನ್ನು ಗುರುತಿಸಿ ಕಳಚಲು ಯತ್ನಿಸುತ್ತದೆ ಎನ್ನುವುದಕ್ಕೆ ಬಹಳ ನಿರೀಕ್ಷೆ ಹುಟ್ಟಿಸಿದ್ದ, ರೂಪುಗೊಳ್ಳತೊಡಗಿ ವಿಫಲವಾದ ಅಣ್ಣಾ ಹಜಾರೆ ಚಳವಳಿ ಸಾಕ್ಷಿಯಾಗಿದೆ. ಯಾವ ಅಭಿವೃದ್ಧಿ ಮಾತೇ ಇರಲಿ, ಅಲ್ಲಿ ಕೊನೆಯ ಫಲಾನುಭವಿ ಬಂಡವಾಳಿಗನೇ ಆಗಿದ್ದಾನೆ. ಭ್ರಷ್ಟಾಚಾರದ ವಿರುದ್ಧ ಮಾತನಾಡುತ್ತಲೇ ಬ್ರಹ್ಮಾಂಡ ಭ್ರಷ್ಟಾಚಾರದ ಸರ್ಕಾರೀ ಹಗರಣಗಳಿಗೆ ಬಂಡವಾಳ ಜಗತ್ತು ಕಾರಣವಾಗಿದೆ. ಎನ್‌ಜಿಒಗಳಿಗೆ ನಿಧಿ ಪೂರೈಸುವುದನ್ನು ಸಾಮಾಜಿಕ ಬದ್ಧತೆ ಎನ್ನುವ ಅದು ಉದ್ಯೋಗ ಮೀಸಲಾತಿ ನೀಡಲು ನಿರಾಕರಿಸುತ್ತದೆ. ಹೀಗೆ ಬಂಡವಾಳ ಜಗತ್ತಿನ ಲಾಬಿಯೆದುರು ಪ್ರತಿಭಟನೆಯ ಧ್ವನಿಗಳೇ ಮಂಕಾದಂತೆ ಕಾಣಿಸುತ್ತಿರುವಾಗ ಸಂಘಟನೆಯ ಬಲವಿಲ್ಲದೆ, ಆಯುಧ ಬಲವಿಲ್ಲದೆ, ವ್ಯಕ್ತಿ ತನ್ನೊಳಗಿನ ಅಂತಃಸತ್ವದಿಂದ ಪ್ರತಿಭಟನೆಯನ್ನು ಏಕಾಂಗಿಯಾಗಿ ದಾಖಲಿಸಬೇಕು ಎಂಬ ಗಾಂಧಿ ತತ್ವ ಹಾಗೂ ಸಾಂವಿಧಾನಿಕ ಮತ್ತು ಕಾನೂನು ಬೆಂಬಲವನ್ನೇ ನಂಬಿದ ಅಂಬೇಡ್ಕರ್ ಮೀಸಲಾತಿ ನೀತಿಗಳ ಜೊತೆಗೆ ಮಾರ್ಕ್ಸ್‌ವಾದದ ಬೆಳಕೂ ಅಗತ್ಯ ಎನ್ನುವುದು ಮನದಟ್ಟಾಗುತ್ತಿದೆ.

ಇಂದಿನ ವಿಷಮ ಭಾರತದಲ್ಲಿ, ಅಸಮಾನ ಭಾರತದಲ್ಲಿ, ಯಾವುದಾದರೂ ಒಂದು ತತ್ವ, ಒಂದು ಸಿದ್ಧಾಂತ ದಡ ಮುಟ್ಟಿಸುವ ಸಾಧ್ಯತೆ ಇಲ್ಲ. ಗಾಂಧಿ, ಮಾರ್ಕ್ಸ್, ಅಂಬೇಡ್ಕರ್, ಲೋಹಿಯಾ – ಯಾರೇ ಆಗಲಿ ಪ್ರಜ್ಞಾಪೂರ್ವಕವಾಗಿ ತಮ್ಮ ಸಿದ್ಧಾಂತ ಪ್ರತಿಪಾದಿಸಿದವರಲ್ಲ. ತಮ್ಮ ಜೀವಿತಕಾಲದಲ್ಲಿ ತಾವು ನಂಬಿದ, ಕಂಡುಕೊಂಡ ಸತ್ಯಗಳನ್ನೇ ಮೌಲ್ಯವೆಂದು ಪ್ರತಿಪಾದಿಸಿದರು. ಅವು ಏಕಕಾಲಕ್ಕೆ ವ್ಯಕ್ತಿಯನ್ನೂ, ಸಮಾಜವನ್ನೂ ಒಳಗೊಂಡಿರುವುದರಿಂದ ಇವತ್ತಿಗೂ ಲಕ್ಷಾಂತರ ಜನರನ್ನು ಪ್ರಭಾವಿಸುವ ಶಕ್ತಿ ಹೊಂದಿವೆ. ಅವರ ಚಿಂತನೆಗಳಿಗೆ ಮಿತಿಯಿಲ್ಲವೆಂದಲ್ಲ. ಆದರೆ ಅವುಗಳನ್ನು ಒಟ್ಟಿಗೊಯ್ದರೆ ಹೊಸ ದಾರಿ ಗೋಚರಿಸೀತೇ ಎಂಬ ಹುಡುಕಾಟ ಮುಖ್ಯವಾಗಬೇಕೇ ಹೊರತು ಗ್ರೇಟ್, ಗ್ರೇಟರ್, ಗ್ರೇಟೆಸ್ಟ್ ಎಂಬ ವರ್ಗೀಕರಣ ಅವಶ್ಯವಿಲ್ಲ. ಹೀಗಾಗಿ ನಮಗಿಂದು ದ್ವೀಪವಲ್ಲದ ಗಾಂಧಿ, ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ ಎಲ್ಲರೂ ಬೇಕು.

ಜೊತೆಗೇ, ಗುರುಗಳಾದವರ ಅಭಿವಂದಿಸಿ ಬೀಳ್ಕೊಟ್ಟು ಹೊಸದಾರಿ ತುಳಿಯಬೇಕು. ■

ಎಂ.ಕೆ. ಗಾಂಧಿ: ಅರ್ಥೈಸಿಕೊಳ್ಳುವ ಬಗೆ ಯಾವುದು?

ಗಾಂಧಿಯವರ ಹೆಸರು ಭಾರತೀಯ ಜನತೆಗೆ ಚಿರಪರಿಚಿತ. ಅವರನ್ನು 'ಮಹಾತ್ಮ', 'ಮಹಾತ್ಮ ಗಾಂಧೀಜಿ' 'ಬಾಪು' ಎಂದು ಕರೆಯುವುದೇ ರೂಢಿ. 'ಅಹಿಂಸೆ' ಮತ್ತು 'ಸತ್ಯಾಗ್ರಹ' ಇವುಗಳ ಪ್ರಸ್ತಾಪ ಬಂದಾಗಲೆಲ್ಲ ಗಾಂಧಿಯವರ ಹೆಸರನ್ನೂ; ಗಾಂಧಿಯವರ ಪ್ರಸ್ತಾಪ ಬಂದಾಗಲೆಲ್ಲ 'ಅಹಿಂಸೆ' ಮತ್ತು 'ಸತ್ಯಾಗ್ರಹ'ಗಳನ್ನೂ ನೆನಪಿಸುವ ಪರಿಪಾಠ ಇದೆ. ಇದು ಒಂದು ಕಡೆ ಗಾಂಧಿಯವರ ಬಗ್ಗೆ ನಿರ್ಮಾಣ ಮಾಡಿರುವ ಪ್ರಖ್ಯಾತಿಯೊಂದಿಗೆ ಸೇರಿಕೊಂಡಿದೆ. ಅನೇಕರಿಗೆ ಗಾಂಧಿ ಕೇವಲ ವ್ಯಕ್ತಿ ಅಲ್ಲ; ಅದೊಂದು ದೊಡ್ಡ ಶಕ್ತಿ. ಆ ಶಕ್ತಿಯ ಮುಖಗಳು ಹಲವು. ಅವರ ಬಗ್ಗೆ ಅಭಿಮಾನ, ಪೂಜ್ಯಭಾವನೆ, ಗೌರವ ಹಾಗೂ ಆರಾಧನೆಗಳಿವೆ. ಅವರ ಬಗ್ಗೆ ಭಾರತೀಯ ಸಾಮಾಜಿಕ ಜೀವನದಲ್ಲಿ ಒಂದು ಬಗೆಯ ಮೌಲ್ಯಪ್ರಜ್ಞೆಯನ್ನು ನಿರ್ಮಾಣ ಮಾಡಲಾಗಿದೆ. ಈ ಮೌಲ್ಯಪ್ರಜ್ಞೆಯನ್ನು ಭಾರತೀಯ ಜನತೆ ಪ್ರಶ್ನಾತೀತವೆಂದು ಭಾವಿಸುವಂತೆ ಮಾಡಲಾಗಿದೆ. ಇದು ಬಹುತೇಕ ಅಭ್ಯಾಸ ಬಲದಿಂದ ಕೂಡಿದೆ. ಇದು ಒಂದು ಕಡೆ ಪ್ರಜ್ಞಾಪೂರ್ವಕ ಸ್ಥಿತಿಯಿಂದಲೂ; ಮತ್ತೊಂದು ಕಡೆ ಅಪ್ರಜ್ಞಾಪೂರ್ವಕ ಸ್ಥಿತಿಯಿಂದಲೂ ಕೂಡಿದೆ. ಇದು ಅನೇಕ ಭಾರತೀಯರಿಗೆ ನಂಬಿಕೆಯ ಭಾಗವಾಗಿದೆ. ಸಾಮಾಜಿಕ ಜೀವನದಲ್ಲಿ ಒಂದು ಮೌಲ್ಯಪ್ರಜ್ಞೆ ನಂಬಿಕೆಯ ಸ್ಥಿತಿಯನ್ನು ಪಡೆದರೆ ಅದನ್ನು ಕುರಿತು ಆಳವಾಗಿ ಆಲೋಚಿಸುವುದು ಬಹಳ ಕಷ್ಟವಾಗುತ್ತದೆ. ಅಥವಾ ಇದನ್ನು ಹೀಗೂ ಹೇಳಬಹುದು. ನಂಬಿಕೆಯ ಸ್ಥಿತಿಯನ್ನು ಕುರಿತು ಗಂಭೀರವಾದ ಪ್ರಶ್ನೆಗಳನ್ನು ಎತ್ತುವುದು ತುಸು ಕಷ್ಟವಾಗುತ್ತದೆ. ಇದರ ಅರ್ಥ ಗಾಂಧಿಯವರ ಬಗ್ಗೆ ಯಾರೂ ಪ್ರಶ್ನೆಯನ್ನೇ ಎತ್ತಿಲ್ಲ ಎಂದಲ್ಲ! ಅವರು ಬದುಕಿದ್ದ ಕಾಲದಿಂದ ಇಲ್ಲಿಯವರೆಗೆ ಅವರ ಬಗ್ಗೆ ಒಂದು ಕಡೆ ಸಾಕಷ್ಟು ಸಮರ್ಥನೆಗಳೂ; ಮತ್ತೊಂದು ಕಡೆ ನಿರಾಕರಣೆಗಳೂ ಬಂದಿವೆ; ಬರುತ್ತಲೂ ಇವೆ. ಈ ಅತಿರೇಕಗಳ ನಡುವೆಯೂ ಗಾಂಧಿಯವರು ಮತ್ತೆ ಮತ್ತೆ ಚರ್ಚೆಗೆ, ಸಮರ್ಥನೆ ಮತ್ತು ನಿರಾಕರಣೆಗೆ ಗುರಿಯಾಗುತ್ತಲೆ ಬರುತ್ತಿದ್ದಾರೆ.

ಗಾಂಧಿಯವರ ಬಗೆಗೆ ನಿರ್ಮಾಣ ಮಾಡಿರುವ ಪೂಜ್ಯಭಾವನೆ ಹಾಗೂ ಗೌರವಾದರಗಳು ಆಳುವ ರಾಜಕೀಯದಲ್ಲಿ ಕೇವಲ ದಾಳದಂತೆಯೊ, ಕೇವಲ ಉಪಕರಣದಂತೆಯೊ ಬಳಕೆಯಾಗುತ್ತಿವೆ. ಸರ್ಕಲ್ಲು, ರಸ್ತೆ, ಸಂಘ ಸಂಸ್ಥೆ, ಬಿಲ್ಡಿಂಗ್, ಪಾರ್ಕು ಮುಂತಾದುವುಗಳಿಗೆ ಗಾಂಧಿಯವರ ಹೆಸರನ್ನು ಇಡಲಾಗಿದೆ; ಇಡಲಾಗುತ್ತಿದೆ. ಆ ಮೂಲಕವೂ ಅವರಿಗೆ ಗೌರವ ಸಲ್ಲಿಸುತ್ತೇವೆ ಎಂದು ನಂಬಲಾಗಿದೆ. ಹೋರಾಟದ ರೂಪದ ಪ್ರಶ್ನೆ ಬಂದಾಗ 'ಗಾಂಧಿಯವರು ಮಾಡಿದ್ದು ಅಹಿಂಸಾ ಹೋರಾಟ' ಎಂದು ಹೇಳಲಾಗುತ್ತದೆ. ಆ ಮೂಲಕ ತಾವು ಮಾಡುವ ಹೋರಾಟ 'ಅಹಿಂಸಾತ್ಮಕವಾದುದು' ಎಂಬುದಾಗಿ ನಿರೂಪಿಸಲು ಪ್ರಯತ್ನಿಸಲಾಗುತ್ತದೆ. ಅಂದರೆ ಒಂದಲ್ಲ; ಅನೇಕ ಆಯಾಮಗಳಲ್ಲಿ ಹಾಗೂ ಅನೇಕ ದೃಷ್ಟಿಗಳಲ್ಲಿ ಗಾಂಧಿಯವರನ್ನು ನೆನಪಿಸುವಂತಹ ವಾತಾವರಣವನ್ನು 'ಕಾಯ್ದುಕೊಂಡು' ಬರಲಾಗುತ್ತಿದೆ. ಭಾರತೀಯ ಜನಮಾನಸದಲ್ಲಿ ಅವರ ಹೆಸರು ಸದಾ ನೆನಪಿರುವಂತೆ ಮಾಡುವ ಪ್ರಯತ್ನಗಳು ನಿರಂತರವಾಗಿ ಸಾಗಿವೆ.

ಗಾಂಧಿ ಮತ್ತು ಅವರ ವ್ಯಕ್ತಿತ್ವದ ಬಗ್ಗೆ ನಿರ್ಮಾಣ ಮಾಡಲಾಗಿರುವ ನಂಬಿಕೆಯನ್ನು ತರಾವರಿಯಾಗಿ ನೆನಪು ಮಾಡಿಕೊಳ್ಳುವ ರೂಢಿ ಜಾರಿಯಲ್ಲಿದೆ. ಹೀಗೆ ನೆನಪು ಮಾಡಿಕೊಳ್ಳುವ ವಿಧಾನವನ್ನೆ ಗಾಂಧಿಯವರ ಕುರಿತ ಚರ್ಚೆ ಎಂದೂ ನಂಬಲಾಗಿದೆ. ಹಾಗಾಗಿ ಎಷ್ಟೋ ಸಲ ಆ ನೆನಪಿನ ಮರುಕಳಿಕೆಯನ್ನೆ ಗಾಂಧಿಯನ್ನು ಕುರಿತ ಚರ್ಚೆ ಎಂದು ಹೆಸರಿಸಲಾಗುತ್ತಿದೆ. ಗಾಂಧಿಯವರ ಬಗ್ಗೆ ಸಾರ್ವಜನಿಕ ಅಭಿಪ್ರಾಯದ ಮಟ್ಟದಲ್ಲಿ ಸಾಕಷ್ಟು ಅನಿಸಿಕೆಗಳು ಪ್ರಸ್ತಾಪವಾಗುತ್ತಿವೆ. ಸಾಮಾನ್ಯ ಮಟ್ಟದ ಇಂತಹ ಅನಿಸಿಕೆಗಳನ್ನೇ ಗಾಂಧಿಯವರ ಬಗೆಗಿನ ಆಲೋಚನೆಗಳು ಎಂದು ನಂಬಲಾಗುತ್ತಿದೆ. ಈ ಕೆಲಸ ಬಹಳ ವ್ಯಾಪಕವಾಗಿ ನಡೆಯುತ್ತಿದೆ. ಇನ್ನು ರಾಜಕೀಯ ವಲಯದಲ್ಲಿ ತಮ್ಮ ತಮ್ಮ ವರ್ಗ ಹಿತಾಸಕ್ತಿಗೆ ಅನುಗುಣವಾಗಿ ಗಾಂಧಿಯವರನ್ನು ನೆನಪು ಮಾಡಿಕೊಳ್ಳುವ ಪರಿಪಾಠ ಮುಂದುವರಿದಿದೆ. ಇವೆಲ್ಲವೂ ಗಾಂಧಿಯವರನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿರುವ ತಂತ್ರವನ್ನೆ ತೋರಿಸುತ್ತಿವೆ. ಹಾಗಾಗಿ ಗಾಂಧಿಯವರನ್ನು ಕುರಿತು, ಅವರ ಗಟ್ಟಿಯಾದ ಆಲೋಚನೆಗಳನ್ನು ಕುರಿತು ಚರ್ಚೆ ಮಾಡಲು ಅವಕಾಶ ಕಡಿಮೆಯಾಗಿದೆ. ಗಾಂಧಿಯವರ ಬಗ್ಗೆ ಏನೇ ಮಾತಾಡಿದರೂ ಅದು ಈಗಾಗಲೆ ಸ್ಥಾಪನೆಯಾಗಿರುವ ಸಾಮಾನ್ಯ ಅಭಿಪ್ರಾಯದ ಮತ್ತೊಂದು ರೂಪವಾಗುವ ಸಾಧ್ಯತೆಯೇ ಹೆಚ್ಚು. ಹಾಗಾಗಿ ಗಾಂಧಿಯವರ ಬಗ್ಗೆ ಮಾತಾಡುವಾಗ ಮತ್ತು ಬರೆಯುವಾಗ ಈ ಸಿದ್ಧಮಾದರಿಯ ಅಭಿಪ್ರಾಯದ ಸ್ವರೂಪದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಬಸವಣ್ಣ ಮತ್ತು ಡಾ. ಅಂಬೇಡ್ಕರ್ ಬಗ್ಗೆ ಕೂಡ ಇದೇ ರೀತಿಯ ಸಮಸ್ಯೆ ಮತ್ತು ಮಿತಿ ಇದೆ. ಅದರೊಳಗೇ ಗಿರಕಿ ಹೊಡೆಯುವ ಕೆಲಸ ಮುಂದುವರಿದಿದೆ.



ಎಂ.ಕೆ. ಗಾಂಧಿಯವರನ್ನು 21ನೇ ಶತಮಾನದ ಎರಡನೇ ದಶಕದ ಆರಂಭದಲ್ಲಿ ಅರ್ಥೈಸಿಕೊಳ್ಳುವ ವಿಧಾನ ಯಾವುದು ಎಂಬುದನ್ನು ಕುರಿತು ಕೆಲವು ವಿಚಾರಗಳನ್ನು ಇಲ್ಲಿ ಚರ್ಚಿಸಲಾಗುವುದು. ಗಾಂಧಿಯವರನ್ನು ಹೇಗೆ ಅರ್ಥೈಸಿಕೊಳ್ಳಬೇಕು ಮತ್ತು ಯಾಕೆ ಅರ್ಥೈಸಿಕೊಳ್ಳಬೇಕು ಎಂಬ ಮೂಲಭೂತ ಪ್ರಶ್ನೆಗಳನ್ನು ಇಲ್ಲಿ ಕೇಳಿಕೊಳ್ಳಬೇಕಾಗಿದೆ. ಇದರ ಜೊತೆಗೇ ಅಷ್ಟೇ ಮುಖ್ಯವಾದ ಮತ್ತೊಂದು ಪ್ರಶ್ನೆ ಸಹಜವಾಗಿ ಎದುರಾಗುತ್ತದೆ. ಅದು ಗಾಂಧಿಯವರನ್ನು ಯಾರಿಗಾಗಿ ಅರ್ಥೈಸಿಕೊಳ್ಳಬೇಕು ಎಂಬುದು. ಈ ಮೂರೂ ಪ್ರಶ್ನೆಗಳು ಪ್ರತ್ಯೇಕ ಪ್ರತ್ಯೇಕವಾಗಿರದೆ ಒಂದರೊಳಗೊಂದು ಸೇರಿಕೊಂಡಿವೆ. ಹಾಗಾಗಿ ಒಂದನ್ನು ಕುರಿತ ಚರ್ಚೆ ಮತ್ತೊಂದರೊಂದಿಗೆ ತಳುಕು ಹಾಕಿಕೊಳ್ಳುತ್ತದೆ.

ಕೆಲವು ಅತಿರೇಕಗಳು

ಗಾಂಧಿಯವರನ್ನು ಅರ್ಥೈಸಿಕೊಂಡು ವಿವರಿಸುವುದು ಸುಲಭದ ಮಾತಲ್ಲ ಎಂಬುದನ್ನು ಮೊದಲಿಗೇ ಹೇಳಿಬಿಡಬೇಕು. ಈ ಸಮಸ್ಯೆಗೆ ಮೂಲಭೂತವಾಗಿ ಮೂರು ಆಯಾಮದ ಕಷ್ಟಗಳಿವೆ. ಒಂದು: ಗಾಂಧಿಯವರನ್ನು ಪ್ರಶ್ನಾತೀತವಾಗಿ, ಏಕಮುಖವಾಗಿ ಸಮರ್ಥನೆ ಮಾಡುತ್ತಿರುವುದು; ಒಂದೇ ಸಮನೆ ಹೊಗಳುತ್ತಿರುವುದು, ವೈಭವೀಕರಿಸುತ್ತಿರುವುದು. ಎಲ್ಲಾ ಕಾಲಕ್ಕೂ, ಎಲ್ಲಾ ಸಮಸ್ಯೆಗಳಿಗೂ ಗಾಂಧಿಯವರೇ ಏಕೈಕ ಹಾಗೂ ಸಮರ್ಥ ಉತ್ತರ ಎಂದು ಸರಳೀಕರಿಸಿರುವುದು. ಇದು ಅತ್ಯಂತ ಯಾಂತ್ರಿಕವಾದುದು ಹಾಗೂ ಅತಿರೇಕದ ಅಭಿಮಾನದಿಂದ ಕೂಡಿದುದು. ಎರಡು: ಗಾಂಧಿಯವರನ್ನು ಒಂದೇ ಸಮನೆ ತೆಗಳುತ್ತಿರುವುದು, ತಿರಸ್ಕರಿಸುತ್ತಿರುವುದು, ನಿರಾಕರಿಸುತ್ತಿರುವುದು. ಗಾಂಧಿಯವರ ವರ್ಗಹಿತಾಸಕ್ತಿ ಯಾರ ಪರವಾಗಿತ್ತು ಮತ್ತು ಯಾರ ಪರವಾಗಿರಲಿಲ್ಲ ಎಂಬುದನ್ನು ಆಧರಿಸಿ ಈ ತೀರ್ಮಾನ ಸೃಷ್ಟಿಯಾಗಿದೆ. ಮೂರು: ಗಾಂಧಿಯವರು ನಡೆಸಿದ ಹೋರಾಟದ ಸ್ವರೂಪ, ಅದರ ಸಂಕೀರ್ಣಗಳು ಇವನ್ನು ಇಡಿಯಾಗಿ ಗ್ರಹಿಸಬೇಕಾದ ಸಮಸ್ಯೆ. ಗಾಂಧಿಯವರು ಮಾಡಿದ ಆಲೋಚನೆಗಳ ಸ್ವರೂಪ ಮತ್ತು ಅದರ ನಾನಾ ಮಗ್ಗುಲುಗಳನ್ನು ಗ್ರಹಿಸಬೇಕಾದ ಸಮಸ್ಯೆ.

ಅರ್ಥೈಸಿಕೊಳ್ಳುವ ವಿಧಾನದಲ್ಲಿನ ತೊಡಕುಗಳು, ಸಮಸ್ಯೆಗಳು ಮತ್ತು ಮಿತಿಗಳು

ಗಾಂಧಿಯವರನ್ನೇ ಆಗಲಿ ಅಥವಾ ಆ ಮಟ್ಟದ ಮತ್ಯಾರನ್ನೇ ಆಗಲಿ ಅರ್ಥೈಸಿಕೊಳ್ಳುವ ವಿಧಾನದಲ್ಲಿ ಕೆಲವು ತೊಡಕುಗಳಿವೆ, ಸಮಸ್ಯೆಗಳಿವೆ ಮತ್ತು ಮಿತಿಗಳಿವೆ. ಅಂಬೇಡ್ಕರ್, ಲೋಹಿಯಾ, ಮಾರ್ಕ್ಸ್ ಮತ್ತು ಮಾವೊ ಮುಂತಾದವರನ್ನು ಹಲವು ಬಗೆಗಳಲ್ಲಿ ಅರ್ಥೈಸಿಕೊಳ್ಳಲಾಗಿದೆ. ಅರ್ಥೈಸಿಕೊಳ್ಳುವ ಪ್ರಕ್ರಿಯೆಯಲ್ಲೆ, ಅದರ ವಿಧಾನದಲ್ಲೆ ಹಲವು ವಿಧಾನಗಳು ಯಾಕೆ ನಿರ್ಮಾಣವಾಗುತ್ತವೆ ಎಂಬುದು ರಾಜಕೀಯ ತತ್ವಶಾಸ್ತ್ರದ ಮೂಲಭೂತ ಸಮಸ್ಯೆ. ನಮ್ಮ ಮುಂದಿರುವ ಚಲನಶೀಲ ವಸ್ತುಸ್ಥಿತಿಯನ್ನು ಹೇಗೆ ಅರ್ಥೈಸಿಕೊಳ್ಳುತ್ತೇವೆ, ಯಾವ ಧೋರಣೆಯಿಂದ ಅರ್ಥೈಸಿಕೊಳ್ಳುತ್ತೇವೆ ಎನ್ನುವ ಪ್ರಶ್ನೆ ಬಹಳ ಮುಖ್ಯವಾದುದು. ಈ ಚಲನಶೀಲ ವಸ್ತುಸ್ಥಿತಿಯನ್ನು ವಿವರಿಸಿಕೊಳ್ಳುವ ವಿಧಾನದಲ್ಲೆ ಹಲವು ಸ್ವರೂಪಗಳು ನಿರ್ಮಾಣವಾಗುತ್ತವೆ. ಈ ತಿಳುವಳಿಕೆಯ ಆಧಾರದ ಮೇಲೆ ಗಾಂಧಿಯಂತವರನ್ನು ಅರ್ಥೈಸಿಕೊಳ್ಳುವ ಕೆಲಸ ನಡೆಯುತ್ತದೆ. ಈ ಪ್ರಕ್ರಿಯೆ ಸರಳವಾದುದಲ್ಲ. ಬಹಳ ಸಂಕೀರ್ಣವಾದುದು. ಅದರ ಪ್ರಧಾನ ಸಾಧ್ಯತೆಗಳನ್ನು ಹೀಗೆ ಗುರುತಿಸಬಹುದು. ಪ್ರಸ್ತುತ ಪರಿಸ್ಥಿತಿಯನ್ನು ಅರಿಯುವ ಸಲುವಾಗಿ, ಪ್ರಸ್ತುತ ಪರಿಸ್ಥಿತಿಯನ್ನು ವಿಮರ್ಶೆ ಮಾಡುವ ಸಲುವಾಗಿ, ಪ್ರಸ್ತುತ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡುವ ಸಲುವಾಗಿ, ಪ್ರಸ್ತುತ ಸಮಸ್ಯೆಗಳಿಗೆ ಪರ್ಯಾಯ ರೂಪಿಸುವ ಸಲುವಾಗಿ, ಪ್ರಸ್ತುತ ಪರಿಸ್ಥಿತಿಯನ್ನು ಭಾಗಶಃ ಬದಲಾಯಿಸುವ ಸಲುವಾಗಿ ಹಾಗೂ ಪ್ರಸ್ತುತ ಪರಿಸ್ಥಿತಿಯನ್ನು ಸಮಗ್ರವಾಗಿ ಬದಲಾಯಿಸುವ ಸಲುವಾಗಿ. ಯಾರನ್ನೇ ಅರ್ಥೈಸಿಕೊಳ್ಳುವ ಪ್ರಯತ್ನದ ದಾರಿಯಲ್ಲಿ ಈ ಬಗೆಯ ಸಾಧ್ಯತೆಗಳು ಕಾಣಿಸುತ್ತವೆ.

ಕಳೆದ ಎರಡು ದಶಕಗಳಿಂದ ಗಾಂಧಿ, ಅಂಬೇಡ್ಕರ್, ಮಾರ್ಕ್ಸ್ ಹಾಗೂ ಮಾವೊ ಅವರನ್ನು ಅರ್ಥೈಸಿಕೊಳ್ಳುವ ವಿಧಾನದಲ್ಲಿ ಇದೇ ರೀತಿಯ ಸಮಸ್ಯೆಗಳು ನಿರ್ಮಾಣವಾಗಿವೆ. ಯಾಕೆ ಈ ಬಗೆಯ ಸಮಸ್ಯೆಗಳು ನಿರ್ಮಾಣವಾಗುತ್ತವೆ ಎಂಬುದನ್ನು ಕುರಿತು ಆಲೋಚಿಸುವ ಅಗತ್ಯವಿದೆ. ಕಳೆದ ಶತಮಾನದ 90ರ ದಶಕದ ಪೂರ್ವದಲ್ಲಿ ಒಂದು ಬಗೆಯಲ್ಲಿ ಅರ್ಥೈಸಿಕೊಳ್ಳಲಾಗುತ್ತಿತ್ತು. 90ರ ದಶಕದ ನಂತರ ಜಾಗತೀಕರಣದ ನೀತಿಗಳನ್ನು ಜಾರಿ ಮಾಡಲಾಯಿತು. ಅದರ ಬಗೆಗೆ ಪ್ರಧಾನವಾಗಿ ಎರಡು ತೀರ್ಮಾನಗಳು ಬಂದವು. ಒಂದು ಜಾಗತೀಕರಣ ಅನಿವಾರ್ಯ, ಅಗತ್ಯ ಮತ್ತು ಅದು ಮಾತ್ರವೇ ಭಾರತವನ್ನು ಎಲ್ಲಾ ರೀತಿಯಲ್ಲೂ ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ ಎನ್ನುವುದು. ಮತ್ತೊಂದು ಜಾಗತೀಕರಣ ಅನಗತ್ಯ, ಅದು ಅನಿವಾರ್ಯವಲ್ಲ, ಅದು ಭಾರತವನ್ನು ಎಲ್ಲಾ ರೀತಿಯಲ್ಲೂ ನಾಶ ಮಾಡುತ್ತದೆ ಎಂಬುದು. ಈ ರೀತಿಯಲ್ಲಿ ಜಾಗತೀಕರಣವನ್ನು ವ್ಯಾಪಾರಿ ಜಾಯಮಾನದಲ್ಲಿ ತೀರ್ಮಾನಿಸಲಾಯಿತು.

ಭಾರತದಲ್ಲಿ ಜಾಗತೀಕರಣ ಉಂಟುಮಾಡಿದ ಪರಿಣಾಮಗಳನ್ನು ವಿವರಿಸಿಕೊಂಡು, ಅದು ಉಂಟುಮಾಡಿರುವ ಸಮಸ್ಯೆಗಳಿಗೆ ಪರಿಹಾರ ಮತ್ತು ಪರ್ಯಾಯ ಯಾವುದು ಎಂಬುದನ್ನು ಅಂದಾಜು ಮಾಡಲಾಯಿತು. ಸಾಮಾಜಿಕ ರಾಜಕೀಯ ಚಿಂತನೆಗಳಿಂದ ಕೂಡಿರುವ ಈ ಅಂದಾಜು ಬಹುತೇಕ ಸಿದ್ಧಮಾದರಿಯಲ್ಲಿ ಪರ್ಯಾಯವನ್ನು ಅಪೇಕ್ಷಿಸಿತು. ಅಂದರೆ ಜಾಗತೀಕರಣವು ಉಂಟುಮಾಡಿರುವ ಸಮಸ್ಯೆಗಳಿಗೆ ಗಾಂಧಿಯಲ್ಲಿ, ಅಂಬೇಡ್ಕರರಲ್ಲಿ, ಲೋಹಿಯಾ ಅವರಲ್ಲಿ, ಮಾರ್ಕ್ಸ್ ಹಾಗೂ ಮಾವೊ ಅವರಲ್ಲಿ ಸಿದ್ಧಮಾದರಿಯ ಪರ್ಯಾಯಗಳನ್ನು ಬಯಸಲಾಯಿತು. ಅಂದರೆ ಜಾಗತೀಕರಣದ ಸಮಸ್ಯೆಗಳಿಗೆ ಪರ್ಯಾಯವನ್ನು ಕುರಿತ ಆಲೋಚನೆಯು ಆ ಪರ್ಯಾಯವನ್ನು ಸಿದ್ಧಮಾದರಿಯಲ್ಲಿ ಮಾತ್ರವೇ ಗ್ರಹಿಸಿತು. ಇದು ಯಾಂತ್ರಿಕವೂ, ಸಂಕುಚಿತವೂ ಆದ ಸ್ವರೂಪವನ್ನು ನಿರ್ಮಾಣ ಮಾಡಿತು. ಸಾಮಾಜಿಕ, ರಾಜಕೀಯ ವಲಯದಲ್ಲಿ ಹೀಗೆ ಸಿದ್ಧಮಾದರಿಯ ಪರ್ಯಾಯವನ್ನು ಬಯಸಿ ಅರ್ಥೈಸಿಕೊಳ್ಳಲಾಯಿತು. ಈ ಮಾದರಿಯ ಗ್ರಹಿಕೆಯ ಸ್ವರೂಪವನ್ನು 'ಸಿದ್ಧಮಾದರಿಯ ಪರ್ಯಾಯ' ಎಂದು ಹೆಸರಿಸಬಹುದು. ಈ ಸಿದ್ಧಮಾದರಿಯ ಪರ್ಯಾಯದ ಗ್ರಹಿಕೆ ಮತ್ತು ಅದರ ಅಪೇಕ್ಷೆ ಚಲನಶೀಲ ವಸ್ತುಸ್ಥಿತಿಗೆ ವಿರುದ್ಧವಾದುದು. ಆದರೆ ವರ್ತಮಾನದ ಮಹಾನ್ ವ್ಯಂಗ್ಯವೆಂದರೆ ಇಂದಿನ ಸಮಸ್ಯೆಗಳಿಗೆ ಗಾಂಧಿಯಲ್ಲೊ, ಅಂಬೇಡ್ಕರರಲ್ಲೊ ಸಿದ್ಧಮಾದರಿಯ ಪರ್ಯಾಯವನ್ನು ಬಯಸಲಾಗುತ್ತಿದೆ. ಭೌತಿಕ ಜಗತ್ತಿನಲ್ಲಿ ಎಲ್ಲವನ್ನೂ ಸಿದ್ಧಮಾದರಿಯಲ್ಲೆ ಬಯಸಲಾಗುತ್ತಿದೆ; ಜೊತೆಗೆ ಸ್ವೀಕರಿಸಲಾಗುತ್ತಿದೆ. ಮಾರುಕಟ್ಟೆಯು ಎಲ್ಲವನ್ನೂ ಸರಕನ್ನಾಗಿ ಮಾರ್ಪಡಿಸಿದೆ. ಅವುಗಳನ್ನು ಸಿದ್ಧಮಾದರಿಯಲ್ಲಿ ಮಾರಾಟಕ್ಕೆ ಇಟ್ಟಿದೆ.

ಅವನ್ನು ಕೊಂಡು ಬಳಸಲಾಗುತ್ತಿದೆ. ಇದರ ಪ್ರಭಾವ ಸೈದ್ಧಾಂತಿಕ ಮತ್ತು ರಾಜಕೀಯ ವಿಜ್ಞಾನದಲ್ಲೂ ಕಾಣುತ್ತಿದೆ.

ಗಾಂಧಿಯವರು ನಡೆಸಿದ ಹೋರಾಟಗಳು, ಅವುಗಳ ಹಲವು ರೂಪಗಳು, ಮಾದರಿಗಳು ಇವತ್ತಿಗೂ ಯಥಾವತ್ತಾಗಿ ಪ್ರಸ್ತುತ ಎಂದು ಊಹಿಸಿ ಮಾಡುವುದು ಬೇರೆ. ಅವುಗಳನ್ನು ವಿಮರ್ಶೆ ಮಾಡುವುದು; ಮೌಲ್ಯಮಾಪನ ಮಾಡುವುದು ಹಾಗೂ ಅವುಗಳ ಪ್ರಸ್ತುತತೆಯನ್ನು ಏಕಾಏಕಿ ಸಮರ್ಥಿಸುವುದು ಇದರ ಮುಂದುವರಿದ ಭಾಗ. ಇವತ್ತಿನ ಎಲ್ಲಾ ಸಮಸ್ಯೆಗಳಿಗೆ ಗಾಂಧಿ ಏಕೈಕ ಪರಿಹಾರ ಹಾಗೂ ಏಕೈಕ ಪರ್ಯಾಯ ಎಂದು ಯಾಂತ್ರಿಕ ವಾದ ಮಾಡುವುದು ಬೇರೆ. ಆದರೆ ಗಾಂಧಿಯನ್ನು ಹಾಗೆ ಕೇವಲ ಸಿದ್ಧಮಾದರಿಯ ಪರ್ಯಾಯ ಎಂದು ನೋಡದೆ ಬೇರೆ ಆಯಾಮಗಳ ಮೂಲಕ ನೋಡಬಹುದೆ ಎಂಬುದು ಕುತೂಹಲದ ಮತ್ತು ಆಸಕ್ತಿಯ ಪ್ರಶ್ನೆ.

ಕಳೆದ ಶತಮಾನದ ಆರಂಭದಲ್ಲಿ ಗಾಂಧಿಯವರು ತಮ್ಮ ಆಲೋಚನೆ ಮತ್ತು ಹೋರಾಟಗಳನ್ನು ಶುರುಮಾಡಿದರು. ಅದು ಬ್ರಿಟೀಶರು ಭಾರತದ ಎಲ್ಲಾ ಬಗೆಯ ಸಂಪತ್ತನ್ನು ಲೂಟಿ ಮಾಡುತ್ತಿದ್ದ ಚಾರಿತ್ರಿಕ ಸಂದರ್ಭ. ಅವರು ಮಾಡುತ್ತಿದ್ದ ಲೂಟಿಗೆ ಅನುಗುಣವಾಗಿ ಭಾರತೀಯರ ಮನಸ್ಸು, ಇಚ್ಛೆ, ರುಚಿ, ಅಭಿರುಚಿ, ಪ್ರವೃತ್ತಿ ಹಾಗೂ ಮನೋಭಾವಗಳನ್ನು ಬದಲಾಯಿಸುವ ಕೆಲಸಕ್ಕೂ ಅವರು ಕೈಹಾಕಿದ್ದರು. ಅವರು ಭಾರತವನ್ನು ಭೌತಿಕವಾಗಿ ಮಾತ್ರ ಲೂಟಿ ಮಾಡುತ್ತಿರಲಿಲ್ಲ. ಆ ಲೂಟಿಯಿಂದ ಭೋಗಜೀವನ ಮಾಡುವ ಪ್ರಜ್ಞೆಯನ್ನು ಅವರು ಹುಟ್ಟುಹಾಕುವ ಕೆಲಸದಲ್ಲೂ ತೊಡಗಿದರು. ಈ ಪ್ರಜ್ಞೆ ಭಾರತಕ್ಕೆ ಆ ಮೊದಲು ಇರಲಿಲ್ಲವೆ ಎಂದರೆ, ಖಂಡಿತಾ ಇತ್ತು. ಆದರೆ ಗಾಂಧಿಯವರ ಪ್ರಕಾರ ಬ್ರಿಟೀಶರ ಲೂಟಿಯಿಂದ ಇದು ಇನ್ನೂ ಹೆಚ್ಚಾಯಿತು ಮತ್ತು ವ್ಯಾಪಕವಾಯಿತು. ಭಾರತೀಯರ ಪ್ರಜ್ಞಾಸ್ತರದಲ್ಲಿ ಯುರೋಪಿನ ಹಿತಾಸಕ್ತಿ ಪ್ರಭಾವ ಮಾಡುತ್ತಿದ್ದ ಚಾರಿತ್ರಿಕ ಸಂದರ್ಭವನ್ನು, ಅದರ ಮುಂದಿನ ಪರಿಣಾಮಗಳನ್ನು ಕುರಿತು ಗಾಂಧಿಯವರು ಆಳವಾಗಿ ಚಿಂತಿಸಿದರು. ಇದು ಗಾಂಧಿಯವರ ಇಡೀ ಆಲೋಚನೆ ಮತ್ತು ಆಚರಣೆಯ ಮುಖ್ಯ ಭಾಗವೆಂದು ಗುರುತಿಸಬಹುದು. ಹಾಗಾಗಿಯೇ ಗಾಂಧಿಯವರು ಭಾರತಕ್ಕೆ ಸ್ವಾತಂತ್ರ್ಯ ಬೇಕು ಎನ್ನುವುದಕ್ಕಿಂತಲೂ ಹೆಚ್ಚಾಗಿ 'ಸ್ವರಾಜ್ಯ'ವನ್ನು ನಿರ್ಮಾಣ ಮಾಡಬೇಕು ಎಂದು ಪಣತೊಟ್ಟರು. ಅದಕ್ಕಾಗಿ ಜೀವನವಿಡೀ ಆಲೋಚಿಸಿದರು; ಚಿಂತಿಸಿದರು; ಆ ಕುರಿತು ಬರೆದರು. ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದರು.

ಕಳೆದ ಶತಮಾನದ ಆರಂಭದ ಜಾಗತಿಕ ಚಾರಿತ್ರಿಕ ಸಂದರ್ಭದಲ್ಲಿ ಎರಡು ಪ್ರಧಾನ ಉತ್ಪಾದನ ವಿಧಾನಗಳು ಸೃಷ್ಟಿಯಾದವು. ಒಂದು ಬಂಡವಾಳಶಾಹಿ ಉತ್ಪಾದನಾ ವಿಧಾನ ಮತ್ತು ಬಂಡವಾಳಶಾಹಿ ಉತ್ಪಾದನ ಸಂಬಂಧ. ಮತ್ತೊಂದು ಕಮ್ಯುನಿಸ್ಟ್ ಸಮಾಜವಾದಿ ಉತ್ಪಾದನಾ ವಿಧಾನ ಮತ್ತು ಕಮ್ಯುನಿಸ್ಟ್ ಸಮಾಜವಾದಿ ಉತ್ಪಾದನ ಸಂಬಂಧ. ಇವೆರಡೂ ಕೂಡ ಪ್ರಕ್ರಿಯೆಗಳು ಎಂಬುದನ್ನು ಗಂಭೀರವಾಗಿ ಗಮನದಲ್ಲಿಟ್ಟುಕೊಂಡೇ ಈ ಮಾತನ್ನು ಬರೆಯುತ್ತಿದ್ದೇನೆ. ಇವೆರಡೂ ತದ್ವಿರುದ್ಧ ದಿಕ್ಕಿನಲ್ಲಿ ಬೆಳೆದವು. ಇವೆರಡೂ ಕೂಡ ರಾಜಕೀಯ ಸಾಮಾಜಿಕ ವ್ಯವಸ್ಥೆಯಾಗಿ ಬೆಳೆಯತೊಡಗಿದವು. ಬಂಡವಾಳಶಾಹಿಗೆ ಆ ಊಳಿಗಮಾನ್ಯಶಾಹಿಯೇ ಜನ್ಮ ನೀಡಿತ್ತು. ಆದರೆ ಕಮ್ಯುನಿಸ್ಟ್ ಸಮಾಜವಾದಿ ವ್ಯವಸ್ಥೆಯು ಈ ಎರಡನ್ನೂ ನಾಶ ಮಾಡುವ ಮೂಲಕ ಸಮಾಜದಲ್ಲಿ ಹೊಸದಾಗಿ ನಿರ್ಮಾಣವಾಗಲು ಪ್ರಯತ್ನಿಸಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಬಂಡವಾಳಶಾಹಿಯು ಬಹುಸಂಖ್ಯಾತರನ್ನು ಕೆಲವರು ಮಾತ್ರ ಕಿತ್ತು ತಿಂದು ಬದುಕುವಂತಹದ್ದು. ಸಮಜಾವಾದಿ ವ್ಯವಸ್ಥೆಯು ಹಂಚಿ ಉಣ್ಣುವ ಬದುಕಿನದು. ಸೋವಿಯತ್ ರಷ್ಯಾದಲ್ಲಿ ಸಮಾಜವಾದಿ ಉತ್ಪಾದನ ಸಂಬಂಧಗಳನ್ನು ಜಾರಿಗೆ ತರುವ ರಾಜಕೀಯ ಹೋರಾಟಗಳು ಶಕ್ತಿಶಾಲಿಯಾಗಿ ಆರಂಭವಾಗಿದ್ದವು. ಅದಕ್ಕೆ ತಾತ್ವಿಕ ಬುನಾದಿಯಾಗಿ ಆಗಲೆ ಸಾಕಷ್ಟು ಕ್ರಾಂತಿಕಾರಿ ರಾಜಕೀಯ ಸಾಹಿತ್ಯ ನಿರ್ಮಾಣವಾಗಿತ್ತು. ಇದಕ್ಕೆ ಪೂರಕವಾಗಿ ರಾಜಕೀಯ ಪ್ರಜ್ಞೆ, ಸಾಮಾಜಿಕ ಮನೋಭಾವನೆ, ಅಭಿರುಚಿ ಮುಂತಾದುವನ್ನು ನಿರ್ಮಾಣ ಮಾಡುವ ಕೆಲಸ ಸಾಗಿತ್ತು. ಇನ್ನು ಯುರೋಪಿನಲ್ಲಿ ಬಂಡವಾಳಶಾಹಿ ಉತ್ಪಾದನಾ ವಿಧಾನಗಳು ಹಾಗೂ ಅದರ ಉತ್ಪಾದನಾ ಸಂಬಂಧಗಳು ಬೆಳೆಯುತ್ತಿದ್ದವು. ಅದಕ್ಕೆ ಪೂರಕವಾದ ರಾಜಕೀಯ ಪ್ರಜ್ಞೆ, ಸಾಮಾಜಿಕ ಮನೋಭಾವನೆ, ಅಭಿರುಚಿ ಮುಂತಾದುವನ್ನು ಅಲ್ಲಿ ನೆಲೆ ಊರಿಸಲಾಗಿತ್ತು. ಅಲ್ಲಿ ಅದಕ್ಕೆ ಪೂರಕವಾದ ರಾಜಕೀಯ ಸಾಹಿತ್ಯ ನಿರ್ಮಾಣವಾಗಿತ್ತು.

ಪರಸ್ಪರ ವಿರುದ್ಧ ದಿಕ್ಕಿನ ಈ ಎರಡೂ ಸಾಮಾಜಿಕ ವ್ಯವಸ್ಥೆಗಳನ್ನು ಗಾಂಧಿಯವರು ಬಹಳ ಗಂಭೀರವಾಗಿ ಮತ್ತು ಅಷ್ಟೇ ಎಚ್ಚರಿಕೆಯಿಂದ ಗಮನಿಸಿದರು. ಯುರೋಪಿನ ಬಂಡವಾಳಶಾಹಿಯನ್ನು ಅವರು ಅತ್ಯಂತ ತೀವ್ರವಾಗಿ ಟೀಕಿಸಿದರು ಮತ್ತು ವಿರೋಧಿಸಿದರು. ಆದರೆ ಇದಕ್ಕೆ ವಿರುದ್ಧವಾಗಿ ಕಮ್ಯುನಿಸ್ಟ್ ಅಥವಾ ಸಮಾಜವಾದಿ ಸಾಮಾಜಿಕ ವ್ಯವಸ್ಥೆಯನ್ನು ಇಡಿಯಾಗಿ ಇಲ್ಲವೆ ಯಥಾವತ್ತಾಗಿ ಒಪ್ಪಿಕೊಳ್ಳಲಿಲ್ಲ; ಸಮರ್ಥಿಸಲಿಲ್ಲ. ಊಳಿಗಮಾನ್ಯಶಾಹಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶ ಮಾಡುವ ಮೂಲಕ ಕಮ್ಯುನಿಸ್ಟ್ ಸಮಾಜ ನಿರ್ಮಾಣ ಸಾಧ್ಯ ಎಂಬುದನ್ನು ಆಗಲೆ ಮಾರ್ಕ್ಸಿಸಮ್ ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಾಬೀತುಮಾಡಿತ್ತು. ಆದರೆ ಗಾಂಧಿಯವರಿಗೆ ಈ ವಿಧಾನದ ಬಗ್ಗೆ ಕಿಂಚಿತ್ತೂ ಆಸಕ್ತಿ ಮತ್ತು ಆಯ್ಕೆ ಇರಲಿಲ್ಲ. ಆದರೂ ಭಾರತೀಯರ ಬದುಕು ಹಸನಾಗಬೇಕು ಎಂಬುದರ ಕಡೆಗೆ ಅವರಿಗೆ ಅತ್ಯಂತ ತೀವ್ರವಾದ ಒಲವಿತ್ತು. ಇದಕ್ಕೆ ದಾರಿ ಯಾವುದು ಎಂಬುದರ ಬಗ್ಗೆ ಅವರು ಆಲೋಚಿಸಿದರು.

ಇಂಗ್ಲಿಶರನ್ನು ಭಾರತದಿಂದ ಹೊರಹೋಗುವಂತೆ ಮಾಡಿದ ಮಾತ್ರಕ್ಕೆ ಭಾರತೀಯರ ಸಮಸ್ಯೆ ಬಗೆಹರಿದಂತೆ ಎಂಬುದರಲ್ಲಿ ಗಾಂಧಿಯವರಿಗೆ ಎಳ್ಳಷ್ಟೂ ನಂಬಿಕೆ ಇರಲಿಲ್ಲ. ಇಂಗ್ಲಿಶರು ತಮಗೆ ಬೇಕಾದುದನ್ನು ಭಾರತೀಯರಿಗೆ ಕೊಡುತ್ತಾರೆನ್ನೋಣ, ಅಂದ ಮಾತ್ರಕ್ಕೆ ಅವರನ್ನು ನಾವು ಒಪ್ಪಿಕೊಳ್ಳಬೇಕಿಲ್ಲ. ಆದರೆ ಭಾರತೀಯರಿಗೆ ಬೇಕಾದುದನ್ನು ಅವರು ಮಾಡುವಂತಿರಬೇಕು ಎಂಬುದು ಗಾಂಧಿಯವರ ಆಲೋಚನೆ ಹಾಗೂ ಅಪೇಕ್ಷೆಯಾಗಿತ್ತು. 'ನಮಗೆ ಇಂಗ್ಲಿಶ್ ರಾಜ್ಯ ಬೇಕು; ಇಂಗ್ಲಿಶರು ಬೇಡ, ಹುಲಿಯ ಗುಣ ಬೇಕು, ಹುಲಿ ಮಾತ್ರ ಬೇಡ. ಎಂದರೆ ಹಿಂದೂಸ್ಥಾನವನ್ನು ಇಂಗ್ಲಿಶಾಗಿ ಮಾಡಬೇಕು. ಆಗ ಇದು ಹಿಂದೂಸ್ಥಾನವಲ್ಲ, ಇಂಗ್ಲಿಶ್‌ಸ್ಥಾನವಾದೀತು. ಇಂತಹ ಸ್ವರಾಜ್ಯ ನನಗೆ ಬೇಡ'. ಇದು ಗಾಂಧಿಯವರ ಖಚಿತ ನಿಲುವಾಗಿತ್ತು.

ಬಂಡವಾಳಶಾಹಿ ಆಧುನಿಕ ನಾಗರೀಕತೆಯನ್ನು ಗಾಂಧಿಯವರು ಅತ್ಯಂತ ತೀವ್ರವಾಗಿ ವಿಮರ್ಶಿಸಿದರು ಮತ್ತು ವಿರೋಧಿಸಿದರು. ಅವರ ಮುಂದಿನ ಮಾತುಗಳನ್ನು ಇಲ್ಲಿ ಗಮನಿಸಬಹುದು. 'ಆಧುನಿಕ ನಾಗರಿಕತೆಯ ಮೋಹಜಾಲದಲ್ಲಿ ಸಿಕ್ಕಿರುವವರು ಅದರ ವಿರುದ್ಧವಾಗಿ ಬರೆದಾರೆಯೇ? ಅವರು ಅದರ ಸಮರ್ಥನೆಗೆ ಬೇಕಾದ ವಿಷಯ ತರ್ಕಗಳನ್ನೇ ಹುಡುಕಲು, ಅದರಲ್ಲಿ ತಮಗಿರುವ ನಂಬಿಕೆಯಿಂದ ತಮಗೇ ಗೊತ್ತಿಲ್ಲದೆಯೆ, ಪ್ರಯತ್ನಿಸಿಯಾರು. ಕನಸು ಬಿದ್ದವನಿಗೆ ಕನಸು ಸತ್ಯವೆಂದೇ ಕಾಣುತ್ತದೆ. ನಿದ್ದೆಯಿಂದ ಎಚ್ಚರವಾದಾಗ ಸತ್ಯ ತಿಳಿಯುತ್ತದೆ. ಈ ನಾಗರಿಕತೆಯ ಶಾಪ ತಗುಲಿದವನು ಕನಸು ಬಿದ್ದ ಮನುಷ್ಯನ ಹಾಗೆ. ಈ ನಾಗರಿಕತೆಯಲ್ಲಿ ಬದುಕುವ ಜನರಿಗೆ ಶರೀರ ಸುಖವೇ ಬಾಳಿನ ಗುರಿ; ಇದೇ ಅದರ ಲಕ್ಷಣ. ಶರೀರ ಸುಖವೇ ಪುರುಷಾರ್ಥ'. ಬರುಬರುತ್ತಾ ಜನರು ಕೈಕಾಲು ಬಳಸುವ ಅಗತ್ಯವೇ ಇಲ್ಲ. ಒಂದು ಗುಂಡಿ ಒತ್ತಿದರೆ ಅವರ ಉಡುಪೆಲ್ಲ ಸಿದ್ಧವಾಗಿ ಬಂದು ನಿಲ್ಲುತ್ತದೆ. ಇನ್ನೊಂದು ಗುಂಡಿ ಒತ್ತಿದರೆ ಪತ್ರಿಕೆ ಬರುತ್ತದೆ. ಮತ್ತೊಂದು ಗುಂಡಿಯೊತ್ತಿದರೆ ಮೋಟಾರು ಸಿದ್ಧ'. ಗಾಂಧಿಯವರು ಶರೀರ ಶ್ರಮಕ್ಕೆ ಹೆಚ್ಚಿನ ಆದ್ಯತೆ ಇರಬೇಕೆಂಬುದನ್ನು ಒತ್ತಿ ಹೇಳಿದರು. ಒಬ್ಬರ ದುಡಿಮೆಯ ಮೇಲೆ ಮತ್ತೊಬ್ಬರು ಬದುಕುವುದನ್ನು ಅವರು ತೀವ್ರವಾಗಿ ವಿರೋಧಿಸಿದರು. 'ಮೊದಲು ಜನರು ಬಯಲಿನಲ್ಲಿ ತಮ್ಮ ಇಚ್ಛಾನುಸಾರ ಕೆಲಸ ಮಾಡುತ್ತಿದ್ದರು. ಈಗ ಸಾವಿರಾರು ಜನ ಒಟ್ಟಿಗೆ ಸೇರಿ ಹೊಟ್ಟೆಪಾಡಿಗಾಗಿ ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಕೆಲಸ ಮಾಡುತ್ತಾರೆ. ಅವರ ಗತಿ ದನಗಳಿಗಿಂತ ಅಧಮ. ತಮ್ಮ ಜೀವನದ ಆಸೆ ಬಿಟ್ಟು ಅತ್ಯಂತ ಅಪಾಯಕರ ಕೆಲಸಗಳನ್ನು ಧಣಿಗಳಾದ ಕೋಟೀಶ್ವರರಿಗಾಗಿ ಅವರು ಮಾಡಬೇಕಾಗುತ್ತದೆ. ನಾವು ತಾಳ್ಮೆಯಿಂದ ಇದ್ದರೆ ಈ ನಾಗರಿಕತೆ ತನ್ನ ಬೆಂಕಿಗೆ ತಾನೇ ಸುಟ್ಟು ಬೂದಿಯಾಗುತ್ತದೆ. ಮಹಮದ್ ಪೈಗಂಬರ್ ಇದನ್ನು ಸೈತಾನೀ ನಾಗರಿಕತೆ ಎಂದ. ಹಿಂದೂ ಧರ್ಮ ಇದನ್ನು ಕಲಿಯುಗ ಎನ್ನುತ್ತದೆ.' ಗಾಂಧಿಯವರು ತಮ್ಮ ಈ ಮಾತುಗಳಲ್ಲಿ ಧಣಿಗಳ ಸುಖಕ್ಕೆ ಸಾವಿರಾರು ಜನರು ದುಡಿಯುವುದನ್ನು ವಿರೋಧಿಸುತ್ತಿದ್ದಾರೆ. ಆ ಮೂಲಕ ಗಾಂಧಿಯವರು ಮೂಲಭೂತವಾಗಿ ಶ್ರಮ ಶೋಷಣೆಯನ್ನು ವಿರೋಧಿಸುತ್ತಿದ್ದಾರೆ.

ರೈಲು, ವೈದ್ಯರು ಮತ್ತು ವಕೀಲರನ್ನು ಗಾಂಧಿಯವರು ಅತ್ಯಂತ ತೀವ್ರವಾಗಿ ವಿಮರ್ಶಿಸಿದರು ಮತ್ತು ವಿರೋಧಿಸಿದರು. 'ರೈಲು, ವಕೀಲರು, ವೈದ್ಯರು ಹಿಂದೂಸ್ಥಾನವನ್ನು ಕಂಗಾಲದೇಶವಾಗಿ ಮಾಡಿದಾರೆ. ಈಗಲೇ ನಾವು ಎಚ್ಚೆರದಿದ್ದರೆ ಸರ್ವನಾಶವಾದೀತು. ಈ ರೈಲುಗಳು ಇರದಿದ್ದರೆ, ಇಂಗ್ಲಿಶರು ಹಿಂದೂಸ್ಥಾನವನ್ನು ಇಷ್ಟುಮಟ್ಟಿಗೆ ಅಧೀನದಲ್ಲಿ ಇಟ್ಟುಕೊಂಡಿರಲು ಆಗುತ್ತಿರಲಿಲ್ಲ. ರೈಲು ನಮ್ಮ ದೇಶದಲ್ಲಿ ಪ್ಲೇಗನ್ನು ಹರಡಿತು. ರೈಲು ಇರದಿದ್ದರೆ ನಮ್ಮ ಜನಕೋಟಿ ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ

ಗಾಂಧಿಯವರು ನಡೆಸಿದ ಹೋರಾಟಗಳು, ಅವುಗಳ ಹಲವು ರೂಪಗಳು, ಮಾದರಿಗಳು ಇವತ್ತಿಗೂ ಯಥಾವತ್ತಾಗಿ ಪ್ರಸ್ತುತ ಎಂದು ಒಣಹಠ ಮಾಡುವುದು ಬೇರೆ. ಅವುಗಳನ್ನು ವಿಮರ್ಶೆ ಮಾಡುವುದು; ಮೌಲ್ಯಮಾಪನ ಮಾಡುವುದು ಹಾಗೂ ಅವುಗಳ ಪ್ರಸ್ತುತತೆಯನ್ನು ಏಕಾಏಕಿ ಸಮರ್ಥಿಸುವುದು ಇದರ ಮುಂದುವರಿದ ಭಾಗ. ಇವತ್ತಿನ ಎಲ್ಲಾ ಸಮಸ್ಯೆಗಳಿಗೆ ಗಾಂಧಿ ಏಕೈಕ ಪರಿಹಾರ ಹಾಗೂ ಏಕೈಕ ಪರ್ಯಾಯ ಎಂದು ಯಾಂತ್ರಿಕ ವಾದ ಮಾಡುವುದು ಬೇರೆ. ಆದರೆ ಗಾಂಧಿಯನ್ನು ಹಾಗೆ ಕೇವಲ ಸಿದ್ಧಮಾದರಿಯ ಪರ್ಯಾಯ ಎಂದು ನೋಡದೆ ಬೇರೆ ಆಯಾಮಗಳ ಮೂಲಕ ನೋಡಬಹುದೆ ಎಂಬುದು ಕುತೂಹಲದ ಮತ್ತು ಆಸಕ್ತಿಯ ಪ್ರಶ್ನೆ.

ಓಡಾಡಲು ಆಗುತ್ತಿರಲಿಲ್ಲ. ಈ ಅಂಟುರೋಗಗಳೂ ಹರಡುತ್ತಿರಲಿಲ್ಲ'. ಇನ್ನು ವಕೀಲರ ಬಗೆಗಿನ ಗಾಂಧಿಯವರ ಆಲೋಚನೆ ಹೀಗಿದೆ. 'ಪರರ ದುಃಖ ನಿವಾರಣೆಗಾಗಿ ಯಾರೂ ವಕೀಲಿ ಮಾಡುವುದಿಲ್ಲ; ಹಣ ಗಳಿಸಲು ಮಾಡುತ್ತಾರೆ. ಐಶ್ವರ್ಯ ಸಂಪಾದನೆಗೆ ಇದೊಂದು ದಾರಿಯಾಗಿದೆ. ಜಗಳ ಹೆಚ್ಚಾದರೆ ಅವರಿಗೆ ಲಾಭ ಹೆಚ್ಚು'. ವೈದ್ಯರ ಬಗೆಗೆ ಗಾಂಧಿಯವರ ಆಲೋಚನೆ ಹೀಗಿದೆ. 'ಆಸ್ಪತ್ರೆಗಳು ಪಾಪದ ತವರು. ಅದರಿಂದ ಜನರು ತಮ್ಮ ಶರೀರದ ಬಗ್ಗೆ ಅಶ್ರದ್ಧೆ ತೋರುತ್ತಾರೆ. ಅನೀತಿ ಹೆಚ್ಚುತ್ತದೆ. ಇಂಗ್ಲಿಶ್ ವೈದ್ಯರಂತೂ ಎಲ್ಲರಿಗಿಂತ ಕೀಳು. ಮನುಷ್ಯ ಶರೀರದ ರಕ್ಷಣೆಯ ಭ್ರಾಂತಿಗಾಗಿ ಪ್ರತಿವರ್ಷವೂ ಸಾವಿರಾರು ಪ್ರಾಣಿಗಳನ್ನು ಕೊಲ್ಲುತ್ತಾರೆ. ದೇಹಕ್ಕೆ ಬರಬಹುದಾದ ರೋಗಗಳ ನಿವಾರಣೆ ವೈದ್ಯರ ಕೆಲಸ. ಈ ರೋಗಗಳು ಹೇಗೆ ಬರುತ್ತವೆ? ನಮ್ಮ ಅಸಡ್ಡೆಯಿಂದ ಅಥವಾ ಅತ್ಯುಪಯೋಗದಿಂದ. ನಾನು ಹೊಟ್ಟೆ ಬಿರಿಯೆ ತಿಂದೆ, ಅಜೀರ್ಣವಾಯಿತು. ವೈದ್ಯನ ಬಳಿಗೆ ಹೋದೆ. ಔಷಧಿ ಕುಡಿದೆ, ಗುಣವಾಯಿತು. ಮತ್ತೆ ಹೊಟ್ಟೆ ಬಿರಿಯೆ ತಿಂದೆ, ಮತ್ತೆ ವೈದ್ಯನ ಗುಳಿಗೆ ತಿಂದೆ'. ಹೀಗೆ ಇದರ ಸರಣಿ ಮುಂದುವರಿಯುತ್ತದೆ. ದೇಹಕ್ಕೆ ಅನಗತ್ಯವಾದುದನ್ನು ಮತ್ತು ರುಚಿಯಾಗಿರುವುದನ್ನು ತಿನ್ನುವುದರ ಮೂಲಕ ರೋಗಗಳು ಬರುತ್ತವೆ ಹಾಗೂ ಹೆಚ್ಚುತ್ತವೆ ಎಂಬುದು ಗಾಂಧಿಯವರ ಆಲೋಚನೆ.

ಗಾಂಧಿಯವರು ಇಂಗ್ಲಿಶರನ್ನು ಮಾತ್ರವೆ ವಿರೋಧಿಸಲಿಲ್ಲ. ಅವರ ಈ ಮಾತುಗಳನ್ನು ಗಮನಿಸಬೇಕು. 'ಈಗ ಎಷ್ಟೋ ದೇಶೀ ಸಂಸ್ಥಾನಗಳಲ್ಲಿ ಪ್ರಜೆ ಹಿಟ್ಟು ಹಿಟ್ಟಾಗಿದಾರೆ ಎಂಬುದನ್ನು ನೀವು ಒಪ್ಪುತ್ತೀರಷ್ಟೆ. ಆ ರಾಜರು ಬಹಳ ನಿರ್ದಯವಾಗಿ ಜನರನ್ನು ತುಳಿಯುತ್ತಿದ್ದಾರೆ. ಇಂಗ್ಲಿಶರಿಗಿಂತ ಅವರ ದಬ್ಬಾಳಿಕೆ ಹೆಚ್ಚಾಗಿದೆ. ಅಂತಹ ದಬ್ಬಾಳಿಕೆ ಹಿಂದೂಸ್ಥಾನದಲ್ಲಿ ಇರಬೇಕು ಎಂದರೆ ನಮಗೆ ಏಕಾಭಿಪ್ರಾಯ ಸಾಧ್ಯವೇ ಇಲ್ಲ. ಇಂಗ್ಲಿಶರು ಹೊರಟು ಹೋಗಲಿ, ದೇಶೀ ರಾಜರ ಈ ದಬ್ಬಾಳಿಕೆಗೆ ತುತ್ತಾಗಿ ಜನ ಹುಡಿಯಾಗಲಿ ಎಂದು ನನ್ನ ದೇಶಾಭಿಮಾನ ನನಗೆ ಕಲಿಸಿಲ್ಲ. ನನಗೆ ಶಕ್ತಿಯಿದ್ದರೆ ಇಂಗ್ಲಿಶರನ್ನು ವಿರೋಧಿಸುವಂತೆಯೇ ಈ ರಾಜರ ದೌರ್ಜನ್ಯವನ್ನೂ ವಿರೋಧಿಸುತ್ತೇನೆ'.

ಸಭ್ಯತೆ ಮತ್ತು ಸತ್ಯಾಗ್ರಹದ ಬಗ್ಗೆ ಗಾಂಧಿಯವರ ಆಲೋಚನೆಗಳು ಹೀಗಿವೆ. 'ಮನುಷ್ಯನಿಗೆ ಕರ್ತವ್ಯ ತೋರಿಸುವ ಆಚಾರವೇ ಸಭ್ಯತೆ. ಕರ್ತವ್ಯ ಪಾಲನೆ ನೀತಿಪಾಲನೆಯೆ. ನೀತಿಪಾಲನೆಯೆಂದರೆ ಇಂದ್ರಿಯ ನಿಗ್ರಹ, ರಾಗದ್ವೇಷಗಳ ಸಂಯಮ. ಹಾಗೆ ನಡೆದರೆ ನಮ್ಮನ್ನು ನಾವು ಅರಿತುಕೊಳ್ಳುತ್ತೇವೆ. ಸಭ್ಯತೆ ಎಂದರೆ ಒಳ್ಳೆಯ ನಡತೆ'. 'ಸ್ವಯಂ ಕಷ್ಟ ಸಹಿಸಿ ತಮ್ಮ ಅಧಿಕಾರಗಳನ್ನು ಗಳಿಸುವ ಪದ್ಧತಿ ಸತ್ಯಾಗ್ರಹ. ನನಗೆ ಇಷ್ಟವಿಲ್ಲದ ಕೆಲಸವನ್ನು ನಾನು ಮಾಡುವುದಿಲ್ಲ ಎಂದರೆ ಆತ್ಮಬಲವನ್ನು ಪ್ರಯೋಗಿಸಿದ ಹಾಗೆ, ಸತ್ಯಾಗ್ರಹ ಮಾಡಿದ ಹಾಗೆ'. 'ಶಿಕ್ಷಣ ಎಂದರೇನು? ಕೇವಲ ಅಕ್ಷರಜ್ಞಾನ ಎಂದರೆ ಅದೊಂದು ಆಯುಧವಾಯಿತು. ಆಯುಧವನ್ನು ಸದುಪಯೋಗ ಮಾಡಲೂಬಹುದು. ದುರುಪಯೋಗ ಮಾಡಲೂಬಹುದು. ಒಂದೇ ಆಯುಧದಿಂದ ರೋಗಿಯನ್ನು ವಾಸಿ ಮಾಡಲೂಬಹುದು. ಕೊಂದು ಹಾಕಲೂಬಹುದು. ಈ ಇಂಗ್ಲಿಶ್ ಶಿಕ್ಷಣ ಪಡೆದು ನಾವು ದೇಶವನ್ನು ಗುಲಾಮತನಕ್ಕೆ ಈಡುಮಾಡಿದ್ದೇವೆಂಬುದು ಗಮನಿಸಬೇಕಾದ ಮಾತು. ರಾಗದ್ವೇಷ, ಅಸತ್ಯ, ದೌರ್ಜನ್ಯಗಳು ಹೆಚ್ಚಿವೆ. ಇಂಗ್ಲಿಶ್ ಕಲಿತ ಭಾರತೀಯರು ಜನರನ್ನು ಮೋಸಗೊಳಿಸಲು, ಬೆದರಿಸಲು ನಿಸ್ಸಂದೇಹವಾಗಿ ಯತ್ನಿಸಿದ್ದಾರೆ. ನಿಜವಾದ ಸ್ವರಾಜ್ಯ ಎಂದರೆ ಆತ್ಮರಾಜ್ಯ ಅಥವಾ ಆತ್ಮಸಂಯಮ'.

ವ್ಯವಸ್ಥೆಯ ಭೌತಿಕ ಪರಿಸರವನ್ನು ಬದಲಿಸಿದರೆ ಉಳಿದವು ಅದಕ್ಕೆ ಪೂರಕವಾಗಿ ಬದಲಾಗುತ್ತವೆ ಎನ್ನುವುದು ಒಂದು ಆಲೋಚನಾಧಾರೆ. ಆದರೆ ಗಾಂಧಿಯವರದ್ದು ಇದಕ್ಕೆ ತದ್ವಿರುದ್ಧ. ವ್ಯಕ್ತಿಯ ಅಂತರಂಗದ ಪರಿಸರವನ್ನು ಅವನ ಒಳಿತಾಗಿ ಸಜ್ಜುಗೊಳಿಸಬೇಕು ಎಂಬುದು ಇವರ ಆಲೋಚನೆ. ಬೇರೆ ಕೋನದಿಂದ ಹೇಳುವುದಾದರೆ ಗಾಂಧಿಯವರು 'ಸಿದ್ಧಮಾದರಿಯ ಪರ್ಯಾಯ'ವನ್ನು ಮಂಡಿಸುತ್ತಿಲ್ಲ.

ಗಾಂಧಿಯವರು ತಮ್ಮ ಆಲೋಚನೆಗಳನ್ನು ಸಿದ್ಧಾಂತದ ರೂಪದಲ್ಲಿ ಮಂಡಿಸಿಲ್ಲ. ಹಾಗಾಗಿ ಬಿಡಿಬಿಡಿಯಾಗಿ ಹರಿದುಹಂಚಿ ಹೋಗಿರುವಂತೆ ಕಾಣುವ ಅವರ ಆಲೋಚನೆಗಳಿಗೆ ಏನೂ ಶಕ್ತಿಯೇ ಇಲ್ಲವೇನೊ ಎಂಬಂತೆ ಅನೇಕ ಸಲ ಭಾಸವಾಗುತ್ತದೆ. ಹಾಗೆಂದು ಗಾಂಧಿಯವರ ಅಷ್ಟೂ ಆಲೋಚನೆಗಳನ್ನು ಒಟ್ಟಾಗಿ ಗ್ರಹಿಸುವ ಮೂಲಕ ಅವರ ಒಟ್ಟಾರೆ ಆಲೋಚನೆಗಳ ಚಿಂತನಾಧಾರೆಯ ಸ್ವರೂಪವನ್ನು ನಾವು ಕಟ್ಟಬಹುದು. ಆ ಮಾತು ಬೇರೆ. ಆದರೆ ಗಾಂಧಿಯವರೇ ತಮ್ಮ ವಿಚಾರಗಳನ್ನು ವಾದದ ರೂಪದಲ್ಲಿ ಮಂಡಿಸುವುದಿಲ್ಲ. ಇದಕ್ಕೆ ಪೂರಕವೆಂಬಂತೆ ಅವರ ಸ್ವರಾಜ್ಯದ ಕಲ್ಪನೆಯೂ ಕೂಡ ವ್ಯಕ್ತಿಗಳ ಆತ್ಮಸಂಯಮಕ್ಕೆ ಸಂಬಂಧಿಸಿದುದು. ಗಾಂಧಿಯವರಿಗೆ ಅದನ್ನೊಂದು ಸರಕಾರಿ ಕಾರ್ಯಕ್ರಮದ ರೂಪದಲ್ಲಿ ಸಂಯೋಜಿಸಿ, ಜಾರಿಗೆ ತರುವ ವಿಧಾನದಲ್ಲಿ ನಂಬಿಕೆ ಇರಲಿಲ್ಲ. ಹಾಗಾಗಿಯೇ ಅವರು ತಮ್ಮ ಕಲ್ಪನೆಯ ಸ್ವರಾಜ್ಯದ ನಿರ್ಮಾಣವನ್ನು ಬಿಡಿಬಿಡಿಯಾದ ಆಲೋಚನೆಗಳ ಮೂಲಕ ವಿವರಿಸಲು ಪ್ರಯತ್ನಿಸಿದರು.

ನಮಗೆ ಬೇಕಾದುದನ್ನು ಗಾಂಧಿಯವರು ವಾದದ ರೂಪದಲ್ಲಿಯೊ, ಸಿದ್ಧಾಂತದ ರೂಪದಲ್ಲಿಯೊ ಸಿದ್ಧಮಾದರಿಯಲ್ಲಿ ಏನಾದರೂ ಹೇಳಿದ್ದಾರೆಯೆ ಎಂದು ನೋಡಿದರೆ, ಆಗ ನಮ್ಮ ನಿರೀಕ್ಷೆ ಹುಸಿಯಾಗುತ್ತದೆ. ಗಾಂಧಿಯವರ ಬಗ್ಗೆ ನಿರಾಸಕ್ತಿ ಉಂಟಾಗುತ್ತದೆ. ಆದರೆ ಗಾಂಧಿಯವರು ಆಲೋಚನೆ ಮಾಡಿದ್ದೇನೆ? ಅವರು ಯಾಕೆ ಹಾಗೆ ಆಲೋಚನೆ ಮಾಡಿದರು? ಎಂಬುದನ್ನು ಕುರಿತು ತಣ್ಣಗೆ ಚಿಂತಿಸುವ ಅಗತ್ಯವಿದೆ. ಹಾಗೆ ನೋಡಿದರೆ ತಾತ್ವಿಕವಾಗಿ 'ಗಾಂಧಿವಾದ' ಎಂಬುದರ ಸ್ವರೂಪವನ್ನು ಸೂತ್ರೀಕರಿಸುವುದು ಕಷ್ಟವೇ ಸರಿ. ಏಕಸ್ವಾಮ್ಯ ಬಂಡವಾಳ ಮತ್ತು ಹಣಕಾಸು ಬಂಡವಾಳಗಳೇ ಇಡೀ ಜಗತ್ತನ್ನು ಆಳುತ್ತಿರುವ ಈ ಸಂದರ್ಭದಲ್ಲಿ ಗಾಂಧಿಯವರು ನಡೆಸಿದ ಹೋರಾಟಗಳನ್ನೊ, ಅವರ ಬಿಡಿಬಿಡಿಯಾದ ಆಲೋಚನೆಗಳನ್ನೊ ಇಟ್ಟು ನೋಡುವುದು ಬಹಳ ಕಷ್ಟದ ಕೆಲಸ. ಹೆಚ್ಚೆಂದರೆ ಯಾಂತ್ರಿಕವಾಗಿ ಜಾಗತೀಕರಣಕ್ಕೆ ವಿರುದ್ಧವಾಗಿ ಗಾಂಧಿಯವರನ್ನು ಸರಳವಾಗಿ ಸಮರ್ಥಿಸಿ ಬಿಡಬಹುದು. ಇಲ್ಲವಾದರೆ ಸಾಮ್ರಾಜ್ಯಶಾಹಿಯ ಎಲ್ಲಾ ವಿಕೃತಿಗಳ ಎದುರು ಗಾಂಧಿಯವರ ಯಾವುದೇ ಆಲೋಚನೆಗೆ ಸ್ಥಾನವೇ ಇಲ್ಲ ಎಂದು ಸುಲಭವಾಗಿ ತಳ್ಳಿಹಾಕಿಬಿಡಬಹುದು. ಈ ಸರಳವೂ ಮತ್ತು ಯಾಂತ್ರಿಕವೂ ಆದ ಅತಿರೇಕಗಳ ನಡುವೆ ಗಾಂಧಿಯವರನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗುತ್ತದೆ.

ಸಿದ್ಧಮಾದರಿ ಪರ್ಯಾಯಗಳ ಕಾಲ ಸಂದರ್ಭದಲ್ಲಿ ಪ್ರಕ್ರಿಯೆಗಳು ಕಣ್ಣಿಗೆ ಕಾಣುವುದಿಲ್ಲ ಹಾಗೂ ಅವು ಹಿಡಿಸುವುದೂ ಇಲ್ಲ. ಗಾಂಧಿಯವರು ವ್ಯಕ್ತಿತ್ವದ ನಿರ್ಮಾಣವನ್ನು ಕುರಿತು ಆಲೋಚನೆ ಮಾಡಿದರು. ವ್ಯಕ್ತಿಯ ಮೂಲಕ ಸಮಾಜ ನಿರ್ಮಾಣ ಎಂಬುದರಲ್ಲಿ ಅವರಿಗೆ ಹೆಚ್ಚು ಆಸಕ್ತಿ. ಗಾಂಧಿಯವರ ಮೂಲಭೂತ ವಿಚಾರಗಳು ಅವರ 'ಹಿಂದ್ ಸ್ವರಾಜ್ಯ' ಕೃತಿಯಲ್ಲಿ ಮಂಡಿತವಾಗಿವೆ. 1908ರಲ್ಲಿ ಅವರು ಅದನ್ನು ಬರೆದರು. 1931ರ ಹೊತ್ತಿನಲ್ಲಿ ಅದರ ಒಂದು ಅಕ್ಷರವನ್ನೂ ಬದಲಿಸಲಾರೆ ಎಂದು ಒತ್ತಿಹೇಳಿದರು. ಗಾಂಧಿಯವರಿಗೆ ಆ ಕೃತಿ ಅಷ್ಟು ಮಹತ್ವದ್ದಾಗಿತ್ತು. ಅದನ್ನು ಕುರಿತು ನೆಹರೂ ಅವರು 1945ರ ಅಕ್ಟೋಬರ್ 9ರಂದು ಗಾಂಧಿಯವರಿಗೆ ಬರೆದ ಪತ್ರದ ಒಂದು ಭಾಗವನ್ನು ಇಲ್ಲಿ ಉಲ್ಲೇಖಿಸಬೇಕು.

'... ನಾನು ಹಿಂದ್ ಸ್ವರಾಜ್ ಓದಿದ್ದು ಅನೇಕ ವರ್ಷಗಳ ಹಿಂದೆ. ನನ್ನ ಮನಸ್ಸಿನಲ್ಲಿ ಅದರ ಅಸ್ಪಷ್ಟ ಚಿತ್ರವಿದೆ. ಇಪ್ಪತ್ತು ವರ್ಷ ಅಥವಾ ಅದಕ್ಕಿಂತ ಹಿಂದೆ ಓದಿದಾಗಲೂ ಅದು ಅವಾಸ್ತವ ಎಂದು ನನಗನಿಸಿತು. ಆ ನಂತರದ ನಿಮ್ಮ ಭಾಷಣ, ಬರವಣಿಗೆಯಲ್ಲಿ ನೀವು ನಿಮ್ಮ ಹಳೆಯ ನಿಲುವಿನಿಂದ ಮುಂದುವರಿದು ಆಧುನಿಕ ಪ್ರವೃತ್ತಿಗಳನ್ನು ಅಭಿಮಾನದಿಂದ ನೋಡಿರುವುದನ್ನು ಗಮನಿಸಿದ್ದೇನೆ. ಆದರೆ ನಿಮ್ಮ ಹಳೆಯ ಚಿತ್ರವೇ ಮನದಲ್ಲಿ ದೃಢವಾಗಿದೆ ಎಂದು ಬರೆದಾಗ ಅಚ್ಚರಿಯಾಯಿತು. ಕಾಂಗ್ರೆಸ್ ಆ ಚಿತ್ರವನ್ನು ಕಾರ್ಯರೂಪಕ್ಕೆ ತರುವುದಿರಲಿ ಎಂದೂ ಪರಿಗಣಿಸಿರಲಿಲ್ಲ... ಹಿಂದ್ ಸ್ವರಾಜ್ ಬರೆದು 38 ವರ್ಷಗಳಾದವು. ಅಲ್ಲಿಂದೀಚೆಗೆ ಜಗತ್ತು ಸಂಪೂರ್ಣ ಬದಲಾಗಿದೆ. ಬಹುಶಃ ಅಡ್ಡದಾರಿ ಹಿಡಿದಿರಬಹುದು. ಈ ವಿಷಯವನ್ನು ಹಿಂದ್ ಸ್ವರಾಜ್ ಪರಿಗಣಿಸಬೇಕಾದರೂ ಪ್ರಚಲಿತ ವಿಚಾರ, ಶಕ್ತಿಗಳು, ಮಾನವ ಸಂಪನ್ಮೂಲ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಅದು ಅವಾಸ್ತವವಾಗುತ್ತದೆ'.

ನಿಮ್ಮ ಪ್ರೀತಿಯ ಜವಾಹರಲಾಲ್

ಉಲ್ಲೇಖಗಳು: ಗಾಂಧಿಯವರ 'ಹಿಂದ್ ಸ್ವರಾಜ್ಯ' ಕೃತಿಯವು ■

(19ನೇ ಪುಟದಿಂದ)

ಮತ್ತೆ ಮತ್ತೆ ಗಾಂಧಿ...



ಪುರಾತನ ಸಮಾಜದ ಪುನರುತ್ಥಾನವಲ್ಲ.

ಹಾಗಾದರೆ, ಈ ಪರ್ಯಾಯ ಬದುಕಿನ ಮಾರ್ಗಕ್ಕೆ ಇರುವ ಆಧಾರಗಳು ಯಾವುವು? ಒಂದು, ಮೇಲೆ ಸೂಚಿಸಿದಂತೆ, ಪಶ್ಚಿಮದ ವೈಚಾರಿಕತೆಯ ಆಚೆಯೂ ಇರಬಹುದಾದ, ಆದರೆ ಅದರ ವಿಶ್ಲೇಷಣೆಯ ಚೌಕಟ್ಟಿಗೆ ಸಿಗದ, ದೇಶಿ ಜ್ಞಾನದ ಸ್ವರೂಪವನ್ನು ಅನ್ವೇಷಿಸುವುದು. ಪಶ್ಚಿಮ ವೈಚಾರಿಕ ದೃಷ್ಟಿಕೋನದಿಂದ ನೋಡಿದಾಗ ಇದು 'ಅವೈಜ್ಞಾನಿಕ', 'ಅಚಾರಿತ್ರಿಕ' ಎನಿಸಿದರೂ ಭಾರತದ ಸಮುದಾಯಗಳ ನಂಬಿಕೆ-ಆಚರಣೆ, ಮತ್ತು ಬದುಕಿನ ಕ್ರಮಗಳಿಗೆ, ಈ ಜ್ಞಾನದರ್ಶನವೇ ಆಧಾರವಾಗಿತ್ತು ಎನ್ನುವುದು ಮುಖ್ಯ. ಆದರೆ, ಈ ಜ್ಞಾನಮಾರ್ಗದ ತಾತ್ವಿಕತೆ ವಸಾಹತು ಪ್ರಭಾವದಿಂದಾಗಿ ಅವಜ್ಞೆಗೆ ಗುರಿಯಾಯಿತಲ್ಲದೆ, ಒಂದು ಅಕ್ರಮ ಸಂತಾನವೆಂಬಂತೆ ಅವಹೇಳನಕ್ಕೂ ಒಳಗಾಯಿತು. ಪಶ್ಚಿಮಕ್ಕಿಂತಲೂ ಭಿನ್ನವಾದ ಭಾರತೀಯ ನಾಗರಿಕತೆಯನ್ನು ಕಟ್ಟಿಕೊಳ್ಳಲು ವಸಾಹತು ಆಕ್ರಮಣದಿಂದ ನಿರ್ಲಕ್ಷ್ಯಕ್ಕೆ ಈಡಾಗಿರುವ ದೇಶಿ ತಾತ್ವಿಕತೆಯನ್ನು ಹೊಸದಾಗಿ ಅನ್ವೇಷಿಸಬೇಕಾದ ಅವಶ್ಯಕತೆ ಇದೆ, ಮತ್ತು ಇದರ ಸಾಧ್ಯತೆಯನ್ನು ಗಾಂಧೀಜಿ ಮನಗಂಡಿದ್ದರು ಎಂಬುದು, ಗಾಂಧೀಜಿ ವಿಚಾರಗಳ ಪುನರುಜ್ಜೀವನಕ್ಕೆ ಇರುವ ಮುಖ್ಯ ಕಾರಣ.

ಇಂಥದೊಂದು ದೇಶಿ ಜ್ಞಾನ ಮತ್ತು ಅದನ್ನು ಆಧರಿಸಿದ ನಾಗರಿಕತೆ ಇಂದಿಗೆ ಎಷ್ಟು ಪ್ರಸ್ತುತ? ಅದರ ಸಾಧ್ಯತೆಗಳೇನು? ಎಂಬಿತ್ಯಾದಿ ಪ್ರಶ್ನೆಗಳು ಎದುರಾಗುವುದು ಸಹಜ. ಪರಿಸರ, ಜೀವ ವೈವಿಧ್ಯ, ಆಹಾರ ಸ್ವಾವಲಂಬನೆ, ಭೂ ಫಲವತ್ತತೆ, ಕೋಮು ಸೌಹಾರ್ದ ಇತ್ಯಾದಿಗಳ ಅವನತಿಯನ್ನು ನೋಡಿದರೆ, ಇದಕ್ಕೆ ವಸಾಹತುಶಾಹಿ ಪ್ರಣೀತ ಆಧುನಿಕ ಜ್ಞಾನದ ಆಧಾರದ ಮೇಲೆ ರೂಪಿತವಾದ ಯೋಜನೆಗಳೇ ಕಾರಣ ಎನ್ನುವುದು ಸ್ಪಷ್ಟ. ಪ್ರಕೃತಿಯ ಶೋಷಣೆಯನ್ನೇ ಅಭಿವೃದ್ಧಿ ಎಂದು ಆಧುನಿಕತೆ ನಮ್ಮನ್ನು ಒಪ್ಪಿಸಿಬಿಟ್ಟಿರುವುದರಿಂದ, ಮನುಷ್ಯ-ಮನುಷ್ಯರ ನಡುವೆ, ಮತ್ತು ಮನುಷ್ಯ-ಪ್ರಕೃತಿಗಳ ನಡುವೆ ಶೋಷಣಾರಹಿತವಾದ, ವೈವಿಧ್ಯವನ್ನು ಪೋಷಿಸುವ ನಾಗರಿಕತೆಯನ್ನು ನಾವು ಸ್ವಾಗತಿಸಬೇಕಾದದ್ದೇ. ಅದು ದೇಶದ ಸ್ವಾವಲಂಬನೆ ಮತ್ತು ಸ್ವಾಯತ್ತತೆಗಳಿಗೂ ಅತ್ಯಗತ್ಯ ಎಂಬುದು ಕೂಡ ಒಪ್ಪತಕ್ಕದ್ದೇ. ಆದರೆ ಮಹಿಳೆ, ದಲಿತ ಹಾಗೂ ಇನ್ನಿತರ ಶೋಷಿತರ ದೃಷ್ಟಿಯಿಂದ ನೋಡಿದರೆ, ಆಧುನಿಕತೆಯ ಕೊಡುಗೆಯನ್ನು ತಳ್ಳಿ ಹಾಕಲು ಆಗುವುದಿಲ್ಲ. ವಸಾಹತು ಆಧುನಿಕತೆಯ ಈ ಇಬ್ಬಂದಿತನವನ್ನು, ಅದರ ದ್ವಿಮುಖಿ ಸ್ವರೂಪ ಹುಟ್ಟಿಹಾಕಿರುವ ಹೈಬ್ರಿಡ್ ಸಮಾಜದ ಸಂಕೀರ್ಣತೆಯನ್ನು ಕುರಿತಂತೆ ಅನೇಕ ಥಿಯರಿಗಳನ್ನು ವಸಾಹತೋತ್ತರ ಬರವಣಿಗೆ ಹುಟ್ಟಿಸಿದೆ. ಮತ್ತು ವಸಾಹತೋತ್ತರ ಸಾಹಿತ್ಯ ಕೃತಿಗಳಂತೂ ಆಧುನಿಕತೆಯ ಈ ದ್ವಂದ್ವದ ಅನ್ವೇಷಣೆಯನ್ನೇ ತಮ್ಮ ಮುಖ್ಯ ಸಾಮಗ್ರಿಯಾಗಿ ಬಳಸಿಕೊಂಡಿದೆ. ಆದರೆ, ಗಾಂಧೀಜಿಯವರ ಪರ್ಯಾಯ ನಾಗರೀಕತೆಯಲ್ಲಿ ಈ ದ್ವಂದಕ್ಕೆ ಆಸ್ಪದವಿಲ್ಲ. ಅಲ್ಲಿ ಸಾಮಾಜಿಕ ಸುಧಾರಣೆ ಕೇವಲ 'ಹೊರಗಿನ' ಬದಲಾವಣೆಯನ್ನು ಸೂಚಿಸುವುದಿಲ್ಲ; ಅದು ಸ್ವ-ಶುದ್ಧೀಕರಣದ ಕ್ರಿಯೆಯೂ ಹೌದು. 'ಎಲ್ಲ ಸುಧಾರಣೆಗಳ ಮೂಲ, ಅಲ್ಪಸಂಖ್ಯಾತರು ಬಹುಸಂಖ್ಯಾತ ಬಲಿಷ್ಠರ ವಿರುದ್ಧ ನಡೆಸುವ ಹೋರಾಟದಲ್ಲಿರುತ್ತದೆ' ಎನ್ನುವ ಅವರ ಮಾತನ್ನು ಗಮನಿಸಬೇಕು. ಆದ್ದರಿಂದಲೇ ಅವರು, ಸಾಮಾಜಿಕ ಬದಲಾವಣೆಗಳು ಕೇವಲ ಕಾನೂನುಗಳ ಮೂಲಕ, ಪ್ರಭುತ್ವದ ಹಸ್ತಕ್ಷೇಪದಿಂದ ಆಗುವಂಥದ್ದಲ್ಲ ಎಂದು ವಾದಿಸುತ್ತಿದ್ದರು. ಸಾಮಾಜಿಕ ಬದಲಾವಣೆಯಲ್ಲಿ ಆಧುನಿಕ ಪ್ರಭುತ್ವ ಅಥವಾ ಯಾವುದೇ ನಾಯಕವರ್ಗ ವಹಿಸುವ ಪಾತ್ರವನ್ನು ಅವರು ಸಂದೇಹದಿಂದ ನೋಡುತ್ತಿದ್ದರು. ಈ ಹಿನ್ನೆಲೆಯಲ್ಲಿ ಓದಿಕೊಂಡಾಗ ಅವರ 'ಹಿಂದ್ ಸ್ವರಾಜ್' ಕೃತಿ ವಸಾಹತುಶಾಹಿ-ದೇಶೀಯತೆ ನಡುವಿನ ಜಿಜ್ಞಾಸೆಗಿಂತಲೂ, ಈ ಪ್ರಾಪಂಚಿಕ ಬದುಕಿನ ಮೂಲತತ್ವವನ್ನು ಕುರಿತ ಮೀಮಾಂಸೆ ಎಂಬುದು ಈಗಿನ ಚಿಂತನಕಾರರ ಅಭಿಪ್ರಾಯ. ಪಶ್ಚಿಮವನ್ನು ತೆಗಳುವ, ಯಂತ್ರನಾಗರಿಕತೆಯನ್ನು ನಿರಾಕರಿಸುವ ಕರಪತ್ರದಂತೆ ಓದುವುದಕ್ಕಿಂತಲೂ, ಈ ಕೃತಿಯನ್ನು ಒಂದು ತತ್ವಶಾಸ್ತ್ರದ ರೂಪಕವಾಗಿ ಗ್ರಹಿಸಬೇಕು ಎನ್ನುವ ಪ್ರಯತ್ನ ಇದು. ಈ ಓದಿನ ಪ್ರಕಾರ ಅದು ಹೇಗೆ ಸಾಮಾಜೋ-ರಾಜಕೀಯ ವಿಷಯಗಳನ್ನು ಕುರಿತ? ಅಂದರೆ, ಇಹದ ಬದುಕನ್ನು ಕುರಿತ – ಪಠ್ಯವಾಗಿದೆಯೋ, ಹಾಗೆಯೇ, ಸಾಂಸ್ಕೃತಿಕ-ಆಧ್ಯಾತ್ಮಿಕ ವಿಷಯಗಳನ್ನು ಕುರಿತು ನಡೆಸಿದ ಚಿಂತನೆಯೂ ಆಗಿದೆ.

ಬಂಡವಾಳಶಾಹಿಯ ಪರಿಣಾಮವಾದ ದುರಾಸೆ, ಸಂಗ್ರಹ, ವಸ್ತುವ್ಯಾಮೋಹ, ಶೋಷಣೆಗಳಿಂದ ಉಂಟಾಗುವ ಸಾಮಾಜಿಕ ಬವಣೆ ಇತ್ಯಾದಿ ದುಷ್ಪರಿಣಾಮಗಳನ್ನು ಕುರಿತ ವಿಮರ್ಶೆಯಲ್ಲಿ ಗಾಂಧಿ ಮತ್ತು ಮಾರ್ಕ್ಸ್‌ವಾದಗಳೆರಡರಲ್ಲೂ ಅನೇಕ ಸಾಮ್ಯತೆ ಇವೆ. ಆದರೆ ಬಂಡವಾಳಶಾಹಿಯ ಬೆಳವಣಿಗೆಯನ್ನು ಮಾರ್ಕ್ಸ್‌ವಾದ ಚಾರಿತ್ರಿಕತೆಯ ಅನಿವಾರ್ಯತೆಯಲ್ಲಿ ಗುರುತಿಸುತ್ತದೆ. ಗಾಂಧಿವಾದದ ಪ್ರಕಾರ, ಈ ಬೆಳವಣಿಗೆಯನ್ನು ಸ್ವರಾಜ್ಯದ ಮೂಲಕ ತಡೆಗಟ್ಟಬಹುದು;

ಇಷ್ಟಾಗ್ಯೂ, ಈ ಲೇಖನದ ಪ್ರಾರಂಭದಲ್ಲಿ ಎತ್ತಿರುವ ಪ್ರಶ್ನೆ ಹಾಗೆಯೇ ಉಳಿಯುವ ಸಾಧ್ಯತೆಯೇ ಹೆಚ್ಚು: ಅದು ಗಾಂಧಿವಾದದ ಮೂಲಕ ಬಂಡವಾಳಶಾಹಿಯ ಪ್ರಭಾವ ಹಾಗೂ ಬೆಳವಣಿಗೆಯನ್ನು ಎದುರಿಸಲು ಸಾಧ್ಯವೇ ಎಂಬುದು. ಬಂಡವಾಳಶಾಹಿಯ ಪರಿಣಾಮವಾದ ದುರಾಸೆ, ಸಂಗ್ರಹ, ವಸ್ತುವ್ಯಾಮೋಹ, ಶೋಷಣೆಗಳಿಂದ ಉಂಟಾಗುವ ಸಾಮಾಜಿಕ ಬವಣೆ ಇತ್ಯಾದಿ ದುಷ್ಪರಿಣಾಮಗಳನ್ನು ಕುರಿತ ವಿಮರ್ಶೆಯಲ್ಲಿ ಗಾಂಧಿ ಮತ್ತು ಮಾರ್ಕ್ಸ್‌ವಾದಗಳೆರಡರಲ್ಲೂ ಅನೇಕ ಸಾಮ್ಯತೆ ಇವೆ. ಆದರೆ ಬಂಡವಾಳಶಾಹಿಯ ಬೆಳವಣಿಗೆಯನ್ನು ಮಾರ್ಕ್ಸ್‌ವಾದ ಚಾರಿತ್ರಿಕತೆಯ ಅನಿವಾರ್ಯತೆಯಲ್ಲಿ ಗುರುತಿಸುತ್ತದೆ. ಗಾಂಧಿವಾದದ ಪ್ರಕಾರ, ಈ ಬೆಳವಣಿಗೆಯನ್ನು ಸ್ವರಾಜ್ಯದ ಮೂಲಕ ತಡೆಗಟ್ಟಬಹುದು; ಯಾಕೆಂದರೆ, ಸ್ವರಾಜ್ಯವೆಂದರೆ ಆಳದಲ್ಲಿ ವ್ಯಕ್ತಿ ಸ್ವಾತಂತ್ರ್ಯವೇ ಹೊರತು ಇನ್ನೇನೂ ಅಲ್ಲ. ಮತ್ತು ವ್ಯಕ್ತಿ ಸ್ವಾತಂತ್ರವೆಂದರೆ ಯಂತ್ರಗಳ ಅಡಿಯಾಳಾಗದೇ ಇರುವುದು. ಅಂದರೆ, ಫ್ಯಾಕ್ಟರಿಗಳ ಗುಲಾಮಗಿರಿಯಿಂದ ಹೊರಬರುವುದು; ತಮ್ಮ ಕಾರ್ಮಿಕತನವನ್ನು ನೀಗಿಕೊಳ್ಳುವುದು.

'ಕಾರ್ಮಿಕರೆಲ್ಲರೂ ಒಂದಾಗಿ' ಎನ್ನುವ ಮಾರ್ಕ್ಸ್‌ವಾದದಲ್ಲೂ ಇದೇ ಅರ್ಥ/ಆಶಯವೇ ವ್ಯಕ್ತ್ಯವಾಗುತ್ತಿದೆಯೇ? ಬಹುಶಃ ತಾತ್ವಿಕವಾಗಿ ಹೌದು. ಮಾರ್ಕ್ಸ್‌ವಾದದ ಅಂತಿಮ ಉದ್ದೇಶವೂ ಮನುಷ್ಯ ಮತ್ತು ಸಮಾಜ, ಸಮಾಜ ಮತ್ತು ಪ್ರಕೃತಿಯ ನಡುವೆ ಸೌಹಾರ್ದಯುತ ಸಂಬಂಧವನ್ನು ಕಟ್ಟಿಕೊಳ್ಳುವುದೇ ಆಗಿದೆ. ಮಾರ್ಕ್ಸ್ ಮತ್ತು ಎಂಗೆಲ್ಸ್ ಜರ್ಮನ್ ಐಡಿಯಾಲಜಿಯಲ್ಲಿ ಹೇಳುವ ಪ್ರಕಾರ, ಸಮಾಜದಲ್ಲಿ ಮನುಷ್ಯ ತನ್ನ ಅಸ್ತಿತ್ವ (existence) ಮತ್ತು ತನ್ನ ಸತ್(essence) ನಡುವೆ ಸೌಹಾರ್ದವನ್ನು ಸ್ಥಾಪನೆ ಮಾಡುವಂಥ ಚಾರಿತ್ರಿಕ ಹೊಣೆ ಕಾರ್ಮಿಕರ ಮೇಲಿದೆ, ಮತ್ತು ಇದು ಕ್ರಾಂತಿಯ ಮೂಲಕವೇ ನಡೆಯಬೇಕಾಗಿದೆ. ಈ ಪ್ರಕ್ರಿಯೆಯನ್ನು ವಿವರಿಸಲು ಅವರು 'ಮೀನು ಮತ್ತು ನೀರಿನ ಸಂಬಂಧ'ದ ರೂಪಕವೊಂದನ್ನು ಬಳಸುತ್ತಾರೆ. ನೀರಿನ 'ಇರುವಿಕೆ'ಯೇ ಮೀನಿನ ಅಸ್ತಿತ್ವಕ್ಕೆ ಮೂಲ. ಆದರೆ ಕಾರ್ಖಾನೆಗಳ ಬಳಕೆಯಿಂದ, ಅನೇಕ ವಿಷಯುಕ್ತ ಕಲ್ಮಶಗಳಿಂದ ನೀರು ಕಲ್ಮಶಗೊಂಡಷ್ಟೂ ಮೀನಿನ ಅಸ್ತಿತ್ವ ನಾಶವಾಗತೊಡಗುತ್ತದೆ. ಈ ರೂಪಕ ಇಂದಿನ ಪರಿಸರದ ಕ್ರೈಸಿಸ್‌ಗೆ ಸಂಬಂಧಪಟ್ಟಿದ್ದೂ ಹೌದು. ಯಾಂತ್ರಿಕ ಅಧುನಿಕತೆಗೆ ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಕೂಡ ವಿರೋಧಿಗಳಾಗಿದ್ದರು ಎಂಬುದನ್ನು ಇಲ್ಲಿ ಗಮನಿಸುವುದು ಅಗತ್ಯ. ಆದರೆ ಈ ಕಲ್ಮಶಕ್ಕೆ ಕಾರಣವಾದ ಬಂಡವಾಳಶಾಹಿಯ ಬೆಳವಣಿಗೆ, ಅದರ ಹಿಂದಿನ ತರ್ಕದ ವಿಶ್ಲೇಷಣೆಯನ್ನು ಕೂಡ ಅವರು ಸೋದಾಹರಣೆಗಳ ಮೂಲಕ ಸಾದರಪಡಿಸುತ್ತಾರೆ. ಈ ವಿಶ್ಲೇಷಣೆ ಗಾಂಧೀಜಿ ಚಿಂತನೆಯಲ್ಲಿ ಇಲ್ಲ.

ವಿಶ್ಲೇಷಣೆಯಲ್ಲಿನ ಕೊರತೆ, ಪರಿಹಾರದಲ್ಲೂ ಇರಬಹುದಲ್ಲವೇ? ■

ಭೂ ಹೋರಾಟ: ದಲಿತರ ಮುಂದಿರುವ ಸವಾಲುಗಳು

ದಲಿತರನ್ನು ಕುರಿತು ಬರೆಯುದವರೇ ಇಲ್ಲ ವೇನೋ ಎನ್ನುವಷ್ಟರ ಮಟ್ಟಿಗೆ ದಲಿತ ಬರಹಗಾರ ರಿಂದಲೂ ಇತರರಿಂದಲೂ ಸಾಕಷ್ಟು ಕಲಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕನ್ನಡದಲ್ಲಿ ಪ್ರಕಟವಾಗಿವೆ. ಈ ಎಲ್ಲಾ ಬರಹಗಳೂ ದಲಿತ, ಶೋಷಿತ ಸಮುದಾಯಗಳಿಗೆ ಅಷ್ಟೇನೂ ಉಪಯುಕ್ತವಲ್ಲದ ವಿಷಯಗಳ ಮೇಲೆ ಚರ್ಚಿಸಲಾಗಿದೆ. ಶೋಷಿತರ ವಿಮೋಚನೆಯ ಕೇಂದ್ರ ವಿಷಯವಾಗಿ ಕೈಗೆತ್ತಿಕೊಳ್ಳಬೇಕಾಗುವುದನ್ನು ಪರಿಧಿಗೂ, ಪರಿಧಿಯ ವಿಷಯವನ್ನು ಕೇಂದ್ರಕ್ಕೂ ತಂದು ಚರ್ಚಿಸಲಾಗುತ್ತಿದೆ. ದಲಿತ ಚಿಂತಕರ ಹಾಗೂ ಬರಹಗಾರರ ಒಡಲೊಳಗಿನ ಒತ್ತಡದಿಂದ ಸಹಜವಾಗಿ ಹುಟ್ಟಬಹುದಾದ ಆಲೋಚನೆಯು ದಿಕ್ಕುತಪ್ಪಿರುವ ಈ ಸಂದರ್ಭದಲ್ಲಿ ಕನ್ನಡದ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕರಾದ ಡಾ.ಬಿ.ಎಂ. ಪುಟ್ಟಯ್ಯನವರು 'ದಲಿತರು ಮತ್ತು ಭೂಮಿಯ ಪ್ರಶ್ನೆ' ಎಂಬ ವಿಷಯವನ್ನು ಚರ್ಚೆಗೆ ಎತ್ತಿಕೊಂಡಿರುವುದು ಈವೊತ್ತಿನ ಅಗತ್ಯಗಳಲ್ಲೊಂದು.

ಯಾರು ಭೂಮಾಲಿಕರಾಗಿದ್ದಾರೋ ಅವರೆಲ್ಲಾ ಅವರದೇ ಭೂಮಿಯಲ್ಲಿ ದುಡಿಯುವುದಿಲ್ಲ. ಆದರೆ ಭೂಮಿಯ ಒಡೆತನಕ್ಕೆ ಅವರು ವಾರಸುದಾರರು. ಭೂಮಿಯ ಒಡೆತನಕ್ಕೆ ಯಾರು ವಾರಸುದಾರರಲ್ಲವೋ ಅವರು ಭೂಮಿಯಲ್ಲಿ ದುಡಿಯುವವರಾಗಿದ್ದಾರೆ. ಈ ವೈರುಧ್ಯಗಳೇ ಅತ್ಯಾಚಾರ, ಮಾನಭಂಗ, ಅಪಮಾನ, ಹಿಂಸೆ, ಶೋಷಣೆ, ದಮನ, ದಬ್ಬಾಳಿಕೆಯ ಮೂಲವೆಂದು ಗುರುತಿಸುವ ಪರ್ಯಾಯ ಆಲೋಚನೆ ಈ ಕೃತಿಯ ತಿರುಳು. 'ದಲಿತರು' ಮತ್ತು 'ಭೂಮಿ' ಎಂಬ ಎರಡೇ ಅಂಶಗಳಿಗೆ ಚರ್ಚೆಯನ್ನು ಸೀಮಿತಗೊಳಿಸದೆ, ಭೂಮಿಗೂ ಭೂಮಾಲಿಕರಿಗೂ, ಭೂಮಿಗೂ ಆಳುವ ವರ್ಗಕ್ಕೂ, ಭೂಮಿಗೂ ಬಹುರಾಷ್ಟ್ರೀಯ ಕಂಪನಿಗಳಿಗೂ, ಭೂಮಿಗೂ ಸಾಮ್ರಾಜ್ಯಶಾಹಿ ಮಾರುಕಟ್ಟೆಗೂ ಇರುವ ಸಂಬಂಧಗಳನ್ನು ಹಾಗೂ ಭೂಮಿಗೂ ದುಡಿಯುವ ಉತ್ಪಾದಕ ವರ್ಗಕ್ಕೂ ಇರುವ ಸಂಬಂಧ, ಉತ್ಪಾದನೆ, ವಿತರಣೆ, ಹಂಚಿಕೆ, ಲಾಭ-ನಷ್ಟಗಳನ್ನು ಚಾರಿತ್ರಿಕವಾಗಿ ಸಮಗ್ರೀಕರಿಸಿ ಚರ್ಚಿಸಲಾಗಿದೆ. ಈ ಚರ್ಚೆಯನ್ನು ಕೃಷಿ ಕೂಲಿಗಳ ಹಿತಾಸಕ್ತಿಯ ನೆಲೆ ಅಥವಾ ಭೂರಹಿತ ದಲಿತರ ಹಿತಾಸಕ್ತಿಯ ನೆಲೆಯಲ್ಲಿ ಗತಿತಾರ್ಕಿಕವಾಗಿ ನೋಡಲಾಗಿದೆ.

ಇಲ್ಲಿ ದಲಿತರನ್ನು ಕೇವಲ ಜಾತಿ ಶ್ರೇಣೀಕರಣದಲ್ಲಿ ನಿರೂಪಿಸದೆ ದಲಿತರೆಂದರೆ, ಉತ್ಪಾದಕ ಶಕ್ತಿಗಳು ಅಥವಾ ದುಡಿಯುವ ವರ್ಗ ಎಂದೇ ತಾತ್ವೀಕರಿಸಿಕೊಂಡಿರುವುದರಿಂದ ಭೂಮಿಗೂ ದಲಿತರಿಗೂ ಇರುವ ಸಂಬಂಧದ ಪ್ರಶ್ನೆ ರಾಜಕೀಯವಾಗಿ ದುರ್ಬಲ, ಅಸ್ಪಷ್ಟವಾಗದಂತೆ ಎಚ್ಚರಿಕೆ ವಹಿಸಲಾಗಿದೆ.

ಈ ಹೊತ್ತಿಗೆಯಲ್ಲಿ ನಾಲ್ಕು ಭಾಗಗಳಿವೆ. ಮೊದಲನೇ ಭಾಗದಲ್ಲಿ ಕೃಷಿ ಭೂಮಿಗೂ ಮತ್ತು ದಲಿತರಿಗೂ ಇರುವ ಸಂಬಂಧದ ಬಗ್ಗೆ ತಾತ್ವಿಕ ವಿಶ್ಲೇಷಣೆಯಿದೆ. ಎರಡನೇ ಭಾಗದಲ್ಲಿ ವಸಾಹತುಶಾಹಿ ಕಾಲದಲ್ಲಿ ಕೃಷಿ ಭೂಮಿಯಲ್ಲಿ ಮಾಡಲಾದ ಬದಲಾವಣೆಗಳು ಮತ್ತು ಉತ್ಪಾದನೆಯಲ್ಲಿ ಮಾಡಲಾದ ಬದಲಾವಣೆಗಳು ಮತ್ತು ಅದರ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ. ಮೂರನೇ ಭಾಗದಲ್ಲಿ ಜಾಗತೀಕರಣದ ದಾಳಿಯಲ್ಲಿ ಕೃಷಿವಲಯ ಮತ್ತು ದಲಿತರ ಸ್ಥಿತಿಗತಿಗಳನ್ನು ಚರ್ಚಿಸಲಾಗಿದೆ. ನಾಲ್ಕನೇ ಭಾಗದಲ್ಲಿ ದಲಿತರು ಭೂಮಿ ಪಡೆಯಲು ಇರುವ ತೊಡಕುಗಳನ್ನು ಮತ್ತು ಅದರ ರಾಜಕೀಯ ಸಾಧ್ಯತೆಗಳನ್ನು ಕುರಿತು ಚರ್ಚಿಸಲಾಗಿದೆ.

ಭೂಮಿಯ ಮೇಲೆ ಮತ್ತು ಭೂಮಿಯ ಒಳಗೆ ಸಮಾಜಕ್ಕೆ ಬೇಕಾದ ಎಲ್ಲಾ ವಸ್ತು ಪದಾರ್ಥಗಳು ದಲಿತರ ಶ್ರಮ, ಶಕ್ತಿ, ಬೆವರು, ಕಣ್ಣೀರಿನಿಂದಲೇ ಮಾನವರು ಬಳಸುವ ಯೋಗ್ಯವಸ್ತುಗಳಾಗಿ ಮಾರ್ಪಡಿಸಿದ ದಲಿತರೇ ಈ ಸಿರಿಸಂಪತ್ತಿನ ಸೃಷ್ಟಿಕರ್ತರು. ಅದು ಅವರಿಗೇ ಸೇರಬೇಕು ಎಂದು ಪ್ರಜ್ಞಾಪೂರ್ವಕವಾಗಿ ದಲಿತ ಚಳವಳಿ ಮೊದಲಲ್ಲಿ ಭೂ ಹೋರಾಟಕ್ಕೆ ತಳಹದಿ ಹಾಕಿದ್ದನ್ನು ಹೋರಾಟದ ಹಾಡುಗಳ ಮೂಲಕ ಅವಲೋಕಿಸಲಾಗಿದೆ. ಹೀಗೆ ಗರಿಗೆದರಿದ ಭೂ ಹೋರಾಟಗಳು ಪ್ರಭುತ್ವ ತಂದ ಸುಧಾರಣಾ ಕಾನೂನುಗಳು, ಉಳುವವನೇ ಭೂಮಿಯ ಒಡೆಯ, ಭೂಮಿತಿ ಕಾಯ್ದೆ, ಕರ್ನಾಟಕ ಭೂ ಮಸೂದೆ, ಒತ್ತುವರಿ ಮತ್ತು ಬಗರ್-ಹುಕುಂ, ಹಸಿರು ಕ್ರಾಂತಿ ಮುಂತಾದವು ನಯವಾಗಿ ದಲಿತರನ್ನು ಭೂ ಹೋರಾಟದಿಂದ ವಿಮುಖವಾಗುವಂತೆಯೂ ದಲಿತರ ಅಸಹನೆ ದಿಕ್ಕುತಪ್ಪುವಂತೆ ಮಾಡುವಲ್ಲಿ ಯಶಸ್ವಿಯಾದುದ್ದು ಆ ಕಾನೂನುಗಳೇ ಭೂಮಾಲಿಕರ ಬೆಳವಣಿಗೆಗೆ ಸಹಕಾರಿಯಾಗಿ ನಿಂತದ್ದನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡಲಾಗಿದೆ.

ದಲಿತರು ಭೂಮಿ ಪಡೆಯಬೇಕಾಗಿರುವುದು ಖಚಿತವಾಗಿ ಒಂದು ರಾಜಕೀಯ ಕ್ರಿಯೆ ಎನ್ನುವ ಲೇಖಕರು "ಭೂಮಿಯು ಬಹುರಾಷ್ಟ್ರೀಯ ಕಂಪನಿಗಳ, ಕಾರ್ಪೊರೇಟ್ ಕುಟುಂಬಗಳ, ಭಾರೀ ಭೂ ಮಾಲಿಕರ, ಮಠಾಧೀಶರ ಮತ್ತು ಶಿಕ್ಷಣ ಸಂಸ್ಥೆಗಳ ಕೈಯಲ್ಲಿರುವುದನ್ನು ದಲಿತರ ಮುಂಚೂಣೀ ವರ್ಗವು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಪುಸ್ತಕ ಅವಲೋಕನ



ಸಂ: ಡಾ. ಬಿ.ಎಂ ಪುಟ್ಟಯ್ಯ
ಬೆಲೆ: ರೂ ೧೦/-
ಪ್ರ: ಕನ್ನಡ ವಿ.ವಿ ಹಂಪಿ;

ರಾಜೇಶ್

90ರ ದಶಕದಿಂದ ಜಾಗತೀಕರಣವು ಭೂ ಹೋರಾಟಕ್ಕೆ ಹೊಸದೊಂದು ಸವಾಲನ್ನು ಎಸೆಯಿತು. ಭೂಮಿ ಕೃಷಿಯೇತರ ರಿಯಲ್ ಎಸ್ಟೇಟ್, ರೆಸಾರ್ಟ್, ಮಲ್ಟಿಪ್ಲಾರ್, ಟೌನ್‌ಶಿಫ್, ಹೆದ್ದಾರಿ ಕಾರಿಡಾರ್ ಹೀಗೆ ಬಹುರಾಷ್ಟ್ರೀಯ ಕಂಪನಿಗಳು ಹಾಗೂ ಕಾರ್ಪೊರೇಟ್ ಪರಿವಾರಗಳ ಪಾಲಾಯಿತು. ಸರ್ಕಾರಗಳೇ ಮುಂದೆ ನಿಂತು ಅಲ್ಪಸ್ವಲ್ಪ ಭೂಮಿ ಹೊಂದಿದ್ದ ದಲಿತರ ಭೂಮಿಯನ್ನು ಕಿತ್ತು, ಬಹುರಾಷ್ಟ್ರೀಯರಿಗೆ ಕೊಡಲಾರಂಭಿಸಿತು.

ಹೀಗಿರುವಾಗ ಭೂಮಿ ಪಡೆಯುವ ವಿಷಯದಲ್ಲಿ ದಲಿತರ ಮುಂದಿರುವ ಸವಾಲುಗಳು ತಮಾಷೆಯ ಇಲ್ಲವೇ ಹುಡುಗಾಟದ ವಿಷಯವಲ್ಲ. ದುಡಿಯದಿರುವ ಭೂಮಾಲಿಕರು ಎಂದು ನಾವು ಯಾರನ್ನು ಗುರುತಿಸುತ್ತೇವೋ ಅವರು ಬಿಡಿಯಾಗಿ, ಒಂಟಿಯಾಗಿ ಇಲ್ಲ. ಅವರ ಹಿಂದೆ ಸರ್ಕಾರ, ಅಧಿಕಾರಿಗಳು, ಕಾನೂನುಗಳು, ಕೋರ್ಟ್‌ಗಳು, ಮಾಧ್ಯಮಗಳು, ಬಹುರಾಷ್ಟ್ರೀಯ ಕಂಪನಿಗಳು, ಅಂತಿಮವಾಗಿ ಸಾಮ್ರಾಜ್ಯಶಾಹಿ ಶಕ್ತಿಗಳು ಇವೆ. ಅಂದರೆ ಇವೆಲ್ಲವೂ ದಲಿತರು ಭೂಮಿ ಪಡೆಯಬೇಕು ಎನ್ನುವಂತಹ ವಿಚಾರಕ್ಕೆ ಹಾಗೂ ದಾರಿಗೆ ವಿರುದ್ಧವಾಗಿರುವ ಜಗತ್ತು. ಅವರೆಲ್ಲಾ ದಲಿತರ ಶತ್ರುಗಳು (ಪು.53).

ದಲಿತರು ಭೂಮಿ ಪಡೆಯಬೇಕಾಗಿರುವುದು ಖಚಿತವಾಗಿ ಒಂದು ರಾಜಕೀಯ ಕ್ರಿಯೆ ಎನ್ನುವ ಲೇಖಕರು "ಭೂಮಿಯು ಬಹುರಾಷ್ಟ್ರೀಯ ಕಂಪನಿಗಳ, ಕಾರ್ಪೊರೇಟ್ ಕುಟುಂಬಗಳ, ಭಾರೀ ಭೂಮಾಲಿಕರ, ಮಠಾಧೀಶರ ಮತ್ತು ಶಿಕ್ಷಣ ಸಂಸ್ಥೆಗಳ ಕೈಯಲ್ಲಿರುವುದನ್ನು ದಲಿತರ ಮುಂಚೂಣೀ ವರ್ಗವು ಮನವರಿಕೆ ಮಾಡಿಕೊಳ್ಳಬೇಕಾಗಿದೆ.. ಅದನ್ನು ಕುರಿತು ಆಲೋಚಿಸುವಂತಹ ವೈಚಾರಿಕ ಪ್ರಜ್ಞೆ ಎಲ್ಲಾ ಸ್ತರದ ದಲಿತರ ತಿಳುವಳಿಕೆಯಾಗಬೇಕಾಗಿದೆ. ಆ ತಿಳುವಳಿಕೆ ಬಲವಾಗಿ ಬೆಳೆದು ಅದೊಂದು ಧೋರಣೆಯಾಗಿ, ಅದೊಂದು ರಾಜಕೀಯ ಪ್ರಜ್ಞೆಯಾದಾಗ, ಅದು ದಲಿತರ ಸದೃಢ ರಾಜಕೀಯ ದೃಷ್ಟಿಕೋನವಾದಾಗ ಭೂರಹಿತ ದಲಿತರ ಭೂಮಿ ಪಡೆಯುವ ಮಾರ್ಗವನ್ನು ಕಂಡುಕೊಳ್ಳಲು ಮುಂದಾಗುತ್ತಾರೆ. ರಾಜಕೀಯವಾಗಿ ಇದೊಂದು ನಿರಂತರ ಪ್ರಕ್ರಿಯೆ. ಇದು

(56ನೇ ಪುಟಕ್ಕೆ)

ಕಳೆದ ಎರಡು ದಶಕಗಳಲ್ಲಿ ಭಾರತವೂ ಸೇರಿದಂತೆ ಇಡೀ ಜಗತ್ತು ನಾವು ನಂಬಲಾರದ ವೇಗದಲ್ಲಿ ಬದಲಾವಣೆಯತ್ತ ಸಾಗಿದೆ. ಗಮ್ಯವಿಲ್ಲದ ಪಯಣವೇನೊ ಎಂಬಂತೆ ಸಾಗುತ್ತಲೇ ಇದೆ. ಮಾಹಿತಿ ತಂತ್ರಜ್ಞಾನ ಮತ್ತು ದೂರ ಸಂಪರ್ಕ ಕ್ಷೇತ್ರದಲ್ಲಾದ ಕ್ಷಿಪ್ರಕ್ರಾಂತಿಯ ಫಲ ಮತ್ತು ಅಮೇರಿಕಾದ ಕನಸಿನ ಕೂಸಾದ ಜಾಗತೀಕರಣದ ಮತ್ತು ಮುಕ್ತಮಾರುಕಟ್ಟೆ ಪ್ರಭುತ್ವದ ಪ್ರತಿಫಲವಾಗಿ ಇಂದು ದೇಶ ದೇಶಗಳ ನಡುವೆ ಇದ್ದ ಗಡಿರೇಖೆಗಳು ಅಳಿಸಿ ಹೋಗುತ್ತಿವೆ. ಇದರ ಫಲವೆಂಬಂತೆ ಸೃಷ್ಟಿಯಾದ ಕೊಳ್ಳುಬಾಕ ಸಂಸ್ಕೃತಿಯ ಪ್ರಭಾವದಿಂದ ಆಧುನಿಕತೆಯ ನಾಗರಿಕ ಜಗತ್ತು ಅನುಭೋಗ ಮತ್ತು ಲೋಲುಪತೆಯ ತುತ್ತ ತುದಿಯಲ್ಲಿ ತೇಲಾಡುತ್ತಿದೆ.

ವರ್ತಮಾನ ಜಗತ್ತಿನ ಮನುಷ್ಯ ತಾನು ನಿರ್ಮಿಸಿಕೊಂಡಿರುವ ಈ ಭ್ರಮಾತ್ಮಕ, ಕೃತಕ ಜಗತ್ತನ್ನು ಶಾಶ್ವತವೆಂದು ನಂಬುವ ವಿಸ್ಮೃತಿಗೆ ದೂಡಲ್ಪಟ್ಟಿದ್ದಾನೆ. ಇಂತಹ ಅಯೋಮಯ ಸ್ಥಿತಿಯಲ್ಲಿ ದೇಶಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಕುರಿತಂತೆ ನಮ್ಮ ಮಾನದಂಡಗಳು, ವ್ಯಾಖ್ಯಾನಗಳು, ನಿರ್ವಚನಗಳು ಎಲ್ಲವೂ ಬದಲಾಗಿದ್ದು, ಯಾವುದು ಸತ್ಯ? ಯಾವುದು ಮಿಥ್ಯ? ಎಂಬ ದ್ವಂದ್ವದಲ್ಲಿ ಮುಳುಗಿ ಹೋಗಿರುವ ಪ್ರಜ್ಞಾವಂತರು ಕಕ್ಕಾಬಿಕ್ಕಿಯಾಗಿದ್ದಾರೆ.

ಇಡೀ ಜಗತ್ತಿನಾದ್ಯಂತ ಆಯಾ ನೆಲದ ಭೌಗೋಳಿಕ ಲಕ್ಷಣ ಮತ್ತು ಪರಿಸರಕ್ಕೆ ಅನುಗುಣವಾಗಿ ಬೆಳೆದು ಬಂದಿದ್ದ ನಮ್ಮ ಆಚಾರ, ವಿಚಾರ, ಆಹಾರ, ಉಡುಪು, ಮುಂತಾದವುಗಳ ಸಂಸ್ಕೃತಿ ಇಂದು ಜಾಗತೀಕರಣದ ಏಕಮುಖಿ ಸಂಸ್ಕೃತಿಯ ಬಿರುಗಾಳಿಗೆ ಸಿಲುಕಿ, ಎಲ್ಲೆಡೆ ಅನುಭೋಗ ಸಂಸ್ಕೃತಿಯಾಗಿ ರೂಪುಗೊಳ್ಳುತ್ತಿದೆ.

ಇಪ್ಪತ್ತೊಂದನೇ ಶತಮಾನದ ಮೂಲ ಮಂತ್ರವೆಂದರೆ, ಎಲ್ಲವೂ "ಬೃಹತ್" ಎಂಬ ಪರಿಕಲ್ಪನೆ ಎಂಬಂತಾಗಿದೆ. ನಾವು ನಿರ್ಮಿಸುವ ಹೆದ್ದಾರಿಗಳು, ಸೇತುವೆಗಳು, ಅಣೆಕಟ್ಟುಗಳು, ಮಲ್ಟಿಪ್ಲೆಕ್ಸ್ ಥಿಯೆಟರ್‌ಗಳು, ಮಾಲ್‌ಗಳು ಎಲ್ಲವೂ ಬೃಹತ್ ಆಗಿರಬೇಕು. ಇಲ್ಲಿ ಸಣ್ಣ ಪ್ರಮಾಣ ಎಂಬ ಮಾತಿಗೆ ಅವಕಾಶವಿಲ್ಲ. ಅಷ್ಟೇ ಅಲ್ಲ, ನಾವು ತಿನ್ನುವ ಆಹಾರ, ಧರಿಸುವ ಉಡುಪು, ಕುಡಿಯುವ ತಂಪುಪಾನಿಯ ಇವು ಕೂಡ ಸಿದ್ಧಪಡಿಸಿದವುಗಳಾಗಿರಬೇಕು. ಈ ಜಗತ್ತಿಗೆ "ಸಣ್ಣದು ಸುಂದರ" ಎಂಬ ಕೃತಿಯನ್ನು ನೀಡಿದ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಗಾಂಧಿ ಚಿಂತನೆಗಳಿಂದ ಪ್ರೇರಣೆಗೊಂಡಿದ್ದ ಶೂ ಮಾಕರ್‌ನ ಪರಿಭಾಷೆ ಈಗ ಅರ್ಥಕಳೆದುಕೊಂಡಿದೆ ಕಳೆದ ಎರಡು ದಶಕಗಳಲ್ಲಿ ಭಾರತವೂ ಸೇರಿದಂತೆ, ಇಡೀ ಜಗತ್ತು ತೀವ್ರ ಗತಿಯಲ್ಲಿ ಬದಲಾವಣೆ ಹೊಂದಿದೆ.. ಇದಕ್ಕೆ ಪೂರಕವಾಗಿ ನಮ್ಮ ಮಾಧ್ಯಮಗಳು ಕೂಡ ಜಾಗತೀಕರಣದ ಪ್ರಕ್ರಿಯೆಗೆ ಪೂರಕವಾಗಿ ವರ್ತಿಸಲಾರಂಭಿಸಿವೆ.

ನಾಗರಿಕ ಜಗತ್ತಿನಲ್ಲಿ ಗ್ರಾಹಕ ಮತ್ತು ಉತ್ಪಾದನಾ ಸಂಸ್ಥೆಯ ನಡುವೆ ಹಾಗೂ ಪ್ರಭುತ್ವ ಮತ್ತು ಪ್ರಜೆಗಳ ನಡುವೆ ನಿರ್ಣಾಯಕ ಪಾತ್ರ ವಹಿಸಬೇಕಿದ್ದ ಆದರ್ಶ ಕರಗಿ ಹೋಗಿದ್ದು ಈಗ ಲಾಭವೇ ಅಂತಿಮ ಗುರಿಯೆನೊ ಎಂಬಂತಾಗಿದೆ. ಇದಕ್ಕೆ ಪ್ರಮುಖ ಕಾರಣ ಇವತ್ತಿನ ಜಗತ್ತಿನ ಬಹುತೇಕ ಸುದ್ದಿಮಾಧ್ಯಮ ಸಂಸ್ಥೆಗಳ ಒಡೆತನ ಬಹುರಾಷ್ಟ್ರೀಯ ಕಂಪನಿಗಳು, ಇಲ್ಲವೆ ಕಾರ್ಪೊರೇಟ್ ಸಂಸ್ಥೆಗಳ ಕೈಯಲ್ಲಿದೆ. ಇಲ್ಲಿ ಸಿದ್ಧಪಡಿಸುವ ಮರೆಮಾಚಿದ ನಿಲುವಳಿಗಳು ಎನ್ನಬಹುದಾದ ಹಿಡೆನ್ ಅಜೆಂಡಾಗಳು ಸುದ್ದಿ ಹೆಸರಿನಲ್ಲಿ ಅಥವಾ ಜಾಹೀರಾತು ಮೂಲಕ ಜನಸಾಮಾನ್ಯರ ಮೇಲೆ ಹೇರಲ್ಪಡುತ್ತಿವೆ.

ಅಭಿವೃದ್ಧಿಯ ಆತಂಕಗಳು

ಡಾ॥ ಎನ್. ಜಗದೀಶ್ ಕೊಪ್ಪ

ನಾವು ಬದುಕುತ್ತಿರುವ ಈ ಜಗತ್ತಿನಲ್ಲಿ ಎಲ್ಲಾ ತಂತ್ರಜ್ಞಾನಗಳು ಮನುಷ್ಯನ ಬೆರಳತುದಿಗೆ ಬಂದು ಕುಳಿತಿರುವಾಗ, ತಾನು ಕುಳಿತ ಸ್ಥಳದಿಂದ ವಿಶ್ವದರ್ಶನ ಮಾಡುತ್ತಿರುವ ನಾಗರಿಕನಿಗೆ ಮಾಧ್ಯಮದಲ್ಲಿ ಪ್ರಸಾರವಾಗುವ ಇಲ್ಲವೇ ಮುದ್ರಣವಾಗುವ ಎಲ್ಲಾ ಅಂಶಗಳು ಸತ್ಯ ಎಂಬ ಭ್ರಮೆ ಆವರಿಸಕೊಳ್ಳತೊಡಗಿದೆ.

ತಾನು ಹುಟ್ಟಿದ ನೆಲದ ಸಂಸ್ಕೃತಿಗೆ ಪೂರಕವಾಗಿ, ಪರಿಸರಕ್ಕೆ ಎರವಾಗದಂತೆ ಬದುಕಿದ್ದ ನಮ್ಮ ಪೂರ್ವಿಕರ ಜ್ಞಾನ ಪರಂಪರೆ ನಾಶವಾಗಿ ಪಕೃತಿಯ ಕೊಡುಗೆಗಳಾದ ನೆಲ, ಜಲ, ವಾಯು ಎಲ್ಲವೂ ಮನುಷ್ಯನ ಅನುಭೋಗಕ್ಕೆ ಮೀಸಲಾದ ಪುಕ್ಕಟೆ ಕೊಡುಗೆಗಳು ಎಂಬ ಅಹಂಕಾರ ಅರಿವಿಲ್ಲದೆ ಇತ್ತೀಚೆಗಿನ ದಿನಗಳಲ್ಲಿ ಮನುಷ್ಯರನ್ನು ಆವರಿಸಿಕೊಳ್ಳತೊಡಗಿದೆ. ಈ ಕಾರಣಕ್ಕಾಗಿ ಪರಿಸರವೇ ಕಲುಷಿತಗೊಂಡು, ಎಲ್ಲವೂ ಸರಕಿನಂತೆ ಮಾರಾಟವಾಗುತ್ತಿವೆ. ಆಧುನಿಕ ಜಗತ್ತಿನಲ್ಲಿ ಬೆಲೆ ಪಟ್ಟಿ ಧರಿಸಿಕೊಂಡಿರುವ ಒಂದು ಲೀಟರ್ ಹಾಲಿಗೂ, ನೀರಿಗೂ ಇದ್ದ ಮೌಲ್ಯದ ವೆತ್ಯಾಸ ನಿಧಾನವಾಗಿ ಅಳಿಸಿಹೋಗುತ್ತಿದೆ.

ಒಂದು ಶತಮಾನದ ಹಿಂದೆ ಯಾವುದೇ ಒಂದು ಪ್ರದೇಶದ ಮೇಲೆ ಅಥವಾ ಒಂದು ದೇಶದ ಮೇಲೆ ಹಿಡಿತ ಸಾಧಿಸಲು ಯುದ್ಧ ಅನಿವಾರ್ಯವಾಗಿತ್ತು. ಆದರೆ, ಈಗಿನ ಪಾಶ್ಚಿಮಾತ್ಯ ಜಗತ್ತು ಯುದ್ಧವಿಲ್ಲದ ತಂತ್ರೋಪಾಯಗಳನ್ನು ಕಂಡುಕೊಂಡಿದೆ. ಇಲ್ಲಿ ಯುದ್ಧ ವಿಮಾನಗಳಾಗಲಿ, ಸೈನಿಕರಾಗಲಿ, ಬಾಂಬ್‌ಗಳಾಗಲಿ ಅವಶ್ಯಕತೆ ಇಲ್ಲ. ಗುರಿ ಇಟ್ಟುಕೊಂಡಿರುವ ಪ್ರದೇಶದ ಜನರ ಅಭಿರುಚಿ ಮತ್ತು ಆಹಾರ ಸಂಸ್ಕೃತಿಯನ್ನು ಬದಲಿಸದರೆ ಸಾಕು ಇಡೀ ಪ್ರದೇಶದ ಜನರನ್ನು ಒಳಗೊಂಡು ದೇಶವೇ ಶರಣಾಗುವ ಸ್ಥಿತಿ ಬಂದಿದೆ. ಈ ಕುಟಿಲ ತಂತ್ರೋಪಾಯಗಳಿಗೆ ಬೇಕಾಗಿರುವುದು ಕೇವಲ ಮಾಧ್ಯಮಗಳು ಮಾತ್ರ. ಜಾಹೀರಾತಿನ ಪ್ರಲೋಭನೆ ಮುಖಾಂತರ ಜೀವನ ಶೈಲಿಯನ್ನು, ಜನರ ಸಂಸ್ಕೃತಿಯನ್ನು ಬದಲಾಯಿಸಬಹುದು ಎಂಬುದನ್ನು ಜಾಗತೀಕರಣ ವ್ಯವಸ್ಥೆ ಆಧುನಿಕ ಜಗತ್ತಿಗೆ ಮನವರಿಕೆ ಮಾಡಿಕೊಟ್ಟಿದೆ. ಈ ಕಾರಣಕ್ಕಾಗಿ ನಮ್ಮ ಬರಗೂರು ರಾಮಚಂದ್ರಪ್ಪ ಜಾಗತೀಕರಣವನ್ನು " ಶಬ್ಧವಿಲ್ಲದ ನಿಶ್ಯಬ್ಧ ಯುದ್ಧ" ಎಂದು ಅರ್ಥಪೂರ್ಣವಾಗಿ ಕರೆದಿದ್ದಾರೆ. ಇದಕ್ಕೆ ಉದಾಹರಣೆಯಾಗಿ ವರ್ತಮಾನ ಜಗತ್ತಿನ ಆಹಾರ, ಉಡುಪು, ನಾವು ಕೇಳುವ ಸಂಗೀತ, ನೋಡುವ ಸಿನಿಮಾ, ಯುವ ತಲೆಮಾರಿನ ಚಿಂತನೆಯ ಮಾದರಿಗಳು ಇವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ನಮ್ಮ ಅಭಿವೃದ್ಧಿಯ ಪಥ ಯಾವ ದಿಕ್ಕಿನತ್ತ ಚಲಿಸುತ್ತಿದೆ ಎಂಬುದನ್ನು ಗ್ರಹಿಸಬಹುದು.

ಬಹುಮುಖಿ ಸಂಸ್ಕೃತಿಯ ನೆಲವಾದ ಭಾರತದ ವೈವಿಧ್ಯತೆಯ ಭಾಷೆ ಧರ್ಮ, ಆಚಾರ ವಿಚಾರಗಳ, ಜಾತಿ, ಇವುಗಳ ನಡುವೆಯೂ ಒಂದು ಉದಾತ್ತ ಸಂಸ್ಕೃತಿಯೊಂದು ಬೆಳೆದು ಬಂದಿತ್ತು. ಪರಧರ್ಮ, ಜಾತಿ ಸಹಿಷ್ಣು ಮನೋಭಾವ ಈ ಉದಾತ್ತ ಮನೋಭಾವ ಮತ್ತು ಸಂಸ್ಕೃತಿಯ ಜೀವಾಳವಾಗಿತ್ತು. ನಮ್ಮ ಪೂರ್ವಿಕರ ದೇಶಿ ಜ್ಞಾನ ಪರಂಪರೆ, ಅದರ ಕೊಡುಗೆಗಳಾದ ಯೋಗ, ಧ್ಯಾನ, ಆಯುರ್ವೆದ ಔಷದ ಪದ್ಧತಿ, ನಮ್ಮ ಸಾಕು ಪ್ರಾಣಿಗಳಾದ ಜಾನುವಾರುಗಳಿಗೆ ನೀಡುತಿದ್ದ ಗಿಡಮೂಲಿಕೆಗಳ ಔಷಧಗಳು, ಹವಾಮಾನಕ್ಕೆ ಅನುಗುಣವಾಗಿ ಬದಲಾಗುತಿದ್ದ ನಮ್ಮ ಆಹಾರ ಪದ್ಧತಿ ಇವೆಲ್ಲವೂ ಆಧುನಿಕತೆಯ ಅಭಿವೃದ್ಧಿಯ ರಥದ ಗಾಲಿಯಡಿ ಸಿಲುಕಿ ನುಚ್ಚು ನೂರಾಗಿವೆ. ನಮ್ಮ ಬಹು ಸಂಸ್ಕೃತಿ ನಮ್ಮೆಲ್ಲರ ಅರಿವಿಗೆ ಬಾರದಂತೆ ಏಕಮುಖಿ ಸಂಸ್ಕೃತಿಯತ್ತ ಜಾರಿದೆ. ಇದು ಮರೆಯಲ್ಲಿ ಕುಳಿತು ಮಾರುಕಟ್ಟೆಯ ಪ್ರಭುತ್ವದ ಸೂತ್ರ ಹಿಡಿದಿರುವ ವ್ಯವಸ್ಥೆಯೊಂದರ ಕಾಣದ ಕೈವಾಡ ಎಂದು ಅರ್ಥೈಸಿಕೊಳ್ಳಲಾರದ ವಿಸ್ಮೃತಿಗೆ ನಾವು ತಳ್ಳಲ್ಪಟ್ಟಿದ್ದೇವೆ.

ಅನ್ನ ತಿನ್ನುವ ಬಾಯಿಗೆ ನ್ಯೂಡಲ್ಸ್ ಮತ್ತು ಪಿಜ್ಜಾಗಳನ್ನು ತುರುಕಲಾಗುತ್ತಿದೆ. ಮಜ್ಜಿಗೆ, ಎಳನೀರು ಕುಡಿಯುತಿದ್ದ ಗಂಟಲಿಗೆ ಪೆಪ್ಸಿ, ಕೊಕಾಕೋಲಾ ಸುರಿಯಲಾಗುತ್ತಿದೆ, ಚಕ್ಕುಲಿ, ಕೋಡುಬಳೆ ಹಿಡಿಯುತಿದ್ದ ಕೈಗಳಿಗೆ ಲೇ ಮತ್ತು ಕುರ್ ಕುರೆ ಚಿಪ್ಸ್ ಪಾಕೇಟ್ ಹಾಗೂ ಕೆಂಟುಕಿ ಚಿಕನ್ ನೀಡಲಾಗಿದೆ. ಅರಿಶಿನ, ಶ್ರೀಗಂಧ ಬಳಿದುಕೊಳ್ಳುತ್ತಿದ್ದ ಮುಖಗಳಿಗೆ ಮಾರುಕಟ್ಟೆಯಲ್ಲಿರುವ ನೂರಾರು ಕ್ರೀಮ್‌ಗಳನ್ನು ಬಳಿಯಲಾಗುತ್ತಿದೆ. ಕೇವಲ ಹದಿನೈದು ದಿನಗಳಲ್ಲಿ ಕಪ್ಪಗಿದ್ದವರನ್ನು ಬೆಳ್ಳಗೆ ಮಾಡುವ, ದಪ್ಪಗಿದ್ದವರನ್ನ ಸಣ್ಣಗೆ ಮಾಡುವ, ಬೋಳುತಲೆಯಲ್ಲಿ ಸೊಂಪಾಗಿ ತಲೆಕೂದಲು ಬೆಳಸುವ ಇವಿಷ್ಟೆ ಅಲ್ಲದೇ ಇಡೀ ರಾತ್ರಿ ನಿಮ್ಮ ಸಂಗಾತಿಗೆ ನಿರಂತರ ಸುಖ ನೀಡುವ ಮಾತ್ರೆಗಳನ್ನು ರೂಪಿಸಲಾಗಿದೆ! ಇವುಗಳ ಖಚಿತತೆಯ ಬಗ್ಗೆ ಶೋಧನೆಯಾಗಲಿ, ವಿವೇಚನೆಯಾಗಲಿ ಇಲ್ಲದೆ, ಮಧ್ಯಮ ವರ್ಗದ ಗ್ರಾಹಕ ಜಗತ್ತು ಶರಣಾಗಿದೆ. ಈ ನಕಲಿ ಸಂಸ್ಕೃತಿಗೆ ನಮ್ಮ ಮಾಧ್ಯಮಗಳು ಏಜೆಂಟರಂತೆ ಕಾರ್ಯನಿರ್ವಹಿಸುತ್ತಿವೆ. ಬಹುರಾಷ್ಟ್ರೀಯ ಕಂಪನಿಗಳ ಇಂತಹ ಪ್ರಲೋಭನೆಗಳು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಬೇಕೇ ಎಂಬುದರ ಬಗ್ಗೆ ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ.

ನಾಲ್ಕು ಜನ ಉಳ್ಳವರ ನೆಮ್ಮದಿಯ ಬದುಕಿಗಾಗಿ ನಲವತ್ತು ಜನರ ನೆಮ್ಮದಿಯ ಬದುಕನ್ನು ಕಿತ್ತುಕೊಳ್ಳವ ಇಂದಿನ ಅಭಿವೃದ್ಧಿ ಯೋಜನೆಗಳ ಬಗೆಗಿನ ಚಿಂತನೆಗಳನ್ನು ನಾವೀಗ ಪರಾಮರ್ಶಿಸಬೇಕಿದೆ.

ಅಭಿವೃದ್ಧಿಯ ಬಗ್ಗೆ ಪುಂಖಾನು ಪುಂಖವಾಗಿ ವಿಚಾರ ಲಹರಿಯನ್ನು ಹರಿಯ ಬಿಡುವ ಜಾಗತೀರಣ ಅಥವಾ ಮಾರುಕಟ್ಟೆ ಪ್ರಭುತ್ವದ ವಕ್ತಾರರು, ಈ ದೇಶದಲ್ಲಿ ನಿವಾರಣೆಯಾಗದ ಬಡತನ, ಸುಧಾರಣೆಯಾಗದ ಆರೋಗ್ಯ ಕ್ಷೇತ್ರ, ದುಬಾರಿಯಾದ ಬಡವರ ಪಾಲಿನ ಜೀವರಕ್ಷಕ ಔಷಧಗಳು, ಮಧ್ಯಮವರ್ಗದ ಜನತೆಗೆ ನಿಲುಕದ ಉನ್ನತ ಶಿಕ್ಷಣ,ಮಕ್ಕಳ ಅಪೌಷ್ಟಿಕತೆ, ರೈತರ ಧಾರುಣ ಆತ್ಮಹತ್ಯೆ, ಆದಿವಾಸಿಗಳ ಅತಂತ್ರ ಬದುಕು, ಕಲ್ಮಶವಾಗುತ್ತಿರುವ ನೀರಿನ ಮೂಲಗಳು ಬತ್ತಿಹೋಗುತ್ತಿರುವ ನದಿಗಳು, ಪದೇ ಪದೇ ಕಿತ್ತುಹೋಗಿ ರಿಪೇರಿಯಾಗುವ

ರಾಷ್ಟ್ರೀಯ ಹೆದ್ದಾರಿಗಳು ಇವುಗಳ ಹಿಂದಿನ ಹುನ್ನಾರವೇನು? ಯಾರಾದರೂ ಅರ್ಥೈಸಿ ಹೇಳಬಲ್ಲರೆ? ಅಥವಾ ವಿಶ್ಲೇಷಿಸಬಲ್ಲರೆ?

ದಿನಕ್ಕೆ 28 ರೂಪಾಯಿ ದುಡಿಯಬಲ್ಲ ವ್ಯಕ್ತಿ ಬಡವನಲ್ಲ ಎಂದು ಈ ದೇಶದ ರಾಷ್ಟ್ರೀಯ ಆಯೋಗ ಘೋಷಣೆ ಮಾಡಿದೆ. ಬಡವ ಬಲ್ಲಿದ ಎಂಬ ಬೇಧ ಭಾವವಿಲ್ಲದೆ ನಾವು ತಿನ್ನುವ ಅಕ್ಕಿಯ ಬೆಲೆ ಕಿ.ಲೋ. ಒಂದಕ್ಕೆ 36 ರೂಪಾಯಿ, ಜೋಳ 28 ರೂಪಾಯಿ, ಗೋಧಿಯ ಬೆಲೆ 26 ರೂಪಾಯಿ ಇದ್ದು ಬೆಲೆಗಳು ದಿನೇದಿನೇ ಏರಿಕೆಯಾಗುತ್ತಲೇ ಇವೆ. ಇಂತಹ ದುಬಾರಿಯಾದ ಅಗತ್ಯವಸ್ತುಗಳ ಬೆಲೆ ಏರಿಕೆಯ ಪ್ರಪಂಚದಲ್ಲಿ ಬಡವರು ಹೇಗೆ ಬದುಕಬೇಕು? ಇದಕ್ಕೆ ಯಾರಲ್ಲಿ ಉತ್ತರ ಪಡೆಯೋಣ?

ಯಾವುದೇ ಒಂದು ದೇಶದ ಅಭಿವೃದ್ಧಿಯನ್ನು ಆ ದೇಶದ ಜನರ ತಲಾ ವರಮಾನ ಅಥವಾ ಒಟ್ಟು ರಾಷ್ಟ್ರೀಯ ಉತ್ಪನ್ನಗಳ(ಜಿ.ಡಿ.ಪಿ.) ಮಾನದಂಡದಿಂದ ಅಳೆದರಷ್ಟೇ ಸಾಲದು, ಅಲ್ಲಿನ ಜನರ ಬದುಕಿನ ಬೌತಿಕ ಸ್ಥಿತಿಗತಿಯನ್ನೂ ಕೂಡ ಪರಿಗಣನೆಗೆ ತೆಗೆದುಕೊಳ್ಳಬೇಕು ಎಂಬುದು ಇತ್ತೀಚೆಗಿನ ಆರ್ಥಿಕ ತಜ್ಞರ ವಾದವಾಗಿದೆ. ಇದಕ್ಕೆ ಚಾಲನೆ ನೀಡಿದವರು ನಮ್ಮವರೇ ಆದ ನೋಬೆಲ್ ಪ್ರಶಸ್ತಿ ವಿಜೇತ ಅಮಾರ್ತ್ಯ ಸೇನ್. ವ್ಯಕ್ತಿಯೊಬ್ಬನ ಧಾರಣಾ ಸಾಮರ್ಥ್ಯ ಅಂದರೆ, ಆತನಿಗೆ ಸಿಗುತ್ತಿರುವ ಸಾಮಾಜಿಕ ಸೌಲಭ್ಯಗಳು, ಶಿಕ್ಷಣ, ಆರೋಗ್ಯ ಮುಂತಾದ ಸವಲತ್ತುಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕೆಂದು ಸೇನ್ ಒತ್ತಾಯಿಸಿದ್ದಾರೆ. ಕೇವಲ ಬೌತಿಕ ಸಂಪತ್ತು ನಿಜವಾದ ಮಾನದಂಡವಾಗಲಾರದು ಎಂಬುದು ಅವರ ನಿಲುವು. (ಈ ಕುರಿತಂತೆ ಅವರ "ದ ಐಡಿಯಾ ಆಫ್ ಜಸ್ಟೀಸ್" ಹಾಗೂ "ಡೆವಲಪ್‌ಮೆಂಟ್ ಅಂಡ್ ಫ್ರೀಡಂ" ಕೃತಿಯನ್ನು ಅವಲೋಕಿಸಬಹುದು) ಇದಕ್ಕಿಂತ ಭಿನ್ನವಾದ ಪರಿಕಲ್ಪನೆಯೊಂದನ್ನ ಭೂತಾನ್ ದೇಶದ ದೊರೆ ಹುಟ್ಟುಹಾಕಿದ್ದಾನೆ. ಅವನ ದೃಷ್ಟಿಯಲ್ಲಿ ರಾಷ್ಟ್ರವೊಂದರ ಜಿ.ಡಿ.ಪಿ. (ಒಟ್ಟು ರಾಷ್ಟ್ರೀಯ ಉತ್ಪನ್ನ)ಗಿಂತ ರಾಷ್ಟ್ರದ ಜನರ ನೆಮ್ಮದಿ ಮುಖ್ಯ ಎಂಬುದು ಭೂತಾನ್ ದೊರೆಯ ಅಭಿಮತ.

ಅಮಾರ್ತ್ಯಸೇನ್ ಸಿದ್ಧಾಂತವನ್ನು ನಾವು ಪರಿಗಣಿಸುವುದಾದರೆ, ನಾವು ಭಾರತವನ್ನು ಅಭಿವೃದ್ಧಿಶೀಲ ರಾಷ್ಟ್ರವೆಂದು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ, ಇಲ್ಲಿನ 120 ಕೋಟಿ ಜನಸಂಖ್ಯೆಯಲ್ಲಿ ಶೇ.70ರಷ್ಟು ಜನತೆ ಹಳ್ಳಿಗಳಲ್ಲಿ ವಾಸವಾಗಿದ್ದಾರೆ. ಇವರಲ್ಲಿ ಬಹುತೇಕ ಮಂದಿ ಆರೋಗ್ಯ ಮತ್ತು ಉನ್ನತ ಶಿಕ್ಷಣ, ಮುಂತಾದ ಸವಲತ್ತುಗಳಿಂದ ವಂಚಿತರಾಗಿದ್ದಾರೆ.

ಇದು ಈ ದೇಶದ ವೈರುಧ್ಯವೊ ಅಥವಾ ವರ್ತಮಾನದ ವ್ಯಂಗ್ಯವೊ ತಿಳಿಯಲಾಗದು. ಭಾರತದಲ್ಲಿ 50 ಕೋಟಿಗೂ ಅಧಿಕ ಜನ ಶೌಚಾಲಯಗಳಿಂದ ವಂಚಿತರಾಗಿದಾರೆ. ಆದರೆ, 120 ಕೋಟಿ ಜನಸಂಖ್ಯೆಗೆ 92 ಕೋಟಿ ಮೊಬೈಲ್ ಚಂದಾದಾರರಿದ್ದಾರೆ. ಭಾರತದ ಅಭಿವೃದ್ಧಿಯನ್ನು ಮೊಬೈಲ್ ಚಂದಾದಾರರ ಮೂಲಕ ಅಳೆಯಬೇಕೋ? ಅಥವಾ ಶೌಚಾಲಯ ವಂಚಿತರಿಂದ ಅಳೆಯಬೇಕೊ? ನೀವೆ ನಿರ್ಧರಿಸಿ. ಇದೀಗ ನಮ್ಮ ಪ್ರಧಾನಮಂತ್ರಿ ಬಡತನ ರೇಖೆಯ ಕೆಳಗಿರುವ ಕುಟುಂಬಗಳಿಗೆ ಉಚಿತ ಮೊಬೈಲ್ ಹಾಗೂ ತಿಂಗಳಿಗೆ ಇನ್ನೂರು ರೂಪಾಯಿಗಳ ಮಾತನಾಡುವ ಸಮಯ ನೀಡಲು ಮುಂದಾಗಿದ್ದಾರೆ. 2011ರ ಸಮೀಕ್ಷೆಯ ಪ್ರಕಾರ ಭಾರತದಲ್ಲಿ ಏಳು ಕೋಟಿ ಐವತ್ತು ಲಕ್ಷ ಹಳ್ಳಿಗಳು ವಿದ್ಯುತ್ ಸೌಲಭ್ಯಗಳಿಂದ ವಂಚಿತವಾಗಿವೆ. 2004ರಲ್ಲಿ ಕೇಂದ್ರ ಸರ್ಕಾರ ಹಮ್ಮಿಕೊಂಡ ರಾಜೀವ್‌ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆಯ ಪ್ರಕಾರ ಐದು ವರ್ಷದ ಅವಧಿಯಲ್ಲಿ ದೇಶದ ಎಲ್ಲಾ ಮನೆಗಳಿಗೂ ಬೆಳಕು ಹರಿಯಬೇಕಿತ್ತು. ಈಗ ಯೋಜನೆಯ ಗುರಿಯನ್ನು 2017ಕ್ಕೆ ವಿಸ್ತರಿಸಲಾಗಿದೆ. ದೇಶದಲ್ಲಿ ಪ್ರತಿವರ್ಷ ಶೇ. 15ರಷ್ಟು ವಿದ್ಯುತ್ ಬೇಡಿಕೆ ಇದ್ದು , ಹೊಸದಾಗಿ ಉತ್ಪಾದನೆಯಾಗುತ್ತಿರುವುದು ಕೇವಲ ಶೇ. 9ರಷ್ಟು ಮಾತ್ರ. ಉತ್ಪಾದನೆಯಾಗುತ್ತಿರುವ ವಿದ್ಯುತ್‌ನಲ್ಲಿ ವಿತರಣೆಯ ಸಮಯದಲ್ಲಿ ಕಳಪೆ ತಾಂತ್ರಿಕ ಗುಣಮಟ್ಟ ಮತ್ತು ನಿರ್ವಹಣೆಯಿಂದಾಗಿ ಶೇ. 25ರಿಂದ ಶೇ. 40ರಷ್ಟು ಬಳಕೆಗೆ ಬಾರದೆ ಸೋರಿಹೋಗುತ್ತಿದೆ. ಇವತ್ತಿನ ಬಡಜನತೆಗೆ ಅಗತ್ಯವಾಗಿ ಬೇಕಾಗಿರುವುದು, ಮೊಬೈಲ್‌ಗಳಲ್ಲ, ಬದಲಾಗಿ ರೋಗಮುಕ್ತ ಜೀವನ. ಆ ಕುಟುಂಬಗಳಿಗೆ ಸೊಳ್ಳೆಗಳಿಂದ ಮುಕ್ತಿ ಪಡೆಯಲು ಸೊಳ್ಳೆಪರದೆ ವಿತರಣೆಯಾದರೆ ಮಲೇರಿಯಾ, ಡೆಂಗ್ಯೂ ಮುಂತಾದ ಕಾಯಿಲೆಗಳಿಂದ ಈ ಅಮಾಯಕರನ್ನು ರಕ್ಷಿಸಬಹುದು ಎಂಬ ಕನಿಷ್ಟ ತಿಳುವಳಿಕೆ ಮತ್ತು ಜ್ಞಾನ ವಿಶ್ವವಿಖ್ಯಾತ ಆರ್ಥಿಕ ತಜ್ಞರೆನಿಕೊಂಡ ನಮ್ಮ ಪ್ರಧಾನಿಗೆ ಇಲ್ಲವಾದರೆ ದೇಶದ ಗತಿಯೇನು? ಈ ಜನರ ಭವಿಷ್ಯವೇನು?

ಈ ದೇಶದ ಆರೋಗ್ಯ ವಲಯವಂತೂ ಸುಧಾರಿಸಲಾಗದ ಹಂತವನ್ನು ತಲುಪಿದೆ. ಆರೋಗ್ಯ ಸೇವೆ ಬಡವರ ಪಾಲಿಗೆ ನಿಲುಕದ ನಕ್ಷತ್ರದಂತಾಗಿದೆ. ಜಾಗತೀಕರಣದ ಫಲವಾಗಿ ಜಗತ್ತಿನ ಬಹುತೇಕ ರಾಷ್ಟ್ರಗಳ ಸರ್ಕಾರಗಳು ಸಾಮಾಜಿಕ ಕಲ್ಯಾಣ ಕಾರ್ಯಗಳಿಂದ ಹಿಂದೆ ಸರಿದು ಖಾಸಾಗೀಕರಣಕ್ಕೆ ಹಾದಿ ಮಾಡಿಕೊಟ್ಟಿವೆ. ಕಳೆದ ಐದು ವರ್ಷಗಳಲ್ಲಿ ಜೀವ ರಕ್ಷಕ ಔಷಧಗಳ ಬೆಲೆ ದುಪ್ಪಟ್ಟಾಗಿದೆ. ಈಗಾಗಲೇ ಪಾಶ್ಚಿಮಾತ್ಯ ದೇಶಗಳಲ್ಲಿ ಜೀವಕ್ಕೆ ಅಡ್ಡಪರಿಣಾಮಗಳಿಂದ ಅಪಾಯ ಎಂದು ತಿರಸ್ಕರಿಸುವ ಸುಮಾರು ನಲವತ್ತು ವಿವಿಧ ಬಗೆಯ ಔಷಧಗಳು ಭಾರತದ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿವೆ. ಇದಲ್ಲದೆ ಯಾವುದೇ ಪೂರ್ವ ಪ್ರಯೋಗಗಳಿಲ್ಲದೆ ಮಾರುಕಟ್ಟೆಗೆ 33 ಔಷಧಗಳು ಬಿಡುಗಡೆಯಾಗಿವೆ. ಈ ಬಗ್ಗೆ ಕೇಂದ್ರ ಸರ್ಕಾರ ತನಿಖೆಗೆ ಉನ್ನತ ಸಮಿತಿಯೊಂದನ್ನು ನೇಮಕ ಮಾಡಿದ ಮರುದಿನವೇ ಕೇಂದ್ರ ಆರೋಗ್ಯ ಸಚಿವರ ಕಛೇರಿಯಲ್ಲಿ ಈ ಹಗರಣದ ಫೈಲು ಕಾಣೆಯಾಗಿದೆ. ನಾವು ಎಂತಹ ಕೀಳು ಮಟ್ಟದ ಅಭಿರುಚಿಯ ಆರೋಗ್ಯ ಸಚಿವರನ್ನು (ಗುಲಾಮ್ ನಬಿ ಅಜಾದ್) ಪಡೆದಿದ್ದೇವೆ ಎಂದರೆ, ಜನಸಂಖ್ಯೆಯ ನಿಯಂತ್ರಣಕ್ಕೆ ಪ್ರತಿ ಮನೆಯಲ್ಲಿ ಟಿ.ವಿ. ಇರಬೇಕು ಎಂಬುದು ಅವರ ಅಭಿಮತ. ಏಕೆಂದರೆ, ತಡರಾತ್ರಿ ಜನತೆ ಧಾರವಾಹಿಗಳನ್ನು ನೋಡುವುದರಿಂದ ಲೈಂಗಿಕ ಕ್ರಿಯೆಯಿಂದ ದೂರವಿರುತ್ತಾರೆ ಎಂಬುದು ನಮ್ಮ ಆರೋಗ್ಯ ಸಚಿವರ ನೂತನ ಸಂಶೋಧನೆ! (ದಿನಾಂಕ 12–7–12 ರ ದೆಹಲಿ ಆವೃತ್ತಿ ಡಿ.ಎನ್.ಎ. ಇಂಗ್ಲಿಷ್ ದೈನಿಕಕ್ಕೆ ನೀಡಿರುವ ಹೇಳಿಕೆ)

ಈ ದಿನ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ವೈದ್ಯರೇ ಸಿಗದಿರುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಡವರ ಪಾಲಿಗೆ ಸಂಜೀವಿನಿಯಾಗಿದ್ದ ಗ್ರಾಮಾಂತರ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ವೈದ್ಯರಿಲ್ಲದೆ ಪಾಳುಬಿದ್ದಿವೆ. ಇತ್ತೀಚೆಗಿನ ದಿನಗಳಲ್ಲಿ ದುಬಾರಿಯಾದ ವೈದ್ಯಕೀಯ ಶಿಕ್ಷಣದಿಂದಾಗಿ ಪ್ರತಿಯೊಬ್ಬ ವೈದ್ಯನೂ, ಕಡಿಮೆ ವೇತನದ ಸರ್ಕಾರಿ ಹುದ್ದೆಗೆ ಬದಲಾಗಿ ಖಾಸಾಗಿಯಾಗಿ ದುಡಿಯಲು ಪ್ರಯತ್ನಿಸುತಿದ್ದಾನೆ.

2008ರ ಮಾರ್ಚ್ ಅಂತ್ಯದ ವೇಳೆಗೆ ಭಾರತದಲ್ಲಿ ನೋಂದಣಿಯಾದ ವೈದ್ಯರ ಸಂಖ್ಯೆ 95524 ಅಂದರೆ, ಸರಾಸರಿ ಪ್ರತಿ ಹತ್ತು ಸಾವಿರ ಜನಸಂಖ್ಯೆಗೂ ಒಬ್ಬ ವೈದ್ಯನಿಲ್ಲದ ಸ್ಥಿತಿ. ಚೀನಾದಲ್ಲಿ ಪ್ರತಿಸಾವಿರಕ್ಕೆ 14 ವೈದ್ಯರಿದ್ದಾರೆ. ಐರೋಪ್ಯ ರಾಷ್ಟ್ರಗಳಲ್ಲಿ ಪ್ರತಿ ನೂರು ಜನಸಂಖ್ಯೆಗೆ ಒಬ್ಬ ದಾದಿ ಇದ್ದರೆ, ಭಾರತದಲ್ಲಿ ಪ್ರತಿ 2115 ಜನಸಂಖ್ಯೆಗೆ ಒರ್ವ ದಾದಿ ಇದ್ದಾಳೆ. ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯಂತೆ ಆಫ್ರಿಕಾ ದೇಶಗಳಲ್ಲಿ ಅಲ್ಲಿನ ಸರ್ಕಾರಗಳು ತಮ್ಮ ಆಯ ವ್ಯಯದ ಶೇ.6.2ರಷ್ಟನ್ನು ವಿನಿಯೋಗಿಸುತಿದ್ದರೆ, ಭಾರತದಲ್ಲಿ ವಿನಿಯೋಗದ ಪ್ರಮಾಣ ಶೇ.4.1ರಷ್ಟು ಮಾತ್ರ.

2020ನೇ ಇಸವಿ ವೇಳೆಗೆ ಭಾರತಕ್ಕೆ ಗ್ರಾಮೀಣ ಪ್ರದೇಶಗಳೂ ಸೇರಿದಂತೆ 7.42 ಲಕ್ಷ ಸಹಾಯಕ ದಾದಿಯರು 4.4 ಲಕ್ಷ ಪುರುಷ ಶುಶ್ರೂಕರು, 14.9 ಲಕ್ಷ ನುರಿತ ನರ್ಸ್‌ಗಳು, 3.67 ಲಕ್ಷ ವೈದ್ಯರು, 2 ಲಕ್ಷ ತಜ್ಞವೈದ್ಯರು ಬೇಕಾಗಿದ್ದಾರೆ ಎಂದು ಅಂದಾಜಿಸಲಾಗಿದೆ. ಇವರನ್ನು ಸೃಷ್ಟಿಸಬೇಕಾದ ಭಾರತೀಯ ವೈದ್ಯಕೀಯ ಮಂಡಲಿ ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿ ಹೋಗಿದೆ. ಇದರ ಅಧ್ಯಕ್ಷ (ಕೇತನ್ ದೇಸಾಯಿ) ಎಂಬ ವ್ಯಕ್ತಿಯ ಬ್ರಹ್ಮಾಂಡ ಭ್ರಷ್ಟಾಚಾರ ಬಯಲಾಗಿ ಸರೆಮನೆಯಲ್ಲಿ ಕಂಬಿ ಎಣಿಸುತಿದ್ದಾನೆ. ಇಂತಹ ದಯನೀಯವಾದ ಸ್ಥಿತಿಯಲ್ಲಿ ಅಭಿವೃದ್ಧಿ ಕುರಿತಂತೆ

ಮಾನದಂಡವನ್ನು ಹೇಗೆ ಬಳಸಬೇಕು? ಅರ್ಥಶಾಸ್ತ್ರಜ್ಞರು ಉತ್ತರಿಸಬೇಕಿದೆ.

ವಿಶ್ವಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ ನಡೆಸಿದ ಜಗತ್ತಿನ 169 ರಾಷ್ಟ್ರಗಳ ಸಮೀಕ್ಷಾ ವರದಿಯ ಪ್ರಕಾರ 2009ರಲ್ಲಿ ಮಾನವ ಅಭಿವೃದ್ಧಿಯಲ್ಲಿ 119ನೇ ಸ್ಥಾನದಲ್ಲಿದ್ದ ಭಾರತ 2011ರಲ್ಲಿ 134ನೇ ಸ್ಥಾನಕ್ಕೆ ಕುಸಿದಿದೆ. ಅಚ್ಚರಿಯ ಸಂಗತಿಯೆಂದರೆ, ಜನಾಂಗೀಯ ಕಲಹದಲ್ಲಿ ನಲುಗಿದ ಶ್ರೀಲಂಕಾ 101ನೇ ಸ್ಥಾನ ಪಡೆದಿದೆ. ಬಡತನ ಮತ್ತು ಜಾಗತೀಕರಣದ ಪರಿಣಾಮಗಳ ಕುರಿತಂತೆ ಭಾರತ ಮತ್ತು ಚೀನಾ ರಾಷ್ಟ್ರಗಳ ಬಗ್ಗೆ ತೌಲನಿಕ ಅಧ್ಯಯನ ನಡೆಸಿ 'Chinese And Indian Strategic Bihavior' ಎಂಬ ಕೃತಿ ಪ್ರಕಟಿಸಿರುವ ಜೆ. ಗಿಲ್ ಬಾಯ್ ಮತ್ತು ಎರಿಕ್ ಹಿಗ್ಗಿನ್ ಬಾತಮ್ ಎಂಬುವರು, ಚೀನಾ ದೇಶದಲಿ 1981ರಲ್ಲಿ ಶೇ.84ರಷ್ಟು ಇದ್ದ ಬಡತನ 2005ರ ವೇಳೆಗೆ ಶೇ.16ಕ್ಕೆ ಇಳಿದಿರುವುದನ್ನು ಪ್ರಸ್ತಾಪಿಸುತ್ತಾ, ಚೀನಾದಲ್ಲಿ ಭ್ರಷ್ಟಾಚಾರ ನಿಗ್ರಹ ಕುರಿತಂತೆ ಗಲ್ಲು ಶಿಕ್ಷೆಯಂತಹ ಕಠಿಣ ಕಾನೂನುಗಳು ಜಾರಿಯಲ್ಲಿರುವುದರಿಂದ ಅಲ್ಲಿ ಅಭಿವೃದ್ಧಿಗೆ ವಿನಿಯೋಗಿಸುವ ಹಣ ಸದ್ಬಳಕೆಯಾಗುತ್ತಿದ್ದು ಬಡತನ ನಿವಾರಣೆಗೆ ಸಹಕಾರಿಯಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇದೇ ವೇಳೆ ಭಾರತದ ಬಡತನ 1981ರಿಂದ 2005ರ ಸಮಯದಲ್ಲಿ ಶೇ.60ರಿಂದ ಶೇ.42ಕ್ಕೆ ಇಳಿದಿರುವುದನ್ನು ಅವರು ಗುರುತಿಸಿದ್ದಾರೆ.

ಜಾಗತೀಕರಣದ ಬಗ್ಗೆ ಅಥವಾ ಅದರ ಕೂಸಾದ ಮುಕ್ತ ಮಾರುಕಟ್ಟೆಯ ಪ್ರಕ್ರಿಯೆಗಳ ಬಗ್ಗೆ ಅರ್ಥಶಾಸ್ತ್ರಜ್ಞರು, ಇಲ್ಲವೇ ಅವುಗಳ ವಕ್ತಾರರು ಏನೇ ಹೇಳಲಿ, ಇವತ್ತಿಗೂ ಜಗತ್ತಿನಾದ್ಯಂತ ಪ್ರತಿ ಏಳು ಮಂದಿಗೆ ಒಬ್ಬ ಪ್ರಜೆ ಹಸಿವಿನಿಂದ ಬಳಲುತಿದ್ದಾನೆ. ಜಗತ್ತಿನ ಏಳನೂರು ಕೋಟಿ ಜನ ಸಂಖ್ಯೆಯಲ್ಲಿ 92 ಕೋಟಿ 50 ಲಕ್ಷ ಜನತೆ ಹಸಿವಿನಿಂದ ಕಂಗೆಟ್ಟಿದ್ದಾರೆ. ಮುಂದುವರಿದ ರಾಷ್ಟ್ರಗಳೆಂದು ಗುರುತಿಸಿಕೊಂಡಿರುವ ಅಮೇರಿಕಾ, ಬ್ರಿಟನ್, ಪ್ರಾನ್ಸ್, ಕೆನಡಾ ರಾಷ್ಟ್ರಗಳಲ್ಲಿ 1 ಕೋಟಿ 90 ಲಕ್ಷ ಜನತೆ, ಬ್ರೆಜಿಲ್, ಅರ್ಜೆಂಟೈನಾ, ಚಿಲಿ ಸೇರಿದಂತೆ ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳಲ್ಲಿ 5 ಕೋಟಿ 30 ಲಕ್ಷ ಜನತೆ, ಉತ್ತರ ಮತ್ತು ಪೂರ್ವ ಆಫ್ರಿಕಾ ರಾಷ್ಟ್ರಗಳಲ್ಲಿ 3 ಕೋಟಿ 50 ಲಕ್ಷ ಜನತೆ, ಸೋಮಾಲಿಯ, ಇಥಿಯೊಪಿಯಾ, ರುವಾಂಡ ಸೇರಿದಂತೆ ಸಬ್ ಸಹರಾ ಪ್ರಾಂತ್ಯದ ರಾಷ್ಟ್ರಗಳಲ್ಲಿ 2 ಕೋಟಿ 39 ಲಕ್ಷ ಜನತೆ, ಮತ್ತು ಚೀನಾ, ಭಾರತ, ಪಾಕಿಸ್ತಾನ, ಬಾಂಗ್ಲಾ, ನೇಪಾಳ ಸೇರಿದಂತೆ ಏಷ್ಯಾ ರಾಷ್ಟ್ರಗಳಲ್ಲಿ 5 ಕೋಟಿ 78 ಲಕ್ಷ ಜನತೆ ಹಸಿವಿನ ಬಲೆಯೊಳಗೆ ಬಂಧಿಯಾಗಿದ್ದಾರೆ.

ಯಾವುದೇ ಒಂದು ರಾಷ್ಟ್ರದ ಅಭಿವೃದ್ಧಿ ಬೆಳವಣಿಗೆಯಲ್ಲಿ ಮಾನವ ಸಂಪನ್ಮೂಲ ಅತಿ ಮುಖ್ಯವಾದ ಆಧಾರ. ಇಂತಹ ಸಂಪನ್ಮೂಲವನ್ನು ಸೃಷ್ಟಿಸುವಲ್ಲಿ ಶಿಕ್ಷಣ ವ್ಯವಸ್ಥೆ ಇದಕ್ಕೆ ಅಡಿಪಾಯವಾಗಿರುತ್ತದೆ. ಅಭಿವೃದ್ಧಿಶೀಲ ರಾಷ್ಟ್ರ ಮತ್ತು ಜಗತ್ತಿನಲ್ಲಿ ಅತಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಶಕ್ತಿ ಎಂದೆಲ್ಲಾ ಗುರುತಿಸಿಕೊಂಡಿರುವ ಭಾರತದ ಶಿಕ್ಷಣ ವ್ಯವಸ್ಥೆ ನಿಜಕ್ಕೂ ಗಾಬರಿ ಪಡುವಂತಹದ್ದು. ಇಲ್ಲಿನ ಪ್ರೈಮರಿ ಶಾಲೆಯಿಂದ ಹಿಡಿದು, ಉನ್ನತ ಶಿಕ್ಷಣದವರೆಗೆ, ಎಲ್ಲವೂ ಖಾಸಾಗಿ ಸಂಸ್ಥೆಗಳ ಕಪಿಮುಷ್ಟಿಗೆ ಸಿಲುಕಿದ್ದು, ಇದರಿಂದ ಜನ್ಮ ಪಡೆದ ಕ್ಯಾಪಿಟೇಷನ್ ಮಾಫಿಯ ಇವತ್ತು ಸರ್ಕಾರಗಳನ್ನು ಉರುಳಿಸಬಲ್ಲ ಶಕ್ತಿಯನ್ನು ದಕ್ಕಿಸಿಕೊಂಡಿದೆ.

ಪ್ರಜಾಪ್ರಭುತ್ವ ವ್ಯವಸ್ಥೆ ಇರುವ ಸರ್ಕಾರಗಳು ಜನತೆಗೆ ನೀಡಬೇಕಾದ ಶಿಕ್ಷಣ, ಆರೋಗ್ಯಸೇವೆ ಮುಂತಾದ ಸವಲತ್ತುಗಳಿಂದ ತಮ್ಮ ಜವಾಬ್ದಾರಿಯನ್ನು ಕಳೆದುಕೊಂಡು ಖಾಸಾಗೀಕರಣಗೊಳಿಸುತ್ತಿರುವುದು ನಿಜಕ್ಕೂ ಆತಂಕಕಾರಿಯಾದುದು. ಈಗ ಉಳ್ಳವರಿಗಷ್ಟೇ ಶಿಕ್ಷಣ ಎಂಬಂತಾಗಿದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ, ದೇಶದ ಬಹುತೇಕ ಉನ್ನತ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳು ಇಲ್ಲಿನ ರಾಜಕಾರಣಿಗಳು, ಇಲ್ಲವೇ ಧಾರ್ಮಿಕ ಸಂಸ್ಥೆಗಳ ಒಡೆತನದಲ್ಲಿವೆ. ಸರ್ಕಾರಿ ಶಾಲೆಗಳ ಬಗ್ಗೆ ಸರ್ಕಾರಗಳು ತಾಳಿದ ನಿರ್ಲಕ್ಷ್ಯ ಧೋರಣೆಯಿಂದಾಗಿ ಒಂದೊಂದಾಗಿ ಕಣ್ಮುಚ್ಚುತ್ತಿವೆ. ದುಬಾರಿ ಶಿಕ್ಷಣ ಶುಲ್ಕ ಮತ್ತು ಡೊನೇಶನ್‌ನಂತಹ ಅಪಾಯಕಾರಿ ಬೆಳವಣಿಗೆಯಿಂದಾಗಿ ಇವತ್ತಿಗೂ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಶೇ.11ರಷ್ಟನ್ನು ದಾಟಿಲ್ಲ. ಈ ದೇಶದಲ್ಲಿ ನೂರಾರು ವಿಶ್ವವಿದ್ಯಾನಿಲಯಗಳಿವೆ. ಅಲ್ಲಿ ಪ್ರತಿವರ್ಷ ಸಂಶೋಧನೆ ಹೆಸರಿನಲ್ಲಿ ಚಟುವಟಿಕೆಗಳು ನಡೆಯುತ್ತಿವೆ. ಡಾಕ್ಟರೇಟ್ ಪದವಿಗಳು ವಿತರಣೆಯಾಗುತ್ತಿವೆ. ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಂತಹ ಒಂದೆರೆಡು ಸಂಸ್ಥೆಗಳನ್ನು ಹೊರತು ಪಡಿಸಿದರೆ, ಇಲ್ಲಿನ ವಿ.ವಿಗಳು ಪದವಿ ನೀಡಿರುವ ಸಂಶೋಧನೆಗಳಿಂದ ದೇಶಕ್ಕೆ ಎಷ್ಟರ ಮಟ್ಟಿಗೆ ಪ್ರಯೋಜನವಾಗಿದೆ? ಎಷ್ಟು ಪ್ರಬಂಧಗಳು ಪ್ರಕಟವಾಗಿವೆ? ಯಾರಲ್ಲೂ ಸ್ಪಷ್ಟ ಮಾಹಿತಿಯಿಲ್ಲ. ಇಂದಿಗೂ ಜಗತ್ತಿನ ನೂರು ಶ್ರೇಷ್ಠ ವಿ.ವಿಗಳ ಪೈಕಿ ಭಾರತದ ಯಾವ ವಿಶ್ವವಿದ್ಯಾನಿಲಯವೂ ಸ್ಥಾನ ಪಡೆದಿಲ್ಲ. ಇದು ನಮ್ಮ ಶಿಕ್ಷಣ ವ್ಯವಸ್ಥೆಯ ನಾಚಿಕೆಗೇಡಿನ ಸಂಗತಿ ಎಂದೂ ಯಾರಿಗೂ ಅನಿಸಿಲ್ಲ.

ಕರ್ನಾಟಕದ ಉದಾಹರಣೆ ತೆಗೆದುಕೊಂಡರೆ, ರಾಜಕೀಯ ಕಾರಣದಿಂದಾಗಿ ಇಲ್ಲಿ ಪ್ರತಿವರ್ಷ ಎರಡು ಹೊಸ ವಿಶ್ವ ವಿದ್ಯಾನಿಲಯಗಳು ನಾಯಿಕೊಡೆಯಂತೆ ಹುಟ್ಟುತ್ತಿವೆ. ಹೊಸ ವಿ.ವಿ.ಗಳಲ್ಲಿ ಶೇ.60 ರಷ್ಟು ಉಪನ್ಯಾಸಕರು, ಪ್ರಾಧ್ಯಾಪಕರು ನೇಮಕವಾಗಿಲ್ಲ. ಹಳೆಯ ವಿ.ವಿ.ಗಳಲ್ಲಿ ಭಡ್ತಿ, ಮೀಸಲಾತಿ ಮುಂತಾದ ಕಾರಣಗಳಿಂದ ಶೇ.40ರಷ್ಟು ಸ್ಥಾನಗಳು ಭರ್ತಿಯಾಗಿಲ್ಲ. ಕರ್ನಾಟಕದ ಅತೀ ಹಳೆಯದಾದ ಎರಡನೇ ವಿ.ವಿ. ಎಂಬ ಹೆಗ್ಗಳಿಕೆಗೆ ಗುರಿಯಾಗಿರುವ ಧಾರವಾಡದ ಕರ್ನಾಟಕದ ವಿಶ್ವವಿದ್ಯಾನಿಲಯದಲ್ಲಿ ಕಳೆದ ಎರಡು ವರ್ಷದಿಂದ ಎಲ್ಲಾ ವಿಧವಾದ ಸಂಶೋಧನೆ ಚಟುವಟಿಕೆಗಳು ಸ್ಥಗಿತಗೊಂಡಿವೆ. ಮಾರ್ಗದರ್ಶಿ ಅಧ್ಯಾಪಕರ ಕೊರತೆಯ ನೆಪದಲ್ಲಿ ಪಿಹೆಚ್.ಡಿ. ಸಂಶೋಧನೆಯ ಅವಕಾಶಗಳಿಂದ ವಿದ್ಯಾರ್ಥಿಗಳು ವಂಚಿತರಾಗಿದ್ದಾರೆ. ಅಮೇರಿಕಾದಲ್ಲಿ ಅಲ್ಲಿ ಪ್ರಮುಖ ಸಂಸ್ಥೆಯಾದ ನಾಸಾ ಸಂಸ್ಥೆಯಿಂದ ಹಿಡಿದು ವಿಜ್ಞಾನ ಮತ್ತು ಆರೋಗ್ಯ ವಿಷಯಗಳಲ್ಲಿ ನಿರತವಾಗಿರುವ ಸಂಸ್ಥೆಗಳಲ್ಲಿ ಎರಡು ಲಕ್ಷ ಪ್ರತಿಭಾವಂತ ಭಾರತೀಯ ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿಕೊಂಡಿದ್ದಾರೆ ಎಂದರೆ, ನಮ್ಮ ಶಿಕ್ಷಣ ವಲಯದ ಅವ್ಯವಸ್ಥೆಗೆ ಇದಕ್ಕಿಂತ ಬೇರೆ ಕೈಗನ್ನಡಿ ಬೇಕೆ?

ಇವತ್ತಿಗೂ ಭಾರತದ ಬೆನ್ನೆಲುಬಾಗಿ ಇಲ್ಲಿನ ಆರ್ಥಿಕ ಚಟುವಟಿಕೆಯ ಅಡಿಪಾಯವಾಗಿದ್ದುಕೊಂಡು ಶೇ.70ರಷ್ಟು ಜನಕ್ಕೆ ಉದ್ಯೋಗ ನೀಡಿರುವ ಕೃಷಿಯ ರಂಗವನ್ನು ವ್ಯವಸ್ಥಿತವಾಗಿ ಶೋಷಣೆಗೆ ಒಳಪಡಿಸಿರುವುದನ್ನು ನೋಡಿದರೆ, ಈ ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗಿನ ಸರ್ಕಾರದಲ್ಲಿ ನಾವು ಬದುಕುತ್ತಿದ್ದೇವೆ ಎಂದು ಹೇಳಿಕೊಳ್ಳವುದಕ್ಕೆ ಮುಜಗರವಾಗುತ್ತದೆ. ಒಂದುಕಡೆ ಸಾಂಪ್ರದಾಯಕವಾಗಿ ಅನುಕರಿಸಿಕೊಂಡು ಬಂದಿದ್ದ ರೈತರ ಕೃಷಿ ಜ್ಞಾನವನ್ನು ಕಿತ್ತುಹಾಕಿ, ಅವರನ್ನು ಬಿತ್ತನೆ ಬೀಜದಿಂದ ಹಿಡಿದು ರಸಾಯನಿಕ ಗೊಬ್ಬರ, ಕೀಟನಾಶಕ ಮುಂತಾದ ಕೃಷಿ ಚಟುವಟಿಕೆಗಳ ಮೂಲಭೂತ ಅಗತ್ಯಗಳಿಗೆ ಪರಾವಲಂಬಿಯನ್ನಾಗಿ ಮಾಡಲಾಯಿತು. ಇನ್ನೊಂದೆಡೆ ರೈತರು ಬೆಳೆದ ಉತ್ಪನ್ನಗಳಿಗೆ ಸೂಕ್ತ ಬೆಲೆ ದೊರಕದಂತೆ ಮಾಡಿ ಅವನ ಶ್ರಮದ ಪ್ರತಿಫಲವನ್ನು ಕಾಣದ ಕೈಗಳು ಅನುಭವಿಸುವಂತಾಯಿತು.

ರೈತರ ಶೋಷಣೆಗೆ ಎಷ್ಟೊಂದು ಮುಖಗಳು ಮತ್ತು ಕೈಗಳು ಎಂಬುದಕ್ಕೆ ಇದೊಂದು ಉದಾಹರಣೆ ಸಾಕು. ಇದೇ ವರ್ಷ ಫೆಬ್ರವರಿ ತಿಂಗಳಿನಲ್ಲಿ ಹುಬ್ಬಳ್ಳಿಯ ಕೃಷಿ ಮಾರುಕಟ್ಟೆಗೆ ರೈತರು ತಂದ ಈರುಳ್ಳಿ ಬೆಲೆ ದಿಡೀರನೆ ಕ್ವಿಂಟಾಲ್ ಒಂದಕ್ಕೆ 350 ರೂಪಾಯಿಗಳಿಗೆ ಕುಸಿದು ಹೋಯಿತು. ಅದೇ ದಿನ ಮಾರುಕಟ್ಟೆಯಿಂದ ಕೇವಲ 8 ಕಿಲೋಮೀಟರ್ ದೂರದಲ್ಲಿರುವ ಹುಬ್ಬಳ್ಳಿ ಮತ್ತು ಧಾರವಾಡ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಕೆ.ಜಿ.ಒಂದಕ್ಕೆ 10 ರೂಪಾಯಿನಂತೆ ಮಾರಾಟವಾಗುತಿತ್ತು. ಅಂದರೆ, ಕ್ವಿಂಟಾಲ್‌ಗೆ ಸಾವಿರ ರೂಪಾಯಿ. ಈ 650 ರೂಪಾಯಿಗಳು ಯಾರಿಗೆ ಸೇರುತ್ತಿದೆ ಎಂಬುದು ಈವತ್ತಿಗೂ ಯಕ್ಷ ಪ್ರಶ್ನೆಯಾಗಿ ಉಳಿದಿದೆ.

ಬೇಡಿಕೆ ಮತ್ತು ಸರಬರಾಜುವಿನ ಮೇಲೆ ವಸ್ತುವಿನ ಬೆಲೆ ನಿರ್ಧಾರವಾಗುತ್ತದೆ ಎಂಬ ಆರ್ಥಿಕ ಸಿದ್ಧಾಂತವಾಗಲಿ, ಮಾರುಕಟ್ಟೆ ತನ್ನ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ಲಾಭ

(58ನೇ ಪುಟಕ್ಕೆ)

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ರಾಷ್ಟ್ರ ನಿರ್ಮಾಪಕರಾಗಿ ಅಂಬೇಡ್ಕರ್



ಭಾರತದ ಸಾಮಾನ್ಯ ಜನರ ಕಲ್ಪನೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರು ದಲಿತರ ವಿಮೋಚನೆಕಾರ. ಇದು ನಿಜ. ಆದರೆ ಅವರು ಗುಡ್ಡಗಾಡು ಜನರಿಗೂ ಸಹ ಅಂತಹ ಹಕ್ಕುಗಳನ್ನೇ ಪ್ರತಿಪಾದಿಸಿದರು. ಜನಸಾಮಾನ್ಯರ ಈ ಕಲ್ಪನೆಯಲ್ಲಿ ದಲಿತ ಚಿಂತಕರ ಮತ್ತು ಚಳವಳಿಗಾರರ ಪಾತ್ರವೂ ಇದೆ. ಇದರ ಪರಿಣಾಮವಾಗಿ ಡಾ.ಅಂಬೇಡ್ಕರರು ಭಾರತಕ್ಕೆ ಮಾಡಿದ ಸೇವೆಯ ಬಗ್ಗೆ ಜನರು ಮರೆತುಹೋಗಿದ್ದಾರೆ. ಡಾ.ಅಂಬೇಡ್ಕರ್ ಭಾರತದ ಬಗ್ಗೆ ಅವರ ಕಾಲದ ಯಾವುದೇ ನಾಯಕರಿಗಿಂತ ಬಲವಾಗಿ ಚಿಂತಿಸಿದ್ದರು.

ನವೆಂಬರ್ 25, 1949ರ ಸಂಜೆ ಅವರು ಸಂವಿಧಾನ ಮಂಡಳಿಯಲ್ಲಿ ಮಾಡಿದ ಭಾಷಣದ ಆಯ್ದ ಭಾಗಗಳನ್ನು ಈ ಕೆಳಗೆ ನೀಡಲಾಗಿದೆ:

"ನಾನು ಇಲ್ಲಿಗೆ ಮುಗಿಸಬಹುದಿತ್ತು, ಆದರೆ, ನನ್ನ ಮನಸ್ಸು ನನ್ನ ದೇಶದ ಭವಿಷ್ಯದ ಬಗ್ಗೆ ಕಾತರದಿಂದ ತುಂಬಿದೆ. ನನ್ನ ಯೋಚನಾ ಲಹರಿಯನ್ನು ಸ್ವಲ್ಪವಾದರೂ ಹೊರಗೆಡುಹಲು ಸ್ವಲ್ಪ ಸಮಯ ತೆಗೆದುಕೊಳ್ಳಬೇಕೆಂದು ನನಗೆ ಅನ್ನಿಸುತ್ತಿದೆ. ಜನವರಿ 26, 1950ರಂದು ಭಾರತ ಒಂದು ಸ್ವತಂತ್ರ ದೇಶವಾಗುತ್ತದೆ. (ಹರ್ಷೋದ್ಗಾರ). ಈ ಸ್ವಾತಂತ್ರ್ಯದ ನಂತರ ಏನಾಗುತ್ತದೆ. ಭಾರತ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುತ್ತದೆಯೇ? ಇದು ನನ್ನ ತಲೆಗೆ ಬರುವ ಮೊದಲ ಯೋಚನೆ. ಭಾರತ ಯಾವಾಗಲೂ ಸ್ವತಂತ್ರವಾಗಿರಲೇ ಇಲ್ಲ ಎಂದೇನಲ್ಲ. ಅದು ಒಮ್ಮೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತು ಎಂಬುದು ಮುಖ್ಯ. ಅದು ತನ್ನ ಸ್ವಾತಂತ್ರ್ಯವನ್ನು ಎರಡನೇ ಬಾರಿಗೆ ಕಳೆದುಕೊಳ್ಳುತ್ತದೆಯೇ? ಈ ಚಿಂತೆ ನನ್ನಲ್ಲಿ ಭವಿಷ್ಯದ ಬಗೆಗೆ ಕಳವಳ ಮೂಡಿಸುತ್ತದೆ. ನನ್ನನ್ನು ಹೆಚ್ಚು ಚಿಂತೆಗೆ ಒಳಗುಮಾಡುವ ಅಂಶವೆಂದರೆ, ಭಾರತ ಒಮ್ಮೆ ಸ್ವಾತಂತ್ರ್ಯವನ್ನು ಕಳೆದುಕೊಂಡಿತ್ತು ಎಂಬುದು ಮಾತ್ರವಲ್ಲ. ಅದು ತನ್ನದೇ ಜನರ ದ್ರೋಹ ಮತ್ತು ವಿಶ್ವಾಸಘಾತುಕತನದಿಂದ ಸ್ವಾತಂತ್ರ್ಯ ಕಳೆದುಕೊಂಡಿತ್ತು ಎಂಬುದು. ಮಹಮ್ಮದ್ ಬಿನ್ ಕಾಸಿಮ್ ಸಿಂಧ್ ಮೇಲೆ ಧಾಳಿ ಮಾಡಿದಾಗ ರಾಜ ದಾಹರ್‌ನ ಸೈನ್ಯದ ಕಮಾಂಡರ್‌ಗಳು, ಮಹಮ್ಮದ್ ಬಿನ್ ಕಾಸಿಮ್‌ನ ಏಜೆಂಟರುಗಳಿಂದ ಲಂಚ ಪಡೆದು ತಮ್ಮದೇ ರಾಜನ ವಿರುದ್ಧ ಹೋರಾಡಲು ಸಹಕರಿಸಿದರು. ಮಹಮ್ಮದ್ ಘೋರಿಯನ್ನು ರಾಜ ಪೃಥ್ವಿರಾಜನ ಮೇಲೆ ಯುದ್ಧ ಮಾಡಲು ಆಹ್ವಾನಿಸಿದ ಜಯಚಂದ್ರ ತನ್ನ ಮತ್ತು ಸೋಲಾಂಕಿ ರಾಜರುಗಳ ಸಹಾಯವನ್ನು ಅವನಿಗೆ ನೀಡುವುದಾಗಿ ಭರವಸೆ ನೀಡಿದ್ದನು. ಶಿವಾಜಿ ಹಿಂದೂಗಳ ಸ್ವಾತಂತ್ರ್ಯಕ್ಕಾಗಿ ಕಾದಾಡುತ್ತಿದ್ದಾಗ ಇತರ ಮರಾಠ ರಾಜರು ಮತ್ತು

ದಲಿತರು ಅಂಬೇಡ್ಕರ್‌ರವರನ್ನು ದಲಿತರನ್ನು ವಿಮೋಚನೆಗೊಳಿಸಿದವರು ಎಂದೇ ಇನ್ನೂ ಹೊಗಳುತ್ತಿದ್ದಾರೆ. ಮುಖ್ಯವಾಹಿನಿ ಸಹ ಅಂಬೇಡ್ಕರ್‌ರವರು ದಲಿತರ ವಿಮೋಚಕರು ಎಂದು ಮಾತ್ರ ಭಾವಿಸಿದೆ. ಆದರೆ ಅಂಬೇಡ್ಕರ್‌ರವರ ಭಾಷಣಗಳನ್ನು ನೋಡಿದರೆ ಅವರು ಇಡೀ ಭಾರತದ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದರು ಎನ್ನುವುದನ್ನು ಕಾಣಬಹುದು. ಜಾತಿಮುಕ್ತ ಭಾರತ, ಅಭಿವೃದ್ಧಿ ಹೊಂದಿದ ಭಾರತ ಇಡೀ ಭಾರತಕ್ಕೆ ಒಳ್ಳೆಯದು ಎಂದು ಅವರು ನಂಬಿದ್ದರು.

ರಜಪೂತ್ ದೊರೆಗಳು ಮೊಘಲ್ ಸಾಮ್ರಾಟರ ಪರವಾಗಿ ಕಾದಾಡುತ್ತಿದ್ದರು. ಬ್ರಿಟಿಷರು ಸಿಖ್ ರಾಜರುಗಳನ್ನು ನಾಶಮಾಡಲು ಅವಣಿಸುತ್ತಿದ್ದಾಗ, ಅವರ ಮುಖ್ಯ ಕಮಾಂಡರ್ ಗುಲಾಬ್ ಸಿಂಗ್ ಮೌನವಾಗಿದ್ದ ಮತ್ತು ಸಿಖ್ ರಾಜ್ಯವನ್ನು ಕಾಪಾಡಲು ಯಾವುದೇ ಸಹಾಯ ನೀಡಲಿಲ್ಲ. 1857ರಲ್ಲಿ ಭಾರತ ದೇಶದ ದೊಡ್ಡ ಭಾಗ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಯುದ್ಧ ಸಾರಿದಾಗ ಸಿಖ್ಖರು ಮೌನ ಪ್ರೇಕ್ಷಕರಂತೆ ನೋಡುತ್ತಾ ನಿಂತಿದ್ದರು.

ಚರಿತ್ರೆ ಮತ್ತೊಮ್ಮೆ ಮರುಕಳಿಸುತ್ತದೆಯೇ? ನನ್ನ ಕಳವಳಕ್ಕೆ ಕಾರಣವಾಗಿರುವುದು ಈ ಚಿಂತೆ. ನಮ್ಮ ಹಳೆಯ ವೈರಿಗಳಾದ ಜಾತಿಗಳು, ವರ್ಗಗಳು ಮುಂತಾದವುಗಳ ಜತೆಗೆ ನಾವು ವಿವಿಧ ಮತ್ತು ತದ್ವಿರುದ್ಧವಾದ ರಾಜಕೀಯ ನಂಬಿಕೆಗಳುಳ್ಳ ರಾಜಕೀಯ ಪಕ್ಷಗಳನ್ನು ಸಹ ಹೊಂದುತ್ತೇವೆ ಎಂಬ ಅರಿವೂ ನನ್ನ ಚಿಂತೆಯನ್ನು ಇನ್ನೂ ಗಾಢವಾಗಿಸುತ್ತದೆ. ಭಾರತೀಯ ತನ್ನ ನಂಬಿಕೆ, ಆಚಾರವಿಚಾರ ಇವು ದೇಶಕ್ಕಿಂತ ಮುಖ್ಯ ಎಂದು ಭಾವಿಸುತ್ತಾನೋ ಅಥವಾ ದೇಶ ಇವೆಲ್ಲಕ್ಕಿಂತ ಮುಖ್ಯ ಎಂದು ಭಾವಿಸುತ್ತಾನೊ? ನನಗೆ ಗೊತ್ತಿಲ್ಲ. ಆದರೆ ಇಷ್ಟು ಮಾತ್ರ ಖಂಡಿತ. ಗುಂಪುಗಳು ತಮ್ಮ ತಮ್ಮ ಗುಂಪಿನ ನಂಬಿಕೆಗಳನ್ನು ದೇಶಕ್ಕಿಂತ ಮುಖ್ಯ ಎಂದು ಭಾವಿಸುವುದಾದಲ್ಲಿ ಸ್ವಾತಂತ್ರ್ಯಕ್ಕೆ ಎರಡನೇ ಧಕ್ಕೆ ಉಂಟಾಗುತ್ತದೆ ಮತ್ತು ಅದನ್ನು ನಾವು ಎಂದೆಂದಿಗೂ ಕಳೆದುಕೊಳ್ಳಬೇಕಾಗುತ್ತದೆ. ಇಂತಹ ಸ್ಥಿತಿ ಬಾರದಂತೆ ನಾವು ಅತೀ ಎಚ್ಚರ ವಹಿಸಬೇಕು. ನಮ್ಮ ಸ್ವಾತಂತ್ರ್ಯವನ್ನು ನಮ್ಮ ಕೊನೆಯ ತೊಟ್ಟು ರಕ್ತ ನೀಡಿಯಾದರೂ ಉಳಿಸಿಕೊಳ್ಳುವುದಕ್ಕೆ ನಾವು ಕಟಿಬದ್ಧರಾಗಬೇಕು.

ಪ್ರಜಾಪ್ರಭುತ್ವವನ್ನು ಕೇವಲ ಅದರ ರೂಪ ಮಾತ್ರವಲ್ಲ, ಅದರೆಲ್ಲಾ ಗುಣಗಳ ಜೊತೆ ಉಳಿಸಿಕೊಳ್ಳ ಬಯಸುವುದಾದರೆ ನಾವು ಏನು ಮಾಡಬೇಕು? ನನ್ನ ದೃಷ್ಟಿಯಲ್ಲಿ ನಾವು ಮಾಡಬೇಕಾದ ಮೊದಲನೆ ಕೆಲಸ ಎಂದರೆ, ನಮ್ಮ ಸಾಮಾಜಿಕ ಮತ್ತು ಆರ್ಥಿಕ ಉದ್ದೇಶಗಳನ್ನು ನೆರವೇರಿಸಿಕೊಳ್ಳಲು ಸಂವಿಧಾನಿಕ ಮಾರ್ಗಗಳಿಗೆ ಬಲವಾಗಿ ಅಂಟಿಕೊಳ್ಳಬೇಕು. ಹಾಗೆಂದರೆ, ನಾವು ರಕ್ತಸಿಕ್ತ ಕ್ರಾಂತಿಯ ಮಾರ್ಗವನ್ನು ಸಂಪೂರ್ಣವಾಗಿ ತ್ಯಜಿಸಬೇಕು. ಅಂದರೆ ನಾವು ಸಾರ್ವಜನಿಕ ಅಸಹಕಾರ, ಅವಿಧೇಯತೆ ಮತ್ತು ಸತ್ಯಾಗ್ರಹಗಳ ಮಾರ್ಗವನ್ನು ಸಂಪೂರ್ಣ ಕೈಬಿಡಬೇಕು. ನಮ್ಮ ಆರ್ಥಿಕ ಮತ್ತು ಸಾಮಾಜಿಕ ಗುರಿಗಳನ್ನು ತಲುಪಲು ಸಂವಿಧಾನಿಕ ಮಾರ್ಗಗಳು ನಮ್ಮ ಮುಂದಿರದಿದ್ದಾಗ ಸಂವಿಧಾನಿಕವಲ್ಲದ ಮಾರ್ಗಗಳನ್ನು ಉಪಯೋಗಿಸುವುದು ಹೆಚ್ಚು ನ್ಯಾಯಯುತವಾಗಿತ್ತು. ಆದರೆ ಸಂವಿಧಾನಿಕ ಮಾರ್ಗಗಳು ತೆರೆದಿರುವಾಗ ಸಂವಿಧಾನಿಕವಲ್ಲದ ಮಾರ್ಗಗಳನ್ನು ಉಪಯೋಗಿಸುವುದು ನ್ಯಾಯಯುತವಾಗಿರುವುದಿಲ್ಲ. ಇಂತಹ ಮಾರ್ಗಗಳು ಅರಾಜಕತೆಗೆ ವ್ಯಾಕರಣವಿದ್ದಂತೆ. ಅವುಗಳನ್ನು ಎಷ್ಟು ದೂರವಿಡುತ್ತೇವೆಯೊ ಅಷ್ಟೂ ನಮಗೆ ಒಳ್ಳೆಯದು.

ಸ್ವಾತಂತ್ರ್ಯ ಅತಿ ಸಂಭ್ರಮದ ವಿಚಾರ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಈ ಸ್ವಾತಂತ್ರ್ಯ ನಮ್ಮ ಮೇಲೆ ದೊಡ್ಡ ಜವಾಬ್ದಾರಿ ಹೊರಿಸಿದೆ ಎಂಬುದನ್ನು ಮರೆಯಬಾರದು. ಸ್ವಾತಂತ್ರ್ಯ ಪಡೆದಿರುವುದರಿಂದ ನಾವು ನಮ್ಮಲ್ಲಿ ಆಗುವ ಎಲ್ಲಾ ತಪ್ಪುಗಳಿಗೂ ಬ್ರಿಟಿಷರನ್ನು ಹೊಣೆ ಮಾಡುವ ನೆಪವನ್ನು ಕಳೆದುಕೊಂಡಿದ್ದೇವೆ. ಇದರಿಂದಾಗಿ ಯಾವುದೇ ವಿಷಯದಲ್ಲಿ ಕೊರತೆಯಾದರೆ, ತಪ್ಪಾದರೆ ನಾವು ನಮ್ಮನ್ನೇ ಹೊಣೆ ಮಾಡಿಕೊಳ್ಳಬೇಕಲ್ಲದೆ ಬೇರೆ ದಾರಿ ಇಲ್ಲ. ಅನೇಕ ಸಂಗತಿಗಳು ತಪ್ಪಾಗುವ ಭಾರಿ ಅಪಾಯವಿದೆ. ಕಾಲ ವೇಗವಾಗಿ ಬದಲಾಗುತ್ತದೆ. ಜನರು ಹೊಸ ಸಿದ್ಧಾಂತಗಳಿಂದ ವಿಚಲಿತರಾಗುತ್ತಾರೆ. ಅವರು ಜನರ ಸರ್ಕಾರದ ಬಗ್ಗೆ ಅಸಹನೆ ಬೆಳೆಸಿಕೊಳ್ಳುತ್ತಿದ್ದಾರೆ. ಅವರು ಸರ್ಕಾರ ಜನರದ್ದೇ ಅಲ್ಲವೇ ಎಂಬುದರ ಬಗ್ಗೆ ನಿರಾಸಕ್ತರಾಗಿದ್ದಾರೆ. ಅವರು ಜನರಿಗಾಗಿ ಸರ್ಕಾರ ಹೊಂದಲು ತಯಾರಿದ್ದಾರೆ. ನಾವು ಈ ಸಂವಿಧಾನದಲ್ಲಿ ಜನರಿಗಾಗಿ ಮತ್ತು ಜನರಿಂದ ಎಂಬ ಸರ್ಕಾರದ ಭಾಗಗಳನ್ನು ಅತ್ಯಂತ ಪವಿತ್ರ ಎಂದು ಪರಿಗಣಿಸಿ ಅವುಗಳನ್ನು ಸರ್ಕಾರದ ಮುಖ್ಯ ಉದ್ದೇಶವಾಗಿ ಇರಿಸಿದ್ದೇವೆ. ನಾವು ಈ ಸಂವಿಧಾನವನ್ನು ರಕ್ಷಿಸಿಕೊಳ್ಳಬೇಕಾದರೆ ಆ ಮಾರ್ಗದಲ್ಲಿರುವ ಕೆಡಕುಗಳನ್ನು ಗುರುತಿಸಿ ತೊಡೆದುಹಾಕುವಲ್ಲಿ ತಡಮಾಡಬಾರದು ಎಂಬ ದೃಢನಿರ್ಧಾರ ಮಾಡಬೇಕಾಗಿದೆ. ದೇಶಸೇವೆ ಮಾಡಲು ಅದೊಂದೇ ದಾರಿ. ಇದಕ್ಕಿಂತ ಉತ್ತಮವಾದ ಬೇರೆ ಯಾವ ಮಾರ್ಗವೂ ನನಗೆ ಗೊತ್ತಿಲ್ಲ".

* * *

ಸೆಪ್ಟೆಂಬರ್ 2ರಲ್ಲಿ ನನ್ನ ಮನೆಗೆ ನಾನೊಬ್ಬ ಅತಿಥಿಯನ್ನು ಸ್ವಾಗತಿಸಿದೆ. ವರ್ಷ ಯಾವುದು ಎಂಬುದು ನನಗೆ ಜ್ಞಾಪಕವಿಲ್ಲ. 2006 ಅಥವಾ 2007 ಇರಬೇಕು. ಸೆಪ್ಟೆಂಬರ್ 2ನ್ನು ನಾನು ಜ್ಞಾಪಕವಿಟ್ಟಿದ್ದೇನೆ. ಏಕೆಂದರೆ ಅದು ನನ್ನ ನಮೂದಿತ ಜನ್ಮದಿನ. ನನ್ನ ಮಡದಿ ಕೆಲ ಕುಟುಂಬಗಳಿಗೆ ಭೋಜನ ತಯಾರು ಮಾಡುತ್ತಿದ್ದರು. ಬಹಳ ಸರಳವಾದ ಈ ಅತಿಥಿ ಮೊದಲೆ ತಿಳಿಸದೆ ಹಾಗೆಯೆ ಮನೆಗೆ ಬಂದರು. ಅದೇನೂ ದೊಡ್ಡ ಸಮಸ್ಯೆಯಲ್ಲ. ಇದ್ದಕ್ಕಿದ್ದ ಹಾಗೆ ನನ್ನ ಭೇಟಿಗೆ ಬರುವ ಅನೇಕ ಅತಿಥಿಗಳನ್ನು ನಾನು ಬರಮಾಡಿಕೊಳ್ಳುತ್ತೇನೆ. ಅದೊಂದು ವರ್ಗದ ಸಮಸ್ಯೆ. ಕೆಳವರ್ಗ ಮೇಲ್ವರ್ಗದ ರೀತಿ ರಿವಾಜುಗಳನ್ನು ಪಾಲಿಸುವುದಿಲ್ಲ. ಅಂಕಣಕಾರನಾಗಿ ಇದ್ದಕ್ಕಿದ್ದಂತೆ ಬರುವ ಅನೇಕ ಸಹೃದಯರನ್ನು, ಯೋಗಕ್ಷೇಮ ಬಯಸುವವರನ್ನು ನಾನು ಹೊಂದಿದ್ದೇನೆ. ಅವರನ್ನು ಬರಮಾಡಿಕೊಂಡು ಅವರ ಜೊತೆ ಕಾಲ ಕಳೆಯುವುದು ನನಗೆ ಬಹಳ ಖುಷಿ. ಅವರಿಂದ ನಾನು ಬಹಳ ಕಲಿಯುತ್ತೇನೆ. ಮನೆಯಲ್ಲಿ ಸಂಭ್ರಮವಿರುವ ಸಂದರ್ಭದಲ್ಲಿ ಈ ಅತಿಥಿ ಬಂದರು.

ಈ ಅತಿಥಿ ಒಬ್ಬ ವೈದ್ಯಕೀಯ ಪ್ರಾಧ್ಯಾಪಕರಾಗಿದ್ದು ದೆಹಲಿಯ ವೈದ್ಯಕೀಯ ಕಾಲೇಜೊಂದರಲ್ಲಿ ಬೋಧಿಸುತ್ತಾರೆ. ಅವರು ಉತ್ತಮ ವೈದ್ಯರು. ಆಗಾಗ್ಗೆ ಬರುತ್ತಿರುತ್ತಾರೆ. ಒಂದು ವಿಚಿತ್ರ ಕಾರಣಕ್ಕಾಗಿ ಅಂದಿನ ಭೇಟಿ ಮಹತ್ವದ್ದಾಗಿತ್ತು. ಅಂಬೇಡ್ಕರ್‌ರವರ ಮೇಲಿನ ಪುಸ್ತಕಗಳನ್ನು ತನಗೆ ಓದಲು ಸ್ವಲ್ಪ ಸಮಯ ನೀಡಬೇಕೆಂದೂ ಮತ್ತು ಅಂಬೇಡ್ಕರ್‌ರವರ ಮೇಲಿನ ಪುಸ್ತಕಗಳ ಪಟ್ಟಿಯನ್ನು ನೀಡಬೇಕೆಂದೂ ಅವರು ಕೋರಿದರು. ಪುಸ್ತಕಗಳನ್ನು ಎರವಲು ನೀಡಲು ನಾನು ಸಂಪೂರ್ಣ ನಿರಾಕರಿಸಿದೆ. ಸ್ನೇಹಿತರು ನನ್ನಿಂದ ಕೊಂಡೊಯ್ದು ಅನೇಕ ಪುಸ್ತಕಗಳನ್ನು ನಾನು ಕಳೆದುಕೊಂಡಿದ್ದೇನೆ. ಪುಸ್ತಕಗಳು ಹಿಂದೆ ಬರುವುದು ಅತಿ ವಿರಳ. ಆದರೆ ಈ ವೈದ್ಯಕೀಯ ಪ್ರಾಧ್ಯಾಪಕರಿಗೆ ಅಂಬೇಡ್ಕರ್ ಕುರಿತ ಉತ್ತಮ ಪುಸ್ತಕಗಳ ಪಟ್ಟಿಯನ್ನು ನೀಡಲು ನಾನು ಒಪ್ಪಿಕೊಂಡೆ.

ಅಂಬೇಡ್ಕರರ ಬಗ್ಗೆ ಕಲಿಯುವುದು

ಅಂಬೇಡ್ಕರ್ ಬಗೆಗಿರುವ ಐದು ಗೊಂದಲಗಳು

"ನಿಮಗೆ ಇದೆಲ್ಲದರ ಅವಶ್ಯಕತೆ ಏನು?" ನಾನು ಕೇಳಿದೆ. ಅಂಬೇಡ್ಕರ್‌ರ ಮೇಲೆ ಒಂದು ಪುಸ್ತಕ ಬರೆಯ ಬಯಸಿದ್ದೇನೆ. 'ಸಮಾಜದಿಂದ ಪಡೆದಿದ್ದನ್ನು ಸಮಾಜಕ್ಕೆ ಹಿಂದೆ ನೀಡಬೇಕು' ಅರ್ಥದಲ್ಲೆಂಬಂತೆ ಅವರು ಹೇಳಿದರು. ನಿಮ್ಮ ಉದ್ದೇಶವನ್ನು ಮೆಚ್ಚಿದ್ದೇನೆ ಎಂದು ನಾನೆಂದೆ. ಆದರೆ "ನಿಮ್ಮದೆ ವಿಷಯವಾದ ವೈದ್ಯಕೀಯ ವಿಜ್ಞಾನದ ಮೇಲೆ ನೀವೇಕೆ ಪುಸ್ತಕ ಬರೆಯಬಾರದು", ಎಂದು ಕೇಳಿದೆ. ಕೆಲ ಸಮಯದ ನಂತರ ಆ ಪ್ರಾಧ್ಯಾಪಕರು ಹೊರಟು ಹೋದರು. ಅದಾದ ಮೇಲೆ ಅವರು ಮತ್ತೆ ನನ್ನಲ್ಲಿ ಬಂದಿಲ್ಲ. ಫೋನಿನಲ್ಲಿಯೂ ನನ್ನನ್ನು ಸಂಪರ್ಕಿಸಿಲ್ಲ, ಅವರು ಕೋಪಗೊಂಡಿರಬಹುದು.

ಅಧ್ಯಾಪಕರಾಗಿರುವ ಅಥವಾ ಸರ್ಕಾರಿ ನೌಕರಿಯಲ್ಲಿರುವ ಮತ್ತು ಸಾಮಾಜಿಕ ಕಳಕಳಿಯುಳ್ಳ ನನಗೆ ಗೊತ್ತಿರುವ ಹೆಚ್ಚು ಕಡಿಮೆ ಎಲ್ಲ ದಲಿತರೂ ಅಂಬೇಡ್ಕರರ ಮೇಲೆ ತಾವು ವಿದ್ವಾಂಸರು ಎಂದು ತಿಳಿದಿದ್ದಾರೆ. ಅಂಬೇಡ್ಕರ್ ಅವರ ಮೇಲೆ ತಜ್ಞರು ಎಂದು ಹೇಳಿಕೊಳ್ಳುವ ವಿದ್ಯಾರ್ಥಿಗಳೂ ಇದ್ದಾರೆ. ಚಳವಳಿಗಾರರು ಹುಟ್ಟಿನಿಂದಲೇ ಅಂಬೇಡ್ಕರ್ ಮೇಲಿನ ವಿದ್ವಾಂಸರು. ಆದರೆ ಅಂಬೇಡ್ಕರ್‌ರ ಬಗ್ಗೆ ಇವರೆಲ್ಲರಿಗೆ ಎಷ್ಟು ಗೊತ್ತು?

ಅಂಬೇಡ್ಕರ್ ಬಗ್ಗೆ ಕಲಿತುಕೊಳ್ಳಬೇಕಾದರೆ ಅಂಬೇಡ್ಕರ್‌ರನ್ನು ಮೊದಲು ಸಂಪೂರ್ಣವಾಗಿ ಅರಿಯಬೇಕು. ಡಾ॥ ಅಂಬೇಡ್ಕರ್‌ರವರು ತಾನು ಆರಿಸಿಕೊಂಡ ವಿಷಯಗಳಲ್ಲಿ ಮೇರು ಸ್ವರೂಪರು. ಅವರು ಅರ್ಥಶಾಸ್ತ್ರ ಓದಿದರು, ಅತ್ಯುತ್ತಮ ಅರ್ಥಶಾಸ್ತ್ರಜ್ಞರಾದರು. ಅವರು ಕಾನೂನು ಓದಿದರು, ಅತ್ಯುತ್ತಮ ಬ್ಯಾರಿಸ್ಟರಾದರು. ಅವರು ಸಮಾಜ ಶಾಸ್ತ್ರ ಓದಿದರು, ಅತ್ಯುತ್ತಮ ಸಾಮಾಜಿಕ ಕ್ರಾಂತಿಕಾರಿಯಾದರು. ಅವರು ರಾಜಕೀಯ ಪ್ರವೇಶಿಸಿದರು, ಅತ್ಯುತ್ತಮ ರಾಜಕಾರಣಿಯಾದರು. ಅವರು ಸರ್ಕಾರ ಸೇರಿದರು, ಅತ್ಯುತ್ತಮ ಮಂತ್ರಿ ಎಂದು ಸಾಧಿಸಿ ತೋರಿಸಿದರು.

ಒಬ್ಬ ದಲಿತ ಸರ್ಕಾರಿ ನೌಕರ ಏನಾಗಿರಬೇಕು? ಅವನು ಅತ್ಯುತ್ತಮ ಸರ್ಕಾರಿ ನೌಕರನಾಗಿರಬೇಕೆ ಅಥವಾ ಅಂಬೇಡ್ಕರ್ ಮೇಲೆ ಅತ್ಯುತ್ತಮ ವಿದ್ವಾಂಸನಾಗಿರಬೇಕೆ? ಒಬ್ಬ ದಲಿತ ವೈದ್ಯ ಏನಾಗಿರಬೇಕು? ಅತ್ಯುತ್ತಮ ವೈದ್ಯನೆ, ಅಥವಾ ಅಂಬೇಡ್ಕರ್ ಮೇಲೆ ಅತ್ಯುತ್ತಮ ವಿದ್ವಾಂಸನೆ? ದಲಿತ ಪ್ರಾಧ್ಯಾಪಕರು, ಬರಹಗಾರರು, ವರದಿಗಾರರು ಮತ್ತು ಅಂಕಣಕಾರರ ಬಗ್ಗೆಯೂ ಇದೇ ಅನ್ವಯಿಸುತ್ತದೆ. ಎರಡರಲ್ಲಿಯೂ ಅತ್ಯುತ್ತಮ ಎನಿಸಿಕೊಳ್ಳುವುದು ಸಾಧ್ಯವಿಲ್ಲ. ಫಲಿತಾಂಶವಾಗಿ ನಮ್ಮಲ್ಲಿ ಅಂಬೇಡ್ಕರ್‌ರ ಮೇಲೆ ವಿದ್ವಾಂಸರಾಗಿರುವವರು ಬಹಳ ಕಡಿಮೆ. ತಮ್ಮ ಇಡೀ ಜೀವನವನ್ನು ಅಂಬೇಡ್ಕರ್‌ರವರನ್ನು ಅರ್ಥಮಾಡಿಕೊಳ್ಳಲು ಮುಡಿಪಾಗಿಟ್ಟಿರುವವರ ಸಂಖ್ಯೆ ಬಹಳ ವಿರಳ. ಇದು ಅನಿಶ್ಚಿತತೆಯನ್ನು ಉಂಟುಮಾಡಿದೆ.

ನಿಜ, ಡಾ॥ ಅಂಬೇಡ್ಕರ್‌ರವರು ದಲಿತ ವಿಮೋಚನೆಗೆ ದಾರಿಮಾಡಿಕೊಟ್ಟರು. ಆದರೆ ಅವರು ಕೇವಲ ದಲಿತರ ವಿಮೋಚನೆಗಷ್ಟೇ ಎಡೆಮಾಡಿಕೊಟ್ಟರೇ? ಅಥವಾ ಜಾತಿ ಪದ್ಧತಿಯಿಂದ ಭಾರತವನ್ನು ವಿಮೋಚನೆಗೊಳಿಸಲು ಪ್ರಯತ್ನಿಸಿದರೇ? ಇವೆರಡರಲ್ಲಿ ಯಾವುದು ಡಾ॥ ಅಂಬೇಡ್ಕರ್‌ರವರಿಗೆ ಹೆಚ್ಚು ಅನ್ವಯವಾಗುತ್ತದೆ ಎನ್ನುವುದು ದಲಿತರಿಗೆ ಇನ್ನೂ ಖಚಿತವಾಗಿಲ್ಲ. ಏಕೆಂದರೆ ದಲಿತರು ಅಂಬೇಡ್ಕರ್‌ರವರನ್ನು ದಲಿತರನ್ನು ವಿಮೋಚನೆಗೊಳಿಸಿದವರು ಎಂದೇ ಇನ್ನೂ ಹೊಗಳುತ್ತಿದ್ದಾರೆ. ಮುಖ್ಯವಾಹಿನಿ ಸಹ ಅಂಬೇಡ್ಕರ್‌ರವರು ದಲಿತರ ವಿಮೋಚಕರು ಎಂದು ಮಾತ್ರ ಭಾವಿಸಿದೆ. ಆದರೆ ಅಂಬೇಡ್ಕರ್‌ರವರ ಭಾಷಣಗಳನ್ನು ನೋಡಿದರೆ ಅವರು ಇಡೀ ಭಾರತದ ಬಗ್ಗೆ ಹೆಚ್ಚು ಕಾಳಜಿ ಹೊಂದಿದ್ದರು ಎನ್ನುವುದನ್ನು ಕಾಣಬಹುದು. ಜಾತಿಮುಕ್ತ ಭಾರತ, ಅಭಿವೃದ್ಧಿ ಹೊಂದಿದ ಭಾರತ ಇಡೀ ಭಾರತಕ್ಕೆ ಒಳ್ಳೆಯದು ಎಂದು ಅವರು ನಂಬಿದ್ದರು.

ದಲಿತರು ಡಾ॥ ಅಂಬೇಡ್ಕರ್‌ರವರ ಚಿಂತನೆಯ ಬಗ್ಗೆ ಸರಿಯಾದ ತಿಳುವಳಿಕೆ ಉಳ್ಳವರಾಗದೆ ಇರುವುದರಿಂದ ಜಾತಿ ವಿರೋಧಿ ಚಳವಳಿ ಮತ್ತು ಬ್ರಾಹಣ ವಿರೋಧಿ ಚಳವಳಿ ಇವುಗಳ ಮಧ್ಯೆ ಮತ್ತಷ್ಟು ಗೊಂದಲ ಉಂಟುಮಾಡುತ್ತಿದ್ದಾರೆ. ದ್ರಾವಿಡ ಚಳವಳಿಗಳು ಜಾತಿ ವಿರೋಧಿಗಳಾಗಿರಲಿಲ್ಲ. ಅವು ಬ್ರಾಹ್ಮಣರ ಪರಮಾಧಿಕಾರದ ವಿರೋಧಿಯಾಗಿದ್ದವು. ಬ್ರಾಹ್ಮಣರ ಪರಮಾಧಿಕಾರ ತಮಿಳುನಾಡಿನಲ್ಲಿ ಬಹಳ ಹಿಂದೆಯೇ ಕೊನೆಗೊಂಡಿತ್ತು. ಆದರೆ ತಮಿಳು ಸಮಾಜದಲ್ಲಿ ಬ್ರಾಹ್ಮಣರ ಪರಮಾಧಿಕಾರ ಕೊನೆಗೊಂಡದ್ದು ದಲಿತರ ವಿಮೋಚನೆಗೆ ಎಡೆಮಾಡಿಕೊಡಲಿಲ್ಲ. ತಮಿಳು ಸಮಾಜ ದಲಿತರು ಬದುಕಲು ಅತಿ ಕೆಟ್ಟ ಸ್ಥಳ ಎಂಬುದು ನನ್ನ ತೀರ್ಮಾನ. ಬ್ರಾಹ್ಮಣ ವಿರೋಧಿ ಚಳವಳಿ ಬ್ರಾಹ್ಮಣರ ಪರಮಾಧಿಕಾರವನ್ನು ಕೊನೆಗೊಳಿಸಿ ಅವರ ಸ್ಥಳದಲ್ಲಿ ಶೂದ್ರರ ಪರಮಾಧಿಕಾರವನ್ನು ತರುವ ಕಡೆ ಗಮನ ಹರಿಸಿತು. ದ್ರಾವಿಡ ಚಳವಳಿ ತನ್ನ ಉದ್ದೇಶ ಈಡೇರಿಸಿಕೊಳ್ಳುವುದರಲ್ಲಿ ಅತ್ಯುತ್ತಮ ಯಶಸ್ಸು ಸಾಧಿಸಿತು.

ಶೂದ್ರರು ಮತ್ತು ಅಸ್ಪೃಶ್ಯರು ಒಂದೇ ರೀತಿಯ ನರಳುವಿಕೆಯನ್ನು ಅನುಭವಿಸಿದ್ದಾರೆ. ಆದುದರಿಂದ ಅವರಿಗೆ ಒಂದೇ ವಿಧದ ಮದ್ದುಬೇಕು ಎಂಬುದರ ಬಗ್ಗೆ ಅನೇಕ ದಲಿತ ಚಿಂತಕರು ಗೊಂದಲದಲ್ಲಿದ್ದರೂ ಅಂಬೇಡ್ಕರ್‌ರಿಗೆ ಶೂದ್ರರು ಮತ್ತು ಅಸ್ಪೃಶ್ಯರು ಪ್ರತ್ಯೇಕ ಸಾಮಾಜಿಕ ಗುಂಪುಗಳು ಎಂಬುದು ಸ್ಪಷ್ಟವಾಗಿತ್ತು.

ಅಂಬೇಡ್ಕರ್‌ರವರ ಅತಿ ಮುಖ್ಯ ಬರಹಗಳಲ್ಲಿ "ಶೂದ್ರರು ಯಾರು?" ಒಂದು ವಿಶೇಷ ಸ್ಥಾನ ಪಡೆದಿದೆ. ಆದರೆ ಗೊಂದಲ ಅದರ ತಲೆಬರಹದಿಂದಲೇ ಪ್ರಾರಂಭವಾಗುತ್ತದೆ. ಇದು ಒಂದು ಪುಸ್ತಕವಲ್ಲ. ಪ್ರತ್ಯೇಕವಾಗಿ ಬರೆದ ಎರಡು ಪುಸ್ತಕಗಳನ್ನು ಒಟ್ಟಿಗೆ ಪ್ರಕಟಿಸಲಾಗಿದೆ. ಮತ್ತೊಂದು ಪುಸ್ತಕ 'ಅಸ್ಪೃಶ್ಯರು'. ಈ ಎರಡೂ ಪುಸ್ತಕಗಳಿಗೆ ಉಪ ಶೀರ್ಷಿಕೆಗಳಿವೆ. "ಶೂದ್ರರು ಯಾರು?" ಇದು ಇಂಡೊ-ಆರ್ಯ ಸಮಾಜದ 4ನೇ ವರ್ಣವಾಗಿ ಅವರು ಹೇಗೆ ಆದರು ಎನ್ನುವುದನ್ನು ವಿವರಿಸುತ್ತದೆ. ಅಸ್ಪೃಶ್ಯರು, ಅವರು ಯಾರು, ಅವರು ಏನಾಗಿದ್ದರು, ಮತ್ತು ಅವರು ಏಕೆ ಅಸ್ಪೃಶ್ಯರಾದರು? ಎಂಬುದನ್ನು ವಿವರಿಸುತ್ತದೆ. 'ಶೂದ್ರರು' ಪುಸ್ತಕ ಜ್ಯೋತಿಭಾ ಫುಲೆಯವರಿಗೆ ಅರ್ಪಣೆಯಾಗಿದೆ. 'ಅಸ್ಪೃಶ್ಯರು' ಪುಸ್ತಕವನ್ನು ಡಾ॥ ಅಂಬೇಡ್ಕರ್‌ರವರು ಅಸ್ಪೃಶ್ಯರು ಎಂದು ವಿವರಿಸಿರುವ ಸಂತರಾದ ನಂದನಾರ್, ರವಿದಾಸ್ ಮತ್ತು ಚೊಕ್ಕಮೇಳ ಇವರಿಗೆ ಅರ್ಪಣೆಯಾಗಿದೆ.

ಆದರೆ ಬಹಳಷ್ಟು ದಲಿತ ಚಿಂತಕರಿಗೆ ಈ ಶೂದ್ರ ಮತ್ತು ಅಸ್ಪೃಶ್ಯರ ನಡುವಿನ ಭಿನ್ನತೆ ಅಷ್ಟೇನೂ ಎದ್ದು ಕಾಣುತ್ತಿಲ್ಲ. ನಿಶ್ಚಯವಾಗಿ ದಲಿತರು ಅಂಬೇಡ್ಕರ್‌ರ ಬಗ್ಗೆ ಹೊಸದಾಗಿ ಕಲಿಯಬೇಕಿದೆ.

* * *

ಅಂಬೇಡ್ಕರ್ ಮೇಲಿನ ದಲಿತ ವಿದ್ವಾಂಸರ ದೊಡ್ಡ ಸೈನ್ಯವೇ ಇದ್ದರೂ ಈ ಭರವಸೆಯ ತತ್ವಜ್ಞಾನಿಯ ಜೀವನ ಮತ್ತು ಚಿಂತನೆಗಳ ಬಗ್ಗೆ ಗೊಂದಲಗಳ

ನಮ್ಮ ಆರ್ಥಿಕ ಮತ್ತು ಸಾಮಾಜಿಕ ಗುರಿಗಳನ್ನು ತಲುಪಲು ಸಂವಿಧಾನಿಕ ಮಾರ್ಗಗಳು ನಮ್ಮ ಮುಂದಿರದಿದ್ದಾಗ ಸಂವಿಧಾನಿಕವಲ್ಲದ ಮಾರ್ಗಗಳನ್ನು ಉಪಯೋಗಿಸುವುದು ಹೆಚ್ಚು ನ್ಯಾಯಯುತವಾಗಿತ್ತು. ಆದರೆ ಸಂವಿಧಾನಿಕ ಮಾರ್ಗಗಳು ತೆರೆದಿರುವಾಗ ಸಂವಿಧಾನಿಕವಲ್ಲದ ಮಾರ್ಗಗಳನ್ನು ಉಪಯೋಗಿಸುವುದು ನ್ಯಾಯಯುತವಾಗಿರುವುದಿಲ್ಲ. ಇಂತಹ ಮಾರ್ಗಗಳು ಅರಾಜಕತೆಗೆ ವ್ಯಾಕರಣವಿದ್ದಂತೆ. ಅವುಗಳನ್ನು ಎಷ್ಟು ದೂರವಿಡುತ್ತೇವೆಯೊ ಅಷ್ಟೂ ನಮಗೆ ಒಳ್ಳೆಯದು.

ಅಂಬೇಡ್ಕರರಿಂದ ಕಲಿಯಬಹುದಾದುದು

ಮಹಾಪೂರವೇ ಇದೆ. ಈಗ ಮುಖ್ಯವಾದ ಐದು ಗೊಂದಲಗಳ ಬಗ್ಗೆ ವಿಚಾರ ಮಾಡೋಣ.

1. ಯಾವುದೇ ದಲಿತ ವಿದ್ವಾಂಸನನ್ನು ಅಂಬೇಡ್ಕರರು ಆರ್ಯ ಜನಾಂಗದ ಸಿದ್ಧಾಂತ ಮತ್ತು ಆರ್ಯರು ಸ್ಥಳೀಯರ ಮೇಲೆ ನಡೆಸಿದ ಧಾಳಿ ಇವುಗಳ ಬಗ್ಗೆ ನಂಬಿದ್ದರೇ ಎಂದು ಪ್ರಶ್ನಿಸಿ. ಅವರು ಹೌದು ಎನ್ನುತ್ತಾರೆ. ಆರ್ಯ ಜನಾಂಗದ ಬಗ್ಗೆ ಅಂಬೇಡ್ಕರರ ಪ್ರಬಂಧವನ್ನು ಓದಿ. ಅವರ ಹಿಂಬಾಲಕರು ಏನು ಹೇಳುತ್ತಾರೋ ಅದಕ್ಕೆ ಸಂಪೂರ್ಣ ವಿರೋಧಿಯಾದ ಒಂದು ಚಿತ್ರಣ ನಿಮಗೆ ಸಿಗುತ್ತದೆ. ಅವರ ಪ್ರಖ್ಯಾತ 'ಶೂದ್ರರು ಯಾರು?' ಬರಹದಲ್ಲಿ ಡಾ.ಅಂಬೇಡ್ಕರರು ಈ ಕೆಳಗಿನವುಗಳನ್ನು ತಿರಸ್ಕರಿಸುತ್ತಾರೆ.

ಅ) ವೇದವನ್ನು ಬರೆದವರು ಆರ್ಯ ಜನಾಂಗಕ್ಕೆ ಸೇರಿದವರಾಗಿದ್ದರು.

ಆ) ಆರ್ಯರು ಭಾರತದ ಹೊರಗಿನಿಂದ ಬಂದವರು ಮತ್ತು ಭಾರತದ ಮೇಲೆ ಧಾಳಿ ನಡೆಸಿದರು.

ಇ) ಭಾರತವಾಸಿಗಳನ್ನು ದಾಸರು ಅಥವಾ ದಾಸ್ಯುಗಳು ಎಂದು ಕರೆಯಲಾಗುತ್ತಿದ್ದು ಅವರು ಆರ್ಯರಿಗಿಂತ ಜನಾಂಗೀಯವಾಗಿ ಭಿನ್ನವಾಗಿದ್ದರು.

ಈ) ಆರ್ಯರು ಬಿಳಿಯ ಬಣ್ಣದ ಜನಾಂಗದವರು. ದಾಸರು ಅಥವಾ ದಾಸ್ಯುಗಳು ಕಪ್ಪು ಜನಾಂಗದವರು.

ಉ) ಆರ್ಯರು ದಾಸರು ಅಥವಾ ದಾಸ್ಯುಗಳ ಮೇಲೆ ಜಯಗಳಿಸಿದರು.

ಊ) ದಾಸರು ಅಥವಾ ದಾಸ್ಯುಗಳು ಸೋತ ಮೇಲೆ ದಾಸ್ಯಕ್ಕೊಳಪಟ್ಟ ಶೂದ್ರರು ಎಂದು ಕರೆಯಲ್ಪಟ್ಟರು.

ಋ) ಆರ್ಯರು ವರ್ಣದ ಬಗ್ಗೆ ಪೂರ್ವಾಗ್ರಹ ಹೊಂದಿದ್ದರು. ಆದುದರಿಂದ ಚಾತುರ್ವರ್ಣ ಜಾರಿಗೆ ತಂದು ಬಿಳಿಯ ಜನಾಂಗ ಮತ್ತು ಕಪ್ಪು ಜನಾಂಗವಾದ ದಾಸರು ಅಥವಾ ದಾಸ್ಯುಗಳ ಮಧ್ಯೆ ಪ್ರತ್ಯೇಕತೆ ನಿರ್ಮಾಣ ಮಾಡಿದರು.

ಮೇಲಿನ ಏಳು ಅಂಶಗಳನ್ನು ಉದಾಹರಿಸಿ, ಅಂಬೇಡ್ಕರರು ಅದೊಂದು ಬ್ರಾಹ್ಮಣರ ಪಿತೂರಿ ಎಂದು ತಿರಸ್ಕರಿಸುತ್ತಾರೆ. ಆರ್ಯ ಜನಾಂಗದ ಸಿದ್ಧಾಂತ ತುಂಬಾ ಅಸಂಬದ್ಧವಾದುದು. ಅದು ಎಂದೋ ಸಾಯಬೇಕಿತ್ತು ಎಂದು ಅಂಬೇಡ್ಕರ್ ಬರೆಯುತ್ತಾರೆ. (ಪುಟ 80, ವಾಲ್ಯೂಮ್ – 7) ಅವರ ಪ್ರಕಾರ ಆರ್ಯ ಎಂಬುದು ಕೇವಲ ಭಾಷಿಕ ಪದ.

2. ಅಂಬೇಡ್ಕರ್ ಅವರು ಸಮಾಜವಾದಿಯೇ ಎಂದು ಪ್ರಶ್ನೆ ಕೇಳಿ. ಅದಕ್ಕೆ ಉತ್ತರ ಸಕಾರಾತ್ಮಕವಾಗಿರುತ್ತದೆ.

ನಿಜ, ಯಾರಾದರೂ ಅಂಬೇಡ್ಕರ್ ಅವರು 1946ರಲ್ಲಿ ಬರೆದ 'ರಾಜ್ಯಗಳು ಮತ್ತು ಅಲ್ಪಸಂಖ್ಯಾತರು' ಪುಸ್ತಕಕ್ಕಿಂತ ಹೆಚ್ಚೇನನ್ನೂ ಓದದಿದ್ದಲ್ಲಿ ಅವರು ಭಾರತಕ್ಕೆ ರಾಜ್ಯ ಸಮಾಜವಾದವನ್ನು ಸಲಹೆ ಮಾಡಿರುವುದರಿಂದ ಅವರು ಒಂದು ವಿಧದ ಸಮಾಜವಾದಿ ಎಂದು ನಂಬುತ್ತಾರೆ. ಆದರೆ 1952ರ ಸಂಸತ್ ಚುನಾವಣೆಗೆ ಅವರು ಬರೆದ ಚುನಾವಣಾ ಸಂಹಿತೆಯಲ್ಲಿ ಏನು ಹೇಳುತ್ತಾರೆ ನೋಡಿ.

ಅ) ಈ ದೇಶದ ಜನರ ಕಡು ಬಡತನವನ್ನು ಪರಿಗಣಿಸಿದಲ್ಲಿ ಹೆಚ್ಚು ಉತ್ಪತ್ತಿ, ಮತ್ತೂ ಹೆಚ್ಚು ಉತ್ಪತ್ತಿಯಲ್ಲದೆ ಬೇರಾವುದೂ ಪ್ರಥಮ ಮತ್ತು ಅತಿ ಮುಖ್ಯ ಗಣನೆಯಾಗುವುದು ಸಾಧ್ಯವಿಲ್ಲ. ಬಡತನಕ್ಕೆ ಮದ್ದು ಎಂದರೆ ಹೆಚ್ಚು ಉತ್ಪಾದನೆ, ಉತ್ಪಾದನೆಯ ವಿಧಾನವಲ್ಲ.

ಆ) ದೇಶದ ತುರ್ತು ಕೈಗಾರೀಕರಣ ಬಹು ಮುಖ್ಯ.

ಇ) ವ್ಯವಸಾಯವನ್ನು ಯಾಂತ್ರೀಕರಣಗೊಳಿಸಬೇಕು

ಈ) ಸಣ್ಣ ಸಣ್ಣ ಇಡುವಳಿಗಳನ್ನು ದೊಡ್ಡ ಫಾರಂಗಳಾಗಿ ಪರಿವರ್ತಿಸಬೇಕು.

ಉ) ಬಹಳ ವೇಗದಲ್ಲಿ ಬೆಳೆಯುತ್ತಿರುವ ಜನಸಂಖ್ಯೆಯನ್ನು ಹತೋಟಿಯಲ್ಲಿಡುವುದು ಮುಖ್ಯ. ಇದು ದೇಶದ ಬೇರೆ ಬೇರೆ ಭಾಗಗಳಲ್ಲಿ ಜನನ ನಿಯಂತ್ರಣ ಆಸ್ಪತ್ರೆ ತೆರೆಯುವ ಅವಶ್ಯಕತೆಯನ್ನು ಹೇಳುತ್ತದೆ.

ಊ) ಕಮ್ಯುನಿಸ್ಟ್ ಚೈನಾದ ಪರ ಎಂದು ಭಾರತ ವಾದಿಸುತ್ತಿರುವುದೇ ಭಾರತ ಮತ್ತು ಅಮೆರಿಕಾ ಮಧ್ಯದ ಬಿಕ್ಕಟ್ಟಿಗೆ ಕಾರಣ. ಇದರ ಪರಿಣಾಮವಾಗಿ ಭಾರತಕ್ಕೆ ಅಮೆರಿಕಾದಿಂದ ಯಾವುದೇ ಆರ್ಥಿಕ ಮತ್ತು ತಾಂತ್ರಿಕ ಸಹಾಯ ಪಡೆದುಕೊಳ್ಳಲಾಗುತ್ತಿಲ್ಲ.

ರಷ್ಯಾ ಮತ್ತು ಚೈನಾದ ಕಮ್ಯುನಿಸ್ಟ್ ಕ್ರಾಂತಿಯನ್ನು ಪ್ರಪಂಚದ 60ರಷ್ಟು ಭಾಗವೇ ವೈಭವೀಕರಿಸುತ್ತಿದ್ದಾಗ 60 ವರ್ಷಗಳ ಹಿಂದೆ ಡಾ.ಅಂಬೇಡ್ಕರ್ ಅವರು ಈ ಮಾತುಗಳನ್ನು ಬರೆದಿದ್ದರು.



3. ಅಂಬೇಡ್ಕರ್ ಅವರ ಮೊದಲ ಪ್ರೀತಿ ಯಾವುದು? ದಲಿತರೆ ಅಥವಾ ರಾಷ್ಟ್ರವೇ? ಈ ಪ್ರಶ್ನೆಯನ್ನು ಕೇಳಿ. ಹೆಚ್ಚು ಜನರು ದಲಿತರು ಮೊದಲು ಎನ್ನುತ್ತಾರೆ.

ಆದರೆ ಸಂವಿಧಾನ ಮಂಡಳಿಯಲ್ಲಿ ಭಾರತದ ಸಂವಿಧಾನವನ್ನು ಒಪ್ಪಿಗೆಗೆ ಇಡುತ್ತಾ ಅವರು ನವೆಂಬರ್ 25, 1949ರ ಮಧ್ಯಾಹ್ನ ಏನು ಹೇಳಿದರು ನೋಡಿ: "ಭಾರತೀಯ ತನ್ನ ದೇಶವನ್ನು ತನ್ನ ಪಂಗಡಕ್ಕಿಂತ ಉನ್ನತ ಸ್ಥಾನದಲ್ಲಿ ಇಡುತ್ತಾನೋ ಅಥವಾ ತನ್ನ ಪಂಗಡವನ್ನು ತನ್ನ ದೇಶಕ್ಕಿಂತ ಮುಖ್ಯವಾಗಿ ಕಾಣುತ್ತಾನೆಯೊ? ನನಗೆ ತಿಳಿದಿಲ್ಲ. ಆದರೆ ಇಷ್ಟು ಮಾತ್ರ ಖಚಿತ. ಪಕ್ಷಗಳು ಪಂಗಡವನ್ನು ದೇಶಕ್ಕಿಂತ ಮುಖ್ಯ ಎಂದು ಕಂಡಲ್ಲಿ ನಮ್ಮ ಸ್ವಾತಂತ್ರ್ಯಕ್ಕೆ ಎರಡನೇ ಬಾರಿಗೆ ಧಕ್ಕೆಯುಂಟಾಗುತ್ತದೆ ಮತ್ತು ಅದು ಎಂದೆಂದಿಗೂ ಕಳೆದುಹೋಗಬಹುದು. ಇಂತಹ ಸಂದರ್ಭ ಬಾರದಿರುವ ಹಾಗೆ ನಾವು ದೃಢ ನಿಶ್ಚಯದಿಂದ ಕಾಯ್ದುಕೊಳ್ಳಬೇಕು. ನಮ್ಮ

ಸ್ವಾತಂತ್ರ್ಯವನ್ನು ನಮ್ಮ ಕೊನೆಯ ತೊಟ್ಟು ರಕ್ತವನ್ನಾದರೂ ನೀಡಿ ರಕ್ಷಿಸಿಕೊಳ್ಳುವ ದೃಢನಿರ್ಧಾರ ನಮ್ಮದಾಗಿರಬೇಕು.

ಅಂಬೇಡ್ಕರ್ ಅವರು ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ 'ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು' ಮತ್ತು 'ರೂಪಾಯಿಯ ಸಮಸ್ಯೆ' ಇವುಗಳನ್ನು ಓದಿ. ಆಗ ಅರ್ಥವಾಗುತ್ತದೆ. ಅವರು ಎಷ್ಟು ಆಳವಾಗಿ ತನ್ನ ದೇಶದ ಬಗ್ಗೆ ಚಿಂತಿಸಿದ್ದರು ಎಂದು. ಇಂಗ್ಲೆಂಡ್‌ಗೆ ಭಾರತದ ಕೊಡುಗೆ ಅಗಾಧವಾದದ್ದು. ಇದಕ್ಕೆ ಬದಲಾಗಿ ಇಂಗ್ಲೆಂಡ್ ನೀಡಿದ ಕೊಡುಗೆ ಕ್ಷುಲ್ಲಕ ಎಂದು ಅವರು ವಾದಿಸಿದರು. ಭಾರತದಲ್ಲಿನ ಚಿನ್ನ ಮತ್ತು ಬೆಳ್ಳಿಯ ಸಂಗ್ರಹಕ್ಕೆ ಇಂಗ್ಲೆಂಡ್ ಏನೂ ಸೇರಿಸಲಿಲ್ಲ. ಆದರೆ ಅದು ಅದನ್ನು ಖಾಲಿ ಮಾಡಿತು ಎನ್ನುತ್ತಾರೆ ಅವರು.

ಅದೇ ಸಂದರ್ಭದಲ್ಲಿ ಡಾ.ಅಂಬೇಡ್ಕರ್ ವಿದ್ವಾಂಸನಾಗಿ ಇಂಗ್ಲೆಂಡ್‌ನ ಆರ್ಥಿಕೇತರ ಕೊಡುಗೆಗಳನ್ನು ತಮ್ಮ ಬರಹದಲ್ಲಿ ಒಪ್ಪಿಕೊಳ್ಳುತ್ತಾರೆ. ಅವುಗಳನ್ನು ನಾಣ್ಯಗಳಿಂದ ಅಳೆಯಲಾಗುವುದಿಲ್ಲ ಎನ್ನುತ್ತಾರೆ.

ಇಂಗ್ಲಿಷರು ಭಾರತೀಯರಿಗೆ ಶಾಂತಿಯ ವರವನ್ನು ನೀಡಿದ್ದಾರೆ. ಅವರು ಪಶ್ಚಿಮದ ಶಿಕ್ಷಣವನ್ನು ಪರಿಚಯಿಸಿ ಹಳೆಯ ನಾಗರಿಕತೆಯುಳ್ಳ ರಾಷ್ಟ್ರವನ್ನು ಆಧುನಿಕ ಸಂಸ್ಥೆಗಳು ಮತ್ತು ಜೀವನ ರೀತಿಗಳ ಹತ್ತಿರ ತಂದಿದ್ದಾರೆ. ಅವರು ಶಕ್ತಿಯುತ ಮತ್ತು ಉತ್ತಮ ಆಡಳಿತವನ್ನು ಕಟ್ಟಿದ್ದಾರೆ. ಉತ್ತಮ ಕಾನೂನುಗಳನ್ನು ರಚಿಸಿದ್ದಾರೆ ಮತ್ತು ನ್ಯಾಯಾಂಗವನ್ನು ಸ್ಥಾಪಿಸಿದ್ದಾರೆ ಎನ್ನುತ್ತಾರೆ ಅವರು.

4. ಡಾ.ಅಂಬೇಡ್ಕರ್ ಅವರು ತಮ್ಮ ರಾಜಕೀಯ ಪಕ್ಷ ಸೆಡ್ಯೂಲ್ಡ್ ಕಾಸ್ಟ್ ಫೆಡರೇಷನನ್ನು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಎಂದು ಮರುನಾಮಕರಣ ಮಾಡಲು ಏಕೆ ಇಚ್ಛಿಸಿದರು? ಇದಕ್ಕೆ ಉತ್ತರ ಪಡೆಯುವುದು ಕಷ್ಟ. ಅಧ್ಯಕ್ಷ ಅಬ್ರಹಾಂ ಲಿಂಕನ್ ಅವರು ಅಮೆರಿಕಾದ ರಿಪಬ್ಲಿಕನ್ ಪಕ್ಷದವರಾದುದರಿಂದ ಮತ್ತು 1980ರವರೆಗೆ ರಿಪಬ್ಲಿಕನ್ ಪಕ್ಷ ಡೆಮಾಕ್ರಟರಿಗಿಂತ ಕರಿಯರಿಗೆ ಹತ್ತಿರವಿದ್ದಂತೆ ಕಂಡು ಬಂದುದರಿಂದ, ಅಂಬೇಡ್ಕರ್ ಅವರು ತಾವು ಸ್ಥಾಪಿಸಲಿರುವ ಪಕ್ಷಕ್ಕೆ ರಿಪಬ್ಲಿಕನ್ ಪಕ್ಷ ಎಂಬ ಹೆಸರು ಆರಿಸಿಕೊಂಡರು.

5. ಅಂಬೇಡ್ಕರ್ ಹಿಂದೂಗಳನ್ನು ದ್ವೇಷಿಸುತ್ತಿದ್ದರೇ? ಇದಕ್ಕೆ ಉತ್ತರ ಸಹ ಸಕಾರಾತ್ಮಕವಾಗಿರುತ್ತದೆ. ಅಂಬೇಡ್ಕರ್ ಅವರಂತಹ ತತ್ವಜ್ಞಾನಿಗಳ ಜೀವನದಲ್ಲಿ ದ್ವೇಷ ಎಂಬುದಕ್ಕೆ ಸ್ಥಳವೇ ಇರುವುದಿಲ್ಲ. ಅಂಬೇಡ್ಕರರು ಹಿಂದೂ ಧರ್ಮವನ್ನು ಒಂದು ವ್ಯವಸ್ಥಿತ ನಂಬಿಕೆಯಾಗಿ ತಿರಸ್ಕರಿಸಿದರು. ಒಂದು ಧಾರ್ಮಿಕ ಪಂಗಡವಾಗಿ ಹಿಂದೂ ಧರ್ಮ ಮತ್ತು ಹಿಂದೂಗಳು ಇವೆರಡೂ ಒಂದೇ ಅಲ್ಲ. ಅಂಬೇಡ್ಕರ್ ಅವರು ತಮ್ಮ ಮನೆ 'ರಾಜಗೃಹ'ವನ್ನು ಕಟ್ಟಲು ಉದ್ದೇಶಿಸಿದಾಗ ಅವರು ಆರಿಸಿಕೊಂಡುದು ಬಾಂಬೆಯ ಹಿಂದೂ ಬಡಾವಣೆ. ಈ ರಾಜಗೃಹ ಕಟ್ಟುವಲ್ಲಿ ಅವರು ಮಾಡಿದ ನಿರ್ಧಾರ ಪ್ರತ್ಯೇಕತೆಯನ್ನು ಸಂಪೂರ್ಣ ಅಲ್ಲಗಳೆಯುತ್ತದೆ. "ನೀವು ನನ್ನನ್ನು ಅಸ್ಪೃಶ್ಯ ಎಂದು ಪ್ರತ್ಯೇಕಿಸಿ, ನಾನು ನಿಮ್ಮ ಮಧ್ಯೆಯೇ ಬದುಕುತ್ತೇನೆ".

ದಲಿತರು ಅಂಬೇಡ್ಕರರನ್ನು ಹೊಸದಾಗಿ ಓದಬೇಕಿದೆ.

* * *

ಅಂಬೇಡ್ಕರರು ಇಪ್ಪತ್ನಾಲ್ಕು ವರ್ಷದವರಿದ್ದಾಗ ಕೊಲಂಬಿಯಾ ವಿಶ್ವವಿದ್ಯಾಲಯದ ಎಂ.ಎ.ಪದವಿ ಪರೀಕ್ಷೆಗೆ "ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು" ಎಂಬ ಅತ್ಯುತ್ತಮ ಕೃತಿಯನ್ನು ಬರೆದರು.

ಇಂದು ಅಂಬೇಡ್ಕರರ ಅನುಯಾಯಿಗಳು ಎಂದು ಕರೆದುಕೊಳ್ಳುವ ಇಪ್ಪತ್ನಾಲ್ಕು ವರ್ಷದ ದಲಿತರು ಏನು ಮಾಡುತ್ತಿದ್ದಾರೆ? ಇಲ್ಲಿ ನಾನು ದಲಿತ ರೈತ ಕೂಲಿಕಾರರು ಅಥವಾ ಬೀದಿ ವ್ಯಾಪಾರಿಗಳ ಬಗ್ಗೆ ಮಾತನಾಡುತ್ತಿಲ್ಲ. ನಾನು ಹೇಳುತ್ತಿರುವುದು ರಾಜಕೀಯದಲ್ಲಿ ಮತ್ತು ಆಡಳಿತದಲ್ಲಿ ಉತ್ತಮ ಸ್ಥಿತಿಯಲ್ಲಿರುವ ದಲಿತರ ಮಕ್ಕಳ ಬಗ್ಗೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿಗಳೆಂದು ಹೇಳಿಕೊಳ್ಳುವ ಜನರಲ್ಲಿ ಹೆಚ್ಚು ಮಂದಿ ನಾಗರಿಕ ಸೇವಾ ಪರೀಕ್ಷೆಗಳನ್ನು ಬರೆಯುವುದರಲ್ಲಿ ನಿರತರಾಗಿದ್ದಾರೆ. ಅವರಲ್ಲಿ ಅನೇಕರು ತಾವು ಮೂವತ್ತು ವರ್ಷ ಮೀರಿದ ನಂತರವೂ ಈ ಪರೀಕ್ಷೆಗಳನ್ನು ಬರೆಯುತ್ತಿರುತ್ತಾರೆ.

ಇಪ್ಪತ್ತೆರಡು ವರ್ಷ ವಯಸ್ಸಿಗೇ ಅಂಬೇಡ್ಕರ್ ಕೊಲಂಬಿಯಾ ವಿಶ್ವವಿದ್ಯಾಲಯವನ್ನು ಸೇರಿದ್ದರು. ಈ ವಯಸ್ಸಿನ ದಲಿತ ಯುವಕರು ಇಂದು ಏನು ಮಾಡುತ್ತಿದ್ದಾರೆ? ಅಮೆರಿಕಕ್ಕೆ ಹೋಗುವುದಕ್ಕೆ ಮೊದಲೆ ಅಂಬೇಡ್ಕರರು ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದರು. ಅವರು ಕೊಲಂಬಿಯಾದಲ್ಲಿದ್ದ ಕಾಲದಲ್ಲಿ ಬರೆದ "ರೂಪಾಯಿಯ ಸಮಸ್ಯೆ" ಗ್ರಂಥವನ್ನು ಓದಿದಲ್ಲಿ ಇಂಗ್ಲಿಷ್ ಮೇಲಿನ ಅವರ ಪ್ರಭುತ್ವವನ್ನು ಕಾಣಬಹುದು.

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಪದವಿಗೆ ಅವರು ಬರೆದ ಎರಡು ಬರಹಗಳು ಅವರನ್ನು ಉದಯೋನ್ಮುಖ ಪ್ರತಿಭೆ ಎಂದು ಸಾಬೀತು ಮಾಡಿದವು. ಅವರ ಪ್ರಖ್ಯಾತ ಬರಹ "ಭಾರತದಲ್ಲಿ ಜಾತಿಗಳು ಅವುಗಳ ರಚನೆ, ಉಗಮ ಮತ್ತು ಬೆಳವಣಿಗೆ"ಯನ್ನು ಅವರು ಬರೆದದ್ದು ಜಾತಿ ಪದ್ಧತಿಯನ್ನು ವಿವರಿಸುವ ವಿದ್ಯಾರ್ಥಿಯಾಗಿ, ಅಸ್ಪೃಶ್ಯರನ್ನು ಬಿಡುಗಡೆಗೊಳಿಸಲು ಯತ್ನಿಸುತ್ತಿರುವ ಕ್ರಾಂತಿಕಾರಿಯಾಗಿ ಅಲ್ಲ. ಅಂಬೇಡ್ಕರರು ಮಾನವ ಶಾಸ್ತ್ರವನ್ನೂ ಅಭ್ಯಸಿಸಲು ಆರಿಸಿಕೊಂಡಿದ್ದುದರಿಂದ ಮಾನವ ಶಾಸ್ತ್ರದ ವಿದ್ಯಾರ್ಥಿಯಾಗಿ ಜಾತಿಯ ಮೇಲೆ ಅವರು ಬರೆದರು. ಭಾರತದ ಮಾನವ ಶಾಸ್ತ್ರದ ಯಾವುದೇ ವಿದ್ಯಾರ್ಥಿ ಭಾರತದ ಜಾತಿ ಪದ್ಧತಿಯನ್ನು ವಿವರಿಸದಿರಲು ಸಾಧ್ಯವಿಲ್ಲ.

ಅಂಬೇಡ್ಕರರು "ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು", "ರೂಪಾಯಿಯ ಸಮಸ್ಯೆ" ಮತ್ತು "ಭಾರತದಲ್ಲಿ ಜಾತಿಗಳು" ಇವುಗಳನ್ನು ಬರೆದಾಗ ಅವರು ಇಪ್ಪತ್ತಾರು ವರ್ಷಗಳಿಗಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿಯಾಗಿದ್ದರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದ ದಿನಗಳಲ್ಲಿ ಅವರು ಬರೆದ ಈ ಮೂರೂ ಬರಹಗಳನ್ನು ಇಂದು ಬಹುದೊಡ್ಡ ವಿದ್ವಾಂಸನೊಬ್ಬ ಬರೆದವೆಂದು ಪರಿಗಣಿಸಲಾಗುತ್ತಿದೆ. ವಿದ್ಯಾರ್ಥಿಯಾಗಿ ಅಂಬೇಡ್ಕರ್ ಬರೆದದ್ದನ್ನು ಅನೇಕ ಆರ್ಥಿಕ ತಜ್ಞರು ಮತ್ತು ಚಿಂತಕರು ಚರ್ಚಿಸುತ್ತಿದ್ದಾರೆ.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿಗಳು ಯಾವ ದಾರಿ ಹಿಡಿಯಬೇಕು? ಅವರ ಜೀವಿತ ಕಾಲದಲ್ಲಿ ಅಂಬೇಡ್ಕರ್ ಅನುಯಾಯಿಗಳಾರೂ ಅಂಬೇಡ್ಕರರಾಗಲು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ಮೊದಲು ಸ್ಪಷ್ಟಪಡಿಸುವುದು ಒಳ್ಳೆಯದು. ಅಂಬೇಡ್ಕರರು ಅಷ್ಟು ದೊಡ್ಡ, ಅಷ್ಟು ಸತ್ವಯುತವಾದ ಬದಲಾವಣೆಯ

(58ನೇ ಪುಟಕ್ಕೆ)

(47ನೇ ಪುಟದಿಂದ)

ಭೂ ಹೋರಾಟ...

ಯಾಂತ್ರಿಕವಾಗಿ ಒಂದು ತಿಂಗಳು ಅಥವಾ ಒಂದು ವರ್ಷದ ಕೆಲಸವಲ್ಲ. ಇದಕ್ಕೆ ದಲಿತರು ಮಾತ್ರವಲ್ಲದೆ ಅವರ ಜೊತೆಯಲ್ಲೇ ಭೂಮಿಯಿಂದ ವಂಚಿತರಾಗಿರುವ ಆದಿವಾಸಿ ಬುಡಕಟ್ಟು ಜನರು, ವಿವಿಧ ವೃತ್ತಿ ಕಸುಬಿನವರು ಒಟ್ಟಾರೆ ದುಡಿಯುವ ಶ್ರಮಜೀವಿಗಳು ಸಂಘಟಿತರಾಗಿ ನಿರಂತರವಾಗಿ ನಡೆಸಬೇಕಾಗಿರುವ ಒಂದು ಹೋರಾಟ. ಮುಂದುವರಿದು ಅದೊಂದು ನಿರಂತರವಾಗಿ ನಡೆಸಬೇಕಾಗಿರುವ ಚಳವಳಿ. ಇಂತಹ ಒಂದು ನಿರಂತ ರವಾದ ಚಳವಳಿ ಕೇವಲ ದಲಿತರ ಭೂಮಿಯ ಬೇಡಿ ಕೆಯನ್ನು ಮಾತ್ರ ಈಡೇರಿಸುವುದಕ್ಕೆ ಸೀಮಿತವಾಗಿರುವು ದಿಲ್ಲ. ಅದು ಒಟ್ಟಾರೆ ಭಾರತದ ಮತ್ತು ಕರ್ನಾಟಕದ ಕೃಷಿ ವಲಯವನ್ನು ಶೋಷಕವರ್ಗ ಶಕ್ತಿಗಳಿಂದ ಬಿಡಿಸಿ, ಶೋಷಿತ ಸಮುದಾಯಗಳಿಗೆ ದಕ್ಕುವಂತೆ ಮಾಡುವುದಾಗಿರುತ್ತದೆ. ಆ ಮೂಲಕ ಭೂಮಿಯ ಅಸಮಾನ ಹಂಚಿಕೆಯ ಕಾರಣದಿಂದ ನಿರ್ಮಾಣವಾಗಿರುವ ಶೋಷಕ ಆಳುವ ವರ್ಗ, ಶೋಷಕ ಪ್ರಭುತ್ವ ಹಾಗೂ ಮಾನವ ವಿರೋಧಿ ಸಮಾಜವನ್ನು ಇಲ್ಲವಾಗಿಸುವಂತೆ ಮಾಡುವ ಮತ್ತು ಅದೇ ಕಾಲಕ್ಕೆ ಅಸಮಾನತೆಗಳಿಲ್ಲದ ಹೊಸ ಸಮಾಜ ನಿರ್ಮಾಣದ ಕೆಲಸವೂ ಆಗಿದೆ (ಪು.59) ಎಂದು ಭೂ ಹೋರಾಟದ ಮಹತ್ವವನ್ನು ತಿಳಿಸುತ್ತಾರೆ.

ಒಟ್ಟಾರೆಯಾಗಿ ಜಾಗತೀಕರಣದ ಈ ಸಂದರ್ಭದಲ್ಲಿ ದಲಿತ, ರೈತ, ಪರಿಸರ ಹೋರಾಟಕ್ಕೆ, ಹೋರಾಟಗಾರರಿಗೆ ಮಾರ್ಗದರ್ಶಿ ಕೈಪಿಡಿಯಾಗಿ ಬಳಕೆಯಾಗ ಬಹುದಾದ ಈ ಪುಸ್ತಕವನ್ನು ಕುರಿತು ಈವರೆಗೂ ಯಾರೂ ಚರ್ಚಿಸದಿರುವುದನ್ನು ನೋಡಿದರೆ, ಬಹುಶಃ ಲೇಖಕರೇ ಗುರುತಿಸುವಂತೆ 'ದಲಿತರು ಭೂಮಿಯಿಂದ ವಂಚಿತರಾಗಿದ್ದಾರೆ ಎಂಬ ವಿಷಯ ದಲಿತರ ಸಮಸ್ಯೆಗಳ ಚರ್ಚೆಯ ಕೇಂದ್ರದಲ್ಲಿ ಏಕೆ ಬರಲಿಲ್ಲ? ಇದರ ಜಾಗದಲ್ಲಿ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಮನುಧರ್ಮಶಾಸ್ತ್ರ, ವೈದಿಕಶಾಹಿ, ಪುರೋಹಿತಶಾಹಿ, ಬ್ರಾಹ್ಮಣಶಾಹಿ ಇವೇ ದಿವಂಗತ ವಿಷಯಗಳನ್ನು ಮೇಲಿಂದ ಮೇಲೆ ಏಕೆ ಕೇಂದ್ರ ಚರ್ಚೆಗೆ ತರಲಾಯಿತು? ಅಂದರೆ ಈ ವಿಷಯಗಳ ಚರ್ಚೆಯನ್ನು ರೋಮಾಂಚನ ಗೊಳಿಸಿ ದಲಿತರ ಮೂಲಭೂತ ಸಮಸ್ಯೆಯನ್ನು ಮುಚ್ಚಿಟ್ಟಿರುವ ವಿದ್ರೋಹಿ ವೈಚಾರಿಕತೆಯೇ ಇಂದು ದಲಿತರಿಗೆ ವೈಚಾರಿಕ ರಂಗದಲ್ಲಿ ಬಹಳ ದೊಡ್ಡ ಶತ್ರುವಾಗಿದೆ' (ಪು.53). ಇಂತಹ ವಿದ್ರೋಹಿ ವೈಚಾರಿಕತೆಯ ವಾರಸುದಾರರೇ ಜನಪರ ಕೃತಿಗಳು ಜನರ ಕೈಸೇರದಂತೆ ಮುಚ್ಚಿಡಲು ಪ್ರಯತ್ನಿಸುತ್ತಿರಬಹುದೇ?

ಜಟಿಲವೂ, ಗಂಭೀರವೂ ಆದ ವಿಷಯವನ್ನು ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರೆದ ಡಾ. ಬಿ.ಎಂ. ಪುಟ್ಟಯ್ಯರವರಿಗೂ, ಕಡಿಮೆ ಬೆಲೆಯಲ್ಲಿ ಜನರಿಗೆ ತಲುಪುವಂತೆ ಮಾಡಿದ ಕನ್ನಡ ವಿ.ವಿ. ಹಂಪಿಯ ಕುಲಪತಿಗಳಿಗೂ, ಪ್ರಸಾರಾಂಗದ ನಿರ್ದೇಶಕರಿಗೂ ಕೃತಜ್ಞತೆಗಳು.

ಡಾ. ಜೆ. ಬಾಲಕೃಷ್ಣ

ಮರಳಿ ದೊರಕಿದ ಸಂತೋಷ

ಇಬ್ಬರು ವ್ಯಕ್ತಿಗಳು ಪರಸ್ಪರ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು. ಅವರಲ್ಲಿ ಒಬ್ಬಾತ ಹೇಳುತ್ತಿದ್ದ, 'ನೋಡು ನನ್ನಲ್ಲಿ ಬೇಕಾದಷ್ಟು ಹಣವಿದೆ, ಆದರೆ ನನಗೆ ಸಂತೋಷವೆಂಬುದೇ ಇಲ್ಲ. ಸುಖ ಸಂತೋಷ ಅರಸಿ ಹಣದ ಚೀಲ ಹಿಡಿದು ಎಲ್ಲೆಲ್ಲೋ ಅಲೆದಾಡಿದೆ, ಆದರೆ ಎಲ್ಲೂ ನನಗೆ ಸಂತೋಷ, ತೃಪ್ತಿ ಸಿಗಲೇ ಇಲ್ಲ' ಎಂದ. ಅಲ್ಲೇ ಹಾದು ಹೋಗುತ್ತಿದ್ದ ಮುಲ್ಲಾ ನಸ್ರುದ್ದೀನನಿಗೆ ಈ ಮಾತು ಕೇಳಿಸಿತು. ಆತ ಕೂಡಲೇ ಆ ರೀತಿ ಹೇಳಿದ ವ್ಯಕ್ತಿಯ ಕೈಯಲ್ಲಿ ಇದ್ದ ಚೀಲವನ್ನು ಕಸಿದುಕೊಂಡು ಓಡಿದ. ಚೀಲ ಕಳೆದುಕೊಂಡ ವ್ಯಕ್ತಿ 'ಅಯ್ಯೋ ನನ್ನ ಚೀಲ' ಎನ್ನುತಾ ನಸ್ರುದ್ದೀನನ ಹಿಂದೆ ಓಡಿದ. ಆದರೆ ಜೋರಾಗಿ ಓಡಿದ ನಸ್ರುದ್ದೀನ್ ಅಲ್ಲೇ ಕಟ್ಟಡವೊಂದರ ಮರೆಯಲ್ಲಿ ಅವಿತುಕೊಂಡ. 'ಚೀಲ ಹೋಯಿತಲ್ಲಾ' ಎಂದು ದುಃಖಿಸುತ್ತಿದ್ದ ವ್ಯಕ್ತಿ ಇನ್ನೇನು ಹಿಂದಿರುಗಬೇಕು ಎನ್ನುವಷ್ಟರಲ್ಲಿ ರಸ್ತೆಯ ಮಧ್ಯದಲ್ಲಿ ಆ ಚೀಲ ಕಾಣಿಸಿತು. 'ಹೋ ನನ್ನ ಚೀಲ ಸಿಕ್ಕಿತು' ಎಂದು ಆ ವ್ಯಕ್ತಿ ಸಂತೋಷದಿಂದ ಕುಣಿದಾಡಿದ. 'ಸಂತೋಷ ಅರಸುವ ವ್ಯಕ್ತಿಗೆ ಸಂತೋಷ ತಂದುಕೊಡುವ ವಿಧಾನಗಳಲ್ಲಿ ಇದೂ ಒಂದು' ಎಂದುಕೊಂಡ ಅಲ್ಲೇ ಮರೆಯಲ್ಲಿದ್ದ ನಸ್ರುದ್ದೀನ್.

ಇಬ್ಬರ ಸ್ಥಳದಲ್ಲಿ ನಾಲ್ವರು

ನಸ್ರುದ್ದೀನನ ಪತ್ನಿ ಅಕಾಲ ಮರಣಕ್ಕೀಡಾಗಿದ್ದಳು. ಸ್ವಲ್ಪ ಕಾಲಾನಂತರ ಆತ ಮತ್ತೊಬ್ಬ ವಿಧವೆಯನ್ನು ಮದುವೆಯಾದ. ಒಂದು ದಿನ ಅವರಿಬ್ಬರೂ ಮಲಗಿದ್ದಾಗ ಇಬ್ಬರೂ ತಮ್ಮ ಮೊದಲ ಸಂಗಾತಿಗಳನ್ನು ನೆನೆಸಿಕೊಳ್ಳತೊಡಗಿದರು. ಆಕೆ, 'ನಿನಗೆ ಗೊತ್ತೆ, ನನ್ನ ಮೊದಲ ಗಂಡ ಮಹಾನ್ ಸುಂದರನಾಗಿದ್ದ' ಎಂದಳು.

'ನನ್ನ ಮೊದಲ ಪತ್ನಿ ಅದ್ವಿತೀಯ ಸುಂದರಿಯಾಗಿದ್ದಳು' ಎಂದ ನಸ್ರುದ್ದೀನ್.

'ನನ್ನ ಮೊದಲ ಪತಿ ಉತ್ತಮ ಉದ್ಯೋಗದಲ್ಲಿದ್ದ'

'ನನ್ನ ಮೊದಲ ಪತ್ನಿ ಅತ್ಯಂತ ರುಚಿಕರ ಅಡುಗೆ ಮಾಡುತ್ತಿದ್ದಳು'.

'ನನ್ನ ಗಂಡ ಶಕ್ತಿಶಾಲಿಯಾಗಿದ್ದ'.

'ನನ್ನ ಪತ್ನಿ ಅತ್ಯಂತ ಚತುರಳಾಗಿದ್ದಳು'.

ಮಾತು ಹೀಗೇ ಬೆಳೆಯುತ್ತಾ ಹೋಗಿ ಇಬ್ಬರೂ ಕೈ ಕೈ ಮಿಲಾಯಿಸಿದರು. ಆಕೆ ಮಂಚದಿಂದ ಕೆಳಕ್ಕೆ ಬಿದ್ದು ಮೈ ಕೈಗೆ ಗಾಯ ಮಾಡಿಕೊಂಡಳು. ಪರಿಸ್ಥಿತಿ ಬಿಗಡಾಯಿಸಿದೆ ಎಂದು ಅರಿತ ಆಕೆ ನಸ್ರುದ್ದೀನನಿಗೆ ಬುದ್ಧಿ ಕಲಿಸಬೇಕೆಂದು ವಿಷಯವನ್ನು ನ್ಯಾಯಾಲಯಕ್ಕೆ ಕೊಂಡೊಯ್ದಳು.

ಆಕೆಯ ವಾದವನ್ನು ಆಲಿಸಿದ ನ್ಯಾಯಾಧೀಶರು ನಸ್ರುದ್ದೀನನ ವಾದವನ್ನು ಮಂಡಿಸುವಂತೆ ಹೇಳಿದರು. ಅದಕ್ಕೆ ನಸ್ರುದ್ದೀನ್, 'ವಿಷಯ ಸರಳವಾದದ್ದು ಸ್ವಾಮಿ. ನಮ್ಮ ಮನೆಯಲ್ಲಿರುವ ಮಂಚ ತೀರಾ ಚಿಕ್ಕದು, ಅದರಲ್ಲಿ ಇಬ್ಬರು ಮಾತ್ರ ಮಲಗಬಹುದು. ಆದರೆ ನಿನ್ನೆ ರಾತ್ರಿ ನಮ್ಮ ಜೊತೆಗೆ ಮಲಗಲು ನನ್ನ ಪತ್ನಿಯ ಮೊದಲ ಗಂಡ ಹಾಗೂ ನನ್ನ ಮೊದಲ ಪತ್ನಿಯೂ ಬಂದದ್ದರಿಂದ ತೀರಾ ಇಕ್ಕಟ್ಟಾಗಿ ಈಕೆ ಮಂಚದಿಂದ ಬಿದ್ದು ಗಾಯ ಮಾಡಿಕೊಂಡಿದ್ದಾಳೆ ಅಷ್ಟೆ!' ಎಂದ.

ಆ ಬದಿ ಈ ಬದಿ

ಒಮ್ಮೆ ನಸ್ರುದ್ದೀನ್ ನದಿಯ ದಡವೊಂದರಲ್ಲಿ ಕುಳಿತು ನದಿಯ ಜುಳುಜುಳು ನಾದವನ್ನು ಕೇಳುತ್ತಾ ಮೈಮರೆತಿದ್ದ. ನದಿಯ ಆ ಬದಿಯ ದಂಡೆಯಲ್ಲಿದ್ದ ಒಬ್ಬ ವ್ಯಕ್ತಿ ನಸ್ರುದ್ದೀನನಿಗೆ ಕೇಳಿಸುವಂತೆ, 'ಹೇ. ನಾನು ನದಿಯ ಆ ಬದಿಗೆ ಬರುವುದು ಹೇಗೆ?' ಎಂದು ಜೋರಾಗಿ ಕೂಗಿದ. ಅದಕ್ಕೆ ಮುಲ್ಲಾ ನಸ್ರುದ್ದೀನ್, 'ನೀನು ಆ ಬದಿಯಲ್ಲಿಯೇ ಇದ್ದೀಯಲ್ಲವೆ?' ಎಂದು ಕೂಗಿ ಹೇಳಿದ.

(56ನೇ ಪುಟದಿಂದ)

ರಾಷ್ಟ್ರ ನಿರ್ಮಾಪಕರಾಗಿ...

ಹರಿಕಾರರಾಗಿದ್ದರು.

ಆದರೆ ಅವರ ಅನುಯಾಯಿಗಳು ಉತ್ತಮ ಅನುಯಾಯಿಗಳಾಗುವ ದೃಷ್ಟಿಯಿಂದ ಅಂಬೇಡ್ಕರ್ ಅನುಸರಿಸಿದ ಮೂಲಭೂತ ಅಂಶಗಳನ್ನಾದರೂ ಅನುಸರಿಸಬೇಕು. ಅಂಬೇಡ್ಕರ್ ಅವರ ಕಾಲದಲ್ಲಿಯೂ ನಾಗರಿಕ ಸೇವೆಗಳಿದ್ದವು. ಆದರೆ ಅವರು ನಾಗರಿಕ ಸೇವೆಯನ್ನು ವೃತ್ತಿಯಾಗಿ ಆರಿಸಿಕೊಳ್ಳಲಿಲ್ಲ. ಬದಲಾಗಿ ಅವರು ಶಿಕ್ಷಣ ಕ್ಷೇತ್ರವನ್ನು ಆರಿಸಿಕೊಂಡರು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅವರು ಮೊದಲು ತನ್ನನ್ನು ಒಬ್ಬ ಪ್ರತಿಭಾವಂತ ವಿದ್ಯಾರ್ಥಿ ಎಂದು ಗುರುತಿಸಿಕೊಂಡರು ಮತ್ತು ಅರ್ಥಶಾಸ್ತ್ರದಲ್ಲಿ ವಿಶೇಷ ಪರಿಣತಿ ಪಡೆದರು. ಅಂಬೇಡ್ಕರ್ ಅವರು "ಭಾರತದಲ್ಲಿ ಜಾತಿಗಳು" ಬರೆದದ್ದು ಮಾನವ ಶಾಸ್ತ್ರದ ಅಧ್ಯಯನದ ಭಾಗವಾಗಿ. ಆ ಬರಹವನ್ನು ದಲಿತ ಚಳವಳಿಗಳ ದೃಷ್ಟಿಕೋನದಿಂದ ಬರೆಯಲಿಲ್ಲ. ಅರ್ಥಶಾಸ್ತ್ರದ ವಿದ್ಯಾರ್ಥಿಯಾಗಿ ಅಂಬೇಡ್ಕರ್ ಅಂದಿನ ಅವರ ಪ್ರಾಧ್ಯಾಪಕರುಗಳು ಬರೆಯುವ ಮಟ್ಟದಲ್ಲಿ ವಿದ್ವತ್‌ಪೂರ್ಣ ಬರಹಗಳನ್ನು ಬರೆದರು.

ಶ್ರೇಷ್ಠ ಅರ್ಥ ಶಾಸ್ತ್ರಜ್ಞ ಮತ್ತು ಶ್ರೇಷ್ಠ ವಕೀಲನಾಗಿ ತಮ್ಮನ್ನು ತಾವು ಸ್ಥಾಪಿಸಿಕೊಂಡ ನಂತರ ಅಂಬೇಡ್ಕರ್ ಅವರು ಜಾತಿ ವಿರೋಧಿ ಚಳವಳಿಗೆ ಧುಮಿಕಿದರು. ಇಂದಿನ ದಲಿತರು, ಅದರಲ್ಲೂ ಯುವಕರು ಮೊದಲು ಸಮಾಜದ ಮುಖ್ಯವಾಹಿನಿಯಲ್ಲಿ ಸಾಧನೆ ಮಾಡಬೇಕು.

ಡಾ.ಅಂಬೇಡ್ಕರ್ ಅವರ ಮೊದಲ ಸಾಧನೆ ಇಂಗ್ಲಿಷ್ ಭಾಷೆಯ ಮೇಲೆ ಅವರು ಪಡೆದುಕೊಂಡ ಪ್ರಭುತ್ವ. ಇಂಗ್ಲಿಷ್ ಇಲ್ಲದಿದ್ದಲ್ಲಿ ಅಂಬೇಡ್ಕರರು ಅಮೇರಿಕೆಗೆ ಹೋಗಲಾಗುತ್ತಿರಲಿಲ್ಲ. ಅಂಬೇಡ್ಕರರ ಅನುಯಾಯಿಗಳೆಂದು ಹೇಳಿಕೊಳ್ಳುವ ದಲಿತ ತಂದೆ-ತಾಯಿಗಳು ಏನು ಮಾಡಬೇಕು! ತಮ್ಮ ಮಕ್ಕಳಿಗೆ ಆದಷ್ಟೂ ಉತ್ತಮ ಇಂಗ್ಲಿಷ್ ಜ್ಞಾನವನ್ನು ನೀಡಬೇಕು.

ಇಂಗ್ಲಿಷ್ ಜ್ಞಾನವನ್ನು ಪಡೆದ ದಲಿತ ವಿದ್ಯಾರ್ಥಿ ಏನು ಮಾಡಬೇಕು? ದಲಿತ ವಿದ್ಯಾರ್ಥಿ ತನ್ನ ಹತ್ತನೆ ತರಗತಿ ಮತ್ತು ಪಿ.ಯು.ಸಿ ಪರೀಕ್ಷೆಗಳಲ್ಲಿ ಕಡಿಮೆ ಎಂದರೆ ಮೊದಲ ದರ್ಜೆಯಲ್ಲಿ ಪಾಸಾಗಬೇಕು. ಮಧ್ಯಮ ದರ್ಜೆಯ ಕುಟುಂಬಗಳಿಂದ ಬಂದ ಮಕ್ಕಳು ಶೇಕಡ ತೊಂಭತ್ತು ಮತ್ತು ಅದಕ್ಕೂ ಹೆಚ್ಚಿನ ಅಂಕಗಳನ್ನು ಪಡೆಯುವ ಕಡೆ ಗುರಿಯಿಡಬೇಕು. ಇಂಗ್ಲಿಷ್‌ನಲ್ಲಿ ಉತ್ತಮವಾಗಿ ಮಾತನಾಡುವುದು ಮತ್ತು ಪರೀಕ್ಷೆಯಲ್ಲಿ ಮೊದಲ ದರ್ಜೆ ಪಡೆಯುವುದರಿಂದ ದಲಿತರು ಉತ್ತಮ ಅಂಬೇಡ್ಕರ್ ಅನುಯಾಯಿಗಳಾಗುತ್ತಾರೆ.

ಬಿ.ಟೆಕ್, ಮೆಡಿಸಿನ್ ಮುಂತಾದವುಗಳನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿಗಳು ಮುಕ್ತ ಪ್ರವೇಶದ ಮೂಲಕ ಬಂದ ವಿದ್ಯಾರ್ಥಿಗಳನ್ನು ಮೀರಿಸುವ ಕಡೆ ಗಮನ ನೀಡಬೇಕು. ಹೀಗೆ ಮಾಡುವುದರಿಂದ ದಲಿತ ಯುವಕರು ಉತ್ತಮ ಅಂಬೇಡ್ಕರ್ ಅನುಯಾಯಿಗಳಾಗುತ್ತಾರೆ. ಅನೇಕ ದಲಿತರು ಈಗಾಗಲೇ ಇದನ್ನು ಸಾಧಿಸಿದ್ದಾರೆ. ಇದು ಇನ್ನೂ ಹೆಚ್ಚಾಗಿ ಅತಿ ಸಾಮಾನ್ಯವೆಂಬಂತೆ ನಡೆಯಬೇಕು. ಬಿ.ಟೆಕ್, ಮೆಡಿಸಿನ್ ಮುಂತಾದವನ್ನು ಮಾಡುತ್ತಿರುವವರು ಮುಂದಕ್ಕೆ ಆಯಾ ವಿಭಾಗಗಳಲ್ಲಿ ಉಚ್ಚ ಪರೀಕ್ಷೆಗಳನ್ನು ತೆಗೆದುಕೊಳ್ಳಬೇಕು. ನಂತರ ಪಿಹೆಚ್.ಡಿಗೂ ನೋಂದಣಿಯಾಗಬೇಕು. ಅವರು ತಮ್ಮ ತಮ್ಮ ವಿಭಾಗಗಳ ಪ್ರಾಧ್ಯಾಪಕರಾಗುವ ಗುರಿಯನ್ನು ಹೊಂದಬೇಕು.

ಭಾರತದ ಇತಿಹಾಸದ ಈ ಹಂತದಲ್ಲಿ ಭಾರತಕ್ಕೆ ವಿಜ್ಞಾನಿಗಳ ಒಂದು ಸೈನ್ಯವೇ ಬೇಕು. ಭಾರತದುದ್ದಕ್ಕೂ ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಅಧ್ಯಾಪಕರ ಕೊರತೆ ಎದುರಿಸುತ್ತಿವೆ. ಭಾರತಕ್ಕೆ ವಿಜ್ಞಾನಿಗಳ ಅವಶ್ಯಕತೆಯಿದೆ ಮಾತ್ರವಲ್ಲ, ಉತ್ತಮ ಆರ್ಥಿಕ ತಜ್ಞರು, ರಾಜಕೀಯ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು ಮತ್ತು ಸಾಮಾಜಿಕ ಮನಶಾಸ್ತ್ರಜ್ಞರ ಅವಶ್ಯಕತೆಯೂ ಇದೆ. ದೇಶಕ್ಕೆ ಅವಶ್ಯಕವಾದ ಪರಿಣಿತರನ್ನು ನೀಡುವ ದಿಕ್ಕಿನಲ್ಲಿ ದಲಿತರು ತಯಾರಿ ನಡೆಸಬೇಕು. ಇದು 'ದಲಿತರು ಎಂದರೆ ಈಗೇಯೇ' ಎಂಬ ಅಭಿಪ್ರಾಯವನ್ನು ಬದಲಾಯಿಸುತ್ತದೆ. ಎರಡು ಸಾವಿರದ ಐವತ್ತರ ಹೊತ್ತಿಗೆ ವಿಜ್ಞಾನಿಗಳು, ಪ್ರಾಧ್ಯಾಪಕರು ಎಂದರೆ ಹೆಚ್ಚು ದಲಿತರೆ ಎಂದು ಅರ್ಥಮಾಡಿಕೊಳ್ಳುವ ಹಾಗಾಗಬೇಕು.

ಡಾ.ಅಂಬೇಡ್ಕರರು ಅವರ ಕ್ಷೇತ್ರದಲ್ಲಿ ಅತ್ಯುತ್ತಮ ಎನ್ನುವಂತಿದ್ದರು. ತಾವು ಕೈಗೊಂಡ ಕೆಲಸಗಳಲ್ಲಿ ಅವರ ಹಿಂಬಾಲಕರೂ ಅತ್ಯುತ್ತಮ ಎನ್ನುವಂತಿರಬೇಕು. ತತ್ವಜ್ಞಾನಿ ಅಂಬೇಡ್ಕರ್‌ಗೆ ಇದು ನಾವು ನೀಡಬಹುದಾದ ಅತ್ಯುತ್ತಮ ಕೊಡುಗೆ. ■

(51ನೇ ಪುಟದಿಂದ)

ಅಭಿವೃದ್ಧಿಯ ಆತಂಕಗಳು

ಮತ್ತು ನಷ್ಟವನ್ನು ನಿರ್ಧರಿಸುತ್ತದೆ ಎಂಬ ಜಾಗತೀಕರಣದ ವಕ್ತಾರರ ಖಾಲಿ ಮಾತುಗಳೆಲ್ಲಾ ಅರ್ಥಕಳೆದುಕೊಂಡಿವೆ ಎಂದು ವಿವರಿಸಲು ಇದಕ್ಕಿಂತ ಬೇರೆ ಯಾವ ಉದಾಹರಣೆ ಬೇಕು? ಈ ಕಾರಣಕ್ಕಾಗಿ ನಮ್ಮ ದೇಶದ ಖ್ಯಾತ ಆರ್ಥಿಕ ತಜ್ಞರಲ್ಲಿ ಒಬ್ಬರಾದ ಅಮಿತ್ ಬಾಧುರಿಯವರು ತಮ್ಮ **"This Face you Wera Apraid to See"** ಎಂಬ ಕೃತಿಯಲ್ಲಿ ಕೃಷಿಲೋಕದ ವಂಚನೆಗಳನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಇತ್ತೀಚೆಗಿನ ದಿನಗಳಲ್ಲಿ ರೈತರ ಫಲವತ್ತಾದ ಕೃಷಿಭೂಮಿ ಕೈಗಾರಿಕೆಗಳ ವಿಶೇಷ ಆರ್ಥಿಕ ವಲಯಗಳ ನೆಪದಲ್ಲಿ ಬೃಹತ್ ಕಂಪನಿಗಳ ಪಾಲಾಗುತಿದ್ದರೆ, ಈ ನೆಲದ ನಿಜವಾದ ಮಕ್ಕಳಾದ ಆದಿವಾಸಿಗಳು ಮತ್ತು ಬುಡಕಟ್ಟು ಜನಾಂಗ ಅತಂತ್ರರಾಗಿದ್ದಾರೆ. ಅವರ ಜೀವನಾಡಿಯಾದ ಅರಣ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆಯಿಂದಾಗಿ ತಮ್ಮ ತಮ್ಮ ನೆಲೆಗಳಿಂದ ಹೊರದೂಡಲ್ಪಟ್ಟಿದ್ದಾರೆ. ಮಧ್ಯಪ್ರದೇಶ, ಒರಿಸ್ಸಾ, ಛತ್ತೀಸ್‌ಗಡ ಈ ಮೂರು ರಾಜ್ಯಗಳಲ್ಲಿ ಲಕ್ಷಾಂತರ ಆದಿವಾಸಿ ಕುಟುಂಬಗಳು ಬೀದಿಗೆ ಬಿದ್ದಿವೆ. ಅರಣ್ಯದಲ್ಲಿ ವಾಸಿಸಲು ಹಾಗೂ ಅಲ್ಲಿನ ಕಿರು ಉತ್ಪನ್ನಗಳನ್ನು ಸಂಗ್ರಹಿಸಿಕೊಂಡು ಜೀವನ ನಿರ್ವಹಣೆ ಮಾಡುವ ನಿಟ್ಟಿನಲ್ಲಿ ಅರಣ್ಯ ಕಾಯ್ದೆ ಅಸ್ತಿತ್ವಕ್ಕೆ ಬಂದಿದ್ದರೂ ಸಹ, ಖಾಸಗಿ ಬೃಹತ್ ಕಂಪನಿಗಳ ಜೊತೆ ಶಾಮೀಲಾಗಿರುವ ಸ್ಥಳಿಯ ಸರ್ಕಾರಗಳು ಈ ಅನಕ್ಷರಸ್ಥ ಅಮಾಯಕರನ್ನು ಅರಣ್ಯದಿಂದ ನಿರ್ಧಯವಾಗಿ ಹೊರದೂಡುತ್ತಿವೆ.

ಇವರಿಗೆ ಸಧ್ಯಕ್ಕೆ ಅರಣ್ಯ ಪ್ರದೇಶಗಳಲ್ಲಿ ಹೆಚ್ಚು ಕ್ರಿಯಾಶೀಲರಾಗಿರುವ ನಕ್ಸಲಿಯರು ಮಾತ್ರ ಆಪತ್ಬಾಂಧವರೆನಿಸಿದ್ದಾರೆ. ಬುಡಕಟ್ಟು ಜನಾಂಗದ ಅತಂತ್ರ ಸ್ಥಿತಿ ಪರೋಕ್ಷವಾಗಿ ನಕ್ಸಲಿಯರಿಗೆ ವರವಾಗಿದೆ. ಅನೇಕ ಗುಂಪುಗಳಾಗಿ ಒಡೆದು ಹೋಗಿರುವ ಮಾವೋವಾದಿ ನಕ್ಸಲಿಯರ ತಂಡಗಳಿಗೆ ಖಾಸಗಿ ಗಣಿ ಕಂಪನಿಗಳಿಂದ ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ಹಫ್ತಾ ಹೆಸರಿನಲ್ಲಿ ಹರಿದು ಬರುತ್ತಿದೆ.

ವರ್ತಮಾನದ ಭಾರತದಲ್ಲಿ ಜಾರಿಯಲ್ಲಿರುವ ಅಭಿವೃದ್ಧಿಯ ಮಾದರಿಗಳನ್ನ ನೋಡಿದಾಗ, ಅಭಿಮಾನಕ್ಕಿಂತ ಆತಂಕವೇ ಸೃಷ್ಟಿಯಾಗುತ್ತಿದೆ. ಇದೇ ಅಗಸ್ಟ್ 17 ರಂದು ಸಂಸತ್ತಿನಲ್ಲಿ ಮಂಡಿಸಲಾದ ಕೇಂದ್ರ ಮಹಾಲೇಖಪಾಲರ ವರದಿ ಅಭಿವೃದ್ಧಿಯ ಕರಾಳ ಮುಖವನ್ನು ಅನಾವರಣಗೊಳಿಸಿದೆ. ಕಲ್ಲಿದ್ದಲು ನಿಕ್ಷೇಪ ಹರಾಜಿನಲ್ಲಿ 1.86 ಲಕ್ಷ ಕೋಟಿ ಮತ್ತು ದೆಹಲಿ ವಿಮಾನ ನಿಲ್ದಾಣದ ನಿರ್ವಹಣೆಯ ಗುತ್ತಿಗೆಯಲ್ಲಿನ ಅವ್ಯವಹಾರದಿಂದ 88 ಸಾವಿರದ 337 ಕೋಟಿ ಹಾಗೂ ಹೆಚ್ಚುವರಿ ಕಲ್ಲಿದ್ದಲು ನಿಕ್ಷೇಪ ಹರಾಜಿನಿಂದ 29 ಸಾವಿರದ 33 ಕೋಟಿ ರೂಪಾಯಿಗಳು ಬೊಕ್ಕಸಕ್ಕೆ ನಷ್ಟವಾಗಿದೆ. ಈ ಬಗ್ಗೆ ಸಿ.ಎ.ಜಿ. ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಇದು ಅಭಿವೃದ್ಧಿಯ ಮುಖವಾಡ ಹಾಕಿಕೊಂಡು ಬಡತನ ನಿವಾರಣೆಯ ನೆಪದಲ್ಲಿ ನಡೆಯುತ್ತಿರುವ ಶೋಷಣೆಯ ನಾಟಕವಲ್ಲದೆ ಮತ್ತೇನು?

ನೋಬಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಹಾಗೂ ನೆರೆಯ ಬಂಗ್ಲಾ ದೇಶದ ಗ್ರಾಮೀಣ ಬ್ಯಾಂಕ್‌ನ ಸಂಸ್ಥಾಪಕ ಮಹಮದ್ ಯೂನಸ್ ರವರು 2009ರಲ್ಲಿ ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್ ಸಂಸ್ಥೆಯಲ್ಲಿ ಭಾರತದ ಶ್ರೇಷ್ಠ ಆರ್ಥಿಕ ಚಿಂತಕರಾಗಿದ್ದ ಪ್ರೊ. ಡಿ.ಟಿ.ಲಕ್ಡವಾಲ ಸ್ಮಾರಕ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಬಡತನಮುಕ್ತ ಜಗತ್ತು ಕುರಿತು ಮಾತನಾಡುತ್ತಾ ' "ಬಡತನವೆಂಬುದು ಒಂದು ವ್ಯವಸ್ಥೆ ನಿಜ. ಇದು ಬಡವರಿಂದ ನಿರ್ಮಿತವಾಗಿಲ್ಲ, ಸರ್ಕಾರಗಳಿಂದ ಮತ್ತು ಅವುಗಳ ಅಂಗ ಸಂಸ್ಥೆಗಳಿಂದ ನಿರ್ಮಾಣವಾಗಿದೆ" ಎಂದು ಪ್ರತಿಪಾದಿಸಿದ್ದರು. ಇವತ್ತಿನ ಅಭಿವೃದ್ಧಿಯ ಮಾದರಿಗಳನ್ನು ಅವಲೋಕಿಸಿದರೆ, ಅವರ ಮಾತು ನಿಜವೆನಿಸುತ್ತಿದೆ. ■

AKS

Convention Centre

- A/C Banquet Halls

Hall Facilities :

- Bride and Bridegroom Rooms
- Dinning Hall with complete Furniture
- 24 Hours Water Facilities
- Marriage Hall - 400 Seats
- Vehicle Parking

71, Near Coles Park, St Johns Church Road, Bangalore - 560005
Contact AKS Convention Centre at +91 9880278700

SHANTHI SAGAR DELUXE

Veg Restuarant

WE UNDERTAKE OUTDOOR CATERING

#68/2, Coles Road, Frazer Town, Bangalore - 560 005
Ph.No. 25302898, M : 9480224335

'SAMVADA' Kannada Monthly, OCTOBER 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 60)

When a Problem is too big to solve but too important to ignore.

Malnutrition is one of the largest problems facing our country.

40% of the world's malnutrition manifests in India.

We at Pristine Organics reach low cost nutrition products to more than a lakh of malnourished children and people living with HIV positive in collaboration with a network of 50 Non Governmental Organizations. We also help self help groups and NGO's produce affordable local nutritional solutions for vulnerable segments.

PRISTINE ORGANICS

Join hands to tackle malnutrition a national shame

Contact- Akshata 9538898016 | Email - akshatha@pristineorganics.com